# ಅಧ್ಯಾಯ-೧೦

# ಶಿಕ್ಷಣ ಮತ್ತು ಕ್ರೀಡೆಗಳು



**ಪ್ರಾಚೀನ ಕಾಲದಲ್ಲಿ ಶಿಕ್ಷಣ:** ಪ್ರಾಚೀನ ಕಾಲದಲ್ಲಿ ಭಾರತದ ಇತರೆಡೆಯಲ್ಲಿದ್ದಂತೆ ವೈದಿಕ ಶಿಕ್ಷಣ ಈ ಭಾಗದಲ್ಲಿಯೂ ಪ್ರಚಲಿತವಾಗಿತ್ತು. ಆ ಕಾಲದಲ್ಲಿ ಶಿಕ್ಷಣ ವಿಧಾನ ಬಹುತೇಕ ಮೌಖಿಕವಾಗಿತ್ತು. ಕಲಿಕಾರ್ಥಿಗಳು ಗ್ರಂಥಗಳ ಹೆಚ್ಚಿನ ಮಾಹಿತಿಗಳನ್ನು ಕೇವಲ ಕಂಠಪಾಠದ ಮೂಲಕ ಕಲಿತು ನೆನಪಿನಲ್ಲಿಟ್ಟು ಕೊಳ್ಳಬೇಕಾಗಿತ್ತು. ಬ್ರಾಹ್ಮಣರು, ಕ್ಷತ್ರಿಯರು ಮತ್ತು ವೈಶ್ಯರು ತಮ್ಮ ಕಸುಬಿಗೆ ಸಂಬಂಧಿಸಿದ ಶಿಕ್ಷಣ ಪಡೆಯುತ್ತಿದ್ದರು. ಬ್ರಾಹ್ಮಣರ ಶಿಕ್ಷಣ ವಿಷಯ, ಜ್ಞಾನ ಮತ್ತು ವೈದಿಕ ವೃತ್ತಿಗೆ ಸಂಬಂಧಿಸಿದ್ದಾಗಿತ್ತು. ಪಠ್ಯಕ್ರಮದಲ್ಲಿ ವೇದಾಂತ, ಗಣಿತ, ಅರ್ಥಶಾಸ್ತ್ರ, ವ್ಯಾಕರಣ, ತರ್ಕಶಾಸ್ತ್ರ, ನೀತಿಶಾಸ್ತ್ರ, ಖಗೋಳಶಾಸ್ತ್ರ, ಶಬ್ದಶಾಸ್ತ್ರ ಮುಂತಾದ ವಿಷಯಗಳ ಜೊತೆಗೆ ನೃತ್ಯ, ಸಂಗೀತ ಇತ್ಯಾದಿ ಪ್ರಾಯೋಗಿಕ ಲಲಿತ ಕಲೆಗಳು ಸೇರಿದ್ದವು. ಸಮಾಜದ ಇತರೆ ವರ್ಗದವರು ತಮ್ಮ ಮನೆತನದ ಕಸುಬಿಗೆ ಸಂಬಂಧಿಸಿದ ವೃತ್ತಿ ಶಿಕ್ಷಣ ಪಡೆಯುತ್ತಿದ್ದರು. ಶಿಕ್ಷಣ ಪಡೆಯುವ ಆಕಾಂಕ್ಷೆ ಹೊಂದಿದ ವಿದ್ಯಾರ್ಥಿ ತಕ್ಕ ಗುರುವನ್ನು ಅರಸಿಕೊಂಡು ಅವರ ಅನುಗ್ರಹಕ್ಕೆ ಪಾತ್ರವಾದ ಮೇಲೆ ತನ್ನ ಶಿಕ್ಷಣ ಪೂರ್ಣವಾಗುವವರೆಗೆ ಅಲ್ಲಿಯೇ ವಾಸ್ತವ್ಯ ಮಾಡಿ ಗುರುಗಳ ಸೇವೆ ಮಾಡುತ್ತಾ ಶಿಕ್ಷಣ ಪಡೆಯುವುದು ಸಾಮಾನ್ಯವಾಗಿತ್ತು. ತನ್ನ ದಿನಚರಿ ಕೆಲಸಗಳ ಜೊತೆಗೆ ಗುರುಗಳ ಗೃಹಕೃತ್ಯದ ಕೆಲಸಗಳಾದ ಬಾವಿಯಿಂದ ನೀರು ಸೇದಿ ಹಾಕುವುದು, ಕಾಡಿನಿಂದ ಉರುವಲು ಕಟ್ಟಿಗೆ ಸಂಗ್ರಹಿಸಿ ತರುವುದು, ಪಶುಗಳನ್ನು ಪಾಲನೆ ಮಾಡುವುದು, ಇತ್ಯಾದಿ ಶಿಷ್ಯನ ಕರ್ತವ್ಯಗಳಾಗಿದ್ದವು. ಪಾಂಡಿತ್ಯ ಹೊಂದಿದ ಹೆಸರಾಂತ ಗುರುಗಳನ್ನು ಅರಸಿಕೊಂಡು ಅವರ ಶಿಷ್ಯತ್ವ ಸಂಪಾದಿಸಲು ಶಿಕ್ಷಣಾರ್ಥಿಗಳು ದೂರದ ಪ್ರದೇಶಗಳಿಗೆ ಹೋಗುವುದು ರೂಢಿಯಲ್ಲಿತ್ತು.

ಅಂದಿನ ಕಾಲಮಾನದಲ್ಲಿ ಇತರೆಡೆಗಳಲ್ಲಿದ್ದಂತೆ ಈ ಭಾಗದಲ್ಲಿಯೂ ಹಲವು ಅಗ್ರಹಾರಗಳಿದ್ದು ಅಲ್ಲಿ ವೈದಿಕ ಶಿಕ್ಷಣ ನೀಡುವ ವ್ಯವಸ್ಥೆ ಇತ್ತು. ಕ್ಷತ್ರಿಯರಿಗಾಗಿ ವೈದಿಕರಿಗಿಂತ ಭಿನ್ನವಾದ ಶಿಕ್ಷಣ ಪದ್ಧತಿ ಚಾಲ್ತಿಯಲ್ಲಿತ್ತು. ಅದು ವಿದ್ವತ್ತಿಗಿಂತ ಹೆಚ್ಚು ವೃತ್ತಿಪರತೆಯಿಂದ ಕೂಡಿತ್ತು. ಯುದ್ಧಕಲೆ, ಶಸ್ತ್ರಾಸ್ತ್ರ ತರಬೇತಿಗಳು ಶಿಕ್ಷಣದ ಪ್ರಮುಖ ವಿಷಯಗಳಾಗಿದ್ದವು. ರಾಜಕುಮಾರರ ಶಿಕ್ಷಣದ ಪಠ್ಯ ವಿಷಯಗಳ ಪೈಕಿ ರಾಜನೀತಿ ಶಾಸ್ತ್ರ ಒಂದು ಕಡ್ಡಾಯ ವಿಷಯವಾಗಿತ್ತು. ಇದರ ಜೊತೆಗೆ ಯುವರಾಜರಿಗೆ ಭಾಷಾಧ್ಯಯನ, ಸಾಹಿತ್ಯ ಮತ್ತು ಲಲಿತಕಲೆಗಳಲ್ಲಿ ಸಾಕಷ್ಟು ತರಬೇತಿ ನೀಡಲಾಗುತ್ತಿತ್ತು. ವೈಶ್ಯರು, ಕೃಷಿಕರು ಮತ್ತು ವ್ಯಾಪಾರಸ್ಥವರ್ಗದವರ ಶಿಕ್ಷಣವನ್ನು ಸಹ ಕಡೆಗಣಿಸಲಾಗಿರಲಿಲ್ಲ. ವ್ಯಾಪಾರಸ್ಥರು ಮುತ್ತು, ರತ್ನ, ಲೋಹಗಳು, ಸುಗಂಧ ದ್ರವ್ಯಗಳು, ವಸ್ತ್ರಗಳು ಆಹಾರ ಪದಾರ್ಥಗಳು ಇತ್ಯಾದಿ ಉಪಯುಕ್ತ ವಸ್ತುಗಳ ಮೌಲ್ಯವನ್ನು ತಿಳಿಯುವುದು ಅಗತ್ಯವಾಗಿತ್ತು. ಅಲ್ಲದೆ ಮಣ್ಣಿನ ಗುಣಲಕ್ಷಣಗಳು, ಬಿತ್ತನೆ ವಿಧಾನ, ತೂಕ ಮತ್ತು ಅಳತೆಗಳು, ಲಾಭ-ನಷ್ಟ, ಮಜೂರಿಗಳು, ವಸ್ತುಗಳ ದಾಸ್ತಾನು ಮತ್ತು ಮಾರಾಟ ಇತ್ಯಾದಿ ವಿಷಯಗಳನ್ನು ಕುರಿತ ಶಿಕ್ಷಣ ಪಡೆಯುತ್ತಿದ್ದರು. ಇವುಗಳ ಜೊತೆಗೆ ವ್ಯವಹಾರಿಕ ಗಣಿತ, ಭಾಷೆ ಮತ್ತು ಭೂಗೋಳ ವಿಷಯಗಳು ಪಠ್ಯಕ್ರಮದ ಭಾಗವಾಗಿದ್ದವು. ವೈಶ್ಯರು ಮತ್ತು ವೃತ್ತಿಪರ ವರ್ಗದ ವಿದ್ಯಾಭ್ಯಾಸ ಅನೌಪಚಾರಿಕವಾಗಿದ್ದು ಹೆಚ್ಚಿನಮಟ್ಟಿಗೆ ಈ ವೃತ್ತಿಶಿಕ್ಷಣ ತಂದೆಯಿಂದ ಮಗನಿಗೆ ಅಥವಾ ಕಸುಬು ಕಲಿತ ಹಿರಿಯರಿಂದ ಕಿರಿಯರಿಗೆ ಪ್ರದಾನವಾಗುತ್ತಿತ್ತು. ಕುಶಲಕರ್ಮಿಗಳು ತಮ್ಮ ಮಕ್ಕಳಿಗೆ ತಮ್ಮ ಮನೆಯಲ್ಲಿಯೇ ಅನುವಂಶಿಕವಾದ ತಮ್ಮ ಕಸುಬುಗಳಲ್ಲಿ ತರಬೇತಿ ನೀಡುವುದು ಶಿಕ್ಷಣದ ವಿಧಾನವಾಗಿತ್ತು.

**ಔಪಚಾರಿಕ ಶಿಕ್ಷಣ:** ಮೊದಲು ಕರ್ನಾಟಕ ರಾಜ್ಯವು "ಮೈಸೂರು ಸಂಸ್ಥಾನ"ವಾಗಿತ್ತು. ೧೯೫೬ರ ಏಕೀಕರಣದ ನಂತರ "ವಿಶಾಲ ಮೈಸೂರು ರಾಜ್ಯ" ಎಂದಾಯಿತು. ೧೯೭೩ ರಲ್ಲಿ "ಕರ್ನಾಟಕ ರಾಜ್ಯ" ಎಂದು ಪುನರ್ ನಾಮಕರಣ ಹೊಂದಿತು.ಸ್ವಾತಂತ್ರ್ಯ ಬರುವ ಮೊದಲು ಇದ್ದ ಮೈಸೂರು ಸಂಸ್ಥಾನವು ಯದು ವಂಶದ ಅರಸರ ಆಳ್ವಿಕೆಗೆ ಒಳಪಟ್ಟಿದ್ದು ಅಭಿವೃದ್ಧಿಯ ದೃಷ್ಟಿಯಿಂದ ಮಾದರಿ ರಾಜ್ಯವೆಂದು ಪರಿಗಣಿತವಾಗಿತ್ತು. ಸ್ವಾತಂತ್ರ್ಯಾ ನಂತರವೂ ಹಳೆಯ ಮೈಸೂರು ರಾಜ್ಯವು ಶಿಕ್ಷಣ ಸೇರಿದಂತೆ ಇನ್ನಿತರ ರಂಗದಲ್ಲಿ ಹೊಸದಾಗಿ ಸೇರ್ಪಡೆಯಾದ ಪ್ರದೇಶಕ್ಕಿಂತ ಮುಂದುವರಿದ ಪ್ರದೇಶವೆಂದು ಗುರುತಿಸಲಾಗಿತ್ತು. ಆದ ಕಾರಣ ಕರ್ನಾಟಕ ರಾಜ್ಯದಲ್ಲಿ ಶಿಕ್ಷಣ ವ್ಯವಸ್ಥೆಯ ಬಗ್ಗೆ ವಿವರಿಸುವಾಗ ಹಳೆಯ

ಮೈಸೂರು ಪ್ರಾಂತ್ಯದಲ್ಲಿ ಇದ್ದ ಸ್ಥಿತಿಗತಿಗಳನ್ನು ಉಲ್ಲೇಖಿಸುವುದು ಅನಿವಾರ್ಯವಾಗಿದೆ.

ಆಧುನಿಕ ಯುಗದ ಪ್ರಾರಂಭಿಕ ದಿನಗಳಲ್ಲಿ ದೇಶದ ಇನ್ನಿತರ ಪ್ರದೇಶಗಳಲ್ಲಿ ಪ್ರಚಲಿತವಾಗಿದ್ದಂತೆ ಮೈಸೂರು ಪ್ರಾಂತ್ಯದಲ್ಲಿಯೂ ಔಪಚಾರಿಕ ಶಿಕ್ಷಣ ಮೇಲ್ವರ್ಗದವರಿಗೆ ಮಾತ್ರ ಎಟುಕುವಂತಿದ್ದು ದೊಡ್ಡ ಗ್ರಾಮಗಳಲ್ಲಿ ಉಳ್ಳವರು ತಮ್ಮ ಮಕ್ಕಳ ಶಿಕ್ಷಣಕ್ಕಾಗಿ ಸಂಭಾವನೆ ನೀಡಿ ಶಿಕ್ಷಕರನ್ನು ನೇಮಿಸಿಕೊಳ್ಳುತ್ತಿದ್ದರು. ಈ ವ್ಯವಸ್ಥೆಯನ್ನು 'ಕೂಲಿ ಮಠ', 'ಅಯ್ಯನವರ ಮಠ' ಅಥವಾ 'ಐಗಳ ಮಠ' ಎಂದು ಕರೆಯಲಾಗುತ್ತಿತ್ತು. ಈ ಪಾಠಶಾಲೆಗಳಲ್ಲಿ ಮಾತೃಭಾಷೆಯಲ್ಲಿ ಓದು, ಬರಹ, ಲೆಕ್ಕಾಚಾರ(ಮಗ್ಗಿ) ಮತ್ತು ನೀತಿ ಶಿಕ್ಷಣ ಕಲಿಕಾ ವಿಷಯಗಳಾಗಿದ್ದವು. ಇಸ್ಲಾಮ್ ಮತೀಯರಿಗೆ 'ಮಕ್ತಾಬ್'ಗಳಲ್ಲಿ ಕುರಾನ್ ಪಠಣ, ಓದು ಬರಹ ಮತ್ತು ಲೆಕ್ಕಗಳನ್ನೊಳಗೊಂಡ ಶಿಕ್ಷಣ ನೀಡುವ ಮತ್ತು ಮದರಸಾಗಳಲ್ಲಿ ಇದೇ ವಿಷಯಗಳಲ್ಲಿ ಉನ್ನತ ಶಿಕ್ಷಣ ನೀಡುವ ವ್ಯವಸ್ಥೆ ಇತ್ತು. ಮೈಸೂರು ಪ್ರಾಂತ್ಯದ ವ್ಯಾಪ್ತಿಗೆ ಸೇರಿದ ಭಾಗದಲ್ಲಿ ಈ ವ್ಯವಸ್ಥೆ ಇದ್ದರೆ ಮದ್ರಾಸು ಪ್ರಾಂತ್ಯದ ಆಡಳಿತಕ್ಕೆ ಒಳಪಟ್ಟಿದ್ದ ಪ್ರದೇಶದಲ್ಲಿ ಸ್ಥಳೀಯ ಭಾಷೆಯ ಜೊತೆಗೆ ಇಂಗ್ಲಿಷನ್ನು ಒಂದು ಭಾಷೆಯನ್ನಾಗಿ ಕಲಿಸುವ ವ್ಯವಸ್ಥೆ ಇತ್ತು. ನೆಲದ ಮೇಲೆ ಹರಡಿದ ಮರಳಿನಲ್ಲಿ ತೋರುಬೆರಳಿನ ಮೂಲಕ ಅಕ್ಷರ ತಿದ್ದುವಿಕೆಯಿಂದ ಪ್ರಾರಂಭವಾಗಿ ಕ್ರಮೇಣ ಹಲಗೆ ಬಳಪ ಬಳಸಿ ಬರವಣಿಗೆ ಮುಂದುವರೆಯುತ್ತಿತ್ತು. ಸಾಮಾನ್ಯವಾಗಿ ಬೆಳಗ್ಗೆ ಆರು ಗಂಟೆಯಿಂದ ೧೦ ಗಂಟೆಯವರೆಗೆ ಮತ್ತೆ ಸಂಜೆ ಮೂರು ಗಂಟೆಯಿಂದ ಸೂರ್ಯಾಸ್ತದವರೆಗೆ ಶಾಲಾ ಸಮಯ ಇರುತ್ತಿತ್ತು. ಪ್ರಾಥಮಿಕ ಹಂತದ ಶಿಕ್ಷಣಕ್ಕಾಗಿ ಐದರಿಂದ ಆರನೇವಯಸ್ಸಿಗೆ ಶಾಲೆಗೆ ಸೇರಿದ ವಿದ್ಯಾರ್ಥಿಗಳು ೧೨-೧೫ ನೇ ವಯಸ್ಸಿನವರೆಗೆ ವಿದ್ಯಾಭ್ಯಾಸ ಮಾಡುತ್ತಿದ್ದರು. ಕೆಲವರು ಮಧ್ಯದಲ್ಲಿಯೇ ಶಾಲೆ ಬಿಡುವುದೂ ಇತ್ತು. ಶಿಕ್ಷಕರಿಗೆ ದವಸ ಧಾನ್ಯಗಳ ರೂಪದಲ್ಲಿ ಸಂಭಾವನೆಯನ್ನು ನೀಡಲಾಗುತ್ತಿತ್ತು. ಪುರೋಹಿತ ವರ್ಗದ ಮಕ್ಕಳಿಗೆ ಮುಂದುವರಿದ ಹಂತದ ಶಿಕ್ಷಣವು ಧಾರ್ಮಿಕ ವಿಚಾರಗಳು ಮತ್ತು ಸಾಹಿತ್ಯವಿಷಯಗಳನ್ನು ಒಳಗೊಂಡಿತ್ತು. ಇಂತಹ ಶಿಕ್ಷಣವನ್ನು ದೇವಸ್ಥಾನ ಮತ್ತು ಮಠಗಳಿಂದ ನಡೆಸಲ್ಪಡುವ ಸಂಸ್ಕೃತ ಪಾಠಶಾಲೆಗಳಲ್ಲಿ ನೀಡುವ ವ್ಯವಸ್ಥೆಯಿತ್ತು. ಇನ್ನಿತರ ವರ್ಗದವರಿಗೆ ಈ ಶಿಕ್ಷಣ ಅಗತ್ಯವೆಂದು ಪರಿಗಣಿಸಲಾಗಿರಲಿಲ್ಲ. ಮದ್ರಾಸು ಪ್ರಾಂತ್ಯದ ಆಡಳಿತಕ್ಕೆ ಒಳಪಟ್ಟಿದ್ದ ಭಾಗದಲ್ಲಿ ೧೮೩೦ರ ನಂತರ ಕೆಲವು ಆಯ್ದ ಶಾಲೆಗಳಲ್ಲಿ ಆಂಗ್ಲ ಮಾಧ್ಯಮ, ಇಂಗ್ಲಿಷ್ ಭಾಷೆ, ಸಾಹಿತ್ಯ ಮತ್ತು ವಿಜ್ಞಾನ ವಿಷಯಗಳನ್ನು ಕಲಿಸುವ ವ್ಯವಸ್ಥೆ ಇದ್ದ ಬಗ್ಗೆ ಮಾಹಿತಿ ಲಭ್ಯವಿದೆ.

**ಸ್ವಾತಂತ್ರ್ಯಪೂರ್ವದಲ್ಲಿ ಶಿಕ್ಷಣದ ವ್ಯವಸ್ಥೆ:** ಹಳೇ ಮೈಸೂರು ಸಂಸ್ಥಾನದಲ್ಲಿ ಆಧುನಿಕ ಶಿಕ್ಷಣ ಪದ್ಧತಿಯು,ಮೈಸೂರು ಅರಮನೆಯು ೧೮೩೩ರಲ್ಲಿ ಉಚಿತ ಆಂಗ್ಲಶಾಲೆ (ಫ್ರೀ ಇಂಗ್ಲಿಷ್ ಸ್ಕೂಲ್) ಸ್ಥಾಪಿಸುವುದರೊಂದಿಗೆ ಪ್ರಾರಂಭವಾಯಿತು. ಬೊಂಬಾಯಿ ಸ್ಥಳೀಯ ಶಾಲೆ ಮತ್ತು ಶಾಲಾ ಪುಸ್ತಕ ಸಮಾಜವು (ಬಾಂಬೆ ನೇಟೀವ್ ಸ್ಕೂಲ್ ಅಂಡ್ ಬುಕ್ ಸೊಸೈಟಿ) ೧೮೨೬ರಲ್ಲಿ ಧಾರವಾಡ ಹುಬ್ಬಳ್ಳಿಗಳಲ್ಲಿ ಎರಡು ಮರಾಠಿ ಭಾಷಾ ಶಾಲೆಗಳನ್ನು ಪ್ರಾರಂಭಿಸಿದ್ದು, ೧೮೩೮ರಲ್ಲಿ ಮಂಗಳೂರು, ಉಡುಪಿ ಮತ್ತು ಬಳ್ಳಾರಿಗಳಲ್ಲಿ ಶಾಲೆಗಳನ್ನು ಆರಂಭಿಸಿದ್ದು, (ಮದ್ರಾಸ್ ಕರ್ನಾಟಕ ಪ್ರದೇಶಕ್ಕೆ) ಕಲಬುರಗಿಯಲ್ಲಿ (ಗುಲಬರ್ಗಾ) ೧೮೫೩ರಲ್ಲಿ ಸರ್ ಸಾಲಾರ್ ಜಂಗ್‌ರವರಿಂದ ದರೂಲ್ ಉಲೂಮ್‌ನ್ನು (ಕಲಬುರಗಿ ಪ್ರದೇಶಕ್ಕೆ) ಆರಂಭಿಸಿದ್ದು, ೧೮೩೪ರಲ್ಲಿ ಎರಡು ಇಂಗ್ಲಿಷ್-ದೇಶೀ ಭಾಷಾ ಶಾಲೆಗಳನ್ನು ಮಡಿಕೇರಿ, ವಿರಾಜಪೇಟೆಗಳಲ್ಲಿ ಮತ್ತು ಪೊನ್ನಂಪೇಟೆಯಲ್ಲಿ ಒಂದು ಕನ್ನಡ ಶಾಲೆಯನ್ನೂ, ಕೊಡಗು ಪ್ರದೇಶಕ್ಕೆ ಆರಂಭಿಸಿದ್ದು, ಇವುಗಳು ಆಧುನಿಕ ಶಿಕ್ಷಣದ ಪ್ರಾರಂಭವೆಂದು ಗುರುತಿಸಬಹುದಾಗಿದೆ.

೧೯ನೇ ಶತಮಾನದಲ್ಲಿ ಶಾಲೆಗಳನ್ನು ತೆರೆಯುವುದರಲ್ಲಿ ಮತ್ತು ಇಂಗ್ಲಿಷ್ ಶಿಕ್ಷಣ ಕೊಡುವುದರಲ್ಲಿ ಕ್ರೈಸ್ತ ಮಿಷನರಿಗಳು ಮತ್ತು ಪಾದ್ರಿಗಳು ಪ್ರಧಾನ ಪಾತ್ರವಹಿಸಿದ್ದಾರೆ. ೧೯೦೦ರಷ್ಟು ಹಿಂದೆಯೇ ಶಿಶುವಿಹಾರ ಅಥವಾ ಪೂರ್ವಪ್ರಾಥಮಿಕ(ಕಿಂಡರ್ ಗಾರ್ಟನ್) ಶಿಕ್ಷಣವು ಪ್ರಾಥಮಿಕ ಶಿಕ್ಷಣಕ್ಕೆ ಬುನಾದಿಯಂತೆ ಪ್ರಾರಂಭವಾಗಿ ತುಂಬಾ ಜನಪ್ರಿಯವಾಗಿತ್ತು. ಮಕ್ಕಳ ವಯಸ್ಸನ್ನು ಗಣನೆಗೆ ತೆಗೆದುಕೊಳ್ಳದೆ ಮಾತುಬರುವ ಮಕ್ಕಳನ್ನೆಲ್ಲಾ ಈ ಶಾಲೆಗಳಿಗೆ ಸೇರಿಸಿಕೊಳ್ಳಲಾಗುತ್ತಿತ್ತು. ಪೂರ್ವ ಪ್ರಾಥಮಿಕ ಶಿಕ್ಷಣವನ್ನು ಪ್ರಾಥಮಿಕ ಶಾಲೆಯಲ್ಲಿದ್ದ ನರ್ಸರಿ ಶಾಲೆಗಳಲ್ಲಿ ನೀಡಲಾಗುತ್ತಿತ್ತು. ಹಳೆಯ ಮೈಸೂರು ರಾಜ್ಯದಲ್ಲಿ ಖಾಸಗಿ ಸಂಸ್ಥೆಗಳು ಈ ಶಿಕ್ಷಣ ನೀಡುತ್ತಿದ್ದವು. ೧೯೭೯-೮೦ರ ಸಮಯದಲ್ಲಿ ರಾಜ್ಯದಲ್ಲಿ ೧,೯೩,೭೩೭ ಮಕ್ಕಳು ೩,೧೧೮ ಪೂರ್ವ ಪ್ರಾಥಮಿಕ ಶಾಲೆಗಳಲ್ಲಿದ್ದರು. ಕೇಂದ್ರ ಸರ್ಕಾರದ ಸಮಗ್ರ ಬಾಲವಿಕಾಸ ಯೋಜನೆಯಡಿಯಲ್ಲಿ ಅನೌಪಚಾರಿಕ ಪೂರ್ವಪ್ರಾಥಮಿಕ ಶಿಕ್ಷಣವನ್ನು ಆರು ವರ್ಷ ವಯಸ್ಸಿನೊಳಗಿನ ಮಕ್ಕಳಿಗೆ ಕೊಡಲಾಯಿತು. ೧೯೯೯-೨೦೦೦ದ ಸಾಲಿನಲ್ಲಿ ರಾಜ್ಯದ ೧೭೫ ತಾಲೂಕಿನಲ್ಲಿ ೨೮,೮೫,೯೭೯ ಫಲಾನುಭವಿಗಳಿಗೆ ಈ ಸೌಲಭ್ಯ ದೊರೆಯಿತು. ಈಗಿನ ಶಿಕ್ಷಣ ವ್ಯವಸ್ಥೆಯಲ್ಲಿ ಮೂರು ವರ್ಷ ೧೦ ತಿಂಗಳ ಮಕ್ಕಳು ಪೂರ್ವ ಪ್ರಾಥಮಿಕ ತರಗತಿಗೆ ಸೇರಲು ಅರ್ಹರಾಗುತ್ತಾರೆ. ಇದರಿಂದ ಅವರು ಎರಡನೇ ವರ್ಷದ ಪೂರ್ವ ಪ್ರಾಥಮಿಕ ಶಿಕ್ಷಣವನ್ನ ಮುಗಿಸುವ ಹೊತ್ತಿಗೆ ಐದು ವರ್ಷ ೧೦ ತಿಂಗಳಾಗಿ ಪ್ರಾಥಮಿಕ ಶಾಲೆಗೆ ಸೇರಲು ಅರ್ಹ ವಯಸ್ಸಿನವರಾಗುತ್ತಾರೆ. ಉದ್ಯೋಗಸ್ಥ ತಂದೆತಾಯಿಯರು ಕಛೇರಿ ವೇಳೆಯಲ್ಲಿ ತಮ್ಮ ಮಕ್ಕಳನ್ನು ಶಿಶುಪಾಲನಾ ಕೇಂದ್ರಗಳಿಗೆ ಬಿಡುತ್ತಾರೆ. ಈ ಕೇಂದ್ರಗಳು ಶಿಕ್ಷಣ ಇಲಾಖಾ ವ್ಯಾಪ್ತಿಯೊಳಗೆ ಬರುವುದಿಲ್ಲ.

ಮೈಸೂರು ಸಂಸ್ಥಾನದಲ್ಲಿ ಸ್ವಾತಂತ್ರ್ಯಪೂರ್ವದಲ್ಲಿಯೇ ಶಿಕ್ಷಣ ಪ್ರಸಾರಕ್ಕೆ ಸಾಕಷ್ಟು ಮಹತ್ವವನ್ನು ನೀಡಲಾಗಿತ್ತು. ಆದ ಕಾರಣ ೧೮೫೭ ರಲ್ಲಿಯೇ ಶಿಕ್ಷಣಕ್ಕಾಗಿ ಒಂದು ಇಲಾಖೆಯನ್ನು ಪ್ರಾರಂಭಿಸಲಾಗಿತ್ತು. ಇದನ್ನು ೧೮೬೩ ರಲ್ಲಿ ಜ್ಯುಡಿಷಿಯಲ್ ಕಮೀಷನರ್ ಅಧೀನದಿಂದ ಪ್ರತ್ಯೇಕಿಸಿ "ಸಾರ್ವಜನಿಕ ಶಿಕ್ಷಣ ಇಲಾಖೆ" ಎಂಬ ಹೆಸರಿನಿಂದ ಕರೆಯಲಾಯಿತು. ಆಗಿನ ಶಿಕ್ಷಣ ಇಲಾಖೆಯೆಂದರೆ ಕಾಲೇಜು ಶಿಕ್ಷಣ (ಮೈಸೂರು ವಿಶ್ವವಿದ್ಯಾಲಯದ ವ್ಯಾಪ್ತಿಗೆ ಸೇರಿದ ಕಾಲೇಜುಗಳನ್ನು ಹೊರತುಪಡಿಸಿ) ತಾಂತ್ರಿಕ ಶಿಕ್ಷಣ ಸಂಸ್ಥೆಗಳು, ಗ್ರಂಥಾಲಯ ಇತ್ಯಾದಿ ಎಲ್ಲವೂ ಈ ಇಲಾಖೆಯ ಆಡಳಿತ ವ್ಯಾಪ್ತಿಗೆ ಒಳಪಟ್ಟಿದ್ದವು.

ಕಡ್ಡಾಯ ಪ್ರಾಥಮಿಕ ಶಿಕ್ಷಣ ಕಾಯಿದೆಯ ಇತಿಹಾಸ: ೧೪ ವರ್ಷದ ವಯೋಮಿತಿಯೊಳಗಿನ ಎಲ್ಲ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡಬೇಕೆಂಬುದು ಸಂವಿಧಾನದ ಆಶಯ. ಆದರೆ ಹಿಂದಿನ ಮೈಸೂರು ಸಂಸ್ಥಾನದಲ್ಲಿ ಕಡ್ಡಾಯ

ಪ್ರಾಥಮಿಕ ಶಿಕ್ಷಣ ಕಾಯಿದೆ ರೂಪಿಸುವ ಪ್ರಕ್ರಿಯೆಗಳು ಒಂದು ಶತಮಾನದ ಹಿಂದೆಯೇ ಪ್ರಾರಂಭವಾದ ಬಗ್ಗೆ ದಾಖಲೆಗಳಿಂದ ತಿಳಿದು ಬರುತ್ತದೆ. ೧೫ ಸೆಪ್ಟೆಂಬರ್ ೧೯೧೩ ರಲ್ಲಿ ಪರಿಷತ್ತಿನಲ್ಲಿ ಈ ಮಸೂದೆ ಅಂಗೀಕಾರವಾಗುತ್ತದೆ. 'ದಿ ಮೈಸೂರ್ ಎಲಿಮೆಂಟರಿ ಎಜುಕೇಶನ್ ರೆಗ್ಯುಲೇಷನ್ ಆಕ್ಟ್ ೧೯೧೩' ಮಸೂದೆ ಅಕ್ಟೋಬರ್ ೧೯೧೩ ರಲ್ಲಿ ಮಹಾರಾಜರ ಅನುಮೋದನೆ ಪಡೆದು ಶಾಸನ ರೂಪದಲ್ಲಿ ೧೯೧೩–೧೪ ರಿಂದ ಜಾರಿಗೆ ಬರುತ್ತದೆ. ಹೀಗೆ ಜಾರಿಗೆ ಬಂದ ಕಡ್ಡಾಯ ಪ್ರಾಥಮಿಕ ಶಿಕ್ಷಣ ಕಾನೂನಿನಂತೆ ಎಲ್ಲ ಪಾಲಕರು ಮತ್ತು ಪೋಷಕರಿಗೆ ತಮ್ಮ ಮಕ್ಕಳನ್ನು ಶಾಲೆಗೆ ಕಳಿಸುವುದು ಕಡ್ಡಾಯವಾಗಿತ್ತು. ೭ ರಿಂದ ೧೧ ವಯೋಮಿತಿಯ ಮಕ್ಕಳನ್ನು ಕೆಲಸಕ್ಕೆ ಸೇರಿಸುವ ಮೂಲಕ ಅವರ ಶಿಕ್ಷಣಕ್ಕೆ ಅಡಚಣೆ ಮಾಡುವವರನ್ನು ಶಿಕ್ಷೆಗೆ ಒಳಪಡಿಸಲು ಕಾನೂನಿನಲ್ಲಿ ಅವಕಾಶ ಕಲ್ಪಿಸಲಾಗಿತ್ತು.

**ಸ್ವಾತಂತ್ರ್ಯಾ ನಂತರ ಶಿಕ್ಷಣದ ವ್ಯವಸ್ಥೆ: ಮೂಲ ಶಿಕ್ಷಣ ಯೋಜನೆ:** ರಾಷ್ಟ್ರಪಿತ ಮಹಾತ್ಮಾ ಗಾಂಧಿಯವರು ಮಕ್ಕಳಿಗೆ ಶ್ರಮಿಕ ಜೀವನದ ಪರಿಚಯ ಮಾಡಿಸುವುದಕ್ಕಾಗಿ ಕರಕುಶಲ ಚಟುವಟಿಕೆಗಳು ಶಿಕ್ಷಣದ ಭಾಗವಾಗಿರಬೇಕೆಂದು ಪ್ರತಿಪಾದಿಸಿದರು. ಅದರಂತೆ ಪ್ರಾಥಮಿಕ ಶಿಕ್ಷಣದಲ್ಲಿ ಭಾಷೆ, ಗಣಿತ, ವಿಜ್ಞಾನ, ಸಾಮಾಜಿಕ ಅಧ್ಯಯನಗಳ ಜೊತೆಗೆ ವೃತ್ತಿ ಜೀವನಕ್ಕೆ ಅವರನ್ನು ತರಬೇತಿಗೊಳಿಸುವ ಕರಕುಶಲ ಕಸುಬುಗಳನ್ನು ಕಲಿಸಬೇಕೆಂಬುದು ಗಾಂಧೀಜಿ ಪ್ರತಿಪಾದಿಸಿದ ಶಿಕ್ಷಣ ನೀತಿಯ ಅಂಶವಾಗಿತ್ತು. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಈ ನೀತಿಗೆ ಅನುಗುಣವಾಗಿ ಪಠ್ಯಕ್ರಮ ಮತ್ತು ಶಿಕ್ಷಣ ವ್ಯವಸ್ಥೆಯಲ್ಲಿ ಬದಲಾವಣೆಗಳನ್ನು ತರಲಾಯಿತು.ರಾಜ್ಯದಲ್ಲಿಯೂ ಹಲವು ಕಡೆ ಮೂಲ ಶಿಕ್ಷಣ ಶಾಲೆಗಳನ್ನು (Basic Training School) ತೆರೆಯಲಾಯಿತು. ಈ ಶಾಲೆಗಳಲ್ಲಿ ಪುಸ್ತಕ ಆಧಾರಿತ ವಿಷಯಗಳ ಕಲಿಕೆಯ ಜೊತೆಗೆ ಕರಕುಶಲ ಕಸುಬುಗಳಾದ ಬಡಗಿ ಕೆಲಸ, ಕೃಷಿ, ಹೈನುಗಾರಿಕೆ, ನೂಲುವುದು, ನೇಯುವುದು ಮುಂತಾದ ವೃತ್ತಿ (Craft) ಸೌಲಭ್ಯಗಳನ್ನು ಒದಗಿಸಲಾಯಿತು. ವಿಶಾಲವಾದ ಕೃಷಿ ಜಮೀನು, ಕೃಷಿ ಸಲಕರಣೆಗಳು, ಬಾವಿ, ಪಂಪ್‌ಸೆಟ್, ಎತ್ತು, ನೇಗಿಲು, ಕೈಮಗ್ಗಗಳು, ಚರಕಗಳು, ಕುಂಬಾರಿಕೆಯ ಪರಿಕರಗಳು, ತೋಟಗಾರಿಕೆ ಸಲಕರಣೆಗಳು, ಪ್ರಾರ್ಥನಾ ಕೊಠಡಿಗಳು– ಹೀಗೆ ಪೂರಕ ಸೌಲಭ್ಯಗಳನ್ನು ಒದಗಿಸಲಾಯಿತು. ಆದರೆ ಈ ವ್ಯವಸ್ಥೆ ಬಹಳ ಕಾಲ ಮುಂದುವರೆಯಲಿಲ್ಲ. ಗಾಂಧೀಜಿಯವರ ಕನಸಿನ "ಶ್ರಮಿಕ ಜೀವನ ಮತ್ತು ಮೂಲ ಶಿಕ್ಷಣ" ವಾಸ್ತವಿಕವಾಗಿ ಮೂಲೆ ಗುಂಪಾಯಿತು. ಈ ಬೇಸಿಕ್ ಟ್ರೈನಿಂಗ್ ಶಾಲೆಗಳು, ವಯಸ್ಕರ ಶಿಕ್ಷಣ ವಿದ್ಯಾಪೀಠಗಳು ಆಕರ್ಷಣೆ ಕಳೆದುಕೊಂಡು ವೈಟ್ ಕಾಲರ್ ಶಿಕ್ಷಣಕ್ಕೆ ಪರಿವರ್ತನೆಗೊಂಡವು.

ರಾಜ್ಯದಲ್ಲಿ ೧೯೬೧–೬೨ ರಲ್ಲಿ ಜಾರಿಗೆ ಬಂದ ಕಡ್ಡಾಯ ಪ್ರಾಥಮಿಕ ಶಿಕ್ಷಣ ಕಾಯಿದೆ ಅನುಸಾರ ಆಡಳಿತ ವ್ಯವಸ್ಥೆಯನ್ನು ಬಲಪಡಿಸುವ ದೃಷ್ಟಿಯಿಂದ ತಾಲೂಕು ಮಟ್ಟದಲ್ಲಿ "ಇನ್ಸ್ಪೆಕ್ಟರ್ ಆಫ್ ಸ್ಕೂಲ್ಸ್" ಹುದ್ದೆಯನ್ನು ಮತ್ತು ಉಪ ವಿಭಾಗ ಮಟ್ಟದಲ್ಲಿ "ಸಹಾಯಕ ಶಿಕ್ಷಣಾಧಿಕಾರಿ" ಹುದ್ದೆಗಳನ್ನು ಸೃಷ್ಟಿಸಲಾಗಿತ್ತು. ೧೯೭೧–೭೨ರಲ್ಲಿ ಮತ್ತೊಂದು ಪುನರ್ ರಚನೆಯ ಮೂಲಕ ತಾಲೂಕು ಮಟ್ಟದಲ್ಲಿ "ಇನ್ಸ್ಪೆಕ್ಟರ್ ಆಫ್ ಸ್ಕೂಲ್ಸ್" ಹುದ್ದೆಯನ್ನು 'ಸಹಾಯಕ ಶಿಕ್ಷಣಾಧಿಕಾರಿ' ಎಂದು ಪುನರ್ ನಾಮಕರಣ ಮಾಡಿ ಇವರಿಗೆ ಸಹಾಯಕರಾಗಿ 'ಪದವೀಧರ ಶಾಲಾ ತನಿಖಾಧಿಕಾರಿ' ಹುದ್ದೆಗಳನ್ನು ಸೃಜಿಸಲಾಯಿತು. ದೊಡ್ಡದಾದ ಹಿರಿಯ ಪ್ರಾಥಮಿಕ ಶಾಲೆಗಳ ಮುಖ್ಯ ಶಿಕ್ಷಕರ ಹುದ್ದೆಗಳನ್ನು ಉನ್ನತೀಕರಿಸಿ 'ಪದವೀಧರ ಮುಖ್ಯೋಪಾಧ್ಯಾಯರು'ಎಂದು ಕರೆಯಲಾಯಿತು. ಜಿಲ್ಲಾಮಟ್ಟದಲ್ಲಿ ಡಿ.ಇ.ಒ. ಹುದ್ದೆಯನ್ನು ಮೇಲ್ದರ್ಜೆಗೇರಿಸಿ "ಉಪನಿರ್ದೇಶಕರು" ಎಂದು ನಾಮಕರಣ ಮಾಡಲಾಯಿತು. ಇವರಿಗೆ ಶಾಲಾ ತಪಾಸಣಾ ಕೆಲಸದಲ್ಲಿ ಸಹಾಯ ಮಾಡಲು ವಿಷಯ ಪರಿವೀಕ್ಷಕರ ಐದು ಹುದ್ದೆಗಳನ್ನು ಸೃಷ್ಟಿಸಲಾಯಿತು.

೧೯೯೯–೨೦೦೦ದ ವೇಳೆಗೆ ರಾಜ್ಯದಲ್ಲಿ ಪುರುಷರ ಸಾಕ್ಷರತಾ ಪ್ರಮಾಣ ಶೇ.೬೭.೨೫, ಮಹಿಳೆಯರ ಸಾಕ್ಷರತಾ ಪ್ರಮಾಣ ಶೇ.೪೪.೩೪ ಒಟ್ಟು ಸಾಕ್ಷರತಾ ಪ್ರಮಾಣ ಶೇ.೫೬.೦೪ ಇತ್ತು. ೨೦೧೧ರ ಜನ ಗಣತಿಯ ಪ್ರಕಾರ ಕರ್ನಾಟಕದಲ್ಲಿ ಸಾಕ್ಷರತಾ ಪ್ರಮಾಣ ಇನ್ನಷ್ಟು ವೃದ್ಧಿಯಾಗಿ ಪುರುಷರ ಸಾಕ್ಷರತಾ ಪ್ರಮಾಣ ಶೇ ೮೨.೮೫, ಮಹಿಳಾ ಸಾಕ್ಷರತಾ ಪ್ರಮಾಣ ಶೇ ೬೮.೧೩ ಹಾಗೂ ಒಟ್ಟಾರೆ ಸಾಕ್ಷರತಾ ಪ್ರಮಾಣ ಶೇ ೭೫.೬೦. ರಷ್ಟು ಇರುವುದಾಗಿ ದಾಖಲಾಗಿದೆ.

**ಕೋಷ್ಟಕ ೧೦.೧: ೨೦೧೧ ರ ಜನಗಣತಿಯಂತೆ ರಾಜ್ಯ ಮತ್ತು ದೇಶದ ಶೇಕಡಾವಾರು ಸಾಕ್ಷರತಾ ಪ್ರಮಾಣ**

| ಭಾರತ/ ಕರ್ನಾಟಕ | ಒಟ್ಟು | ಪುರುಷರು | ಮಹಿಳೆಯರು |
|---|---|---|---|
| ಭಾರತ | ೭೪.೦೪ | ೮೨.೧೪ | ೬೫.೪೬ |
| ಕರ್ನಾಟಕ | ೭೫.೬೦ | ೮೨.೮೫ | ೬೮.೧೩ |

**ಹತ್ತನೇ ಪಂಚವಾರ್ಷಿಕ ಯೋಜನೆಯ ಪ್ರಮುಖ ಗುರಿಗಳು:** ೧) ಆರರಿಂದ ೧೪ ವರ್ಷ ವಯೋಮಾನದ ಮಕ್ಕಳು ಪ್ರತಿಶತ ೧೦೦ರಷ್ಟು ದಾಖಲಾತಿ, ೨) ಒಂದು ಕಿಲೋ ಮೀಟರ್ ಅಂತರದೊಳಗೆ ಪ್ರಾಥಮಿಕ ಶಾಲೆ, ಇದೇ ರೀತಿ ಎರಡು ಕಿಲೋ ಮೀಟರ್ ಅಂತರದೊಳಗೆ ಹಿರಿಯ ಪ್ರಾಥಮಿಕ ಶಾಲೆಗಳನ್ನು ತೆರೆಯಿವುದು, ೩) ಉಳಿಕೆ ಪ್ರಮಾಣವನ್ನು ಒಂದರಿಂದ ಐದನೇ ತರಗತಿಯಲ್ಲಿ ಪ್ರತಿಶತ ಆರರಷ್ಟು ಮತ್ತು ಒಂದರಿಂದ ಏಳನೇ ತರಗತಿಯಲ್ಲಿ ಪ್ರತಿಶತ ೨೦ಕ್ಕೆ ಇಳಿಸುವುದು, ೪) ಪ್ರತಿ ಕಿರಿಯ ಪ್ರಾಥಮಿಕ ಶಾಲೆಗೆ ನಾಲ್ಕು ಶಿಕ್ಷಕರನ್ನು ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಿಗೆ ಆರು ಶಿಕ್ಷಕರನ್ನು ಒದಗಿಸುವುದು. ಈ ಪೈಕಿ ಪ್ರಾಥಮಿಕ ಶಾಲೆಗಳನ್ನು ಒಂದು ಕಿಲೋ ಮೀಟರ್ ಅಂತರದಲ್ಲಿ ಸ್ಥಾಪಿಸುವ ಗುರಿಮತ್ತು ಹಿರಿಯ ಪ್ರಾಥಮಿಕ ಶಾಲೆಗಳನ್ನು ಮೂರು ಕಿಲೋ ಮೀಟರ್‌ನಲ್ಲಿ ಸ್ಥಾಪಿಸುವ ಗುರಿ ಗಣನೀಯವಾಗಿ ಸಾಧಿಸಲಾಗಿದೆ. ದಾಖಲಾತಿಯ ಪ್ರಮಾಣವನ್ನೂ ಗಣನೀಯವಾಗಿ ಸುಧಾರಿಸಲಾಗಿದೆ. ದಾಖಲಾತಿಯ ಪ್ರಮಾಣವು ಪ್ರಾಥಮಿಕ ಶಾಲೆಗಳಲ್ಲಿ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಕ್ರಮವಾಗಿ ೯೯.೧೩ ಮತ್ತು ೯೯.೬೧ ಇರುತ್ತದೆ. ಇದರಿಂದ ಶಾಲೆಯಿಂದ ಹೊರಗುಳಿಯುವ ಮಕ್ಕಳು ಗಣನೀಯವಾಗಿ ಕಡಿಮೆಯಾಗಿರುತ್ತಾರೆ. ಏಳರಿಂದ ೧೪ ವಯೋಮಾನದ ಶಾಲೆಯಿಂದ ಹೊರಗುಳಿಯುವ ಮಕ್ಕಳ ಸಂಖ್ಯೆಯು ೨೦೦೨ರಲ್ಲಿ ೪.೦೨ ಲಕ್ಷ ಇದ್ದು, ೨೦೦೬ರಲ್ಲಿ ೦.೭೫ ಲಕ್ಷಕ್ಕೆ ಇಳಿದಿದೆ. ಹತ್ತನೇ ಪಂಚವಾರ್ಷಿಕ ಯೋಜನಾವಧಿಯಲ್ಲಿ ೧೩,೮೪೫ ಶಿಕ್ಷಕರನ್ನು ನೇಮಕಾತಿ ಮಾಡಲಾಗಿದೆ. ಹತ್ತನೇ ಪಂಚವಾರ್ಷಿಕ ಯೋಜನೆಯ ಅಂತ್ಯದಲ್ಲಿ ವಿದ್ಯಾರ್ಥಿ–ಶಿಕ್ಷಕರ ಅನುಪಾತವು ೨೮:೧ ಇರುತ್ತದೆ.

**೧೨ ನೇ ಪಂಚ ವಾರ್ಷಿಕ ಯೋಜನೆಯ ಪ್ರಮುಖ ಗುರಿಗಳು:**ಶಾಲಾ ಶಿಕ್ಷಣದ ಕನಿಷ್ಠ ಅವಧಿಯನ್ನು ಏಳು ವರ್ಷಗಳಿಗೆ ವಿಸ್ತರಿಸಿ ಖಾತ್ರಿಗೊಳಿಸುವುದು. ಶಿಕ್ಷಣ ಹಕ್ಕು ಕಾಯಿದೆಯ ಅನುಷ್ಠಾನವನ್ನು ಬಲಗೊಳಿಸುವುದು. ಮಕ್ಕಳ ದಾಖಲಾತಿಯಲ್ಲಿ ಸಾಮಾಜಿಕ ವರ್ಗ ಮತ್ತು ಲಿಂಗಾನುಪಾತದ ನಡುವಿನ ಅಂತರವನ್ನು ಕಡಿಮೆಗೊಳಿಸುವುದು. ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ ಶಿಕ್ಷಣಕ್ಕೆ ಒತ್ತು ನೀಡುವುದು. ವಿಶೇಷ ಅಗತ್ಯವುಳ್ಳ ಮಕ್ಕಳ ಶಿಕ್ಷಣಕ್ಕೆ ಒತ್ತು ನೀಡುವುದು. ಪ್ರೌಢಶಾಲಾ ಹಂತದಲ್ಲಿ ಕನಿಷ್ಠ ಶೇ ೧೦.೯ ರಷ್ಟು ದಾಖಲಾತಿ ಪ್ರಮಾಣವನ್ನು ಹೆಚ್ಚು ಮಾಡುವುದರ ಜೊತೆಗೆ ಪ್ರೌಢ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸುವುದು. ಶಿಕ್ಷಕರ ಕೌಶಲ್ಯ ಮತ್ತು ಸಾಮರ್ಥ್ಯವನ್ನು ಉತ್ತಮಪಡಿಸುವುದು. ಉನ್ನತ ಶಿಕ್ಷಣದಲ್ಲಿ ದಾಖಲಾತಿಯನ್ನು ಕನಿಷ್ಠ ೧೦ ಮಿಲಿಯನ್‌ವರೆಗೆ ಹೆಚ್ಚಿಸುವುದು. ಯುವ ಜನತೆಯ ನಿರೀಕ್ಷೆಗನುಗುಣವಾಗಿ ವಿಸ್ತರಣೆ ಮತ್ತು ಗುಣಮಟ್ಟ ಸುಧಾರಣೆ ಒಳಗೊಂಡಂತೆ ಶಕ್ತಿಶಾಲಿ ಉನ್ನತ ಶಿಕ್ಷಣ ವ್ಯವಸ್ಥೆಯನ್ನು ರೂಪಿಸುವುದು. ಖಾಸಗಿ ಸಹಭಾಗಿತ್ವಕ್ಕೆ ಒತ್ತು ಕೊಡುವುದು. ವೃತ್ತಿಪರತೆ ಮತ್ತು ಕೌಶಲಗಳನ್ನು ಉತ್ತಮಪಡಿಸುವುದಕ್ಕೆ ಆದ್ಯತೆಯನ್ನು ನೀಡಲಾಗುವುದು.

**ಕರ್ನಾಟಕದಲ್ಲಿ ಶಾಲಾ ಶಿಕ್ಷಣದ ವ್ಯವಸ್ಥೆ:** ಕರ್ನಾಟಕದಲ್ಲಿ ೧೦ ವರ್ಷಗಳ ಶಾಲಾ ಶಿಕ್ಷಣವನ್ನು ೨೦೦೧ಕ್ಕೆ ಮೊದಲು ೧-೪ ಕಿರಿಯ ಪ್ರಾಥಮಿಕ ಶಾಲೆ, ೫-೭ ಹಿರಿಯ ಪ್ರಾಥಮಿಕ ಶಾಲೆ ಮತ್ತು ೮-೧೦ ಪ್ರೌಢಶಾಲೆ ಎಂದು ವಿಭಜಿಸಲಾಗಿತ್ತು. ಪ್ರಸ್ತುತ ರಾಷ್ಟ್ರೀಯ ಮಾದರಿಯಂತೆ ೧-೫ ಕಿರಿಯ ಪ್ರಾಥಮಿಕ, ೬-೮ ಹಿರಿಯ ಪ್ರಾಥಮಿಕ ಎಂದು ವಿಭಜಿಸಲಾಗಿದೆ. ಈಗ ಕರ್ನಾಟಕದಲ್ಲಿ ಪ್ರಾಥಮಿಕ ಶಾಲೆಗಳು ೧-೫ ಅಥವಾ ೧-೭ ಅಥವಾ ೧-೮ ತರಗತಿಗಳನ್ನು ಹೊಂದಿವೆ. ಆಡಳಿತಾತ್ಮಕ ಕಾರಣಗಳಿಂದಾಗಿ ೮ನೇ ತರಗತಿಯನ್ನು ಸಂಪೂರ್ಣವಾಗಿ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಸೇರಿಸಲಾಗಿಲ್ಲ. ಆದ್ದರಿಂದ ಎಸ್.ಎಸ್.ಎ. ಅಡಿಯಲ್ಲಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಮಾತ್ರ ೮ನೇ ತರಗತಿಯನ್ನು ತೆರೆಯಲಾಗಿದೆ. ಉಳಿದಂತೆ ಪ್ರೌಢಶಾಲೆಗಳಲ್ಲಿಯೂ ೮ನೆಯ ತರಗತಿ ಮುಂದುವರೆದಿದೆ.

**ಶೈಕ್ಷಣಿಕ ಜಿಲ್ಲೆಗಳು**

| ಬೆಂಗಳೂರು ವಿಭಾಗ | ಮೈಸೂರು ವಿಭಾಗ | ಬೆಳಗಾವಿ ವಿಭಾಗ | ಕಲಬುರಗಿ ವಿಭಾಗ |
|---|---|---|---|
| ಬೆಂಗಳೂರು ನಗರ ಉತ್ತರ | ಮೈಸೂರು | ಬೆಳಗಾವಿ | ಕಲಬುರಗಿ |
| ಬೆಂಗಳೂರು ನಗರ ದಕ್ಷಿಣ | ಚಾಮರಾಜನಗರ | ಚಿಕ್ಕೋಡಿ (ಶೈಕ್ಷಣಿಕ) | ಯಾದಗಿರಿ |
| ಬೆಂಗಳೂರು ಗ್ರಾಮಾಂತರ | ಮಂಡ್ಯ | ಧಾರವಾಡ | ಬೀದರ್ |
| ರಾಮನಗರ | ಹಾಸನ | ಗದಗ | ಬಳ್ಳಾರಿ |
| ಕೋಲಾರ | ಕೊಡಗು | ಹಾವೇರಿ | ರಾಯಚೂರು |
| ಚಿಕ್ಕಬಳ್ಳಾಪುರ | ದಕ್ಷಿಣ ಕನ್ನಡ | ಉತ್ತರ ಕನ್ನಡ | ಕೊಪ್ಪಳ |
| ತುಮಕೂರು | ಉಡುಪಿ | ಬಾಗಲಕೋಟೆ | |
| ಮಧುಗಿರಿ (ಶೈಕ್ಷಣಿಕ) | ಚಿಕ್ಕಮಗಳೂರು | ವಿಜಯಪುರ | |
| ಚಿತ್ರದುರ್ಗ | | | |
| ದಾವಣಗೆರೆ | | | |
| ಶಿವಮೊಗ್ಗ | | | |

ವಿ.ಸೂ: ೧. ಬೆಂಗಳೂರು ನಗರ ಕಂದಾಯ ಜಿಲ್ಲೆಯಲ್ಲಿ ೨ ಶೈಕ್ಷಣಿಕ ಜಿಲ್ಲೆಗಳಿವೆ. ಉಳಿದ ಶೈಕ್ಷಣಿಕ ಜಿಲ್ಲೆಗಳನ್ನು ಆವರಣದಲ್ಲಿ ತೋರಿಸಿದೆ. ಉಳಿದವು ಎಲ್ಲ ಪೂರ್ಣ ಪ್ರಮಾಣದ ಜಿಲ್ಲೆಗಳಾಗಿವೆ.

**ಕೋಷ್ಟಕ ೧೦.೨: ೨೦೧೫-೧೬ರಲ್ಲಿದ್ದಂತೆ ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶಾಲೆಗಳ ವಿವರ**

| ವಿವರಗಳು | ಕಿರಿಯ ಪ್ರಾಥಮಿಕ ಶಾಲೆಗಳು | ಹಿರಿಯ ಪ್ರಾಥಮಿಕ ಶಾಲೆಗಳು | ಒಟ್ಟು ಪ್ರಾಥಮಿಕ ಶಾಲೆಗಳು | ಪ್ರೌಢ ಶಿಕ್ಷಣ ಶಾಲೆಗಳು | ಒಟ್ಟು ಪ್ರಾಥಮಿಕ + ಪ್ರೌಢ ಶಿಕ್ಷಣ ಶಾಲೆಗಳು |
|---|---|---|---|---|---|
| ಒಟ್ಟು ಶಾಲೆಗಳು | ೨೬,೧೨೫ | ೩೪,೮೦೩ | ೬೦,೯೨೮ | ೧೫,೧೪೧ | ೭೬,೦೬೯ |
| ಶಿಕ್ಷಣ ಇಲಾಖೆಯ ಶಾಲೆಗಳು | ೨೧,೬೫೪ | ೨೨,೪೪೭ | ೪೪,೧೦೧ | ೪೬೫೯ | ೪೮,೭೬೦ |
| ಸಮಾಜ ಕಲ್ಯಾಣ ಮತ್ತು ಸ್ಥಳೀಯ ಆಡಳಿತ | ೧೩೧ | ೫೮೭ | ೫೯೭ | ೫೬೬ | ೧,೧೬೩ |
| ಅನುದಾನಿತ | ೨೪೬ | ೨.೮೫೩ | ೩,೦೯೯ | ೩,೭೬೫ | ೬,೮೧೯ |

| | | | | | |
|---|---|---|---|---|---|
| ಅನುದಾನರಹಿತ | ೪,೦೮೨ | ೮,೮೦೯ | ೧೨,೮೯೧ | ೬,೦೧೩ | ೧೮,೮೦೪ |
| ಕೇಂದ್ರ ಸರ್ಕಾರಿ ಮತ್ತು ಇತರೆ | ೦೫ | ೮೯ | ೯೪ | ೮೪ | ೧೭೮ |
| ಅನಧಿಕೃತ | ೦೭ | ೦೮ | ೧೫ | ೦೧ | ೧೬ |
| ಸಮಾಜ ಕಲ್ಯಾಣ ಮತ್ತು ಸ್ಥಳೀಯ ಆಡಳಿತ | | ೫೮೭ | ೫೯೭ | ೫೬೬ | ೧,೧೬೩ |
| ಅನುದಾನಿತ | | ೨.೮೫೩ | ೩,೦೯೯ | ೩,೭೬೫ | ೬,೯೧೯ |
| ಅನುದಾನರಹಿತ | | ೮,೮೦೯ | ೧೨,೮೯೧ | ೬,೦೧೩ | ೧೮,೮೦೪ |
| ಕೇಂದ್ರ ಸರ್ಕಾರಿ ಮತ್ತು ಇತರೆ | | ೮೯ | ೯೪ | ೮೪ | ೧೭೮ |
| ಅನಧಿಕೃತ | | ೦೮ | ೧೫ | ೦೧ | ೧೬ |

ಆಧಾರ:ಕರ್ನಾಟಕದಲ್ಲಿ ಶಿಕ್ಷಣ ೨೦೧೫-೧೬ – ವರದಿ ಎಸ್‌ಎಸ್‌ಎ, ಸಾರ್ವಜನಿಕ ಶಿಕ್ಷಣ ಇಲಾಖೆ

## ಪ್ರಾಥಮಿಕ ಶಿಕ್ಷಣ

ಕರ್ನಾಟಕ ರಾಜ್ಯವು ಸಾರ್ವತ್ರಿಕ ಗುರಿಯನ್ನು ಸಾಧಿಸುವ ನಿಟ್ಟಿನಲ್ಲಿ ದಿಟ್ಟ ಹೆಜ್ಜೆಯನ್ನು ಇಟ್ಟಿದೆ. ಇದನ್ನು ಸಾಧಿಸಲು ಆರರಿಂದ ಹದಿನಾಲ್ಕು ವರ್ಷ ವಯೋಮಾನದ ಎಲ್ಲಾ ಮಕ್ಕಳಿಗೂ ಪ್ರಾಥಮಿಕ ಶಿಕ್ಷಣವನ್ನು ನೀಡುವ ನಿಟ್ಟಿನಲ್ಲಿ ಈ ಕೆಳಕಂಡ ಯೋಜನೆಗಳನ್ನು ಜಾರಿಗೆ ತಂದಿದೆ. (೧) ಎಲ್ಲಾ ಮಕ್ಕಳಿಗೂ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣ ಸೌಲಭ್ಯ, (೨) ಸಾರ್ವತ್ರಿಕ ದಾಖಲಾತಿ, (೩) ಸಾರ್ವತ್ರಿಕವಾಗಿ ಶಾಲೆಗಳಲ್ಲಿ ಮಕ್ಕಳನ್ನು ಉಳಿಸಿಕೊಳ್ಳುವಿಕೆ (೪) ಎಲ್ಲಾ ಮಕ್ಕಳ ಕನಿಷ್ಠ ಅವಶ್ಯಮಟ್ಟದ ಕಲಿಕೆಯನ್ನು ಸಾರ್ವತ್ರಿಕವಾಗಿ ಸಾಧಿಸುವುದು (೫) ಶಾಲಾ ಚಟುವಟಿಕೆಗಳಲ್ಲಿ ಸಮುದಾಯದ ಸಕ್ರಿಯ ಭಾಗವಹಿಸುವಿಕೆ (೬) ಸಾರ್ವತ್ರೀಕರಣದಲ್ಲಿ ಸಾಮಾಜಿಕ ಸಮಾನತೆ ಮತ್ತು ಪ್ರಾದೇಶಿಕ ಸಾಮ್ಯತೆ ಸಾಧಿಸುವುದು.

**ಶಾಲಾ ಸೌಲಭ್ಯ:** ಜನಸಂಖ್ಯೆ ಮತ್ತು ವಾಸಸ್ಥಾನಗಳಿಗನು ಗುಣವಾಗಿ ಶಾಲೆಗಳನ್ನು ಒದಗಿಸುವಲ್ಲಿ ಗಣನೀಯ ಪ್ರಗತಿಯನ್ನು ಸಾಧಿಸಲಾಗಿದೆ. ಒಂದು ಕಿ.ಮೀ. ವ್ಯಾಪ್ತಿಯೊಳಗೆ ಹಾಗೂ ನೂರು ಜನಸಂಖ್ಯೆಯುಳ್ಳ ಎಲ್ಲಾ ಪ್ರದೇಶಗಳಿಗೆ ಮತ್ತು ಶಾಲೆಗೆ ಹೋಗುವ ಮಕ್ಕಳ ಸಂಖ್ಯೆ ಹತ್ತಕ್ಕಿಂತ ಹೆಚ್ಚಿಗೆ ಇದ್ದ ಕಡೆಗಳಲ್ಲಿ ಪ್ರಾಥಮಿಕ ಶಾಲೆಗಳನ್ನು ಒದಗಿಸಲಾಗಿದೆ ಹಾಗೂ ಇದನ್ನೇ ಹಿರಿಯ ಪ್ರಾಥಮಿಕ ಶಾಲೆಗಳಿಗೂ ಅನ್ವಯ ಮಾಡಲಾಗಿದೆ. ಮಕ್ಕಳ ಸಂಖ್ಯೆ ತೀರಾ ಕಡಿಮೆ ಇರುವ ಜನವಸತಿಗಳಲ್ಲಿ ಪ್ರಾಥಮಿಕ ಅಥವಾ ಹಿರಿಯ ಪ್ರಾಥಮಿಕ ಶಾಲೆಗಳನ್ನು ತೆರೆಯಲು ಸಾಧ್ಯವಾಗದ ಕಡೆಗಳಲ್ಲಿ ಮಕ್ಕಳಿಗೆ ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಮೂರು ಕಿ.ಮೀ. ವ್ಯಾಪ್ತಿಯೊಳಗೆ ಹಿರಿಯ ಪ್ರಾಥಮಿಕ ಶಾಲೆ ಮತ್ತು ಐದು ಕಿ.ಮೀ. ವ್ಯಾಪ್ತಿಯೊಳಗೆ ಪ್ರೌಢ ಶಾಲೆಯನ್ನು ಒದಗಿಸಲಾಗಿದೆ. ಐದು ಕಿ.ಮೀ. ವ್ಯಾಪ್ತಿಯಲ್ಲಿ ಪ್ರೌಢ ಶಾಲೆ ಇಲ್ಲದಿದ್ದಾಗ ಹಿರಿಯ ಪ್ರಾಥಮಿಕ ಶಾಲೆಗಳನ್ನೇ ಮೇಲ್ದರ್ಜೆಗೇರಿಸಿ ಎಂಟನೇ ತರಗತಿಯನ್ನು ತೆರೆಯುವ ಮೂಲಕ ಮಕ್ಕಳು ನಿರಂತರವಾಗಿ ಕನಿಷ್ಠ ಎಂಟನೆಯ ತರಗತಿವರೆಗೆ ಶಿಕ್ಷಣವನ್ನು ಮುಂದುವರಿಸಲು ಅವಕಾಶವನ್ನು ಕಲ್ಪಿಸಲಾಗಿದೆ.

**ದಾಖಲಾತಿ:**೨೦೧೫-೧೬ರಲ್ಲಿ ಅನುಕ್ರಮವಾಗಿ ಕಿರಿಯ ಪ್ರಾಥಮಿಕ ೧-೫ ತರಗತಿಗಳಲ್ಲಿ ಅಂದಾಜು ೫೦.೦೫ ಲಕ್ಷ, ಹಿರಿಯ ಪ್ರಾಥಮಿಕ ೬-೮ ತರಗತಿಗಳಲ್ಲಿ ೨೯.೩೪ ಲಕ್ಷ (೧ ರಿಂದ ೮ ನೇ ತರಗತಿಗಳಲ್ಲಿ ಒಟ್ಟು ೮೩.೪೦ ಲಕ್ಷ), ೯ ರಿಂದ ೧೦ ನೇ ತರಗತಿಗಳಲ್ಲಿ ೧೭.೭೪ ಲಕ್ಷ, ಒಟ್ಟಾರೆ ಒಂದರಿಂದ ಹತ್ತನೇ ತರಗತಿಗಳಲ್ಲಿ೧೦೧.೧೪ ಲಕ್ಷ ಮಕ್ಕಳು ದಾಖಲಾಗಿದ್ದಾರೆ. ಜನರಲ್ಲಿ ಶಿಕ್ಷಣದ ಬಗ್ಗೆ ಅರಿವು ಮೂಡಿರುವುದು ಮತ್ತು ಶಾಲಾ ಸೌಲಭ್ಯಗಳ ಸುಧಾರಣೆ ಫಲವಾಗಿ ಪ್ರೌಢಶಾಲಾ ಮಟ್ಟದಲ್ಲಿ ದಾಖಲಾತಿ ಪ್ರಮಾಣ ಗಣನೀಯವಾಗಿ ಏರಿಕೆಯಾಗುತ್ತಿರುವುದನ್ನು ಗಮನಿಸಬಹುದು.

**ಕೋಷ್ಟಕ ೧೦.೩: ೨೦೧೦-೧೧ ರಿಂದ ೨೦೧೫-೧೬ರ ಅವಧಿಯಲ್ಲಿ ಕರ್ನಾಟಕದ ಶಾಲೆಗಳಲ್ಲಿ ಮಕ್ಕಳ ದಾಖಲಾತಿ ವಿವರ**

| ತರಗತಿಗಳು | ದಾಖಲಾದ ಒಟ್ಟು ಮಕ್ಕಳ ಸಂಖ್ಯೆ- ವರ್ಷವಾರು (ಲಕ್ಷಗಳಲ್ಲಿ) | | | | | |
|---|---|---|---|---|---|---|
| | ೨೦೧೦-೧೧ | ೨೦೧೧-೧೨ | ೨೦೧೨-೧೩ | ೨೦೧೩-೧೪ | ೨೦೧೪-೧೫ | ೨೦೧೫-೧೬ |
| ೧ ರಿಂದ ೫ | ೫೪.೧೪ | ೫೪.೧೪ | ೫೩.೭೯ | ೫೩.೬೧ | ೫೩.೭೩ | ೫೪.೦೫ |
| ೬ ರಿಂದ ೮ | ೨೯.೬೭ | ೩೦.೧೬ | ೩೦.೧೭ | ೨೯.೭೦ | ೨೯.೭೧ | ೨೯.೩೪ |
| ೧ ರಿಂದ ೮ | ೮೩.೮೨ | ೮೪.೨೧ | ೮೩.೯೬ | ೮೩.೨೨ | ೮೩.೪೪ | ೮೩.೪೦ |
| ೯ ಮತ್ತು ೧೦ | ೧೬.೪೮ | ೧೬.೭೬ | ೧೬.೬೭ | ೧೬.೮೪ | ೧೭.೬೬ | ೧೭.೭೪ |
| ೧ ರಿಂದ ೧೦ | ೧೦೦.೨೯ | ೧೦೦.೯೭ | ೧೦೦,೬೨ | ೧೦೦.೦೬ | ೧೦೦.೧೧ | ೧೦೧.೧೪ |
| ೧ ರಿಂದ ೧೦ ನೇ ತರಗತಿ ವರೆಗಿನ ಒಟ್ಟು ದಾಖಲಾತಿಯಲ್ಲಿ ಬಾಲಕರು ಮತ್ತು ಬಾಲಕಿಯರ ಪ್ರಮಾಣ | | | | | | |
| ಬಾಲಕರು | ೫೧.೯೦ | ೫೨,೩೪ | ೫೨.೨೨ | ೫೧.೭೭ | ೫೨.೨೮ | ೫೨.೩೦ |
| ಬಾಲಕಿಯರು | ೪೮.೪೦ | ೪೮.೬೩ | ೪೮.೪೧ | ೪೮.೨೯ | ೪೮.೮೩ | ೪೮.೮೪ |

ಆಧಾರ: ಕರ್ನಾಟಕದಲ್ಲಿ ಶಿಕ್ಷಣ ೨೦೧೦-೧೧ ರಿಂದ ೨೦೧೫-೧೬ ರ ವರದಿಗಳು ಎಸ್‌ಎಸ್‌ಎ, ಸಾರ್ವಜನಿಕ ಶಿಕ್ಷಣ ಇಲಾಖೆ

ಈ ಅಂಕಿ ಅಂಶಗಳನ್ನು ಗಮನಿಸಿದಾಗ ೨೦೧೦–೧೧ ರಿಂದ ೨೦೧೫–೧೬ ರ ವರೆಗಿನ ಐದು ವರ್ಷಗಳಲ್ಲಿ ಎಲಿಮೆಂಟರಿ ಶಾಲಾ ದಾಖಲಾತಿಯಲ್ಲಿ ಸುಮಾರು ೦.೪೧ ಲಕ್ಷ ಇಳಿಕೆಯಾಗಿದ್ದರೆ ಪ್ರೌಢಶಾಲಾ ತರಗತಿಗಳ ದಾಖಲಾತಿಯಲ್ಲಿ ೧.೨೬ ಲಕ್ಷ ಏರಿಕೆಯಾಗಿರುವುದು ಕಂಡುಬರುತ್ತದೆ. ಎಲಿಮೆಂಟರಿ ಹಂತದ ದಾಖಲಾತಿಯಲ್ಲಿ ಸ್ವಲ್ಪ ಮಟ್ಟಿಗೆ ಇಳಿಕೆಯಾಗಲು ಕಾರಣ ಜನಸಂಖ್ಯಾ ಬೆಳವಣಿಗೆಯಲ್ಲಿನ ಪ್ರಮಾಣ ಕಡಿಮೆಯಾಗಿರುವುದು ಹಾಗೂ ಮಕ್ಕಳ ಜನನ ಪ್ರಮಾಣದಲ್ಲಿ ಆಗಿರುವ ಇಳಿಕೆ ಕಾರಣವಾಗಿರಬಹುದು. ಅದೇ ರೀತಿ ಈ ಅವಧಿಯಲ್ಲಿ ಪ್ರೌಢಶಾಲಾ ಹಂತದಲ್ಲಿ ದಾಖಲಾತಿ ಏರಿಕೆಯಾಗಿರುವುದಕ್ಕೆ ಹೆಚ್ಚು ಮಕ್ಕಳು ಶಾಲಾ ಶಿಕ್ಷಣದಲ್ಲಿ ಮುಂದುವರಿಯುತ್ತಿರುವುದು ಕಾರಣವಾಗಿರಬಹುದು. ಒಂದರಿಂದ ಹತ್ತನೇ ತರಗತಿಗಳಲ್ಲಿ ದಾಖಲಾದ ಒಟ್ಟು ಮಕ್ಕಳ ಸಂಖ್ಯೆ ೧,೦೧,೧೪,೨೮೬. ಇದರ ಪೈಕಿ ೫೨,೩೦,೦೧೭ ಗಂಡು ಮತ್ತು ೪೮,೮೪, ೨೬೯ ಹೆಣ್ಣು ಮಕ್ಕಳಿದ್ದಾರೆ.

**ಕೋಷ್ಟಕ ೧೦.೪: ೨೦೧೫–೧೬ ನೇ ಸಾಲಿನಲ್ಲಿ ವಿವಿಧ ಪ್ರವರ್ಗದ ಮಕ್ಕಳ ದಾಖಲಾತಿ ಸಂಖ್ಯೆ:**

| ತರಗತಿ | ಸಾಮಾನ್ಯ | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಹಿಂದುಳಿದ ವರ್ಗ | ಒಟ್ಟು | ವಿಶೇಷ ಚೇತನ ಮಕ್ಕಳು |
|---|---|---|---|---|---|---|
| ೧–೫ | ೫,೩೬,೫೫೪ | ೧೦,೪೫,೪೩೨ | ೪,೨೭,೯೦೩ | ೩೩,೯೬,೦೩೧ | ೫೪,೦೫,೯೨೦ | |
| ೬–೮ | ೩,೧೭,೬೮೫ | ೫,೫೯,೧೮೮ | ೨,೨೫,೭೫೭ | ೧೮,೩೧,೪೭೨ | ೨೯,೩೪,೧೦೨ | |
| ೧–೮ | ೮,೫೪,೨೩೯ | ೧೬,೦೪,೬೨೦ | ೬,೫೩,೬೬೦ | ೫೨,೨೭,೫೦೩ | ೮೩,೪೦,೦೨೨ | ೧,೦೫,೨೯೭ |
| ೯–೧೦ | ೨,೫೧,೫೬೨ | ೩,೨೦,೦೪೯ | ೧,೨೬,೫೬೩ | ೧೦,೭೬,೦೯೦ | ೧೭,೭೪,೨೬೪ | ೧೪,೪೩೭ |
| ೧–೧೦ | ೧೧,೦೫,೮೦೧ | ೧೯,೨೪,೬೬೯ | ೭,೮೦,೨೨೩ | ೬೩,೦೩,೫೯೩ | ೧,೦೧,೧೪,೨೮೬ | |

ಶಾಲೆ ಬಿಡುವ ಮಕ್ಕಳು ಮತ್ತು ಶಾಲೆಯ ಹೊರಗಿರುವ ಮಕ್ಕಳ ಮಾಹಿತಿ :೨೦೧೪–೧೫ರಲ್ಲಿ ಶಿಕ್ಷಣ ಇಲಾಖೆ ಪ್ರಕಟಿಸಿರುವ ವರದಿಯ ಪ್ರಕಾರ ಕಿರಿಯ ಪ್ರಾಥಮಿಕ ಹಂತದಲ್ಲಿ ಶಾಲೆ ಬಿಡುವ ಮಕ್ಕಳ ವಾರ್ಷಿಕ ಸರಾಸರಿ ಪ್ರಮಾಣ ಶೇ.೨.೦೨ ಇದ್ದರೆ ಹಿರಿಯ ಪ್ರಾಥಮಿಕ ಹಂತದಲ್ಲಿ ಈ ಪ್ರಮಾಣ ಶೇ. ೫.೪೯ ಇದೆ. ೨೦೧೪–೧೫ ರಲ್ಲಿ ಪ್ರಕಟಿಸಲಾದ ವರದಿಯ ಪ್ರಕಾರ ೬–೧೪ ವಯೋಮಿತಿಯ ಶಾಲೆಗೆ ಹೋಗದೇ ಇರುವ ಒಟ್ಟಾರೆ ಮಕ್ಕಳ ಸಂಖ್ಯೆ ೨೯೫೫೫. ಇದರ ಪೈಕಿ ೧೬,೬೭೭ ಮಕ್ಕಳು ಶಾಲೆಗೆ ಧಾಖಲಾಗದೇ ಇದ್ದವರು. ೧೬೬೭೭ ಮಕ್ಕಳು ಶಾಲೆ ಬಿಟ್ಟವರು. ೨೦೧೫–೧೬ ನೇ ಸಾಲಿನಲ್ಲಿ ಶಾಲೆ ಬಿಡುವ ಮಕ್ಕಳ ಸರಾಸರಿ ಪ್ರಮಾಣ ಕಿರಿಯ ಪ್ರಾಥಮಿಕ ಹಂತದಲ್ಲಿ ಬಾಲಕರು ಶೇ. ೨.೦೩, ಬಾಲಕಿಯರು ಶೇ. ೧.೮೯, ಒಟ್ಟು ಶೇ. ೨.೦೨ ಹಿರಿಯ ಪ್ರಾಥಮಿಕ ಹಂತದಲ್ಲಿ ಬಾಲಕರು ಶೇ.೫.೧೦, ಬಾಲಕಿಯರು ೫.೯೦ ಒಟ್ಟು ೫.೪೯. ಎಲಿಮೆಂಟರಿ ಹಂತದಲ್ಲಿ ಈ ಪ್ರಮಾಣ ಬಾಲಕರು ಶೇ.೩.೧೨, ಬಾಲಕಿಯರು ಶೇ. ೩.೩೨ ಒಟ್ಟು ಶೇ೩.೨೫. ಪ್ರೌಢ ಶಾಲೆ ಹಂತದಲ್ಲಿ ಈ ಪ್ರಮಾಣ ಬಾಲಕರು ಶೇ. ೧೧.೮೧, ಬಾಲಕಿಯರು ಶೇ.೧೨.೭೫, ಒಟ್ಟು ಶೇ. ೧೨.೨೬ ಇದೆ.

**ಕೋಷ್ಟಕ ೧೦.೫: ಪ್ರಾಥಮಿಕ ಹಂತದಲ್ಲಿ ಶಾಲೆ ಬಿಡುವ ಮಕ್ಕಳ ಶೇಕಡವಾರು ಪ್ರಮಾಣ ೨೦೧೪–೧೫**

| ಪ್ರವರ್ಗ | ಕಿರಿಯ ಪ್ರಾಥಮಿಕ | | | ಹಿರಿಯ ಪ್ರಾಥಮಿಕ | | |
|---|---|---|---|---|---|---|
| | ಗಂಡು | ಹೆಣ್ಣು | ಒಟ್ಟು ಸರಾಸರಿ | ಗಂಡು | ಹೆಣ್ಣು | ಒಟ್ಟು ಸರಾಸರಿ |
| ಎಲ್ಲಾ ವರ್ಗ | ೨.೪೮ | ೨.೨೬ | ೨.೩೭ | ೨.೩೪ | ೨.೭೬ | ೨.೫೪ |
| ಪ. ಜಾತಿ | ೨.೪೪ | ೨.೦೯ | ೨.೨೭ | ೨.೦೦ | ೨.೮೫ | ೨.೪೦ |
| ಪ. ವರ್ಗ | ೩.೬೩ | ೩.೫೫ | ೩.೫೯ | ೪.೦೪ | ೩.೮೮ | ೩.೯೬ |

**ಕೋಷ್ಟಕ ೧೦.೬: ೨೦೧೦–೧೧ ರಿಂದ ೨೦೧೫ ೧೬ ರಲ್ಲಿದ್ದಂತೆ ಒಟ್ಟು ದಾಖಲಾತಿ (ಜಿ.ಇ.ಆರ್) ಪ್ರಮಾಣ**

| ವರ್ಷ | ಲಿಂಗ | ಪ್ರಾಥಮಿಕ ಹಂತ | | ಹಿರಿಯ ಪ್ರಾಥಮಿಕ ಹಂತ | | ಎಲಿಮೆಂಟರಿ ಹಂತ | | ಪ್ರೌಢಶಾಲೆ ಹಂತ | |
|---|---|---|---|---|---|---|---|---|---|
| | | ಜಿಇಆರ್ | ಎನ್‌ಇಆರ್ | ಜಿಇಆರ್ | ಎನ್‌ಇಆರ್ | ಜಿಇಆರ್ | ಎನ್‌ಇಆರ್ | ಜಿಇಆರ್ | ಎನ್‌ಇಆರ್ |
| ೨೦೧೦–೧೧ | NA | ೧೦೭.೫೩ | ೯೮.೮೬ | ೧೦೩.೯೨ | ೯೩.೫೭ | NA | NA | ೮೧.೪೨ | ೫೮.೪೭ |
| ೨೦೧೧–೧೨ | NA | ೧೦೭.೪೬ | ೯೯.೨೧ | ೧೦೬.೧೬ | ೯೬.೯೫ | NA | NA | ೮೫.೬೫ | ೬೫.೭೬ |
| ೨೦೧೨–೧೩ | NA | ೧೦೬.೮೧ | ೯೭.೬೯ | ೧೦೫.೬೬ | ೯೪.೮೩ | NA | NA | ೮೪.೫೪ | ೬೯.೩೦ |
| ೨೦೧೩–೧೪ | NA | ೧೦೨.೩೬ | ೯೩.೫೬ | ೯೦.೪೭ | ೮೧.೭೮ | NA | NA | ೭೫.೯೯ | ೫೫.೩೩ |
| ೨೦೧೪–೧೫ | NA | ೧೦೨.೯೭ | ೯೫.೪೭ | ೮೯.೧೮ | ೮೧೩೭ | NA | NA | ೭೭.೩೧ | ೫೫.೯೭ |
| ೨೦೧೫–೧೬ | ಗಂಡು | ೧೦೨.೯೧ | ೯೬.೩೨ | ೯೨.೪೩ | ೭೮.೨೧ | ೯೮.೯೬ | ೮೯.೪೮ | ೮೨.೩೫ | ೬೧.೧೮ |
| | ಹೆಣ್ಣು | ೧೦೩.೦೪ | ೯೬.೪೦ | ೯೪.೩೯ | ೮೦.೨೦ | ೯೯.೮೩ | ೯೦.೪೪ | ೮೪.೧೯ | ೬೨.೩೮ |
| | ಒಟ್ಟು | ೧೦೨.೯೮ | ೯೬.೪೦ | ೯೩.೩೨ | ೭೯.೧೬ | ೯೯.೩೮ | ೮೯.೯೪ | ೮೩.೨೨ | ೬೧.೭೫ |

NA= Not available

**ಆಧಾರ: ಕರ್ನಾಟಕದಲ್ಲಿ ಶಿಕ್ಷಣ ೨೦೧೪–೧೫ ಮತ್ತು ೨೦೧೫–೧೬ – ವರದಿ ಎಸ್‌ಎಸ್‌ಎ, ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ಕರ್ನಾಟಕ ಆರ್ಥಿಕ ಸಮೀಕ್ಷೆ**

**ಮೂಲ ಸೌಕರ್ಯ:** ಸರ್ವ ಶಿಕ್ಷಣ ಅಭಿಯಾನ ಎಂಬ ರಾಷ್ಟ್ರೀಯ ಮಹತ್ವಾಕಾಂಕ್ಷೆಯ ಯೋಜನೆಯಡಿಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರಿಕರಣಗೊಳಿಸಲಾಗಿದೆ. ಇದಕ್ಕಾಗಿ ರಾಜ್ಯವು ವಿಶೇಷ ಮಹತ್ವ ನೀಡಿದ್ದು, ಮೂಲಭೂತ ಸೌಕರ್ಯಗಳಾದ ಶಾಲಾಕಟ್ಟಡಗಳು, ಹೆಚ್ಚುವರಿ ತರಗತಿ ಕೋಣೆಗಳು, ಶಾಲಾಕಟ್ಟಡಗಳ ರಿಪೇರಿ ಮತ್ತು ಉಸ್ತುವಾರಿ ಮುಂತಾದವುಗಳನ್ನು ನೀಡಿದೆ. ರಾಜ್ಯವು ರಾಷ್ಟ್ರೀಯ ಗುಣಮಟ್ಟವನ್ನು ಅನುಸರಿಸಲು ಶಾಲೆಗಳಿಗೆ ಎಂಟು ಮೂಲಭೂತ ಸೌಕರ್ಯ ಒದಗಿಸಿದೆ. ಈ ಸೌಲಭ್ಯಗಳು ಎಂಹೆಚ್‌ಆರ್‌ಡಿ ಯವರು ಗುರುತಿಸಿದ ಸೌಲಭ್ಯಗಳಿಗೆ ಸಾಮ್ಯವಾಗಿದೆ. ಇವುಗಳೆಂದರೆ ಸಾಮಾನ್ಯ ಶೌಚಾಲಯ, ಹೆಣ್ಣುಮಕ್ಕಳ ಶೌಚಾಲಯ, ವಿದ್ಯುತ್, ಆಟದ ಮೈದಾನ, ರ್‍ಯಾಂಪ್ಸ್, ವಾಚನಾಲಯ, ಕಾಂಪೌಂಡ್ ಮತ್ತು ಕುಡಿಯುವ ನೀರು. ರಾಜ್ಯ ಸರ್ಕಾರವು ಶಾಲೆಗಳಿಗೆ ಅಗತ್ಯವಾದ ಐದು ಪ್ರಮುಖ ಸೌಲಭ್ಯಗಳನ್ನು ಗುರುತಿಸಿದೆ. ಅವುಗಳೆಂದರೆ, ಕುಡಿಯುವ ನೀರು, ಶೌಚಾಲಯ, ಆಟದ ಮೈದಾನ, ಕಾಂಪೌಂಡ್ ಮತ್ತು ಶಾಲಾಕಟ್ಟಡಗಳು (ಪಂಚ ಸೌಲಭ್ಯ).

**ಶಾಲಾಕಟ್ಟಡಗಳು ಮತ್ತು ತರಗತಿ ಕೋಣೆಗಳು:** ೨೦೧೫–೧೬ ರಲ್ಲಿದ್ದಂತೆ ರಾಜ್ಯದಲ್ಲಿರುವ ಒಟ್ಟು ೬೦,೯೭೮ ಪ್ರಾಥಮಿಕ ಶಾಲೆಗಳಲ್ಲಿ(ಕಿರಿಯ ಮತ್ತು ಹಿರಿಯ ಪ್ರಾಥಮಿಕ)೪೪,೧೦೧ ಶಾಲೆಗಳು ಶಿಕ್ಷಣ ಇಲಾಖೆಯ ಆಡಳಿತಕ್ಕೆ ಒಳಪಟ್ಟಿವೆ. ಈ ಪೈಕಿ ಸುಮಾರು ೪೩,೩೮೬ ಶಾಲೆಗಳನ್ನು ಇಲಾಖೆಯ ಸ್ವಂತ ಕಟ್ಟಡದಲ್ಲಿ ನಡೆಸಲಾಗುತ್ತಿದೆ. ೨೬೧ ಶಾಲೆಗಳು ಬಾಡಿಗೆ ರಹಿತ ಖಾಸಗಿ ಕಟ್ಟಡಗಳನ್ನು ಹೊಂದಿದ್ದು ಆರು ಶಾಲೆಗಳು ಕಟ್ಟಡರಹಿತವಾಗಿವೆ. ಶಿಕ್ಷಣ ಇಲಾಖೆಯ ೪೪,೧೦೧ ಎಲಿಮೆಂಟರಿ ಶಾಲೆಗಳಲ್ಲಿ ೨,೧೨,೦೩೭ ತರಗತಿ ಕೋಣೆಗಳಿವೆ. ೨೦೦೮–೦೯ರಲ್ಲಿ ೧,೮೮,೯೪೧ ಪ್ರಾಥಮಿಕ ಹಂತದ ತರಗತಿ ಕೋಣೆಗಳಿದ್ದು, ೨೦೧೫–೧೬ರ ವೇಳೆಗೆ ಸುಮಾರು ೨೩,೧೯೬ ತರಗತಿ ಕೋಣೆಗಳು ಹೆಚ್ಚಾಗಿರುವುದು ಕಂಡುಬರುತ್ತದೆ . ಶೇ.೧,೪೬,೦೨೧ ತರಗತಿ ಕೋಣೆಗಳು ಉತ್ತಮ ಸ್ಥಿತಿಯಲ್ಲಿದ್ದು, ೩೩,೦೫೮ ತರಗತಿ ಕೋಣೆಗಳಿಗೆ ಸಣ್ಣ ಪ್ರಮಾಣದ ದುರಸ್ತಿಯ ಅಗತ್ಯವಿದೆ. ಹಾಗೆಯೇ ೩೨,೯೫೯ ತರಗತಿ ಕೋಣೆಗಳಿಗೆ ದೊಡ್ಡ ಪ್ರಮಾಣದ ದುರಸ್ತಿಯ ಅವಶ್ಯಕತೆಯಿದೆ. ಶಿಕ್ಷಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ ಮತ್ತು ಸ್ಥಳೀಯ ಆಡಳಿತಗಳಿಂದ ನಡೆಸಲ್ಪಡುವ ಒಟ್ಟು ೫,೨೨೫ ಪ್ರೌಢಶಾಲೆಗಳಿದ್ದು ೪, ೯೨೫ಶಾಲೆಗಳು ಸ್ವಂತ ಕಟ್ಟಡವನ್ನು ಹೊಂದಿವೆ. ೨೨೮ ಶಾಲೆಗಳು ಬಾಡಿಗೆ ರಹಿತ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ.

**ಶಿಕ್ಷಕರು:**ಶಿಕ್ಷಣ ಇಲಾಖೆಯ ಕಿರಿಯ ಮತ್ತು ಹಿರಿಯ ಪ್ರಾಥಮಿಕ ಹಂತದ ಶಾಲೆಗಳು ಮತ್ತು ರಾಜ್ಯ ಸರ್ಕಾರದ ಅಧೀನದಲ್ಲಿರುವ ಇತರೆ (ಸಮಾಜ ಕಲ್ಯಾಣ ಇಲಾಖೆ, ಸ್ಥಳೀಯ ಆಡಳಿತ ಇತ್ಯಾದಿ) ಶಾಲೆಗಳಲ್ಲಿ ಮಂಜೂರಾದ ಒಟ್ಟು ೨,೦೬,೭೮೫ ಶಿಕ್ಷಕರ ಹುದ್ದೆಗಳ ಪೈಕಿ ೨೦೧೫–೧೬ ರ ಅಂಕಿ ಅಂಶಗಳ ಪ್ರಕಾರ ೧,೬೮,೫೨೨ ಶಿಕ್ಷಕರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇದಲ್ಲದೆ, ಸರ್ಕಾರಿ ಅನುದಾನಿತ ಪ್ರಾಥಮಿಕ ಶಾಲೆಗಳಲ್ಲಿ ಮಂಜೂರಾದ ೨೨,೬೦೭ ಹುದ್ದೆಗಳ ಪೈಕಿ ೧೭,೩೦೭ ಶಿಕ್ಷಕರು ಕೆಲಸ ನಿರ್ವಹಿಸುತ್ತಿದ್ದಾರೆ. ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷರಲ್ಲಿ ೯೧,೫೦೧ ಮಹಿಳಾ ಶಿಕ್ಷಕಿಯರಿದ್ದಾರೆ.ಕಿರಿಯ ಪ್ರಾಥಮಿಕ ಹಂತದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರ ಸಂಖ್ಯೆಯ ಪ್ರಕಾರ ಶಿಕ್ಷಕರು ಹಾಗೂ ವಿದ್ಯಾರ್ಥಿಗಳ ಅನುಪಾತವು ೧:೧೫.೯ ಇದ್ದರೆ ಹಿರಿಯ ಪ್ರಾಥಮಿಕ ಹಂತದಲ್ಲಿ ೧:೨೬.೫೪ ಹಾಗೂ ಒಟ್ಟಾರೆ ಎಲಿಮೆಂಟರಿ ಶಾಲೆಗಳಲ್ಲಿ ಸರಾಸರಿ ಅನುಪಾತವು ೧:೨೩.೫೨ ಇದ್ದು ಈ ಅನುಪಾತವು ತೃಪ್ತಿಕರವಾಗಿದೆ. ರಾಜ್ಯದಸರಾಸರಿ ಪ್ರಮಾಣ ಹೀಗಿದ್ದರೂ, ಜಿಲ್ಲೆ, ಬ್ಲಾಕ್ ಮತ್ತು ಶಾಲಾ ಮಟ್ಟಗಳಲ್ಲಿ ಬೇರೆಬೇರೆಯಾಗಿದೆ.

**ಕೋಷ್ಟಕ ೧೦.೭: ೨೦೧೫–೧೬ನೇ ಸಾಲಿನಲ್ಲಿ ರಾಜ್ಯದ ವಿವಿಧ ಆಡಳಿತ ವರ್ಗದ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರ ವಿವರ**

| ವಿವರಗಳು | | ಶಿಕ್ಷಣ ಇಲಾಖೆ | ಸ. ಕ. ಇಲಾಖೆ/ ಸ್ಥಳೀಯ ಆಡಳಿತ | ಕೇಂದ್ರ ಸರ್ಕಾರಿ | ಅನುದಾನಿತ | ಅನುದಾನ ರಹಿತ | ಇತರೆ | ಒಟ್ಟು |
|---|---|---|---|---|---|---|---|---|
| ಕಿರಿಯ ಪ್ರಾಥಮಿಕ ಶಾಲೆಗಳು | ಮಂಜೂರಾದ ಹುದ್ದೆಗಳು | ೫೩,೨೮೯ | ೫೪೧ | ೧೧ | ೧,೦೨೪ | ೧೮,೮೨೪ | ೦೫ | ೭೩,೬೯೪ |
| | ಕಾರ್ಯ ನಿರ್ವಹಿಸುತ್ತಿರುವ ಸಂಖ್ಯೆ | ೪೪,೧೦೯ | ೪೦೭ | ೦೫ | ೭೧೪ | ೧೭,೬೨೮ | ೦೫ | ೬೨,೮೬೮ |
| ಹಿರಿಯ ಪ್ರಾಥಮಿಕ ಶಾಲೆಗಳು | ಮಂಜೂರಾದ ಹುದ್ದೆಗಳು | ೧,೬೦.೩೬೯ | ೨,೭೨೦ | ೧,೦೧೭ | ೨೧,೫೮೩ | ೮೪,೦೧೮ | ೫೦ | ೨,೬೯,೭೫೭ |
| | ಕಾರ್ಯ ನಿರ್ವಹಿಸುತ್ತಿರುವ ಸಂಖ್ಯೆ | ೧,೨೧,೯೭೪ | ೨೦೩೨ | ೯೦೦ | ೧೬,೫೯೫ | ೮೧,೩೮೦ | ೫೦ | ೨,೨೨,೯೩೧ |
| ಎಲಿಮೆಂಟರಿ ಹಂತದ ಒಟ್ಟು ಶಾಲೆಗಳು | ಮಂಜೂರಾದ ಹುದ್ದೆಗಳು | ೨,೦೩,೬೫೮ | ೩,೨೬೧ | ೧,೦೨೮ | ೨೨,೬೦೭ | ೧,೦೨,೮೪೨ | ೫೫ | ೩,೩೩,೪೫೧ |
| | ಕಾರ್ಯ ನಿರ್ವಹಿಸುತ್ತಿರುವ ಸಂಖ್ಯೆ | ೧,೬೬,೦೮೩ | ೨,೪೩೯ | ೯೦೫ | ೧೭,೩೦೯ | ೯೯,೦೦೮ | ೫೫ | ೨,೮೫,೮೯೯ |
| ಪ್ರೌಢ ಶಾಲೆಗಳು | ಮಂಜೂರಾದ ಹುದ್ದೆಗಳು | ೪೪,೬೩೦ | ೩,೫೦೫ | ೭೫೭ | ೩೪,೭೬೯ | ೩೯,೩೯೮ | ೪೮ | ೧,೨೩,೧೦೭ |
| | ಕಾರ್ಯ ನಿರ್ವಹಿಸುತ್ತಿರುವ ಸಂಖ್ಯೆ | ೩೮,೯೨೩ | ೨,೩೪೮ | ೬೪೮ | ೨೮,೮೫೪ | ೩೭,೦೯೧ | ೩೧ | ೧,೦೮,೧೯೫ |

**ಕೋಷ್ಟಕ ೧೦.೮: ೨೦೧೫-೧೬ನೇ ಸಾಲಿನಲ್ಲಿ ರಾಜ್ಯದ ವಿವಿಧ ಆಡಳಿತ ವರ್ಗದ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವವರ ಪೈಕಿ ಪುರುಷರು ಮತ್ತು ಮಹಿಳಾ ಶಿಕ್ಷಕರ ವಿವರ**

| ವಿವರಗಳು | | ಶಿಕ್ಷಣ ಇಲಾಖೆ | ಸ. ಕ. ಇಲಾಖೆ/ ಸ್ಥಳೀಯ ಆಡಳಿತ | ಕೇಂದ್ರ ಸರ್ಕಾರಿ | ಅನುದಾನಿತ | ಅನುದಾನ ರಹಿತ | ಇತರೆ | ಒಟ್ಟು |
|---|---|---|---|---|---|---|---|---|
| ಕಿರಿಯ ಪ್ರಾಥಮಿಕ | ಒಟ್ಟು ಸಂಖ್ಯೆ | ೪೪,೧೦೯ | ೪೦೭ | ೦೫ | ೭೧೪ | ೧೭,೬೨೮ | ೦೫ | ೬೨,೮೬೮ |
| | ಪುರುಷರು | ೨೪,೩೫೪ | ೨೩೩ | ೦೫ | ೪೩೭ | ೪,೦೭೪ | ೦೫ | ೨೯,೧೦೩ |
| | ಮಹಿಳೆಯರು | ೧೯,೭೫೫ | ೧೭೪ | ೦೦ | ೨೭೭ | ೧೩,೫೫೪ | ೦೦ | ೩೩,೭೬೫ |
| ಹಿರಿಯ ಪ್ರಾಥಮಿಕ | ಒಟ್ಟು ಸಂಖ್ಯೆ | ೧,೨೧,೯೭೪ | ೨,೦೩೨ | ೯೦೦ | ೧೬,೫೯೫ | ೮೧,೩೮೦ | ೫೦ | ೨,೨೨,೯೩೧ |
| | ಪುರುಷರು | ೫೮,೨೨೧ | ೧,೭೪೯ | ೬೫೦ | ೯,೩೩೬ | ೨೦,೬೪೦ | ೨೩ | ೯೦,೬೧೯ |
| | ಮಹಿಳೆಯರು | ೬೩,೭೬೩ | ೨೮೩ | ೨೫೦ | ೭,೨೫೯ | ೬೦,೭೪೦ | ೨೭ | ೧,೩೨,೩೧೨ |
| ಎಲಿಮೆಂಟರಿ ಹಂತದ ಒಟ್ಟು | ಒಟ್ಟು ಸಂಖ್ಯೆ | ೧,೬೬,೦೮೩ | ೨,೨೩೯ | ೯೦೫ | ೧೭,೩೦೯ | ೯೯,೦೦೮ | ೫೫ | ೨,೮೫,೭೯೯ |
| | ಪುರುಷರು | ೮೨,೫೭೫ | ೧,೯೮೨ | ೬೫೫ | ೯,೭೭೩ | ೨೪,೭೧೪ | ೨೩ | ೧,೧೯,೭೨೨ |
| | ಮಹಿಳೆಯರು | ೮೩,೫೦೮ | ೪೫೭ | ೨೫೦ | ೭,೫೩೬ | ೭೪,೨೯೪ | ೩೨ | ೧,೬೬,೦೭೭ |
| ಪ್ರೌಢಶಾಲೆಗಳು | ಒಟ್ಟು ಸಂಖ್ಯೆ | ೩೮,೯೨೩ | ೨,೬೪೮ | ೭೫೭ | ೨೮,೮೫೪ | ೩೭,೦೯೧ | ೩೧ | ೧,೦೮,೧೯೫ |
| | ಪುರುಷರು | ೨೫,೬೭೮ | ೨,೧೯೮ | ೬೪೮ | ೨೨,೧೨೫ | ೧೮,೫೧೧ | ೩೦ | ೬೯,೧೧೫ |
| | ಮಹಿಳೆಯರು | ೧೩,೨೪೫ | ೪೫೦ | ೫೭೩ | ೬,೭೨೯ | ೧೮,೫೮೦ | ೦೧ | ೩೯,೦೮೦ |

**ಕೋಷ್ಟಕ ೧೦.೯: ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕ, ವಿದ್ಯಾರ್ಥಿ ಅನುಪಾತ (ಟಿ.ಪಿ.ಆರ್) – ಶಿಕ್ಷಣ ಇಲಾಖೆ ಶಾಲೆಗಳಿಗೆ ಸೀಮಿತವಾಗಿ**

| ಹಂತ | ಮಂಜೂರಾದ ಹುದ್ದೆಗಳ ಪ್ರಕಾರ | ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರ ಸಂಖ್ಯೆ ಪ್ರಕಾರ |
|---|---|---|
| ಕಿ.ಪ್ರಾ.ಶಾಲೆ | ೧೨.೫೭ | ೧೫.೧೯ |
| ಹಿ.ಪ್ರಾ.ಶಾಲೆ | ೨೧.೫೩ | ೨೬.೫೪ |
| ಒಟ್ಟು ಎಲಿಮೆಂಟರಿ ಸರಾಸರಿ | ೧೯.೧೮ | ೨೩.೫೨ |

ಆಧಾರ: ಕರ್ನಾಟಕದಲ್ಲಿ ಶಿಕ್ಷಣ ೨೦೧೫-೧೬ ಅಂಕಿ ಅಂಶಗಳ ವರದಿ ಎಸ್.ಎಸ್.ಎ., ಸಾರ್ವಜನಿಕ ಶಿಕ್ಷಣ ಇಲಾಖೆ

**ರಾಜ್ಯಮಟ್ಟದಲ್ಲಿ ಶೈಕ್ಷಣಿಕ ಆಡಳಿತ ವ್ಯವಸ್ಥೆ:** ಕೆಲವು ದಶಕಗಳ ಹಿಂದಿನವರೆಗೆ ಸರ್ಕಾರದ ಹಂತದಲ್ಲಿ ಶಿಕ್ಷಣ ಸಚಿವಾಲಯದ ವ್ಯಾಪ್ತಿಗೆ ಯುವಜನ ಸೇವಾ ಇಲಾಖೆ ಮತ್ತು ಉನ್ನತ ಶಿಕ್ಷಣ ಇಲಾಖೆಯೂ ಒಳಪಟ್ಟಿತ್ತು. ತದನಂತರ ಅವು ಪ್ರತ್ಯೇಕ ಇಲಾಖೆಗಳಾದವು. ಪ್ರಸ್ತುತದಲ್ಲಿ ಸಚಿವಾಲಯ ಮಟ್ಟದಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಹಾಗೂ ಉನ್ನತ ಶಿಕ್ಷಣ ಇಲಾಖೆಗಳು ಎರಡು ಸ್ವತಂತ್ರ ಇಲಾಖೆಗಳಾಗಿ ಕಾರ್ಯ ನಿರ್ವಹಿಸುತ್ತಿವೆ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯ ಅಧೀನದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ, ಲೋಕ ಶಿಕ್ಷಣ (ವಯಸ್ಕರ ಶಿಕ್ಷಣ) ಇಲಾಖೆ, ಗ್ರಂಥಾಲಯ ಇಲಾಖೆ ಹಾಗೂ ಮುದ್ರಣ ಮತ್ತು ಲೇಖನ ಸಾಮಗ್ರಿಗಳ ಇಲಾಖೆಗಳು ಬರುತ್ತವೆ. ಉನ್ನತ ಶಿಕ್ಷಣ ಇಲಾಖೆಯ ಅಡಿಯಲ್ಲಿ ವಿಶ್ವ ವಿದ್ಯಾಲಯಗಳು, ಕಾಲೇಜು ಶಿಕ್ಷಣ, ತಾಂತ್ರಿಕ ಶಿಕ್ಷಣ, ವೈದ್ಯಕೀಯ ಶಿಕ್ಷಣ, ಕೃಷಿ, ಪಶು ವೈದ್ಯಕೀಯ ಶಿಕ್ಷಣ ಇತ್ಯಾದಿ ಉಳಿದ ವಿಭಾಗಗಳು ಬರುತ್ತವೆ.

**ಆಯುಕ್ತಾಲಯ, ಬೆಂಗಳೂರು:** ಕ್ಷೇತ್ರ ಮಟ್ಟದ ಇಲಾಖೆಗಳ (Field Departments) ಪೈಕಿ ಸಾರ್ವಜನಿಕ ಶಿಕ್ಷಣ ಇಲಾಖೆ ಒಂದು ಬೃಹತ್ತಾದ ಇಲಾಖೆ. ೧ರಿಂದ ೧೦ ನೇ ತರಗತಿಗಳ ವರೆಗಿನ ಶಾಲಾ ಶಿಕ್ಷಣದ ಉಸ್ತುವಾರಿ, ಪರೀಕ್ಷಾ ಮಂಡಳಿ, ಶಿಕ್ಷಕರ ಸೇವಾ ಪೂರ್ವ ತರಬೇತಿ, ಸೇವಾ ನಿರತ ತರಬೇತಿ, ಶೈಕ್ಷಣಿಕ ಸಂಶೋಧನೆ, ಮಧ್ಯಾಹ್ನ ಉಪಾಹಾರ, ಶಿಕ್ಷಕರ ನೇಮಕಾತಿ, ಮುಂತಾದ ಹಲವು ಕಾರ್ಯಕ್ರಮಗಳನ್ನು ನಿರ್ವಹಿಸುವ ಶಾಖೋಪ ಶಾಖೆಗಳು ಈ ಇಲಾಖೆಯ ವ್ಯಾಪ್ತಿಗೆ ಒಳಪಡುತ್ತವೆ. ೨೦೧೫-೧೬ ನೇ ಸಾಲಿನ ಮಾಹಿತಿಯಂತೆ ಸುಮಾರು ೭೬ ಸಾವಿರ ಶಾಲೆಗಳು, ೧೦೧ ಲಕ್ಷ ವಿದ್ಯಾರ್ಥಿಗಳು ಮತ್ತು ೩.೯೪ ಲಕ್ಷ ಶಿಕ್ಷಕರು (೪.೫೬ ಲಕ್ಷ ಹುದ್ದೆಗಳು), ಐದು ಸಾವಿರಕ್ಕೆ ಮೇಲ್ಪಟ್ಟು ಲಿಪಿಕ ಸಿಬ್ಬಂಧಿಯನ್ನು ಹೊಂದಿದ ಈ ಬೃಹತ್ ಇಲಾಖೆಯ ಆಡಳಿತವನ್ನು ನಿಯಂತ್ರಿಸುವುದು ಬೆಂಗಳೂರಿನ ಸಾರ್ವಜನಿಕ ಶಿಕ್ಷಣ ಆಯುಕ್ತಾಲಯ. ೧೯೫೬ಕ್ಕೆ ಮೊದಲು ತಾಂತ್ರಿಕ ಶಿಕ್ಷಣ, ಕಾಲೇಜು ಶಿಕ್ಷಣ, ಗ್ರಂಥಾಲಯ, ಕೃಷಿ ಶಿಕ್ಷಣ, ಹೀಗೆ ವಿವಿಧ ಶಾಖೆಗಳು ಈ ಆಯುಕ್ತಾಲಯದ ವ್ಯಾಪ್ತಿಗೆ ಒಳಪಟ್ಟಿದ್ದವು. ತದನಂತರ ಇವೆಲ್ಲವೂ ಸ್ವತಂತ್ರ ಇಲಾಖೆಗಳಾಗಿವೆ. ಪದವಿ ಪೂರ್ವ ಶಿಕ್ಷಣ ಇಲಾಖೆ ೧೯೮೦ ರ ದಶಕದವರೆಗೂ ಈ ಆಯುಕ್ತಾಲಯದ ವ್ಯಾಪ್ತಿಯಲ್ಲೇ ಇತ್ತು. ೨೦೦೧-೦೨ ರಿಂದೀಚೆಗೆ ಕಲಬುರಗಿ ಮತ್ತು ಧಾರವಾಡಗಳಲ್ಲಿ ಅಪರ ಆಯುಕ್ತಾಲಯಗಳನ್ನು ಸ್ಥಾಪಿಸಲಾಗಿದೆ.

ಕರ್ನಾಟಕ ರಾಜ್ಯದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ಬಹಳ ಪ್ರಾಚೀನವಾದ ಇಲಾಖೆಗಳಲ್ಲಿ ಒಂದಾಗಿದೆ. ಮೈಸೂರು

ಮಹಾರಾಜರ ಆಡಳಿತ ಕಾಲದಲ್ಲಿಯೇ ಇಲ್ಲಿ ಶಿಕ್ಷಣಕ್ಕೆ ಸಾಕಷ್ಟು ಪ್ರಾಮುಖ್ಯತೆಯನ್ನು ನೀಡಲಾಗಿತ್ತು. ಸ್ವಾತಂತ್ರ್ಯಾನಂತರವೂ ರಾಜ್ಯ ಅಭಿವೃದ್ಧಿಪಥದಲ್ಲಿಯೇ ಸಾಗಿದೆ. ಶಾಲೆಗಳು, ಶಿಕ್ಷಕರು, ಮಕ್ಕಳ ಸಂಖ್ಯೆ, ಆಡಳಿತ ವ್ಯವಸ್ಥೆ ಹೀಗೆ ಹಲವು ರಂಗಗಳಲ್ಲಿ ಇಲಾಖೆಯು ನಿರಂತರವಾಗಿ ವಿಸ್ತಾರಗೊಂಡಿದೆ. ಶಿಕ್ಷಣಕ್ಕೆ ಮಾಡಲಾಗುವ ವೆಚ್ಚದಲ್ಲಿ ಸಾಕಷ್ಟು ಹೆಚ್ಚಳವಾಗಿದೆ. ಸಂಬಂಧಿಸಿದ ಹಲವು ಸೂಚ್ಯಂಕಗಳಲ್ಲಿ ರಾಜ್ಯದ ಸಾಧನೆ ಗಮನಾರ್ಹವಾಗಿದೆ. ಹಲವು ತಜ್ಞರ ಸಮಿತಿಗಳ ವರದಿಗಳು, ಕೇಂದ್ರ ಸರ್ಕಾರ ಮತ್ತು ಎನ್.ಸಿ.ಇ.ಆರ್.ಟಿ.ಯವರು ಕಾಲ ಕಾಲಕ್ಕೆ ನೀಡಿದ ಸೂಚನೆಗಳು, ಶಿಫಾರಸುಗಳ ಅನ್ವಯ ಹಲವು ಸುಧಾರಣೆಗಳನ್ನು ಕೈಗೊಳ್ಳಲಾಗಿದೆ, ಹಲವು ಪುನರ್ ರಚನೆಗಳೂ, ಶೈಕ್ಷಣಿಕ ಪ್ರಯೋಗಗಳು, ಕಾರ್ಯಕ್ರಮಗಳು, ಯೋಜನೆಗಳು ಅನುಷ್ಠಾನಗೊಳಿಸಲ್ಪಟ್ಟು ಮಿಶ್ರಫಲಗಳನ್ನು ಕಾಣಲಾಗಿದೆ. ಈ ಎಲ್ಲ ಬೆಳವಣಿಗೆಗಳನ್ನು, ಆಗುಹೋಗುಗಳನ್ನು ಮತ್ತು ಇಲಾಖೆಯ ಆಡಳಿತ ವ್ಯವಸ್ಥೆಯಲ್ಲಿ ಕಾಲ ಕಾಲಕ್ಕೆ ಆಗಿರುವ ಬದಲಾವಣೆಗಳನ್ನು ಸಮಗ್ರವಾಗಿ ದಾಖಲೀಕರಣ ಮಾಡುವ ಪ್ರಯತ್ನಗಳು ಬಹಳ ಪ್ರಮಾಣದಲ್ಲಿ ನಡೆದಿಲ್ಲ.

## ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ

ಶಿಕ್ಷಣ ಇಲಾಖೆಯಲ್ಲಿ ಆಡಳಿತ, ಪರೀಕ್ಷೆ ಇತ್ಯಾದಿ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಪ್ರತ್ಯೇಕ ವಿಭಾಗಗಳಿದ್ದಂತೆ ಪಠ್ಯಕ್ರಮ ಹಾಗೂ ಪಠ್ಯವಸ್ತು ರಚನೆ, ಶಿಕ್ಷಕರ ತರಬೇತಿ ಮತ್ತು ಶೈಕ್ಷಣಿಕ ಸಂಶೋಧನೆ ಮುಂತಾದ ಕೆಲಸಗಳನ್ನು ನಿರ್ವಹಿಸಲು ಪ್ರತ್ಯೇಕ ಇಲಾಖೆ ಇದೆ. ರಾಷ್ಟ್ರಮಟ್ಟದಲ್ಲಿ 'ರಾಷ್ಟ್ರೀಯ ಶೈಕ್ಷಣಿಕ ಅನುಸಂಧಾನ ಮತ್ತು ತರಬೇತಿ ಪರಿಷತ್' (ಎನ್.ಸಿ.ಇ.ಆರ್.ಟಿ.) ಎಂಬ ಸಂಸ್ಥೆ ಇದೆ. ಈ ಸಂಸ್ಥೆ ರಾಷ್ಟ್ರಮಟ್ಟದಲ್ಲಿ ನಿರ್ವಹಿಸುವ ಕೆಲಸ ಕಾರ್ಯಗಳನ್ನು ರಾಜ್ಯ ಮಟ್ಟದಲ್ಲಿ ನಿರ್ವಹಿಸಲು ಇರುವ ಸಂಸ್ಥೆ "ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ". ದೇಶದ ಇನ್ನಿತರ ರಾಜ್ಯಗಳಲ್ಲಿಯೂ ಇಂತಹ ಇಲಾಖೆ ಇದೆ. ಕೆಲವು ರಾಜ್ಯಗಳಲ್ಲಿ ಇದನ್ನು ಎಸ್.ಸಿ.ಇ.ಆರ್.ಟಿ. ಎಂಬ ಹೆಸರಿನಿಂದ ಕರೆಯುತ್ತಾರೆ. ತಮಿಳುನಾಡಿನಲ್ಲಿ ಡಿ.ಟಿ.ಇ.ಆರ್. ಟಿಎಂದುಕರೆಯುತ್ತಾರೆ.

**ಇತಿಹಾಸ:** ಕರ್ನಾಟಕದಲ್ಲಿ ಈ ಇಲಾಖೆಯ ಮಾತೃ ಸಂಸ್ಥೆ "ರಾಜ್ಯ ಶಿಕ್ಷಣ ಸಂಸ್ಥೆ" ಎಂಬ ಹೆಸರಿನಲ್ಲಿ ೧೯೬೪ ರಲ್ಲಿ ಧಾರವಾಡದಲ್ಲಿ ಪ್ರಾರಂಭವಾಯಿತು. ಅದೇ ಕಾಲಕ್ಕೆ ರಾಜ್ಯದಲ್ಲಿ 'ಸ್ಟೇಟ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್', 'ಸ್ಟೇಟ್ ಎಜುಕೇಶನ್ ಎವಾಲ್ಯುಯೇಷನ್ ಯುನಿಟ್', 'ಎಜುಕೇಷನಲ್ ಅಂಡ್ ವೊಕೇಷನಲ್ ಗೈಡೆನ್ಸ್ ಯುನಿಟ್' ಹೆಸರಿನಲ್ಲಿ ಮೂರು ಪ್ರತ್ಯೇಕ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿದ್ದವು. ೧೯೭೦ ರಲ್ಲಿ ಎಸ್.ಐ.ಇ. ಸಂಸ್ಥೆಯನ್ನು ಧಾರವಾಡದಿಂದ ಬೆಂಗಳೂರಿಗೆ ಸ್ಥಳಾಂತರಿಸಲಾಗಿತ್ತು. ೧೯೭೫ ರಲ್ಲಿ ಅದರ ಜೊತೆ ಮೇಲಿನ ಮೂರು ಸಂಸ್ಥೆಗಳನ್ನು ವಿಲೀನಗೊಳಿಸಿ "ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ" ಎಂಬ ಹೆಸರಿನ ಹೊಸ ಇಲಾಖೆಯನ್ನು ಸ್ಥಾಪಿಸಲಾಯಿತು. ಎಸ್.ಐ.ಇ. ಘಟಕದ ಮುಖ್ಯಸ್ಥರಾಗಿದ್ದ ಸಹ ನಿರ್ದೇಶಕರ ಹುದ್ದೆಯನ್ನೇ ಮೇಲ್ದರ್ಜೆಗೇರಿಸಿ ಹೊಸದಾಗಿ ರಚಿಸಲಾದ ಇಲಾಖೆಯ ನಿರ್ದೇಶಕರೆಂದು ಪದನಾಮೀಕರಿಸಲಾಯಿತು. ೧೯೮೩ರಲ್ಲಿ ಪಠ್ಯ ಪುಸ್ತಕ ನಿರ್ದೇಶನಾಲಯದ ನಿರ್ದೇಶಕರ ಹುದ್ದೆಯನ್ನು ರದ್ದುಪಡಿಸಿ ಉಳಿದ ಸಿಬ್ಬಂದಿ ಮತ್ತು ಕಚೇರಿಯನ್ನು ಕೆಲಸ ಕಾರ್ಯಗಳ ಸಹಿತ ಯಥಾವತ್ತಾಗಿ ಡಿ.ಎಸ್.ಇಆರ್.ಟಿ. ಜೊತೆ ವಿಲೀನಗೋಳಿಸಲಾಯಿತು. ೨೦೦೬-೦೭ ನೇ ಸಾಲಿನಲ್ಲಿ "ಕರ್ನಾಟಕ ಪಠ್ಯ ಪುಸ್ತಕ ಸಂಘ" ಸ್ಥಾಪನೆಯಾಗುವವರೆಗೆ ಇದೇ ವ್ಯವಸ್ಥೆ ಮುಂದುವರಿಯಿತು.

೧೯೭೫ರಲ್ಲಿ ಡಿ.ಎಸ್.ಇ.ಆರ್.ಟಿ. ಪ್ರಾರಂಭವಾದ ನಂತರವೂ ಹಿಂದಿನ ಎಸ್.ಐ.ಇ. ಎಸ್.ಐ.ಎಸ್. ಎಸ್.ಇ.ಇ.ಯು. ಮತ್ತು ಇ.ವಿ.ಜಿ. ಘಟಕಗಳು ಅಸ್ತಿತ್ವದಲ್ಲಿದ್ದವು. ಎಸ್.ಐ.ಎಸ್. ಎಸ್.ಇ.ಇ.ಯು. ಘಟಕಗಳಿಗೆ ಉಪನಿರ್ದೇಶಕ ವೃಂದದ ಅಧಿಕಾರಿಗಳು ಮುಖ್ಯಸ್ಥರಾಗಿದ್ದರು. ಇ.ವಿ.ಜಿ. ಘಟಕಕ್ಕೆ ಹಿರಿಯ ಸಹಾಯಕ ನಿರ್ದೇಶಕರ ವೃಂದದ ಅಧಿಕಾರಿ ಮುಖ್ಯಸ್ಥರಾಗಿದ್ದರು. ಎಸ್.ಐ.ಎಸ್. ಘಟಕದ ಮುಖ್ಯಸ್ಥರು ಉಪನಿರ್ದೇಶಕರ ವೃಂದದ ಅಧಿಕಾರಿಯಾಗಿದ್ದರೂ ಪದನಾಮ 'ನಿರ್ದೇಶಕರು ಎಸ್.ಐ.ಎಸ್.' ಎಂದೇ ಇತ್ತು. ಇವರೆಲ್ಲರೂ ನಿರ್ದೇಶಕರ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು.

**ಸ್ಟೇಟ್ ಇನ್ಸ್ಟಿಟ್ಯೂಟ್ ಆಫ್ ಎಜುಕೇಶನ್:** ಪುನರ್ ರಚಿತ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಯಲ್ಲಿ ಎಸ್.ಐ.ಇ. ಘಟಕವು ಒಂದು ಪ್ರಮುಖ ಘಟಕವಾಗಿತ್ತು. ಎಸ್.ಐ.ಇ. ಘಟಕದ ಮುಖ್ಯಸ್ಥರಾಗಿದ್ದ ಸಹ ನಿರ್ದೇಶಕರ ಹುದ್ದೆಯನ್ನೇ ಮೇಲ್ದರ್ಜೆಗೇರಿಸಿ ಹೊಸದಾಗಿ ರಚಿಸಲಾದ ಇಲಾಖೆಯ ನಿರ್ದೇಶಕರ ಹುದ್ದೆಯನ್ನು ಸೃಜನೆಮಾಡಿದ ಕಾರಣ ಹಾಗೂ ಈ ಘಟಕದ ಕಾರ್ಯ ಚಟುವಟಿಕೆಗಳು ಇತರೆ ಘಟಕಗಳಿಗಿಂತ ಹೆಚ್ಚು ಪ್ರಮುಖವಾಗಿದ್ದ ಕಾರಣ ಎಸ್.ಐ.ಇ. ಘಟಕವು ಪುನರ್ ರಚಿತ ಡಿ.ಎಸ್.ಇ.ಆರ್.ಟಿ. ವ್ಯವಸ್ಥೆಯಲ್ಲಿ ಹಿರಿಯಣ್ಣನಿದ್ದಂತೆ ಕಾರ್ಯ ನಿರ್ವಹಿಸುತ್ತಿತ್ತು.

ಸೇವಾಪೂರ್ವ ಮತ್ತು ಸೇವಾ ನಿರತ ಶಿಕ್ಷಕರ ತರಬೇತಿ ಸಂಸ್ಥೆಗಳಾದ ಟಿ.ಸಿ.ಹೆಚ್ (ಇಂದಿನ ಡಿ.ಎಡ್) ಮತ್ತು ಬಿ.ಎಡ್ ಕಾಲೇಜುಗಳ ನಿರ್ವಹಣೆ ಎಸ್.ಐ.ಇ. ವ್ಯಾಪ್ತಿಯಲ್ಲಿ ಬರುತ್ತಿತ್ತು. ಟಿ.ಸಿ.ಹೆಚ್ (ಡಿ.ಎಡ್) ಮತ್ತು ಬಿ.ಎಡ್ ಕಾಲೇಜುಗಳ ಆಡಳಿತಾತ್ಮಕ ವಿಚಾರಗಳಲ್ಲದೆ ಈ ಸಂಸ್ಥೆಗಳಿಗೆ ಅನುಮತಿ ನೀಡುವುದು, ಮಾನ್ಯತೆ ನೀಡುವುದು, ಈ ಸಂಸ್ಥೆಗಳಲ್ಲಿ ದಾಖಲಾದ ವಿದ್ಯಾರ್ಥಿಗಳ ದಾಖಲಾತಿಗಳಿಗೆ ಅನುಮೋದನೆ ನೀಡುವುದು, ಖಾಸಗಿ ಸಂಸ್ಥೆಗಳಿಗೆ ಅನುದಾನ ಬಿಡುಗಡೆ ಮಾಡುವುದು, ಪ್ರಶಿಕ್ಷಕರ ನೇಮಕಾತಿಗಳಿಗೆ ಅನುಮೋದನೆ ನೀಡುವುದು, ಟಿ.ಸಿ.ಹೆಚ್. (ಡಿ.ಎಡ್) ಪಠ್ಯಕ್ರಮ ತಯಾರಿಸುವುದು, ಮುಂತಾದವು ಈ ಘಟಕದ ಕೆಲಸ ಕಾರ್ಯಗಳಾಗಿದ್ದವು. ಬಿ.ಎಡ್. ಕಾಲೇಜುಗಳಿಗೆ ಸಂಬಂಧಿಸಿದಂತೆ ಆಡಳಿತಾತ್ಮಕ ವ್ಯಾಪ್ತಿ ಈ ಸಂಸ್ಥೆಗೆ ಸೇರಿದ್ದರೆ, ಪಠ್ಯಕ್ರಮ ತಯಾರಿಕೆ, ಪರೀಕ್ಷೆ, ಮೌಲ್ಯಮಾಪನ ಇತ್ಯಾದಿ ಆಯಾ ಪ್ರದೇಶದ ವಿಶ್ವವಿದ್ಯಾಲಯಗಳ ವ್ಯಾಪ್ತಿಗೆ ಒಳಪಡುತ್ತಿತ್ತು.

ಇಷ್ಟೇ ಅಲ್ಲದೆ, ಪ್ರಾಥಮಿಕ ಶಿಕ್ಷಕರಲ್ಲಿ ಕ್ರಿಯಾ ಸಂಶೋಧನೆ ಪ್ರವೃತ್ತಿಯನ್ನು ಉತ್ತೇಜಿಸಲು "ಪ್ರಾಥಮಿಕ ಶಿಕ್ಷಣದಲ್ಲಿ ಹಿರಿಮೆಗೆ ಪುರಸ್ಕಾರ" ಎಂಬ ಹೆಸರಿನಲ್ಲಿ ಸ್ಪರ್ಧೆಗಳನ್ನು ಆಯೋಜಿಸಿ ಪ್ರಶಸ್ತಿಗಳನ್ನು ಪ್ರಧಾನ ಮಾಡಲಾಗುತ್ತಿತ್ತು. 'ಪ್ರಾಥಮಿಕ ಶಿಕ್ಷಕ', 'ಎಕ್ಸಲೆನ್ಸ್ ಇನ್ ಎಜುಕೇಶನ್' ಎಂಬ ಹೆಸರಿನ ನಿಯತಕಾಲಿಕೆಗಳನ್ನು ಹೊರತರುವುದರ ಮೂಲಕ ಶಿಕ್ಷಕರಲ್ಲಿ ಬರವಣಿಗೆ ಪ್ರವೃತ್ತಿಗೆ

ಪ್ರೋತ್ಸಾಹ ನೀಡಲಾಗುತ್ತಿತ್ತು. ಸೇವಾನಿರತ ಶಿಕ್ಷಕರ ತರಬೇತಿಗೆ ಈಗಿರುವಷ್ಟು ಅವಕಾಶ ಮತ್ತು ಅನುದಾನಗಳಿಲ್ಲದಿದ್ದರೂ ಪ್ರತಿ ಜಿಲ್ಲೆಯಲ್ಲಿ ಒಂದು ಸರ್ಕಾರಿ ಶಿಕ್ಷಕರ ತರಬೇತಿ ಸಂಸ್ಥೆಯ ಮೂಲಕ ಅಪರೂಪವೆಂಬಂತೆ ಕೆಲವು ಸೇವಾನಿರತ ತರಬೇತಿಗಳನ್ನು ಆಯೋಜಿಸಲಾಗುತ್ತಿತ್ತು. ಇಂತಹ ಸಂಸ್ಥೆಗಳಿಗೆ ಖುಇಘಟಕದ ತಜ್ಞರು ಪ್ರತಿವರ್ಷ ಭೇಟಿ ನೀಡಿ 'ಗೈಡೆನ್ಸ್ ವಿಸಿಟ್ಸ್' ಎಂಬ ಕಾರ್ಯಕ್ರಮದ ಮೂಲಕ ಮಾರ್ಗದರ್ಶನ ನೀಡುತ್ತಿದ್ದರು.

**ಸ್ಟೇಟ್ ಎಜುಕೇಶನಲ್ ಅಂಡ್ ವೊಕೇಶನಲ್ ಗೈಡೆನ್ಸ್ ಬ್ಯುರೋ:** (ಸ್ಥಾಪನೆ ೧೯೫೮–೫೯) ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ವೃತ್ತಿ ಶಿಕ್ಷಣದಲ್ಲಿ ಮಾರ್ಗದರ್ಶನ ಮತ್ತು ಕೌನ್ಸೆಲಿಂಗ್ ನೀಡುವುದು ಇ.ವಿ.ಜಿ. ಘಟಕದ ಪ್ರಮುಖ ಕೆಲಸವಾಗಿತ್ತು. ವೃತ್ತಿ ಶಿಕ್ಷಣಕ್ಕೆ ಸಂಬಂಧಿಸಿದ ಕೆಲವು ಪ್ರಕಟಣೆಗಳನ್ನು ಹೊರತರಲಾಗುತ್ತಿತ್ತು.

**ಸ್ಟೇಟ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್:** (ಸ್ಥಾಪನೆ ೧೯೬೪–೬೫) ವಿಜ್ಞಾನ ಶಿಕ್ಷಣಕ್ಕೆ ಸಂಬಂಧಿಸಿದ ತರಬೇತಿಗಳು, ಪ್ರಯೋಗಾಲಯ ಸಲಕರಣೆಗಳ ಪೂರೈಕೆ, ಮಕ್ಕಳಿಗಾಗಿ ವಿಜ್ಞಾನ ವಸ್ತು ಪ್ರದರ್ಶನಗಳನ್ನು ಆಯೋಜಿಸುವುದು ಮತ್ತು ಶಾಲೆಗಳಿಗೆ ವಿಜ್ಞಾನದ ಕಿಟ್ ಗಳನ್ನು ಸರಬರಾಜು ಮಾಡುವುದು, ಅನುಮತಿ ನೀಡುವುದು, ಇತ್ಯಾದಿ ಖುಖ ಘಟಕದ ವ್ಯಾಪ್ತಿಗೆ ಸೇರಿದ ಕೆಲಸಗಳಾಗಿದ್ದವು. ಸೆಕೆಂಡರಿ ಶಾಲಾ ಶಿಕ್ಷಕರಲ್ಲಿ ಭೌತಶಾಸ್ತ್ರ ಕಲಿಸುವ ಶಿಕ್ಷಕರಿಗೆ ಜೀವಶಾಸ್ತ್ರದಲ್ಲಿ ಮತ್ತು ಜೀವಶಾಸ್ತ್ರ ಕಲಿಸುವ ಶಿಕ್ಷಕರಿಗೆ ಭೌತಶಾಸ್ತ್ರದಲ್ಲಿ ಒಂದು ತಿಂಗಳ ಅವಧಿಯ ವಿಷಯಾಧಾರಿತ ತರಬೇತಿಗಳನ್ನು ಈ ಘಟಕದಿಂದ ನೀಡಲಾಗುತ್ತಿತ್ತು. ಎಸ್.ಐ.ಎಸ್. ಅಧೀನಕ್ಕೆ ಒಳಪಟ್ಟಂತೆ ಓರಿಯೆಂಟೇಶನ್ ಟ್ರೈನಿಂಗ್ ಸೆಂಟರ್ (ಓಟಿಸಿ) ಎಂಬ ಉಪಘಟಕವೊಂದಿತ್ತು. ಗ್ರೂಫ್. ಬಿ ಮುಖ್ಯ ಶಿಕ್ಷಕರ ವೃಂದದ ಅಧಿಕಾರಿಯೊಬ್ಬರು 'ಸೂಪರಿಂಟೆಂಡೆಂಟ್' ಎಂಬ ಪದನಾಮದಲ್ಲಿ ಇದಕ್ಕೆ ಮುಖ್ಯಸ್ಥರಾಗಿದ್ದರು. ಪ್ರಾಢಶಾಲಾ ಶಿಕ್ಷಕರ ವೃಂದದ ಬೋಧಕರಿದ್ದರು. ಪ್ರಾಥಮಿಕ ಶಾಲಾ ಶಿಕ್ಷಕರಿಗೆ ವಿಜ್ಞಾನ ಬೋಧನೆಯಲ್ಲಿ ಅಲ್ಪಾವಧಿ ಓರಿಯೆಂಟೇಶನ್ ತರಬೇತಿಗಳನ್ನು ಈ ಘಟಕದಿಂದ ನೀಡಲಾಗುತ್ತಿತ್ತು.

**ಸ್ಟೇಟ್ ಎಜುಕೇಶನಲ್ ಎವಾಲ್ಯುಯೇಷನ್ ಯುನಿಟ್. (ಸ್ಥಾಪನೆ ೧೯೬೩–೬೪):** ಮೌಲ್ಯಮಾಪನ ಕುರಿತು ಶಿಕ್ಷಕರಿಗೆ ಮಾರ್ಗದರ್ಶನ ನೀಡುವುದು, ಪ್ರಶ್ನೆ ಪತ್ರಿಕೆ ತಯಾರಿಕೆ, ಉದ್ದಿಷ್ಟಗಳು ನಿರ್ದಿಷ್ಟಗಳಿಗೆ ಅನುಗುಣವಾಗಿ ವಿವಿಧ ಮಾದರಿಯ ಪ್ರಶ್ನೆಗಳಿಗೆ ಸೂಕ್ತ ಪ್ರಾತಿನಿಧ್ಯ ನೀಡುವ ಮಾದರಿ ನೀಲನಕ್ಷೆಗಳನ್ನು ತಯಾರಿಸಲು ತರಬೇತಿ, ಇತ್ಯಾದಿ ಎಸ್.ಇ.ಇ.ಯು. ಘಟಕದ ಕೆಲಸಗಳಾಗಿದ್ದವು.

**ಎಜುಕೇಶನ್ ಟೆಕ್ನಾಲಜಿ ಸೆಲ್:** ಈ ಘಟಕ ಮೊದಲು ಸಾರ್ವಜನಿಕ ಶಿಕ್ಷಣ ನಿರ್ದೇಶಕರ ಕಚೇರಿಯಲ್ಲಿತ್ತು ೧೯೭೫ ರಲ್ಲಿ ಡಿ.ಎಸ್.ಇ.ಆರ್.ಟಿ.ಸ್ಥಾಪನೆಯಾದನಂತರ ಅಲ್ಲಿಗೆ ಸ್ಥಳಾಂತರವಾಯಿತು. ೧೯೭೦–೮೦ ರ ದಶಕದಲ್ಲಿ ಕೇಂದ್ರ ಸರ್ಕಾರದ ಹಂತದಲ್ಲಿ ಶೈಕ್ಷಣಿಕ ತಂತ್ರಜ್ಞಾನ ವಿಷಯಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಿದ ಕಾರಣ ರಾಜ್ಯದಲ್ಲಿಯೂ ಇ.ಟಿ.ಸಿ.ಎಂಬ ಹೊಸ ಘಟಕವೊಂದುಪ್ರಾರಂಭವಾಯಿತು. ಇದಕ್ಕೆ ಪೂರ್ಣವಾಗಿ ಕೇಂದ್ರ ಸರ್ಕಾರದಿಂದ ಅನುದಾನ ಇತ್ತು. ಈ ಘಟಕದ ಮೂಲಕ 'ಕಂಪ್ಯೂಟರ್ ಲಿಟರಸಿ ಅಂಡ್ ಅವೇರ್‌ನೆಸ್ ಇನ್ ಸೆಕೆಂಡರಿ ಸ್ಕೂಲ್ಸ್' (ಕ್ಲಾಸ್ ಪ್ರಾಜೆಕ್ಟ್)ಎಂಬ ಹೆಸರಿನಲ್ಲಿ ೮೦ ರ ದಶಕದಲ್ಲಿ ಪ್ರೌಢಶಾಲೆಗಳಲ್ಲಿ ಕಂಪ್ಯೂಟರ್ ಶಿಕ್ಷಣ ನೀಡುವ ಕಾರ್ಯಕ್ರಮವೂ ಪ್ರಾರಂಭವಾಯಿತು. ಇದು ಇಂದಿನ ಮಾಹಿತಿ ಸಿಂಧು ಮತ್ತು ಐ.ಸಿ.ಟಿ. ಯೋಜನೆಗಳಿಗೆ ಬುನಾದಿ ಎಂದರೆ ತಪ್ಪಾಗಲಾರದು.

**ವಿಸ್ತರಣಾ ಸೇವೆ ಘಟಕ:** ಪ್ರಾಥಮಿಕ ಶಿಕ್ಷಣದಲ್ಲಿ ಹೊಸ ಆವಿಷ್ಕಾರಗಳನ್ನು ಪ್ರೋತ್ಸಾಹಿಸಲು, ತರಬೇತಿ ಮತ್ತು ಮಾರ್ಗದರ್ಶನ ಸೇವೆಗಳನ್ನು ಶಾಲಾಮಟ್ಟದವರೆಗೆ ಪ್ರಸಾರಗೊಳಿಸಲು ವಿಸ್ತರಣಾ ಸೇವಾ ಘಟಕ ಎಂಬ ವಿಭಾಗವನ್ನು ಸ್ಥಾಪಿಸಲಾಗಿತ್ತು. ಈ ರೀತಿಯ ವಿಸ್ತರಣಾ ಸೇವೆಗಳನ್ನು ಅನುಷ್ಠಾನಗೊಳಿಸಲು ಪ್ರಾದೇಶಿಕವಾಗಿ ಬಿ.ಎಡ್. ಕಾಲೇಜು ಮತ್ತು ಟಿ.ಟಿ,ಐ.ಗಳಲ್ಲಿ ಘಟಕಗಳನ್ನು ಸ್ಥಾಪಿಸಲಾಗಿತ್ತು. ಮೈಸೂರಿನ ಸರ್ಕಾರಿ ಬಿ.ಎಡ್. ಕಾಲೇಜು, ಬೆಂಗಳೂರಿನ ಆರ್.ವಿ. ಶಿಕ್ಷಕರ ಕಾಲೇಜು, ಧಾರವಾಡದ ಸರ್ಕಾರಿ ಟಿ.ಟಿ.ಐ. ಮುಂತಾದ ಕಡೆ ಇದ್ದ ಈ ಘಟಕಗಳಿಗೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ವಾರ್ಷಿಕ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿತ್ತು. ಈ ಘಟಕಗಳ ಕೆಲಸ ಕಾರ್ಯಗಳ ಮೇಲ್ವಿಚಾರಣೆ ಮತ್ತು ಅನುದಾನಗಳ ನಿರ್ವಹಣೆ ಕಾರ್ಯವನ್ನು ಡಿ.ಎಸ್.ಇ.ಆರ್.ಟಿ. ಕಚೇರಿಯ ವಿಸ್ತರಣಾ ಸೇವಾ ಘಟಕದಿಂದ ನಿರ್ವಹಿಸಲಾಗುತ್ತಿತ್ತು. ಅಲ್ಲದೆ, ಆಡಿಯೋ ವಿಷುಯಲ್ ಎಜುಕೇಶನ್: ಘಟಕವೂ (ಸ್ಥಾಪನೆ ೧೯೫೩) ಇತ್ತು. ಅದರ ಮೂಲಕ ಫಿಲ್ಮ್ ಪ್ರೊಜೆಕ್ಟ್ರರ್, ಸ್ಲೈಡ್ ಪ್ರೊಜೆಕ್ಟರ್, ಟೇಪ್ ರೆಕಾರ್ಡರ್, ಮುಂತಾದ ದೃಕ್ ಶ್ರವಣ ಸಾಧನ ಸಲಕರಣೆಗಳನ್ನು ಬಳಕೆ ಮಾಡಿ ಬೋಧನೆ ಮಾಡುವ ಬಗ್ಗೆ ತರಬೇತಿ ಮತ್ತು ಮಾರ್ಗದರ್ಶನ ನೀಡುವುದು, ಶೈಕ್ಷಣಿಕ ಚಲನ ಚಿತ್ರಗಳನ್ನು ತರಿಸಿ ಪ್ರೊಜೆಕ್ಟರ್ ಇರುವ ಶಾಲೆಗಳಿಗೆ ಒದಗಿಸುವುದು ಮುಂತಾದ ಚಟುವಟಿಕೆಗಳನ್ನು ನಡೆಸಲಾಗುತ್ತಿತ್ತು.

ರಾಷ್ಟ್ರೀಯ ಶಿಕ್ಷಣ ನೀತಿ ೧೯೮೬:ನಮ್ಮ ರಾಷ್ಟ್ರದ ಶೈಕ್ಷಣಿಕ ಇತಿಹಾಸದಲ್ಲಿ ೧೯೮೬ ರ ರಾಷ್ಟ್ರೀಯ ಶಿಕ್ಷಣ ನೀತಿ ಒಂದು ಪ್ರಮುಖ ಮೈಲಿಗಲ್ಲು. ಇದಕ್ಕೆ ಮೊದಲು ಬಿಡಿಬಿಡಿಯಾಗಿ ಕೊಥಾರಿ ಆಯೋಗ, ಸೆಕೆಂಡರಿ ಶಿಕ್ಷಣ ಆಯೋಗ, ಮುಂತಾದ ತಜ್ಞರ ಸಮಿತಿಗಳ ವರದಿಗಳು, ಶಿಕ್ಷಣದಲ್ಲಿ ಆಗಬೇಕಾದ ಸುಧಾರಣೆಗಳ ಬಗ್ಗೆ ಶಿಪಾರಸು ಮಾಡಿದ್ದವು. ಆದರೆ ೧೯೮೫ ರಲ್ಲಿ ಅಂದಿನ ಕೇಂದ್ರ ಸರ್ಕಾರವು Challenges in Educationಎಂಬ ವಿಷಯವನ್ನು ಎತ್ತಿಕೊಂಡು ರಾಷ್ಟ್ರದಾದ್ಯಂತ ವ್ಯಾಪಕವಾದ ಚರ್ಚೆಗೆ ಅವಕಾಶ ಮಾಡಿಕೊಟ್ಟಿತ್ತು. ಈ ಚರ್ಚೆಯಲ್ಲಿ ಮೂಡಿಬಂದ ಅಭಿಪ್ರಾಯ, ಸಲಹೆ ಸೂಚನೆಗಳನ್ನು ಅಳವಡಿಸಿ ಸಮಗ್ರವಾದ ಶಿಕ್ಷಣ ನೀತಿಯನ್ನು ರೂಪಿಸಲಾಯಿತು. ಅಲ್ಲದೆ ಕೇಂದ್ರ ಸರ್ಕಾರದಲ್ಲಿ ಶಿಕ್ಷಣ ಇಲಾಖೆಯನ್ನು ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆ ಎಂದು ಪುನರ್ ನಾಮಕರಣ ಮಾಡಿ ಆಯವ್ಯಯದಲ್ಲಿ ನಿರೀಕ್ಷೆಗೂ ಮೀರಿ, ಹಿಂದೆಂದೂ ಇಲ್ಲದಷ್ಟು ಪ್ರಮಾಣದಲ್ಲಿ ಅನುದಾನವನ್ನು ನೀಡಲಾಯಿತು. ಇದರಿಂದ ಶಾಲಾ ಶಿಕ್ಷಣ ಕ್ಷೇತ್ರಕ್ಕೆ ಹಲವು ಯೋಜನೆಗಳನ್ನು ರೂಪಿಸಿ ಅನುಷ್ಠಾಗೊಳಿಸಲಾಯಿತು. ಆ ಪೈಕಿ "ಕಪ್ಪು ಹಲಗೆ ಯೋಜನೆ" ಮತ್ತು "ಬೃಹತ್ ಪ್ರಮಾಣದಲ್ಲಿ ಸೇವಾನಿರತ ಶಿಕ್ಷಕರ ತರಬೇತಿ" ಕಾರ್ಯಕ್ರಮಗಳು ಪ್ರಮುಖವಾಗಿ ಹೆಸರಿಸಬಹುದಾದವು.

'ಕಪ್ಪು ಹಲಗೆ ಯೋಜನೆ' ಅಡಿಯಲ್ಲಿ ಎಲ್ಲ ಕಿರಿಯ ಪ್ರಾಥಮಿಕ ಶಾಲೆಗಳಿಗೆ ಕನಿಷ್ಠ ಎರಡು ಕೊಠಡಿಗಳು ಮತ್ತು ಇಬ್ಬರು ಶಿಕ್ಷಕರನ್ನು ಒದಗಿಸಲು, ಹಾಗೂ ಎಲ್ಲ ಶಾಲೆಗಳಿಗೆ ಬೇಕಾದ

ಗಣಿತ, ವಿಜ್ಞಾನ ಬೋಧನೆಗೆ ಬೇಕಾದ ಕಿಟ್‌ಗಳು, ಆಟೋಪಕರಣ, ಪೀಠೋಪಕರಣ, ಸಂಗೀತ ಉಪಕರಣಗಳನ್ನು ಒದಗಿಸುವುದಕ್ಕೆ ಬೇಕಾದ ಸಂಪೂರ್ಣವಾದ ಅನುದಾನವನ್ನು ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಒದಗಿಸಿತು. ತದನಂತರ ಈ ಯೋಜನೆಯನ್ನು ಕನಿಷ್ಠ ಮೂರು ಶಿಕ್ಷಕರು ಮೂರು ಕೊಠಡಿ ಎಂದು ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳಿಗೂ ವಿಸ್ತರಿಸಲಾಯಿತು.

**ಸೇವಾನಿರತ ಶಿಕ್ಷಕರ ತರಬೇತಿ:** ರಾಷ್ಟ್ರೀಯ ಶಿಕ್ಷಣ ನೀತಿ ರೂಪುಗೊಳಿಸುವ ಮುನ್ನ ನಡೆಸಲಾದ ಒಂದು ಸಮೀಕ್ಷೆಯ ಪ್ರಕಾರ ದೇಶದಲ್ಲಿನ ಒಟ್ಟು ಸಂಖ್ಯೆಯ ಶೇಕಡಾ ೧೬ ರಷ್ಟು ಶಿಕ್ಷಕರಿಗೆ ಮಾತ್ರ ಅವರ ಪೂರ್ತಿ ಸೇವಾವಧಿಯಲ್ಲಿ ಯಾವುದಾದರೂ ಒಂದೆರಡು ದಿನದ ಸೇವಾನಿರತ ತರಬೇತಿ ಪಡೆಯುವ ಅವಕಾಶ ದೊರೆಯುತ್ತಿರುವುದು ಕಂಡುಬಂದಿತು. ಇದನ್ನು ಗಮನಿಸಿದ ಕೇಂದ್ರ ಸರ್ಕಾರ ಶಿಕ್ಷಕರ ಬೋಧನಾ ಕೌಶಲ್ಯವನ್ನು ವೃದ್ಧಿಪಡಿಸುವ ಸಲುವಾಗಿ ಮೊದಲ ಬಾರಿಗೆ ಈ ಉದ್ದೇಶಕ್ಕಾಗಿ ರಾಜ್ಯ ಸರ್ಕಾರಕ್ಕೆ ಬೃಹತ್ ಪ್ರಮಾಣದ ಅನುದಾನವನ್ನು ಒದಗಿಸಿತು. ಈ ತರಬೇತಿ ಕಾರ್ಯಕ್ರಮಗಳನ್ನು ಡಿ.ಎಸ್.ಇ.ಆರ್.ಟಿ. ಮೂಲಕ ಅನುಷ್ಠಾನ ಮಾಡಲಾಯಿತು. ರಾಜ್ಯದಲ್ಲಿ ಈ ಕಾರ್ಯಕ್ರಮದ ಅಡಿಯಲ್ಲಿ ಪ್ರಥಮ ಬಾರಿಗೆ ಸುಮಾರು ೨.೫೦ ಲಕ್ಷ ಸೇವಾನಿರತ ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರಿಗೆ ೧೦ ದಿನಗಳ ಸೇವಾನಿರತ ಶಿಕ್ಷಕರ ತರಬೇತಿಯನ್ನು ನೀಡಲಾಯಿತು. ಈ ತರಬೇತಿಗೆ ಬೇಕಾದ ತರಬೇತಿ ಮಾಡ್ಯೂಲುಗಳನ್ನು ರಾಷ್ಟ್ರಮಟ್ಟದಲ್ಲಿ ಎನ್.ಸಿ.ಇ.ಆರ್.ಟಿ. ನೇತೃತ್ವದಲ್ಲಿ ಸಿದ್ಧಪಡಿಸಿ ನಂತರ ರಾಜ್ಯಮಟ್ಟದಲ್ಲಿ ಪ್ರಾದೇಶಿಕ ಭಾಷೆಗೆ ಅನುವಾದ ಮಾಡಲಾಯಿತು.೧೯೮೦-೯೦ ರ ದಶಕದಲ್ಲಿ ಯುನಿಸೆಫ್. ,ಸಂಸ್ಥೆಯಆರ್ಥಿಕ ನೆರವಿನಿಂದ ರಾಷ್ಟ್ರಮಟ್ಟದಲ್ಲಿ ಎನ್.ಸಿ.ಇ.ಆರ್.ಟಿ. ಮಾರ್ಗದರ್ಶನದಲ್ಲಿ ರಾಜ್ಯದಲ್ಲಿಯೂ ಹಲವು ಪ್ರಾಯೋಗಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು. ಅವುಗಳ ಪೈಕಿ 'ಪ್ರಾಥಮಿಕ ಶಿಕ್ಷಣಕ್ಕೆ ವ್ಯಾಪಕ ಅವಕಾಶ', 'ಪ್ರಾಥಮಿಕ ಶಿಕ್ಷಣ ಪಠ್ಯವಸ್ತು ನವೀಕರಣ', 'ಭಾರತ ಜನಸಂಖ್ಯಾ ಶಿಕ್ಷಣ ಯೋಜನೆ', 'ಸಾಮಾಜಿಕ ಉಪಯುಕ್ತ ಉತ್ಪಾದನಾ ಕಾರ್ಯ', 'ಕಲಿಕೆಯ ಕನಿಷ್ಠ ಹಂತಗಳು', ಡಿ.ಎ.ಸಿ.ಇ.ಪಿ. ಇತ್ಯಾದಿ ಪ್ರಮುಖವಾದವು. ಈ ಎಲ್ಲ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಡಿ.ಎಸ್.ಇ.ಆರ್.ಟಿ. ಪ್ರಮುಖ ಪಾತ್ರ ವಹಿಸಿದ್ದು ಗಮನಾರ್ಹ ವಿಷಯ.

**ರಾಷ್ಟ್ರೀಯ ಪ್ರತಿಭಾನ್ವೇಷಣೆ ಪರೀಕ್ಷೆ:** ದೇಶದಲ್ಲಿ ಶಾಲಾ ಶಿಕ್ಷಣದಲ್ಲಿ ಗುಣಮಟ್ಟದ ಸುಧಾರಣೆಯನ್ನು ತರುವ ಉದ್ದೇಶದಿಂದ ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಪರಿಷತ್ತನ್ನು (ಎನ್.ಸಿ.ಇ.ಆರ್.ಟಿ) ೧೯೬೧ ರಲ್ಲಿ ಸ್ಥಾಪಿಸಲಾಯಿತು. ಈ ದಿಕ್ಕಿನಲ್ಲಿ ಪರಿಷತ್ತು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅನುಷ್ಠಾನ ಮಾಡುತ್ತಿದೆ. ಅಂತಹ ಕಾರ್ಯಕ್ರಮಗಳ ಪೈಕಿ ವಿದ್ಯಾರ್ಥಿಗಳಲ್ಲಿ ಹುದುಗಿರುವ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸಲು ನಡೆಸಲಾಗುತ್ತಿರುವ ರಾಷ್ಟ್ರೀಯ ಪ್ರತಿಭಾನ್ವೇಷಣೆ ಪರೀಕ್ಷೆ (ಎನ್.ಟಿ.ಎಸ್.ಇ) ಸಹ ಒಂದು. ಇದು ೧೯೬೩ ರಲ್ಲಿ ಪ್ರಾರಂಭವಾಗಿದೆ. ಇದರ ಅಡಿಯಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರುತಿಸಿ ವಿದ್ಯಾರ್ಥಿ ವೇತನಗಳನ್ನು ನೀಡಲಾಗುತ್ತಿದೆ. ಮೊದಲಿಗೆ ೧೦ ನೇ ತರಗತಿಯಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಎರಡು ಹಂತದ ಲಿಖಿತ ಮತ್ತು ಮೌಖಿಕ ಪರೀಕ್ಷೆ ನಡೆಸುವ ಮೂಲಕ ಪ್ರತಿಭಾವಂತರನ್ನು ಆಯ್ಕೆ ಮಾಡಲಾಗುತ್ತಿತ್ತು. ೧೯೮೩ ರಿಂದ ರಾಷ್ಟ್ರಮಟ್ಟದಲ್ಲಿ ೭೫೦ ವಿದ್ಯಾರ್ಥಿ ವೇತನಗಳನ್ನು ನೀಡಲಾಗುತ್ತಿತ್ತು. ಇದರಲ್ಲಿ ೭೦ ಸ್ಥಾನಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಿಡಲಾಗಿತ್ತು. ೨೦೦೦ ಇಸವಿಯಿಂದ ಈ ಪರೀಕ್ಷೆಯನ್ನು ವಿಕೇಂದ್ರೀಕರಿಸಲಾಯಿತು. ವಿದ್ಯಾರ್ಥಿ ವೇತನಗಳನ್ನು ೧,೦೦೦ ಕ್ಕೆ ಏರಿಕೆ ಮಾಡಲಾಯಿತು. ಇದರಲ್ಲಿ ಶೇಕಡ ೧೫ ಸ್ಥಾನಗಳನ್ನು ಪರಿಶಿಷ್ಟ ಜಾತಿಯವರಿಗೆ ಹಾಗೂ ೭.೫ ಸ್ಥಾನಗಳನ್ನು ಪರಿಶಿಷ್ಟ ಪಂಗಡದವರಿಗೆ ಮೀಸಲಿಡಲಾಗಿತ್ತು.

೨೦೦೬ ರಲ್ಲಿ ಮತ್ತೊಮ್ಮೆ ನಿಯಮಗಳಲ್ಲಿ ಬದಲಾವಣೆ ಮಾಡಲಾಯಿತು. ಅದರ ಪ್ರಕಾರ ಎನ್.ಟಿ.ಎಸ್. ೮ ನೆಯ ತರಗತಿ ವಿದ್ಯಾರ್ಥಿಗಳಿಗೆ ಪರೀಕ್ಷೆಯನ್ನು ನಡೆಸಲು ಪ್ರಾರಂಭ ಮಾಡಲಾಯಿತು. ೨೦೦೮ ರಲ್ಲಿ ಮತ್ತೊಮ್ಮೆ ಸ್ವಲ್ಪ ಬದಲಾವಣೆ ಮಾಡುವ ಮೂಲಕ ಶೇಕಡ ೩ ಸ್ಥಾನಗಳನ್ನು ದೈಹಿಕ ವಿಶೇಷ ಚೇತನ ಹೊಂದಿದ ಮಕ್ಕಳಿಗೆ ಮೀಸಲಿಡಲಾಯಿತು. ಪುನಃ ಸ್ವಲ್ಪ ಬದಲಾವಣೆ ಮಾಡಿ ೨೦೧೨ ರಿಂದ ೧೦ ನೆಯ ತರಗತಿಯ ವಿದ್ಯಾರ್ಥಿಗಳಿಗೆ ಈ ಪರೀಕ್ಷೆಯನ್ನು ನಡೆಸಲಾಗುತ್ತಿದೆ. ಪರೀಕ್ಷೆಯಲ್ಲಿ ಎರಡು ಪ್ರಶ್ನೆ ಪತ್ರಿಕೆಗಳಿದ್ದು ಬೌದ್ಧಿಕ ಸಾಮರ್ಥ್ಯವನ್ನು (ಮೆಂಟಲ್ ಎಬಿಲಿಟಿ) ಪರೀಕ್ಷಿಸುವ ಒಂದು ಪತ್ರಿಕೆ ಹಾಗೂ ಪಾಂಡಿತ್ಯ (ಸ್ಕೊಲಾಸ್ಟಿಕ್ ಎಬಿಲಿಟಿ) ಪರೀಕ್ಷಿಸುವ ಒಂದು ಪತ್ರಿಕೆ ಇರುತ್ತದೆ. ಪ್ರತಿ ರಾಜ್ಯದಲ್ಲಿ ೯ ಮತ್ತು ೧೦ ನೆಯ ತರಗತಿಗೆ ದಾಖಲಾದ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಆಯಾ ರಾಜ್ಯಕ್ಕೆ ನೀಡಲಾಗುವ ವಿದ್ಯಾರ್ಥಿ ವೇತನಗಳ ಸಂಖ್ಯೆಯನ್ನು ನಿಗದಿ ಮಾಡಲಾಗುತ್ತದೆ. ವಿದ್ಯಾರ್ಥಿ ವೇತನದ ಮೊತ್ತ ಮಾಸಿಕ ೫೦೦ ರೂಪಾಯಿಗಳನ್ನು ೧೧ ನೆಯ ತರಗತಿಯಿಂದ ಪ್ರಾರಂಭಿಸಿ ಉನ್ನತ ಶಿಕ್ಷಣದ ವರೆಗೆ (ಪಿಎಚ್.ಡಿ ಹೊರತುಪಡಿಸಿ) ನೀಡಲಾಗುತ್ತದೆ. (ಪಿ.ಎಚ್.ಡಿ ಅಧ್ಯಯನಕ್ಕೆ ಯು.ಜಿ.ಸಿ. ನಿಯಮಗಳಂತೆ ವಿದ್ಯಾರ್ಥಿ ವೇತನ ನೀಡಲಾಗುವುದರಿಂದ)ಮೊದಲು ರಾಜ್ಯಮಟ್ಟದಲ್ಲಿ ಅರ್ಹತಾ ಪರೀಕ್ಷೆಯನ್ನು ನಡೆಸಿ ಅದರಲ್ಲಿ ಅರ್ಹತೆ ಪಡೆದ ವಿದ್ಯಾರ್ಥಿಗಳು ರಾಷ್ಟ್ರಮಟ್ಟದ ಪರೀಕ್ಷೆಯನ್ನು ಎದುರಿಸಬೇಕಾಗುತ್ತದೆ. ಅರ್ಹತಾ ಪರೀಕ್ಷೆ ಹಾಗೂ ರಾಷ್ಟ್ರಮಟ್ಟದ ಪರೀಕ್ಷೆಯನ್ನು ರಾಜ್ಯದಲ್ಲಿ ನಡೆಸುವ ಜವಾಬ್ದಾರಿ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಯ ಜವಾಬ್ದಾರಿಯಾಗಿರುತ್ತದೆ.

**ಡಯಟ್ ಮತ್ತು ಸಿ.ಟಿ.ಇ.ಗಳ ಸ್ಥಾಪನೆ:** ೧೯೮೬ ರ ರಾಷ್ಟ್ರೀಯ ಶಿಕ್ಷಣ ನೀತಿ ಅನುಸಾರವಾಗಿ ಕೇಂದ್ರ ಸರ್ಕಾರದಿಂದ ರಾಜ್ಯಗಳಿಗೆ ದೊರೆತ ಇನ್ನೊಂದು ಬೃಹತ್ ಕೊಡುಗೆ ಎಂದರೆ 'ಡಯಟ್' ಮತ್ತು 'ಸಿ.ಟಿ.ಇ.' ಗಳ ಸ್ಥಾಪನೆ. ಕೇಂದ್ರ ಸರ್ಕಾರ ಸೇವಾನಿರತ ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರ ತರಬೇತಿ ಕಾರ್ಯಕ್ರಮಗಳಿಗೆ ಒತ್ತು ನೀಡಿದ ಪರಿಣಾಮವಾಗಿ ೧೯೮೬ ರಿಂದಲೇ ಡಯಟ್ ಮತ್ತು ಸಿ.ಟಿ.ಇ. ಗಳನ್ನು ಸ್ಥಾಪನೆ ಮಾಡುವಂತೆ ರಾಜ್ಯ ಸರ್ಕಾರಗಳಿಗೆ ನಿರ್ದೇಶನ ನೀಡಿ ಇದಕ್ಕೆ ಬೇಕಾದ ಅನುದಾನವನ್ನೂ ಕೊಡಮಾಡಿತು. ಅದರಂತೆ ಪ್ರತಿ ಜಿಲ್ಲೆಯಲ್ಲಿ ಒಂದು ಸರ್ಕಾರಿ ಪ್ರಾಥಮಿಕ ಶಿಕ್ಷಕರ ತರಬೇತಿ ಸಂಸ್ಥೆಯನ್ನು 'ಡಯಟ್' ಎಂದೂ ಹಾಗೂ ಎಲ್ಲ ಸರ್ಕಾರಿ ಬಿ.ಎಡ್. ಕಾಲೇಜುಗಳನ್ನು 'ಸಿ.ಟಿ.ಇ.' ಎಂದೂ ಉನ್ನತೀಕರಿಸಿ, ಅವುಗಳಿಗೆ ಬೇಕಾದ ಕಟ್ಟಡ, ಪೀಠೋಪಕರಣ, ದೃಕ್ ಶ್ರವಣ ಸಾಧನಗಳು, ಕಂಪ್ಯೂಟರ್‌ಗಳನ್ನು ಒದಗಿಸಲು

ಬೇಕಾದ ಅನುದಾನವನ್ನು ಬಹಳ ಉದಾರವಾಗಿ ಬಿಡುಗಡೆ ಮಾಡಲಾಯಿತು. ತಮಿಳುನಾಡು ಮುಂತಾದ ರಾಜ್ಯಗಳಲ್ಲಿ ಈ ಅವಕಾಶವನ್ನು ಉಪಯೋಗಿಸಿಕೊಂಡು ಬಹಳ ಬೇಗ ೧೯೮೬ ರಿಂದಲೇ ಈ ಉದ್ದೇಶಿತ ಸಂಸ್ಥೆಗಳನ್ನು ಪ್ರಾರಂಭಿಸಲಾಯಿತು. ಆದರೆ ಕರ್ನಾಟಕದಲ್ಲಿ ೧೯೯೩ ರಲ್ಲಿ ಪ್ರಥಮವಾಗಿ ಕೆಲವು ಜಿಲ್ಲೆಗಳಲ್ಲಿ ಡಯಟ್ ಮತ್ತು ಸಿ.ಟಿ.ಇ.  ಗಳನ್ನು ಪ್ರಾರಂಭಿಸಲಾಯಿತು. ಹೀಗೆ ಹಂತ ಹಂತವಾಗಿ ವಿಸ್ತರಿಸುತ್ತಾ ಸಾಗಿ ಪ್ರಸ್ತುತ ರಾಜ್ಯದಲ್ಲಿ ಎಲ್ಲ ಜಿಲ್ಲೆಗಳಲ್ಲಿ ಡಯಟ್, ೬ಸರ್ಕಾರಿ ಸಿ.ಟಿ.ಇ. ಕಾಲೇಜುಗಳನ್ನು ಉನ್ನತೀಕರಿಸಲಾಗಿದೆ. ಈ ಎಲ್ಲ ಉನ್ನತೀಕರಿಸಿದ ಸಂಸ್ಥೆಗಳಿಗೆ ಹೆಚ್ಚುವರಿಯಾಗಿ ಬೋಧಕ ಮತ್ತು ಬೋಧಕೇತರ ಸಿಬ್ಬಂಧಿ ಹುದ್ದೆಗಳನ್ನು ಮಂಜೂರು ಮಾಡಿ ಸಂಪೂರ್ಣ ವೇತನ ಮತ್ತು ತರಬೇತಿ ಅನುದಾನಗಳನ್ನು ಕೇಂದ್ರ ಸರ್ಕಾರದ ವತಿಯಿಂದಲೇ ಭರಿಸಲಾಗುತ್ತಿದೆ. ಇತ್ತೀಚಗೆ ೦೪ಖಾಸಗಿ ಬಿ.ಎಡ್. ಕಾಲೇಜುಗಳನ್ನು ಸಹ ಸಿ.ಟಿ.ಇ.ಎಂದು ಹಾಗೂ ಒಂದು ಕಾಲೇಜನ್ನು'ಸೆಂಟರ್ ಪಾರ್ ಅಡ್ವಾನ್ಸ್‌ಡ್ ಸ್ಟಡೀಸ್ ಇನ್ ಎಜುಕೇಶನ್' (ಸಿ.ಎ.ಎಸ್.ಇ.) ಎಂಬ ಹೆಸರಿನಲ್ಲಿ ಉನ್ನತೀಕರಿಸಿ ಅವುಗಳಿಗೆ ಬೇಕಾದ ಹೆಚ್ಚುವರಿ ಭೌತಿಕ ಹಾಗೂ ಆರ್ಥಿಕ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಈ ಎಲ್ಲ ಸಂಸ್ಥೆಗಳ ಆಡಳಿತ ಮೇಲ್ವಿಚಾರಣೆ ಮತ್ತು ನಿಯಂತ್ರಣ ಡಿ.ಎಸ್.ಇ.ಆರ್.ಟಿ. ವ್ಯಾಪ್ತಿಗೆ ಸೇರಿದೆ.

೧೯೯೪ ರಿಂದ ಪ್ರಾರಂಭವಾದ ಡಿ.ಪಿ.ಇ.ಪಿ. ಹಾಗೂ ೨೦೦೨ರಿಂದ ಪ್ರಾರಂಬವಾದ ಸರ್ವಶಿಕ್ಷಣ ಅಭಿಯಾನ ಕಾರ್ಯಕ್ರಮಗಳ ಅಡಿಯಲ್ಲಿ ಸೇವಾನಿರತ ಶಿಕ್ಷಕರ ತರಬೇತಿ ಮತ್ತು ಗುಣಮಟ್ಟ ಸುಧಾರಣೆಯ ಹೆಸರಿನಲ್ಲಿ ವಿಪುಲವಾದ ಅನುದಾನಗಳು ಕೇಂದ್ರದಿಂದ ಹರಿದು ಬರುತ್ತಿದ್ದು, ಈ ಕಾರ್ಯಕ್ರಮಗಳ ಅನುಷ್ಠಾನ ಡಿ.ಎಸ್.ಇ.ಆರ್.ಟಿ. ಮೂಲಕ ಆಗುವುದರಿಂದ ಇವತ್ತಿನ ಡಿ.ಎಸ್.ಇ.ಆರ್.ಟಿ. ರಾಜ್ಯದ ಶಿಕ್ಷಣ ಇಲಾಖೆಯ ಇತರೆ ನಿರ್ದೇಶನಾಲಯಗಳಿಗಿಂತ ಪ್ರಮುಖ ಹಾಗೂ ಮಹತ್ವಪೂರ್ಣ ನಿರ್ದೇಶನಾಲಯವಾಗಿದೆ. ೧೯೭೫ ರಲ್ಲಿ ಪ್ರಾರಂಭವಾದಾಗಿನಿಂದ ಬಿ.ಪಿ. ವಾಡಿಯಾ ರಸ್ತೆಯಲ್ಲಿ ಹೆಣ್ಣುಮಕ್ಕಳ ಸರ್ಕಾರಿ ಪದವಿಪೂರ್ವ ಕಾಲೇಜಿನ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಡಿ.ಎಸ್.ಇ.ಆರ್.ಟಿ. ನಿರ್ದೇಶನಾಲಯವು ಡಿ.ಪಿ.ಇ.ಪಿ. ಕಾರ್ಯಕ್ರಮದ ಅಡಿಯಲ್ಲಿ ಕಟ್ಟಡ ನಿರ್ಮಾಣಕ್ಕಾಗಿ ಮಂಜೂರಾದ ಅನುದಾನದ ಕೃಪೆಯಿಂದ ಇಂದು ಬನಶಂಕರಿ ೩ನೇ ಹಂತದ ವರ್ತುಲ ರಸ್ತೆಯಲ್ಲಿ ತನ್ನದೇ ಆದ ಭವ್ಯವಾದ ಸ್ವಂತ ಕಟ್ಟಡವನ್ನು ಹೊಂದಿ ಅಲ್ಲಿಂದ ಕಾರ್ಯ ನಿರ್ವಹಿಸುತ್ತಿದೆ. ಈ ಕಟ್ಟದಲ್ಲಿ ತರಬೇತಿಗೆ ಬಂದ ಶಿಬಿರಾರ್ಥಿಗಳಿಗೆ ವಸತಿ ನಿಲಯವೂ ಇರುವುದು ಹೆಚ್ಚು ಅನುಕೂಲಕರವಾಗಿದೆ.

**ಕೋಷ್ಟಕ ೧೦.೧೦: ಸೇವಾನಿರತ ಶಿಕ್ಷಕರ ತರಬೇತಿ ವಿವರಗಳು: ೨೦೧೧-೧೨ ರಿಂದ ೨೦೧೫-೧೬ ರವರೆಗೆ ಸರ್ವ ಶಿಕ್ಷಣ ಅಭಿಯಾನ ಅನುದಾನದ ಅಡಿಯಲ್ಲಿ ನಡೆಸಲಾದ ಶಿಕ್ಷಕರ ತರಬೇತಿಗಳು**

| ವರ್ಷ | ಅವಧಿ (ದಿನಗಳು) | ಗುರಿ (ಮಾನದ ದಿನಗಳು) | ಸಾಧನೆ (ಮಾನವ ದಿನಗಳು) | ಸರಾಸರಿ ಮಾನವ ದಿನಗಳು |
|---|---|---|---|---|
| ೨೦೧೫-೧೬ | ೧೧ | ೧೭,೫೫,೬೩೩ | ೧೫,೬೨,೩೧೮ | ೯.೭೯ |
| ೨೦೧೪-೧೫ | ೧೦ | ೧೫,೦೩,೯೬೦ | ೧೪,೨೨,೮೫೪ | ೯.೪೬ |
| ೨೦೧೩-೧೪ | ೦೭ | ೧೫,೮೬,೩೬೮ | ೧೪,೪೨,೮೪೬ | ೬.೩೭ |
| ೨೦೧೨-೧೩ | ೨೦ | ೪೫,೭೯,೭೪೦ | ೩೯,೪೧,೯೮೯ | ೧೭.೨೧ |
| ೨೦೧೧-೧೨ | ೨೦ | ೪೬,೮೩,೨೮೦ | ೨೮,೨೨,೧೮೮ | ೧೨.೦೫ |

## ಪಠ್ಯ ಪುಸ್ತಕ ನಿರ್ದೇಶನಾಲಯ

೧೯೫೦-೬೦ರ ದಶಕದಲ್ಲಿ ರಾಜ್ಯದಲ್ಲಿ ಖಾಸಗಿ ಲೇಖಕರು ಮತ್ತು ಪ್ರಕಾಶಕರು ಬರೆದು ಪ್ರಕಟಿಸಿದ ಪುಸ್ತಕಗಳನ್ನು ತಜ್ಞರ ಸಮಿತಿಯವರು ಪರಿಶೀಲಿಸಿ ಶಾಲೆಗಳಲ್ಲಿ ಬೋಧನೆಗೆ ನಿಗದಿಪಡಿಸುವ ಪದ್ಧತಿ ಜಾರಿಯಲ್ಲಿತ್ತು. ಪಠ್ಯ ಪುಸ್ತಕಗಳಲ್ಲಿ ಗುಣಮಟ್ಟ ಮತ್ತು ಏಕರೂಪವನ್ನು ತರುವ ಉದ್ದೇಶದಿಂದ ೧೯೫೯ ರಲ್ಲಿ 'ಸ್ಟೇಟ್ ಎಜುಕೇಶನಲ್ ರೀಸರ್ಚ್ ಬ್ಯುರೊ' (ಇ.ಆರ್.ಬಿ.) ಪ್ರಾರಂಭವಾಯಿತು.೧೯೬೪ ರಲ್ಲಿ ಪಠ್ಯಪುಸ್ತಕಗಳ ಮುದ್ರಣ ಮತ್ತು ಪ್ರಕಟಣೆಯನ್ನು ರಾಷ್ಟ್ರೀಕರಣ ಮಾಡಲಾಯಿತು. ಈ ಜವಾಬ್ದಾರಿಯನ್ನು ೧೯೬೯ ರಲ್ಲಿ ಹೊಸದಾಗಿ ಸ್ಥಾಪಿಸಲಾದ ಪಠ್ಯ ಪುಸ್ತಕ ನಿರ್ದೇಶನಾಲಯಕ್ಕೆ ವಹಿಸಲಾಯಿತು. ಮೈಸೂರಿನ ಸರಸ್ವತಿಪುರಂ ನಲ್ಲಿ ಪಠ್ಯ ಪುಸ್ತಕ ಮುದ್ರಣಾಲಯವನ್ನು ಸ್ಥಾಪಿಸಿ ಅದನ್ನು ಪಠ್ಯಪುಸ್ತಕ ನಿರ್ದೇಶನಾಲಯದ ಅಧೀನಕ್ಕೆ ನೀಡಲಾಯಿತು.

೧೯೮೩ರ ಪೂರ್ವದಲ್ಲಿ ಸ್ವತಂತ್ರ ಇಲಾಖೆಯಾಗಿದ್ದ ನಿರ್ದೇಶನಾಲಯವು ಆನಂತರ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯದೊಂದಿಗೆ ವಿಲೀನಗೊಂಡು ಆ ಇಲಾಖೆಯಲ್ಲಿ ಒಂದು ಘಟಕವಾಗಿ ಮುಂದುವರೆಯಿತು. ಮೈಸೂರಿನ ಪಠ್ಯಪುಸ್ತಕ ಮುದ್ರಣಾಲಯವನ್ನು ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟನೆಗಳ ಇಲಾಖೆಯ ನಿರ್ದೇಶಕರ ವಶಕ್ಕೆ ನೀಡಲಾಯಿತು.ಸರಿ ಸುಮಾರು ೧೯೬೦-೭೦ ನೇ ದಶಕದಲ್ಲಿ ಪಠ್ಯ ಪುಸ್ತಕ ಮುದ್ರಣದಲ್ಲಿ ಕ್ರಾಂತಿಯನ್ನು ತರುವ ಉದ್ದೇಶದಿಂದ ಭಾರತ ಸರ್ಕಾರವು, ಜರ್ಮನ್ ಸರ್ಕಾರದ ಆರ್ಥಿಕ ಸಹಾಯದೊಂದಿಗೆ, ಅಂದಿನ ಕಾಲಕ್ಕೆ ಅತ್ಯಾಧುನಿಕ ವೆಬ್ ಆಫ್‌ಸೆಟ್ ತಂತ್ರಜ್ಞಾನ ಹೊಂದಿದ ಒಂದು ಬೃಹತ್ ಪಠ್ಯ ಪುಸ್ತಕ ಮುದ್ರಣಾಲಯವನ್ನು ಮೈಸೂರು ನಗರದ ಬನ್ನೂರು ರಸ್ತೆಯಲ್ಲಿ ಸ್ಥಾಪಿಸಲಾಗಿದೆ. ಇದು ಸ್ಥಳೀಯರ ಮಾತಿನಲ್ಲಿ 'ಜರ್ಮನ್ ಪ್ರೆಸ್' ಎಂದು ಪ್ರಸಿದ್ಧವಾಗಿದೆ. ಈ ಮುದ್ರಣಾಲಯದ ಉಪಯೋಗವನ್ನು ಪಠ್ಯ ಪುಸ್ತಕ ಮುದ್ರಣಕ್ಕಾಗಿ ಪೂರ್ಣಪ್ರಮಾಣದಲ್ಲಿ ಬಳಸಿಕೊಳ್ಳಲಾಗಿಲ್ಲ. ಎಲ್ಲ ಸರ್ಕಾರಿ ಉದ್ದಿಮೆಗಳಂತೆ ಇದು ಈಗ ರೋಗಗ್ರಸ್ಥವಾಗಿದೆ.

೧೯೮೬-೮೭ ನೇ ಸಾಲಿನಲ್ಲಿ ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ ದಾಖಲಾತಿ ಮತ್ತು ಹಾಜರಾತಿಯನ್ನು ಉತ್ತಮಪಡಿಸುವ ಉದ್ದೇಶದಿಂದ ಸರ್ಕಾರವು ವಿದ್ಯಾ ವಿಕಾಸ ಯೋಜನೆ ಎಂಬ ಹೆಸರಿನಲ್ಲಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ಉಚಿತ ಪಠ್ಯ ಪುಸ್ತಕಗಳನ್ನು ವಿತರಿಸುವ ಪ್ರೋತ್ಸಾಹದಾಯಕ ಕಾರ್ಯಕ್ರಮವನ್ನು ಪ್ರಾರಂಭಿಸಿತು. ಕ್ರಮೇಣ ಮುಂದಿನ ಸಾಲುಗಳಲ್ಲಿ ಈ ಯೋಜನೆಯನ್ನು ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೂ ವಿಸ್ತರಿಸಲಾಯಿತು. ಈ ಕಾರ್ಯಕ್ರಮದ ಅಡಿಯಲ್ಲಿ ಉಚಿತ ಪಠ್ಯ ಪುಸ್ತಕಗಳನ್ನು ತಯಾರಿಸಿ, ಮುದ್ರಿಸಿ, ವಿತರಣೆ ಮಾಡುವ ಜವಾಬ್ದಾರಿಯನ್ನು ಈ ಇಲಾಖೆಗೆ ವಹಿಸಲಾಯಿತು.

## ಕರ್ನಾಟಕ ಪಠ್ಯ ಪುಸ್ತಕ ಸಂಘ

೨೦೦೩-೦೪ ಮತ್ತು ೨೦೦೪-೦೫ ನೇ ಸಾಲುಗಳಲ್ಲಿ ಪಠ್ಯ ಪುಸ್ತಕ ಮುದ್ರಣ ಮತ್ತು ಸರಬರಾಜಿನಲ್ಲಿ ವಿಳಂಭವಾದ ಕಾರಣ, ಹಾಗೂ ೧೯೯೨ ರಲ್ಲಿ ಡಾ: ಕೆ.ಪಿ. ಸುರೇಂದ್ರನಾಥ್ ರವರು ಸಲ್ಲಿಸಿದ ಅಧ್ಯಯನ ವರದಿಯಲ್ಲಿ ಮಾಡಲಾದ ಶಿಫಾರಸು ಮತ್ತು ನೆರೆಯ ತಮಿಳುನಾಡು, ಮಹಾರಾಷ್ಟ್ರ, ರಾಜಾಸ್ಥಾನ ದೆಹಲಿ ಮತ್ತು ಗುಜರಾತ್ ರಾಜ್ಯಗಳಲ್ಲಿ ಸ್ವಾಯತ್ತ ಪಠ್ಯ ಪುಸ್ತಕ ಸಂಘಗಳು ಅಸ್ತಿತ್ವದಲ್ಲಿದ್ದು, ಅವಶ್ಯಕ ಮೂಲ ಸೌಲಭ್ಯಗಳನ್ನು ಹೊಂದಿ ಸಕಾಲದಲ್ಲಿ ಪಠ್ಯಪುಸ್ತಕಗಳನ್ನು ಹೊರತರುವುದರಲ್ಲಿ ಯಶಸ್ವಿಯಾಗಿರುವುದು, ಮುಂತಾದ ಅಂಶಗಳನ್ನು ಗಮನಿಸಿದ ರಾಜ್ಯ ಸರ್ಕಾರವು ಕರ್ನಾಟಕದಲ್ಲಿಯೂ ಇಂತಹ ಸಂಸ್ಥೆಯನ್ನು ಸ್ಥಾಪಿಸಲು ತೀರ್ಮಾನಿಸಿತು.ಸರ್ಕಾರದ ಆದೇಶ ಸಂಖ್ಯೆ ಇಡಿ ೯೫ ಡಿಜಿಒ ೨೦೦೫ ದಿನಾಂಕ ೪-೧-೨೦೦೬ ರ ಅನುಸಾರ ಕರ್ನಾಟಕ ಪಠ್ಯ ಪುಸ್ತಕ ಸಂಘ ಎಂಬ ಸರ್ಕಾರಿ ಸ್ವಾಮ್ಯದ ಸಂಸ್ಥೆಯನ್ನು ಸ್ಥಾಪಿಸಲಾಯಿತು. ೧-೪-೨೦೦೬ರಿಂದ ಕಾರ್ಯಾರಂಭ ಮಾಡಿರುವ ಈ ಸಂಸ್ಥೆಯು ಸಹಕಾರ ಸಂಘಗಳ ನೋಂದಣಿ ಕಾಯಿದೆ ಅಡಿಯಲ್ಲಿ ನೋಂದಾಯಿಸಲ್ಪಟ್ಟಿದೆ. ಸರ್ಕಾರದ ಶಿಕ್ಷಣ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುವ ಸಂಸ್ಥೆ ಇದಾಗಿದ್ದು ಸರ್ಕಾರದಿಂದ ವಾರ್ಷಿಕ ಅನುದಾನವನ್ನು ಪಡೆಯುತ್ತದೆ.

ಸರ್ಕಾರದಿಂದ ಅನುಮೋದಿತವಾದ ಪಠ್ಯಕ್ರಮಕ್ಕನು ಗುಣವಾಗಿ, ಶಾಲಾ ವಿದ್ಯಾರ್ಥಿಗಳಿಗೆ ಬೋಧನೆಗೆ ಬೇಕಾಗುವ ಗುಣಮಟ್ಟದ ಪಠ್ಯಪುಸ್ತಕಗಳನ್ನು ವಿವಿಧ ಭಾಷೆ, ಮಾಧ್ಯಮ ಮತ್ತು ವಿಷಯಗಳಲ್ಲಿ ರಚಿಸಿ, ಮುದ್ರಿಸಿ, ಪ್ರಕಾಶಿಸುಸುವುದು ಹಾಗೂ ಮಾರಾಟದ ಪಠ್ಯ ಪುಸ್ತಕಗಳಿಗೆ ಬೆಲೆಯನ್ನು ನಿಗದಿ ಮಾಡುವುದು.ಸರ್ಕಾರದ ಉಚಿತ ಫಠ್ಯ ಪುಸ್ತಕ ವಿತರಣೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದು. ಪಠ್ಯ ಪುಸ್ತಕಗಳು, ಶೈಕ್ಷಣಿಕ ಸಾಹಿತ್ಯ ಕೃತಿಗಳು, ಮತ್ತು ಬೋಧನಾ ವಿಧಾನಗಳ ಸುಧಾರಣೆ ಕುರಿತು ಸಂಶೋಧನೆ ಕೈಗೊಳ್ಳುವುದು.ಸಗಟು ಮತ್ತು ಚಿಲ್ಲರೆ ಪುಸ್ತಕ ಮಾರಾಟಗಾರರಿಗೆ ಅನುಮತಿ ಮತ್ತು ಮಾನ್ಯತೆ ನೀಡುವುದು ಹಾಗೂ ಸರ್ಕಾರದ ಅನುಮೋದನೆಯನ್ನು ಪಡೆದು ಅವರಿಗೆ ಕಾಲಕಾಲಕ್ಕೆ ಪುಸ್ತಕ ಮಾರಾಟದ ಮೇಲೆ ಕಮೀಷನ್ ನಿಗದಿಗೊಳಿಸುವುದು.ಸರ್ಕಾರ ಅಪೇಕ್ಷಿಸಿದಾಗ ಪಠ್ಯಕ್ರಮ ಪರಿಷ್ಕರಣೆ ಕುರಿತಂತೆ ಅಭಿಪ್ರಾಯ ನೀಡುವುದು.ಮುಂತಾದ ಉದ್ದೇಶಗಳನ್ನು ಸಂಘವು ಹೊಂದಿರುತ್ತದೆ.

**ಸಂಘದ ಆಡಳಿತ ವ್ಯವಸ್ಥೆ:** ಈ ಸಂಘದ ಆಡಳಿತವನ್ನು ನಿರ್ವಹಿಸಲು ಆಡಳಿತ ಮಂಡಳಿ ಮತ್ತು ಕಾರ್ಯಕಾರಿ ಸಮಿತಿ ಇದೆ. ಆಡಳಿತ ಮಂಡಳಿಗೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಅಧ್ಯಕ್ಷರಾಗಿಯೂ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಕಾರ್ಯದರ್ಶಿಯವರು ಉಪಾಧ್ಯಕ್ಷರಾಗಿಯೂ, ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಮತ್ತಿತರ ಅಧಿಕಾರಿಗಳು ಹಾಗೂ ಸರ್ಕಾರದಿಂದ ನಾಮ ನಿರ್ದೇಶನಗೊಂಡ, ಮುದ್ರಣ ತಂತ್ರಜ್ಞಾನದಲ್ಲಿ ಅನುಭವ ಹೊಂದಿದ, ಇಬ್ಬರು ಸದಸ್ಯರಿರುತ್ತಾರೆ. ಕಾರ್ಯಕಾರಿ ಸಮಿತಿಗೆ ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರು ಅಧ್ಯಕ್ಷರಾಗಿರುತ್ತಾರೆ. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ನಿರ್ದೇಶಕರು ಡಿ.ಎಸ್.ಇ.ಆರ್.ಟಿ, ನಿದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳು, ಮತ್ತಿತರ ಅಧಿಕಾರಿಗಳಲ್ಲದೆ, ಸರ್ಕಾರದಿಂದ ನಾಮ ನಿರ್ದೇಶನಗೊಂಡ ಒಬ್ಬರು ಮುದ್ರಣ ತಂತ್ರಜ್ಞಾನ ತಜ್ಞರು, ಸದಸ್ಯರಾಗಿರುತ್ತಾರೆ. ಸಂಘದ ವ್ಯವಸ್ಥಾಪಕ ನಿರ್ದೇಶಕರು ಎರಡೂ ಸಮಿತಿಗಳ ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ.

೧೯೭೯ ರಲ್ಲಿ ಸರ್ಕಾರಿ ಮುದ್ರಣಾಲಯದ ನಿರ್ದೇಶಕರ ಅಧೀನಕ್ಕೆ ನೀಡಲಾಗಿದ್ದ ಮೈಸೂರು ಪಠ್ಯ ಪುಸ್ತಕ ಮುದ್ರಣಾಲಯ ವನ್ನು ೨೦೦೬ರಲ್ಲಿ ಪಠ್ಯ ಪುಸ್ತಕ ಸಂಘದ ಸ್ಥಾಪನೆಯಾದ ನಂತರ ಸಂಘದ ವಶಕ್ಕೆ ನೀಡಲಾಯಿತು. ಪುನಃ ೨೦೦೮ರಲ್ಲಿ ಸರ್ಕಾರದ ಆದೇಶದಂತೆ ಈ ಮುದ್ರಣಾಲಯವನ್ನು ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆಯ ನಿರ್ದೇಶಕರ ವಶಕ್ಕೆ ನೀಡಲಾಯಿತು. ಪಠ್ಯಪುಸ್ತಕ ನಿರ್ದೇಶನಾಲಯವು ಮೊದಲು ಚಾಮರಾಜಪೇಟೆ ಒಂದನೇ ಮುಖ್ಯರಸ್ತೆಯಲ್ಲಿ ಅಪೆಕ್ಸ್ ಬ್ಯಾಂಕ್‌ಗೆ ಸೇರಿದ ಕಟ್ಟಡದಲ್ಲಿ ಸ್ಥಳ ಬಾಡಿಗೆಗೆ ಪಡೆದು ಕಾರ್ಯ ನಿರ್ವಹಿಸುತ್ತಿತ್ತು. ೧೯೮೬ರ ನಂತರ ಕೆಲವು ಕಾಲ ಶೇಷಾದ್ರಿಪುರಂ ನಲ್ಲಿ ಸ್ವಾತಿ ಹೋಟೆಲ್ ಕಟ್ಟಡಕ್ಕೆ ಸ್ಥಳಾಂತರವಾಯಿತು. ಆಮೇಲೆ ಬಿ.ಪಿ.ವಾಡಿಯ ರಸ್ತೆಯ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಕಟ್ಟಡದಲ್ಲಿ ಡಿ.ಎಸ್.ಇ.ಆರ್.ಟಿ. ಜೊತೆ ಸ್ಥಳಹಂಚಿಕೆ ಮಾಡಿಕೊಂಡು ಸ್ವಲ್ಪ ಕಾಲ ಇತ್ತು. ನಂತರ ಡಿ.ಎಸ್.ಇ.ಆರ್.ಟಿ. ಹೊಸ ಕಟ್ಟಡಕ್ಕೆ ಸ್ಥಳಾಂತರವಾದ ಮೇಲೆ ಹೊಸ ಕಟ್ಟಡದ ನೆಲ ಅಂತಸ್ತಿನಲ್ಲಿ ಆಡಳಿತಾತ್ಮಕವಾಗಿ ಡಿ.ಎಸ್.ಇ.ಆರ್.ಟಿ. ನಿರ್ದೇಶಕರ ಅಧೀನದಲ್ಲಿಯೇ ಇತ್ತು. ಪ್ರಸ್ತುತ ಸಂಘವಾಗಿ ಪರಿವರ್ತನೆಗೊಂಡು ಅದೇ ವಿಳಾಸದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ವಿಳಾಸ: ನಂ.೪, ೧೦೦ ಅಡಿ ವರ್ತುಲ ರಸ್ತೆ, ಹೊಸಕೆರೆಹಳ್ಳಿ, ಬನಶಂಕರಿ ೩ನೇ ಹಂತ, ಬೆಂಗಳೂರು-೫೬೦ ೦೮೫,ದೂರವಾಣಿ: ೨೬೪೨೨೨೩೮/೨೬೪೨೨೨೪೫

**ಉಚಿತ ಪಠ್ಯಪುಸ್ತಕಗಳ ವಿತರಣೆ ಕಾರ್ಯಕ್ರಮ:** ೧೯೮೬-೮೭ ನೇ ಸಾಲಿನಿಂದ ಪ್ರಾರಂಭವಾದ ಈ ಕಾರ್ಯಕ್ರಮದ ಅನುಷ್ಠಾನವನ್ನು ೨೦೦೬ ರಲ್ಲಿ ಸಂಘವು ಅಸ್ತಿತ್ವಕ್ಕೆ ಬಂದ ನಂತರವೂ ಮುಂದುವರಿಸಲಾಗುತ್ತಿದೆ. ೨೦೦೭-೦೮ ನೇ ಸಾಲಿನಲ್ಲಿ ಸರ್ವ ಶಿಕ್ಷಣ ಅಭಿಯಾನದ ಅಡಿಯಲ್ಲಿ ಲಭ್ಯವಾದ ಅನುದಾನದಲ್ಲಿ ಈ ಸೌಲಭ್ಯವನ್ನು ಅನುದಾನಿತ ಶಾಲೆಗಳಲ್ಲಿ ೧ ರಿಂದ ೮ ನೇ ತರಗತಿಗಳಲ್ಲಿ ವ್ಯಾಸಂಗ ಮಾಡುವ ಎಲ್ಲಾ ಬಾಲಕಿಯರು ಹಾಗೂ ಪ.ಜಾತಿ ಮತ್ತು ಪ.ಪಂಗಡದ ಬಾಲಕರಿಗೂ ವಿಸ್ತರಿಸಲಾಯಿತು. ೨೦೦೮-೦೯ನೇ ಸಾಲಿನಿಂದ ಅನುದಾನಿತ ಶಾಲೆಗಳ ಎಲ್ಲ ಬಾಲಕರು ಮತ್ತು ಬಾಲಕಿಯರಿಗೂ ಈ ಸೌಲಭ್ಯವನ್ನು ವಿಸ್ತರಿಸಲಾಗಿದೆ.

**ಕೋಷ್ಟಕ ೧೦.೧೧:೨೦೧೫-೧೬ ನೇ ಸಾಲಿನಲ್ಲಿ ಮುದ್ರಿಸಿ ವಿತರಿಸಲಾದ ಉಚಿತ ಮತ್ತು ಮಾರಾಟ ವಿಭಾಗದ ಪಠ್ಯಪುಸ್ತಕಗಳ ವಿವರ ಮತ್ತು ಸಂಖ್ಯೆ**

| ತರಗತಿ | ೧ | ೨ | ೩ | ೪ | ೫ | ೬ | ೭ |
|---|---|---|---|---|---|---|---|
| ಉಚಿತ | ೨೮೬೪೯೧೨ | ೨೯೫೮೬೮೩ | ೨೮೮೯೩೯೭ | ೨೮೯೬೪೪೭ | ೨೮೬೭೮೬೦ | ೪೨೯೬೧೮೭ | ೪೩೪೧೨೩೩ |
| ಮಾರಾಟ | ೯೯೮೧೩೨ | ೧೦೫೬೧೨೬ | ೮೯೨೬೭೬ | ೮೩೩೫೨೩ | ೮೮೬೩೫೧ | ೧೨೪೩೪೭೬ | ೧೨೪೫೩೭೩ |

| ತರಗತಿ | ೮ | ೯ | ೧೦ | ೧-೧೦ |
|---|---|---|---|---|
| ಉಚಿತ | ೫೨೭೫೧೭೪ | ೪೮೬೭೫೩೦ | ೪೮೭೮೦೨೩ | ೩೮೧೩೫೪೪೬ |
| ಮಾರಾಟ | ೧೨೯೪೦೩೦ | ೧೨೭೫೩೯೧ | ೧೩೪೩೧೮೭ | ೧೧೦೨೮೨೬೫ |

**ಮುದ್ರಿಸಲಾಗುವ ಒಟ್ಟು ಶೀರ್ಷಿಕೆಗಳ ಸಂಖ್ಯೆ: ೩೬೯ ಒಟ್ಟು ವೆಚ್ಚ: ೧೦೭ ಕೋಟಿ ರೂಪಾಯಿಗಳು**

**ಮಾಹಿತಿ ಆಧಾರ: ಕರ್ನಾಟಕ ಪಠ್ಯ ಪುಸ್ತಕ ಸಂಘ**

**ಶಿಕ್ಷಣದಲ್ಲಿ ಪ್ರೋತ್ಸಾಹದಾಯಕ ಯೋಜನೆಗಳು:** ರಾಜ್ಯದಲ್ಲಿ ಶಾಲಾ ದಾಖಲಾತಿಯನ್ನು ಉತ್ತಮಪಡಿಸಲು ಹಾಗೂ ದಾಖಲಾದ ಮಕ್ಕಳು ಶಾಲೆಯಲ್ಲಿ ಉಳಿದು ಶಿಕ್ಷಣ ಮುಂದುವರೆಸುವಂತೆ ಪ್ರೋತ್ಸಾಹಿಸಲು ಹಲವಾರು ಯೋಜನೆಗಳು ಜಾರಿಯಲ್ಲಿವೆ. ಪ್ರಸ್ತುತ ೨೦೧೫-೧೬ ರಲ್ಲಿ ಚಾಲ್ತಿಯಲ್ಲಿರುವ ಅಂತಹ ಯೋಜನೆಗಳ ಸಂಕ್ಷಿಪ್ತ ಮಾಹಿತಿಯನ್ನು ಕೆಳಗೆ ನೀಡಲಾಗಿದೆ. ಸರ್ಕಾರಿ ಮತ್ತು ಸರ್ಕಾರಿ ಅನುದಾನಿತ ಶಾಲೆಗಳಲ್ಲಿ ಒಂದರಿಂದ ಹತ್ತನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡುವ ಎಲ್ಲಾ ಮಕ್ಕಳಿಗೆ ಪಠ್ಯ ಪುಸ್ತಕಗಳನ್ನು ಉಚಿತವಾಗಿ ನೀಡಲಾಗುತ್ತಿದೆ. ಇದರ ಜೊತೆಗೆ ಒಂದರಿಂದ ಹತ್ತನೇ ತರಗತಿಯವರೆಗೆ ಸರ್ಕಾರಿ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಎಲ್ಲಾ ಮಕ್ಕಳಿಗೆ ಉಚಿತ ಸಮವಸ್ತ್ರಗಳನ್ನು ವಿತರಿಸಲಾಗುತ್ತಿದೆ.

೨೦೦೫-೦೬ರ "**ಸುವರ್ಣ ಕರ್ನಾಟಕ**" ಸಂಭ್ರಮದ ನೆನಪಿಗಾಗಿ ರಾಜ್ಯ ಸರ್ಕಾರವು ಬಡತನ ರೇಖೆಗಿಂತ ಕೆಳಗಿರುವ ವಿದ್ಯಾರ್ಥಿನಿಯರಿಗಾಗಿ ಉಚಿತ ಸೈಕಲ್ ವಿತರಣೆ ಯೋಜನೆಯನ್ನು ಅನುಷ್ಠಾನಕ್ಕೆ ತಂದಿತು. ಈ ಯೋಜನೆಯು ಸರ್ಕಾರಿ ಮತ್ತು ಸರ್ಕಾರಿ ಅನುದಾನಿತ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಎಂಟನೇ ತರಗತಿಯ ಬಾಲಕಿಯರಿಗಾಗಿ ಮಾಡಲಾಯಿತು. ೨೦೦೬-೦೭ರಲ್ಲಿ ಸರ್ಕಾರವು ಈ ಯೋಜನೆಯನ್ನು ಬಾಲಕರಿಗೂ ಸಹ ವಿಸ್ತರಿಸಿತು. ಇದರ ಮುಖ್ಯ ಉದ್ದೇಶವೆಂದರೆ ಶಾಲೆಯನ್ನು ಬಿಡುವ ಹಂತದಲ್ಲಿದ್ದ ಬಾಲಕಿಯರನ್ನು ಶಾಲೆಗೆ ಹೋಗುವಂತೆ ಪ್ರೋತ್ಸಾಹಿಸುವುದು, ಹಾಜರಾತಿಯನ್ನು ಉತ್ತಮಪಡಿಸುವುದು ಮತ್ತು ಶಾಲೆ ಬಿಡುವ ವಿಚಾರಗಳನ್ನು ಬಿಟ್ಟು ತರಗತಿಯಲ್ಲಿ ಕಲಿಕೆಯ ಕಡೆಗೆ ಗಮನ ಕೊಡುವುದು ಮತ್ತು ಅವರ ನಿತ್ಯ ಸಂಚಾರದ ಸೌಲಭ್ಯಗಳ ಕೊರತೆಯಿಂದ ಶಾಲೆ ಬಿಡುವುದನ್ನು ತಪ್ಪಿಸುವುದಾಗಿದೆ.

### ವಿವಿಧ ಯೋಜನೆಗಳ ಸಂಕ್ಷಿಪ್ತ ವಿವರ

**೧) ಹೆಣ್ಣು ಮಕ್ಕಳಿಗೆ ಪ್ರೋತ್ಸಾಹ ಧನ ನೀಡುವ ಯೋಜನೆ:** ಹೆಣ್ಣು ಮಕ್ಕಳ ಹಾಜರಾತಿಯನ್ನು ಉತ್ತಮಪಡಿಸಲು ಶಾಲೆಗೆ ಹಾಜರಾದ ದಿನವೊಂದಕ್ಕೆ ೨ ರೂಪಾಯಿ ನೀಡುವ ಯೋಜನೆ ಜಾರಿಯಲ್ಲಿದೆ- ಫಲಾನುಭವಿಗಳು: ಸರ್ಕಾರಿ ಶಾಲೆಗಳಲ್ಲಿ ೧ನೇ ತರಗತಿಗೆ ದಾಖಲಾದ ಹೆಣ್ಣು ಮಕ್ಕಳು. ಸಂಖ್ಯೆ: ಅಂದಾಜು ೨೭೦೪೨೫, ಅಂದಾಜು ವಾರ್ಷಿಕ ವೆಚ್ಚ : ರೂ ೧೧ ಕೋಟಿ: **೨) ಉಚಿತ ಸಮವಸ್ತ್ರಗಳ ವಿತರಣೆ:** ಫಲಾನುಭವಿಗಳು: ಸರ್ಕಾರಿ ಶಾಲೆಗಳ ೧ ರಿಂದ ೧೦ ನೇತರಗತಿಗಳ ಎಲ್ಲಾ ಗಂಡು ಹಾಗೂ ಹೆಣ್ಣು ಮಕ್ಕಳು. ಸಂಖ್ಯೆ: ಅಂದಾಜು ೪೯.೪೭ ಲಕ್ಷ, ಅಂದಾಜು ವಾರ್ಷಿಕ ವೆಚ್ಚ : ರೂ ೮೨ ಕೋಟಿ; **೩) ಉಚಿತ ನೋಟ್ ಬುಕ್ ವಿತರಣೆ:**ಫಲಾನುಭವಿಗಳು: ಸರ್ಕಾರಿ ಶಾಲೆಗಳ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಎಲ್ಲಾ ಮಕ್ಕಳು. ಸಂಖ್ಯೆ: ಅಂದಾಜು ೩೮೩೧೭೪, ಅಂದಾಜು ವಾರ್ಷಿಕ ವೆಚ್ಚ : ರೂ ೦೪ ಕೋಟಿ; **೪) ಬೈಸಿಕಲ್ ವಿತರಣೆ:** ಫಲಾನುಭವಿಗಳು : ಗ್ರಾಮೀಣ ಭಾಗದ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ ೮ನೆಯ ತರಗತಿಯ, ಉಚಿತ ಬಸ್ ಪಾಸ್ ಹೊಂದಿಲ್ಲದ ಎಲ್ಲಾ ಮಕ್ಕಳು. ಸಂಖ್ಯೆ: ಅಂದಾಜು ೫೧೭೫೩೧, ಅಂದಾಜು ವಾರ್ಷಿಕ ವೆಚ್ಚ : ರೂ ೧೯೦ ಕೋಟಿ; **೫) ಶಿಕ್ಷಣ ಹಕ್ಕು ಕಾಯ್ದೆ ಅಡಿ ಶುಲ್ಕ ಮರುಪಾವತಿ:** ಫಲಾನುಭವಿಗಳು : ಅನುದಾನರಹಿತ ಖಾಸಗಿ ಶಾಲೆಗಳಲ್ಲಿ ಶೇ ೨೫ ಮೀಸಲಾತಿ ಸೀಟು ಪಡೆದು ಧಾಖಲಾದ ದುರ್ಬಲ ವರ್ಗದ ಮಕ್ಕಳು. ಸಂಖ್ಯೆ: ಅಂದಾಜು ೨೯೯೫೨, ಅಂದಾಜು ವಾರ್ಷಿಕ ವೆಚ್ಚ : ರೂ ೧೨೦.೮೮ ಕೋಟಿ; **೬) ಶಾಲಾ ಬ್ಯಾಗ್ ವಿತರಣೆ: ಫಲಾನುಭರಿಗಳು** : ಸರ್ಕಾರಿ ಶಾಲೆಗಳ ೧, ೩, ೫, ೭ ನೇ ತರಗತಿಗಳ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಎಲ್ಲಾ ಮಕ್ಕಳು. ಸಂಖ್ಯೆ: ಅಂದಾಜು ೮೧೧೨೫೨, ಅಂದಾಜು ವಾರ್ಷಿಕ ವೆಚ್ಚ : ರೂ ೧೨.೧೬ ಕೋಟಿ

**೧. ಶೂ ಮತ್ತು ಸಾಕ್ಸ್ ವಿತರಣೆ:** ಫಲಾನುಭವಿಗಳು : ಸರ್ಕಾರಿ ಶಾಲೆಗಳ ೧ ರಿಂದ ೧೦ನೇ ತರಗತಿಗಳ ಎಲ್ಲಾ ಮಕ್ಕಳು; ೭) ೧-೫ ನೇತರಗತಿಯ ಪ್ರತಿ ವಿದ್ಯಾರ್ಥಿಗೆ ರೂ ೨೨೫/- ೨) ೬-೮ ನೇ ತರಗತಿಯ ಪ್ರತಿ ವಿದ್ಯಾರ್ಥಿಗೆ ರೂ ೨೫೦/-; ೩) ೯-೧೦ ನೇ ತರಗತಿಯ ಪ್ರತಿ ವಿದ್ಯಾರ್ಥಿಗೆ ರೂ ೨೭೫/-; ೪) ( ಇದಕ್ಕೆ ಬೇಕಾಗುವ ಒಟ್ಟು ಅನುದಾನ ರೂ ೧೧೩.೫೬ ಕೋಟಿ ಮೊತ್ತವನ್ನು ಸಂಬಂಧಪಟ್ಟ ಶಾಲೆಗಳ ಶಾಲಾಭಿವೃದ್ಧಿ ಸಮಿತಿಗಳೀಗೆ ಬಿಡುಗಡೆ ಮಾಡಲಾಗಿದೆ)

**ಮಾಹಿತಿ ಆಧಾರ: ನಿರ್ದೇಶಕರು ಪ್ರಾಥಮಿಕ ಶಿಕ್ಷಣ**

**ಮಧ್ಯಾಹ್ನ ಉಪಾಹಾರ ಯೋಜನೆ (ಅಕ್ಷರ ದಾಸೋಹ):** ಹಿನ್ನೆಲೆ:೧೯೫೦-೬೦ರ ದಶಕದಷ್ಟು ಹಿಂದೆ, ನಮ್ಮ ರಾಜ್ಯದ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಮಧ್ಯಾಹ್ನ ಉಪಾಹಾರ ಕೇರ್ ಫುಡ್ ಎಂಬ ಹೆಸರಿನ ಯೋಜನೆ ಜಾರಿಯಲ್ಲಿತ್ತು. ಆಗ'ಕೋ ಆಪರೇಷನ್ ಫಾರ್ ಅಮೆರಿಕನ್ ರಿಲೀಫ್ ಎವ್ವೆರಿವೇರ್'-

('ಕೇರ್') ಸಂಸ್ಥೆಯ ನೆರವಿನಿಂದ ಸರಬರಾಜಾದ ಗೋದಿಯ (ರವೆ) ನುಚ್ಚು ಮತ್ತು ತಾಳೆ ಎಣ್ಣೆ (ಇರಬಹುದು) ಉಪಯೋಗಿಸಿ ಮಾಡಿದ ಉಪ್ಪಿಟ್ಟು ಮತ್ತು ಪೌಡರ್ ನಿಂದ ತಯಾರಿಸಿದ ಹಾಲನ್ನು ಮಕ್ಕಳಿಗೆ ನೀಡಲಾಗುತ್ತಿತ್ತು. ಇದನ್ನು ಬೇಯಿಸಲು ಬೇಕಾದ ಉರುವಲು ಸೌದೆಯನ್ನು ವಿದ್ಯಾರ್ಥಿಗಳೇ ಹವಣಿಸಬೇಕಾಗಿತ್ತು. ಬೇಯಿಸುವುದೂ ಅವರದೇ ಜವಾಬ್ದಾರಿಯಾಗಿತ್ತು. ಪ್ರತ್ಯೇಕ ಅಡಿಗೆಯವರಾಗಲಿ ಪರಿಚಾರಕರಾಗಲೀ ಇರುತ್ತಿರಲಿಲ್ಲ. ಕಾಲಕ್ರಮೇಣ ಈ ಯೋಜನೆಗೆ ಇನ್ನಷ್ಟು ಮಹತ್ವ ನೀಡಲಾಯಿತು. ಕೇರ್ ಸಂಸ್ಥೆಯಿಂದ ಉಚಿತವಾಗಿ ಸರಬರಾಜು ಮಾಡಲಾದ ಗೋದಿ ರವೆಯನ್ನು ಮತ್ತು ಎಣ್ಣೆಯ ಟಿನ್ನುಗಳನ್ನು ಶಾಲಾ ಮಟ್ಟದವರೆಗೆ ಸಾಗಾಣಿಕೆ ಮಾಡುವುದಕ್ಕೆ ಮತ್ತು ಅಡಿಗೆ ಮಾಡಲು ಬೇಕಾದ ಉಪ್ಪು, ಮೆಣಸಿನ ಕಾಯಿ ಇತ್ಯಾದಿಗಳಿಗಾಗಿ ಕನಿಷ್ಠ ಪ್ರಮಾಣದಲ್ಲಿ ಸಾದಿಲ್ವಾರು ಹಣವನ್ನು ಕೊಡಲಾಗುತ್ತಿತ್ತು. ತಾಲೂಕು ಕೇಂದ್ರಗಳಲ್ಲಿ ಆಹಾರ ಸಾಮಗ್ರಿ ದಾಸ್ತಾನು ಮಾಡಲು 'ಕೇರ್ ಗೋಡೌನ್' ಗಳನ್ನು ನಿರ್ಮಾಣ ಮಾಡಲಾಗಿತ್ತು.

ಕಾಲಕ್ರಮೇಣ ಕಾರ್ಯಕ್ರಮಕ್ಕೆ ಇನ್ನಷ್ಟು ಪ್ರಾಮುಖ್ಯತೆ ದೊರೆಯಿತು. ಫಲಾನುಭವಿಗಳ ಸಂಖ್ಯೆಯೂ ವಿಸ್ತಾರವಾಯಿತು. ಶಾಲೆಗಳಿಗೆ ಗೋದಿ ರವೆ ಮತ್ತು ಎಣ್ಣೆಯನ್ನು ಸಪ್ಲೈ ಮಾಡಲಾಗುತ್ತಿತ್ತು. ಶಾಲಾ ಶಿಕ್ಷಕರು ಉಪ್ಪಿಟ್ಟು ಮಾಡಿಸಿ ಬಡಿಸುವ ಕಾರ್ಯ ಮಾಡಬೇಕಾಗಿತ್ತು. ಒಂದೇ ಊರಿನಲ್ಲಿ ಹೆಚ್ಚಿನ ಸಂಖ್ಯೆಯ ಶಾಲೆಗಳಿದ್ದರೆ ಎಲ್ಲ ಶಾಲೆಗಳ ಮಕ್ಕಳಿಗೆ ಸೇರಿ ಒಂದೇ ಕಡೆ ಸೆಂಟ್ರಲ್ ಕಿಚನ್‌ನಲ್ಲಿ ಉಪ್ಪಿಟ್ಟು ಬೇಯಿಸಿ ಗಾಡಿಗಳಲ್ಲಿ ಸರಬರಾಜು ಮಾಡುವ ವ್ಯವಸ್ಥೆ ಜಾರಿಯಲ್ಲಿ ಬಂದಿತು. ಇದಕ್ಕಾಗಿ ಕೇಂದ್ರ ಪಾಕಶಾಲೆಗಳ ನಿರ್ಮಾಣವಾಯಿತು. ಈ ವ್ಯವಸ್ಥೆಯನ್ನು ನೋಡಿಕೊಳ್ಳಲು ಸಹಾಯಕ ಶಿಕ್ಷಣಾಧಿಕಾರಿ ಕಚೇರಿಯಲ್ಲಿ ಒಬ್ಬರು ಶಿಕ್ಷಕರನ್ನು ನಿಯುಕ್ತಿಗೊಳಿಸಲಾಗುತ್ತಿತ್ತು. ಅಡಿಗೆ ಬಟ್ಟರು ಮತ್ತು ಸಹಾಯಕರನ್ನು ದಿನಗೂಲಿ ಮೇರೆಗೆ ನೇಮಿಸಿಕೊಳ್ಳಲು ಅವಕಾಶವಿತ್ತು. ಈ ವ್ಯವಸ್ಥೆ ಜಾರಿಯಲ್ಲಿದ್ದಾಗ ಹಲವು ಕಡೆ ಶಿಕ್ಷಕರು ಆಮಿಷಕ್ಕೊಳಗಾಗಿ ಉಪ್ಪಿಟ್ಟು ರವೆ ಮತ್ತು ಎಣ್ಣೆಯನ್ನು ದುರುಪಯೋಗ ಪಡಿಸಿಕೊಂಡ ಬಗ್ಗೆ, ಮತ್ತು ಸಾದಿಲ್ವಾರು ಹಣದ ಲೆಕ್ಕಾಚಾರಗಳಲ್ಲಿ ಹಣದುರುಪಯೋಗ ಮಾಡಿಕೊಂಡ ಬಗ್ಗೆ ಹಲವು ಮೇಲ್ವಿಚಾರಕ ಶಿಕ್ಷಕರು, ಅಧಿಕಾರಿಗಳು ಮತ್ತು ನೌಕರರು ಶಿಸ್ತುಕ್ರಮಗಳನ್ನು ಎದುರಿಸಿದ ಬಗ್ಗೆ ಇಲಾಖೆಯಲ್ಲಿ ಶಿಸ್ತು ಪ್ರಕರಣಗಳು ಪ್ರಾರಂಭವಾದವು. ಕ್ರಮೇಣ ಕೇರ್ ಫುಡ್ ನಿಂತು ಹೋಯಿತು. ಮಡಿವಾಳದ ಉಗ್ರಾಣ ಕಟ್ಟಡವನ್ನು ವಿಭಾಗೀಯ ಪಠ್ಯಪುಸ್ತಕ ಮಳಿಗೆಯನ್ನಾಗಿ ಪರಿವರ್ತಿಸಲಾಯಿತು.

**ಎನರ್ಜಿ ಫುಡ್:** ಕೆಲವು ವರ್ಷಗಳ ನಂತರ (೧೯೯೦ರ ಸುಮಾರಿಗೆ) **ಎನರ್ಜಿ ಫುಡ್** ಎಂಬ ಹೆಸರಿನ ಸಿದ್ಧಪಡಿಸಿದ ಆಹಾರ ಸರಬರಾಜು ಪ್ರಾರಂಭವಾಯಿತು. ಫ್ಯಾಕ್ಟರಿಯಲ್ಲಿ ತಯಾರಾಗಿ ಪ್ಲಾಸ್ಟಿಕ್ ಚೀಲಗಳಲ್ಲಿ ಪ್ಯಾಕ್ ಮಾಡಿದ ಈ ಆಹಾರವನ್ನು ಬೇಯಿಸುವ ಅಗತ್ಯವಿರಲಿಲ್ಲ. ಕೇವಲ ನೀರಿನಲ್ಲಿ ಬೆರೆಸಿ ಉಂಡೆ ಮಾಡಿ ತಿನ್ನುವುದಾಗಿತ್ತು. ಈ ಮಾದರಿ ಆಹಾರ ಸಾರ್ವಜನಿಕರಲ್ಲಿ ಅಷ್ಟೊಂದು ಜನಪ್ರಿಯವಾಗಲಿಲ್ಲ. ಕ್ರಮೇಣ ಇದು ನಿಂತುಹೋಯಿತು.

**ಅಕ್ಷರ ದಾಸೋಹ-ಬಿಸಿ ಊಟದ ಕಾರ್ಯಕ್ರಮ:** ಕೇರ್ ಫುಡ್ ಮತ್ತು ಎನರ್ಜಿ ಫುಡ್‌ಗಳ ಕಾಲ ಮುಗಿದ ನಂತರ ಪ್ರಾರಂಭವಾದ ಕಾರ್ಯಕ್ರಮವೇ **'ಅಕ್ಷರ ದಾಸೋಹ'** ಬಿಸಿ ಊಟದ ಕಾರ್ಯಕ್ರಮ. ಶಾಲಾ ವಿದ್ಯಾರ್ಥಿಗಳಿಗೆ ಮಧ್ಯಾಹ್ನ ಬೇಯಿಸಿದ ಊಟವನ್ನು ಕೊಡುವ ಈ ಜನಪ್ರಿಯ ಕಾರ್ಯಕ್ರಮ ಮೊದಲು ಪ್ರಾರಂಬವಾದದ್ದು ನೆರೆಯ ತಮಿಳುನಾಡಿನಲ್ಲಿ. ಬಹಳ ವರ್ಷಗಳ ಹಿಂದೆಯೇ ಪ್ರಾರಂಭವಾಗಿ ಯಶಸ್ವಿಯಾದ ಈ ಕಾರ್ಯಕ್ರಮದ ಪರಿಣಾಮ ಆ ರಾಜ್ಯದಲ್ಲಿ ದಾಖಲಾತಿ, ಹಾಜರಾತಿ ಮತ್ತು ಕಲಿಕಾ ಮಟ್ಟಗಳಲ್ಲಿ ಗಣನೀಯ ಸುಧಾರಣೆಯಾದ ಬಗ್ಗೆ ರಾಷ್ಟ್ರಮಟ್ಟದಲ್ಲಿ ಹಲವು ಸಮೀಕ್ಷೆಗಳ ಮೂಲಕ ವ್ಯಕ್ತವಾಗಿತ್ತು. ತಮಿಳುನಾಡಿನ ಈ ಕಾರ್ಯಕ್ರಮದಿಂದ ರಾಜ್ಯ ಸರ್ಕಾರವೂ ಪ್ರಭಾವಿತವಾಗಿತ್ತು. ೨೦೦೧ ರಲ್ಲಿ ಕರ್ನಾಟಕ ಸರ್ಕಾರವು ಶಿಕ್ಷಣ ಕ್ಷೇತ್ರದಲ್ಲಿ ಆಗಬೇಕಾದ ಸುಧಾರಣೆಗಳನ್ನು ಸಲಹೆ ಮಾಡಲು ಖ್ಯಾತ ವಿಜ್ಞಾನಿ ಡಾ: ರಾಜಾರಾಮಣ್ಣನವರ ಅಧ್ಯಕ್ಷತೆಯಲ್ಲಿ **'ಶಿಕ್ಷಣ ಕಾರ್ಯಪಡೆ'**ಯನ್ನು ರಚಿಸಿತು. ಅದೇ ವೇಳೆಗೆ ಖ್ಯಾತ ಅರ್ಥಶಾಸ್ತ್ರಜ್ಞ ಡಿ.ಎಂ. ನಂಜುಂಡಪ್ಪನವರ ನೇತೃತ್ವದಲ್ಲಿ ಪ್ರಾದೇಶಿಕ ಅಸಮಾನತೆಗಳನ್ನು ಅಧ್ಯಯನ ಮಾಡಲು ಒಂದು ಸಮಿತಿಯನ್ನು ರಚಿಸಲಾಯಿತು. ಡಾ: ನಂಜುಂಡಪ್ಪನವರು ಕೂಲಂಕಷ ಅಧ್ಯಯನದ ನಂತರ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ತಾಲ್ಲೂಕುಗಳನ್ನು ಗುರುತಿಸಿ, ಈ ಪ್ರದೇಶಗಳ ಅಭಿವೃದ್ಧಿಗಾಗಿ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಂತೆ ಸರ್ಕಾರಕ್ಕೆ ಸಲಹೆ ನೀಡಿದರು. ಈ ವರದಿಯ ಅನುಸಾರ ರಾಜ್ಯದಲ್ಲಿ ಹಿಂದುಳಿದ ತಾಲ್ಲೂಕುಗಳ ಪೈಕಿ ಹೆಚ್ಚಿನವು ಈಶಾನ್ಯ ಕರ್ನಾಟಕದ ೭ ಜಿಲ್ಲೆಗಳಲ್ಲಿ ಇರುವುದು ಗಮನಾರ್ಹವಾಗಿತ್ತು. ಅಲ್ಲದೆ ಶಿಕ್ಷಣ ಇಲಾಖೆಯು ನಡೆಸಿದ ಗಣತಿ ಮತ್ತು ಸಮೀಕ್ಷೆಗಳ ಪ್ರಕಾರ ರಾಜ್ಯದಲ್ಲಿ ಶಾಲೆಯಿಂದ ಹೊರಗುಳಿದ ಒಟ್ಟಾರೆ ಮಕ್ಕಳ ಪೈಕಿ ಶೇಕಡ ೫೦ ರಷ್ಟು ಮಕ್ಕಳು ಈ ಜಿಲ್ಲೆಗಳಲ್ಲಿ ಇರುವುದು ಹಾಗೂ ಮಧ್ಯದಲ್ಲಿ ಶಾಲೆ ಬಿಡುವ ಮಕ್ಕಳ ಸಂಖ್ಯೆ ಈ ಜಿಲ್ಲೆಗಳಲ್ಲಿ ಅಧಿಕವಾಗಿರುವುದು ವಾಸ್ತವಿಕ ಸತ್ಯವಾಗಿತ್ತು. ಈ ಅಸಮಾನತೆಗಳನ್ನು ಸರಿಪಡಿಸಿ ಈ ಪ್ರದೇಶದಲ್ಲಿ ಹೆಚ್ಚು ಮಕ್ಕಳನ್ನು ಶಾಲಾ ವ್ಯಾಪ್ತಿಗೆ ತರುವ ಉದ್ದೇಶದಿಂದ ಹಲವು ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳ ಲಾಯಿತು. ಇದೇ ವೇಳೆಗೆ ಸುಪ್ರೀಂ ಕೋರ್ಟಿನಲ್ಲಿ ಒಂದು ಮಹತ್ತರ ತೀರ್ಪು ಹೊರಬಿತ್ತು. ಅದರಲ್ಲಿ ದೇಶದಲ್ಲಿನ ಎಲ್ಲ ಶಾಲಾ ಮಕ್ಕಳಿಗೆ ಮಧ್ಯಾಹ್ನದ ಬಿಸಿ ಊಟವನ್ನು ಒದಗಿಸುವಂತೆ ರಾಜ್ಯ ಸರ್ಕಾರಗಳಿಗೆ ನಿರ್ದೇಶನ ನೀಡಲಾಗಿತ್ತು. ಇದೆಲ್ಲದರ ಪರಿಣಾಮವಾಗಿ ಸರ್ಕಾರದ ಆದೇಶ ಸಂಖ್ಯೆ ಇಡಿ ಎಂ.ಎಂ.ಎಸ್. ೨೦೦೦ (ಭಾ) ದಿನಾಂಕ ೧-೧೦-೨೦೦೧ರ ಪ್ರಕಾರ ಮೇಲ್ಕಂಡ ೭ ಜಿಲ್ಲೆಗಳ ಸರ್ಕಾರಿ ಪ್ರಾಥಮಿಕ ಶಾಲೆಗಳ ೧ರಿಂದ ೫ನೇ ತರಗತಿಗಳಲ್ಲಿ ವ್ಯಾಸಂಗ ಮಾಡುವ ಎಲ್ಲ ಮಕ್ಕಳಿಗೆ ಮಾಧ್ಯಾಹ್ನ ಬಿಸಿ ಊಟ ನೀಡುವ ಕಾರ್ಯಕ್ರಮವನ್ನು ಜೂನ್ ೨೦೦೨ರಿಂದ ಪ್ರಾರಂಭಿಸಲಾಯಿತು.

**ವಿವಿಧ ಹಂತಗಳಲ್ಲಿ ಕಾರ್ಯಕ್ರಮದ ವಿಸ್ತರಣೆ:** ಈ ಯೋಜನೆಯ ಲಾಭವನ್ನು ರಾಜ್ಯದ ಎಲ್ಲ ಮಕ್ಕಳಿಗೂ ದೊರೆಯುವಂತೆ ಮಾಡುವ ಸಲುವಾಗಿ ಸರ್ಕಾರದ ಆದೇಶ ಸಂಖ್ಯೆ ಇಡಿ ೨೪ ಎಂ.ಎಂ.ಎಸ್. ೨೦೦೩ ದಿನಾಂಕ ೫-೬-೨೦೦೩ರ ಪ್ರಕಾರ ೨೦೦೩ ಜುಲೈ ೧ರಿಂದ ರಾಜ್ಯದ ಉಳಿದ ಜಿಲ್ಲೆಗಳ ಎಲ್ಲ ಸರ್ಕಾರಿ ಶಾಲೆಗಳಿಗೂ ಈ ಕಾರ್ಯಕ್ರಮವನ್ನು ವಿಸ್ತರಿಸಿ ಇದಕ್ಕೆ 'ಅಕ್ಷರ ದಾಸೋಹ' ಎಂದು ನಾಮಕರಣ ಮಾಡಲಾಯಿತು.ದಿನಾಂಕ ೧-೯-೨೦೦೪ ರಿಂದ ಈ ಕಾರ್ಯಕ್ರಮವನ್ನು ಅನುದಾನಿತ ಶಾಲೆಗಳ ೧ರಿಂದ ೫ನೇ

ತರಗತಿಗಳ ಮಕ್ಕಳಿಗೂ ವಿಸ್ತರಿಸಲಾಯಿತು. ದಿನಾಂಕ ೧-೧೦-೨೦೦೪ ರಿಂದ ಎಲ್ಲ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ ೬ ಮತ್ತು ೭ನೇ ತರಗತಿಗಳಿಗೂ ಮತ್ತು ದಿನಾಂಕ ೧-೬-೨೦೦೭ ರಿಂದ ಉನ್ನತೀಕರಿಸಿದ ಪ್ರಾಥಮಿಕ ಶಾಲೆಗಳಲ್ಲಿ ೮ನೇ ತರಗತಿಗೂ ಮತ್ತು ಸರ್ಕಾರಿ ಮತ್ತು ಅನುದಾನಿತ ಎಲ್ಲ ಪ್ರೌಢಶಾಲೆಗಳ ೮ ರಿಂದ ೧೦ ನೇ ತರಗತಿ ಮಕ್ಕಳಿಗೂ ಅನ್ವಯಿಸಲಾಯಿತು. ಪ್ರಸ್ತುತ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ ೧ರಿಂದ ೧೦ ನೇ ತರಗತಿಗಳ ಎಲ್ಲ ಮಕ್ಕಳು ಈ ಸೌಲಭ್ಯವನ್ನು ಪಡೆಯುತ್ತಿದ್ದಾರೆ. ದಿನಾಂಕ ೧-೪-೨೦೦೫ರಿಂದ ಕಾರ್ಯಕ್ರಮದ ಅನುಷ್ಠಾನದ ಜವಾಬ್ದಾರಿಯನ್ನು ಜಿಲ್ಲಾ ಪಂಚಾಯತಿಗಳ ಉಸ್ತುವಾರಿಗೆ ನೀಡಲಾಗಿದೆ.

**ಕೋಷ್ಟಕ ೧೦.೧೨: ಅಕ್ಷರ ದಾಸೋಹ ಮಧ್ಯಾಹ್ನದ ಬಿಸಿಯೂಟ ಕಾರ್ಯಕ್ರಮದ ಅಡಿಯಲ್ಲಿ ಪ್ರತಿ ವಿದ್ಯಾರ್ಥಿಗೆ ಪ್ರತಿ ದಿನಕ್ಕೆ ಒದಗಿಸಲಾಗುವ ದಿನಸಿ ಪದಾರ್ಥಗಳ ಪರಿಮಾಣ**

| ಕ್ರ. ಸಂ. | ದಿನಸಿ ಪದಾರ್ಥ | ಕಿರಿಯ ಪ್ರಾಥಮಿಕ ೧-೫ (ಗ್ರಾಂ ಗಳಲ್ಲಿ) | ಹಿರಿಯ ಪ್ರಾಥಮಿಕ ೬-೮ (ಗ್ರಾಂ ಗಳಲ್ಲಿ) | ಪ್ರೌಢಶಾಲೆ ೯-೧೦ (ಗ್ರಾಂ ಗಳಲ್ಲಿ) |
|---|---|---|---|---|
| ೧ | ಅಕ್ಕಿ | ೧೦೦ | ೧೫೦ | ೧೫೦ |
| ೨ | ಬೇಳೆ | ೨೦ | ೩೦ | ೩೦ |
| ೩ | ಎಣ್ಣೆ | ೦೫ | ೭.೫ | ೭.೫ |
| ೪ | ಉಪ್ಪು | ೦೨ | ೪ | ೪ |
| ೫ | ಕಾಯಿಪಲ್ಲೆ | ೫೦ | ೭೫ | ೭೫ |

**ಮಾತ್ರೆಗಳ ಸರಬರಾಜು ವಿವರ: ಶಿಕ್ಷಣ ಇಲಾಖೆಯಿಂದ ನಿರ್ವಹಿಸಲಾಗುವ ಮಾತ್ರೆಗಳು** : ೧ ರಿಂದ ೭ನೇ ತರಗತಿ ವರೆಗೆ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ ಮಕ್ಕಳಿಗೆ ವಿಟಮಿನ್ ಎ ೨ ಲ್ಯಾಕ್ ಐ.ಯು. ೬ ತಿಂಗಳಿಗೆ ೧ ರಂತೆ ವರ್ಷಕ್ಕೆ ೨ ಮಾತ್ರೆಗಳನ್ನು ನೀಡಲಾಗುವುದು.

**ಆರೋಗ್ಯ ಇಲಾಖೆಯಿಂದ ನಿರ್ವಹಿಸಲಾಗುವ ಮಾತ್ರೆಗಳು** : ೧ ರಿಂದ ೧೦ನೇ ತರಗತಿಯ ಸರ್ಕಾರಿ ಮತ್ತು ಅನುದಾನಿತ ಶಾಲಾ ಮಕ್ಕಳಿಗೆ ಎನ್.ಆರ್.ಎಚ್.ಎಮ್ WIFS ಕಾರ್ಯಕ್ರಮದಡಿ ಆಲ್‌ಬೆಂಡಾಜೋಲ್ ಮತ್ತು ಐರನ್ ವಿತ್ ಫೋಲಿಕ್ ಆಸಿಡ್ ಮಾತ್ರೆಗಳನ್ನು ವಿತರಣೆ ಮಾಡಲಾಗುತ್ತದೆ. ಕಾರ್ಯಕ್ರಮದ ಅನುಷ್ಠಾನಕ್ಕಾಗಿ ೧ ರಿಂದ ೮ ನೇ ತರಗತಿಗೆ ಬೇಕಾಗುವ ಅಕ್ಕಿ/ಗೋದಿಯನ್ನು ಕೇಂದ್ರ ಸರ್ಕಾರವು ಸಾರ್ವಜನಿಕ ವಿತರಣಾ ವ್ಯವಸ್ಥೆ ಅಡಿಯಲ್ಲಿ ಒದಗಿಸಿದರೆ, ೯ ಮತ್ತು ಮತ್ತು ೧೦ ನೇ ತರಗತಿಗೆ ರಾಜ್ಯ ಸರ್ಕಾರವು ಒದಗಿಸುತ್ತಿದೆ. ಸಾದಿಲ್ವಾರು ವೆಚ್ಚಗಳನ್ನು ೧ ರಿಂದ ೮ ನೇ ತರಗತಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ೬೦ : ೪೦ ರ ಅನುದಾನದ ಅನುಪಾತದಂತೆ ಹಾಗೂ ೯ ಮತ್ತು ೧೦ ನೇ ತರಗತಿಗೆ ಶೇ.೧೦೦ ರಷ್ಟು ರಾಜ್ಯ ಸರ್ಕಾರವು ಭರಿಸುತ್ತದೆ. ಅಗತ್ಯವಾದ ಪಾತ್ರೆ, ಸ್ಟವ್, ಮತ್ತು ಗ್ಯಾಸ್ ಸಂಪರ್ಕಗಳನ್ನು ಒದಗಿಸಲಾಗಿದೆ. ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಕನಿಷ್ಠ ೧ ಮತ್ತು ಗರಿಷ್ಠ ೧೦ ಜನ ಅಡುಗೆಯವರು /ಸಹಾಯಕರನ್ನು ಎಸ್.ಡಿ.ಎಂ.ಸಿ.ವತಿಯಿಂದ ನಿಯಮಾನುಸಾರ ನೇಮಕ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಪ್ರತಿ ಶಾಲೆಗೆ ಪ್ರತ್ಯೇಕ ಅಡುಗೆ ಕೊಠಡಿಯನ್ನು ಹೊಂದುವ ಗುರಿ ಇದ್ದು ಹಂತ ಹಂತವಾಗಿ ಕಟ್ಟಡಗಳನ್ನು ನಿರ್ಮಿಸಲಾಗುತ್ತಿದೆ.

**ಕೋಷ್ಟಕ ೧೦.೧೩: ೨೦೧೫-೧೬ ಸಾಲಿನಲ್ಲಿ ಮಧ್ಯಾಹ್ನದ ಬಿಸಿಯೂಟದ ಯೋಜನೆಯಡಿಯಲ್ಲಿ ಬರುವ ಶಾಲೆಗಳು**

| ಕ್ರ. ಸಂ | ಶಾಲೆಗಳು | ಸರ್ಕಾರಿ | ಅನುದಾನಿತ | ಒಟ್ಟು |
|---|---|---|---|---|
| ೧ | ಕಿರಿಯ ಪ್ರಾಥಮಿಕ ಶಾಲೆಗಳು | ೨೧೬೫೬ | ೨೪೭ | ೨೧೯೦೩ |
| ೨ | ಹಿರಿಯ ಪ್ರಾಥಮಿಕ ಶಾಲೆಗಳು | ೨೨೩೮೨ | ೨೭೯೧ | ೨೫೧೭೩ |
| ೩ | ಪ್ರೌಢ ಶಾಲೆಗಳು | ೪,೪೦೧ | ೩,೮೭೫ | ೮,೨೭೬ |
| ೪ | ಎನ್.ಸಿ.ಎಲ್.ಪಿ | ೬೫ | ೦ | ೬೫ |
| ೫ | ಮದರಸಾ | ೪೭ | ೦ | ೪೭ |
| ೧ | ಒಟ್ಟು | **೪೮,೫೫೧** | **೬,೯೧೩** | **೫೫,೪೬೪** |

**ಕೋಷ್ಟಕ ೧೦.೧೪: ೨೦೧೫-೧೬ ನೇ ಸಾಲಿನಲ್ಲಿ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಈ ಕಾರ್ಯಕ್ರಮದ ಫಲಾನುಭವಿ ವಿದ್ಯಾರ್ಥಿಗಳು**

| ಕ್ರ. ಸಂ | ಶಾಲೆಗಳು | ಸರ್ಕಾರಿ | ಅನುದಾನಿತ | ಒಟ್ಟು |
|---|---|---|---|---|
| ೧ | ಕಿರಿಯ ಪ್ರಾಥಮಿಕ ಶಾಲೆಗಳು | ೨೪,೭೮,೭೮೮ | ೪,೦೬,೯೮೨ | ೨೮,೮೫,೭೭೦ |
| ೨ | ಹಿರಿಯ ಪ್ರಾಥಮಿಕ ಶಾಲೆಗಳು | ೧೩,೩೩,೦೫೭ | ೪,೦೮,೪೪೧ | ೧೭,೪೧,೪೯೮ |
| ೩ | ಪ್ರೌಢ ಶಾಲೆಗಳು | ೬,೧೦,೪೨೬ | ೫,೩೪,೫೬೪ | ೧೧,೪೪,೯೯೦ |
| ೪ | ಎನ್.ಸಿ.ಎಲ್.ಪಿ | ೨,೦೪೬ | ೦ | ೨,೦೪೬ |
| ೫ | ಮದರಸಾ | ೪,೬೩೭ | ೦ | ೪,೬೩೭ |
|  | ಒಟ್ಟು | **೪೪,೨೮,೯೫೪** | **೧೩,೪೯,೯೮೭** | **೫೭,೭೮,೯೪೧** |

**ಕೇಂದ್ರೀಕೃತ ದಾಖಲಾತಿ ಘಟಕ:** ಕೇಂದ್ರೀಕೃತ ದಾಖಲಾತಿ ಘಟಕವನ್ನು ಸರ್ಕಾರದ ಆದೇಶ ಸಂಖ್ಯೆ ಇಡಿ ೮೬ ಯೋಯೋಕ ೩೬ ದಿನಾಂಕ ೩೦-೩-೧೯೯೬ರಂತೆ ಸ್ಥಾಪಿಸಲಾಗಿದೆ. ಇದೊಂದು ಕರ್ನಾಟಕ್ಕೆ ವಿಶಿಷ್ಟವಾದ ವ್ಯವಸ್ಥೆಯಾಗಿದ್ದು ಇತರೆ ರಾಜ್ಯಗಳಲ್ಲಿ ಈ ರೀತಿಯ ಪ್ರತ್ಯೇಕ ಘಟಕ ಕಂಡುಬರುವುದಿಲ್ಲ. ಪ್ರಾರಂಭದಲ್ಲಿ ರಾಜ್ಯದಲ್ಲಿನ ಬಿ.ಎಡ್. ಮತ್ತು ಡಿ.ಎಡ್. (ಹಿಂದಿನ ಟಿ.ಸಿ.ಹೆಚ್.) ಶಿಕ್ಷಣ ಸಂಸ್ಥೆಗಳಿಗೆ ದಾಖಲಾತಿಗಾಗಿ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವ ಉದ್ದೇಶಕ್ಕಾಗಿ ಪ್ರಾರಂಭಿಸಲಾಯಿತು. ಈ ಸಂಸ್ಥೆಗೆ ಕ್ರಮೇಣ ಪ್ರಾಥಮಿಕ ಮತ್ತು ಪೌಢಶಾಲಾ ಶಿಕ್ಷಕರ ಆಯ್ಕೆಗಾಗಿ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸುವ ಜವಾಬ್ದಾರಿಯನ್ನು ಸಹ ವಹಿಸಲಾಯಿತು. ಬೆಂಗಳೂರು ನಗರದ ಕೆಂಪೇಗೌಡ ರಸ್ತೆಯಲ್ಲಿನ ಸೆಂಟ್ರಲ್ ಜೂನಿಯರ್ ಕಾಲೇಜು ಆವರಣದಲ್ಲಿ ಈ ಘಟಕದ ಕಚೇರಿ ಇರುತ್ತದೆ.

**ಸರ್ಕಾರದ ಆದೇಶ ಸಂಖ್ಯೆ:** ಇಡಿ ೮೩ ಪಿ.ಟಿ.ಐ.೯೬ ದಿನಾಂಕ: ೩-೮-೧೯೯೬ ರಂತೆ ಈ ಘಟಕದ ನಿರ್ವಹಣೆಗಾಗಿ ಆಯುಕ್ತರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯಲ್ಲಿ ನಿರ್ದೇಶಕರು ಡಿ.ಎಸ್.ಇ.ಆರ್.ಟಿ, ಪ್ರಾದೇಶಿಕ ನಿರ್ದೇಶಕರು ಎನ್.ಸಿ.ಟಿ.ಇ. ಆಯುಕ್ತರ ಕಚೇರಿಯ ಮುಖ್ಯ

ಲೆಕ್ಕಾಧಿಕಾರಿಗಳು, ಬೆಂಗಳೂರು ವಿಶ್ವ ವಿದ್ಯಾಲಯದ ಡೀನ್ ಆಫ್ ಎಜುಕೇಷನ್, ಸಹ ನಿರ್ದೇಶಕರು ಬೆಂಗಳೂರು ವಿಭಾಗ, ಪ್ರಾಚಾರ್ಯರು, ಡಯಟ್ ಬೆಂಗಳೂರು ಗ್ರಾಮಾಂತರ ಇವರು ಸದಸ್ಯರಾಗಿರುತ್ತಾರೆ. ಘಟಕದ ವಿಶೇಷಾಧಿಕಾರಿ ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ.

**ನಿರ್ವಹಿಸುವ ಕೆಲಸ ಕಾರ್ಯಗಳು:** ಡಿ.ಎಡ್. ಮತ್ತು ಬಿ.ಎಡ್. ಕೋರ್ಸುಗಳ ದಾಖಲಾತಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವುದು: ರಾಜ್ಯದಲ್ಲಿನ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಅಧಿಕೃತ ಶಿಕ್ಷಕರ ತರಬೇತಿ ಸಂಸ್ಥೆಗಳಲ್ಲಿ ಡಿ.ಎಡ್. (ಹಿಂದಿನ ಟಿ.ಸಿ.ಹೆಚ್) ಮತ್ತು ಬಿ.ಎಡ್. ಕೋರ್ಸುಗಳಿಗೆ ಅಬ್ಯರ್ಥಿಗಳನ್ನು ಆಯ್ಕೆ ಮಾಡುವ ಪ್ರಕ್ರಿಯೆ ೧೯೯೬ರಿಂದ ಜಾರಿಯಲ್ಲಿದೆ.ಡಿ.ಎಡ್. ಕೋರ್ಸ್‌ಗಾಗಿ ನಿಗದಿಪಡಿಸಲಾದ ಸೀಟುಗಳ ಪೈಕಿ ಸರ್ಕಾರಿ ಕೋಟಾದ(ಸರ್ಕಾರಿ ತರಬೇತಿ ಸಂಸ್ಥೆಗಳಲ್ಲಿ ೧೦೦%, ಅನುದಾನಿತ ಸಂಸ್ಥೆಗಳಲ್ಲಿ ೭೫% ಮತ್ತು ಅನುದಾನರಹಿತ ಸಂಸ್ಥೆಗಳಲ್ಲಿ ೫೦%) ಸೀಟುಗಳಿಗೆ ಪ್ರವೇಶಕ್ಕಾಗಿ ಅಭ್ಯರ್ಥಿಗಳು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ಮೀಸಲಾತಿ ನಿಯಮಗಳ ಪ್ರಕಾರ ಅರ್ಹ ಆಭ್ಯರ್ಥಿಗಳನ್ನು ಆಯ್ಕೆ ಮಾಡಿ ಕೌನ್ಸಿಲಿಂಗ್ ಮೂಲಕ ವಿವಿಧ ಸಂಸ್ಥೆಗಳಿಗೆ ಅಲಾಟ್ ಮಾಡಲಾಗುತ್ತದೆ.ಬಿ.ಎಡ್. ಕೋರ್ಸ್‌ಗಾಗಿ ನಿಗದಿಪಡಿಸಲಾದ ಸೀಟುಗಳ ಪೈಕಿ ಸರ್ಕಾರಿ ಕೋಟಾದ(ಸರ್ಕಾರಿ ತರಬೇತಿ ಸಂಸ್ಥೆಗಳಲ್ಲಿ ೧೦೦%, ಅನುದಾನಿತ ಸಂಸ್ಥೆಗಳಲ್ಲಿ ೭೫% ಮತ್ತು ಅನುದಾನರಹಿತ ಸಂಸ್ಥೆಗಳಲ್ಲಿ ೫೦%) ಸೀಟುಗಳಿಗೆ ಪ್ರವೇಶಕ್ಕಾಗಿ ವಿಶೇಷ ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಿ ಅದರಲ್ಲಿ ಪಡೆದ ಅಂಕಗಳು ಹಾಗೂ ಅಭ್ಯರ್ಥಿಗಳು ಪದವಿ ಪರೀಕ್ಷೆಯಲ್ಲಿ ಗಳಿಸಿದ ಶೇಕಡಾವಾರು ಅಂಕಗಳ ಆಧಾರದ ಮೇಲೆ ಮೀಸಲಾತಿ ನಿಯಮಗಳ ಪ್ರಕಾರ ಆಭ್ಯರ್ಥಿಗಳ ಅರ್ಹತಾ ಪಟ್ಟಿಯನ್ನು ತಯಾರಿಸಿ, ಕೌನ್ಸಿಲಿಂಗ್ ಮೂಲಕ ವಿವಿಧ ಸಂಸ್ಥೆಗಳಿಗೆ ಅಲಾಟ್ ಮಾಡಲಾಗುತ್ತದೆ.

**ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ನೇಮಾಕಾತಿ–ಸ್ಪರ್ಧಾತ್ಮಕ ಪರೀಕ್ಷೆಗಳು:** ಸರ್ಕಾರದ ಆದೇಶ ಸಂಖ್ಯೆ ಇಡಿ ೮೩ ಪಿಬಿ.ಎಸ್. ೨೦೦೧ ದಿನಾಂಕ: ೧೬–೮–೨೦೦೧ ರಂತೆ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಗಾಗಿ ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಿ, ಫಲಿತಾಂಶವನ್ನು ಪ್ರಕಟಿಸಿ ಅಭ್ಯರ್ಥಿಗಳು ಡಿ.ಎಡ್. ಪರೀಕ್ಷೆ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಗಳಿಸಿದ ಶೇಕಡಾವಾರು ಅಂಕಗಳು ಹಾಗೂ ಮೀಸಲಾತಿ ನಿಯಮಗಳ ಆಧಾರದ ಮೇಲೆ ಅರ್ಹ ಆಭ್ಯರ್ಥಿಗಳನ್ನು ಆಯ್ಕೆ ಮಾಡಿ, ಅಂತಿಮ ಪಟ್ಟಿಗಳನ್ನು ಆಯ್ಕೆ ಪ್ರಾಧಿಕಾರಿಗಳಾದ ಜಿಲ್ಲಾ ಉಪ ನಿರ್ದೇಶಕರಿಗೆ ನೀಡಲಾಗುತ್ತದೆ.

ಸರ್ಕಾರದ ಆದೇಶ ಸಂಖ್ಯೆ ಇಡಿ ೮೨ ಎಸ್‌ಎಲ್‌ಬಿ ೨೦೦೩ ದಿನಾಂಕ: ೧೬–೮–೨೦೦೩ ರಂತೆ ಪ್ರೌಢಶಾಲಾ ಶಿಕ್ಷಕರ ನೇಮಕಾತಿಗಾಗಿ ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಿ, ಫಲಿತಾಂಶವನ್ನು ಪ್ರಕಟಿಸಿ, ಅಭ್ಯರ್ಥಿಗಳು ಪದವಿ ಪರೀಕ್ಷೆ, ಬಿ.ಎಡ್. ಪರೀಕ್ಷೆ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಗಳಿಸಿದ ಶೇಕಾಡವಾರು ಅಂಕಗಳು ಹಾಗೂ ಮೀಸಲಾತಿ ನಿಯಮಗಳ ಆಧಾರದ ಮೇಲೆ ಅರ್ಹ ಆಭ್ಯರ್ಥಿಗಳನ್ನು ಆಯ್ಕೆ ಮಾಡಿ, ಅಂತಿಮ ಪಟ್ಟಿಗಳನ್ನು ಆಯ್ಕೆ ಪ್ರಾಧಿಕಾರಿಗಳಾದ ವಿಭಾಗೀಯ ಸಹ ನಿರ್ದೇಶಕರಿಗೆ ನೀಡಲಾಗುತ್ತದೆ.

**ಕೋಷ್ಟಕ ೧೦.೧೫: ೨೦೧೦–೧೧ ರಿಂದ ಇತ್ತೀಚಿನ ವರೆಗೆ ಶಿಕ್ಷಕರ ನೇಮಕಾತಿ ವಿವರಗಳು**

| ವರ್ಷ | ನೇಮಕಾತಿ ಮಾಡಲಾದ ಶಿಕ್ಷಕರ ಸಂಖ್ಯೆ | | | | | |
|---|---|---|---|---|---|---|
| | ಪ್ರಾಥಮಿಕ ಶಾಲಾ ಶಿಕ್ಷಕರು | | | ಪ್ರೌಢಶಾಲಾ ಶಿಕ್ಷಕರು | | |
| | ಪುರುಷರು | ಮಹಿಳೆಯರು | ಒಟ್ಟು | ಪುರುಷರು | ಮಹಿಳೆಯರು | ಒಟ್ಟು |
| ೨೦೧೪–೧೫ | ೩೨ | ೧೫ | ೪೭ * | – | – | – |
| ೨೦೧೪–೧೫ | ೩೯೬೧ | ೩೯೪೪ | ೭೯೦೫ | – | – | – |
| ೨೦೧೨–೧೩ | – | – | – | ೨೦೦೩ | ೧೩೫೭ | ೩೩೬೦ |
| ೨೦೦೯–೧೦ | ೧೯೦೪ | ೨೯೬೦ | ೪೮೬೪ | ೧೪೭೫ | ೧೦೫೩ | ೨೫೨೮ |

**ಮಾಹಿತಿ ಆಧಾರ: ವಿಶೇಷಾಧಿಕಾರಿ, ಕೇಂದ್ರೀಕೃತ ದಾಖಲಾತಿ ಘಟಕ, ಸಾರ್ವಜನಿಕ ಶಿಕ್ಷಣ ಇಲಾಖೆ**

**ಸೇವಾ ಪೂರ್ವ ಶಿಕ್ಷಕರ ತರಬೇತಿ ಸಂಸ್ಥೆಗಳು:** ಹಿಂದಿನ ಮೈಸೂರು ರಾಜ್ಯದಲ್ಲಿ ೧೮೬೦ಕ್ಕೂ ಹಿಂದೆಯೇ ಶಿಕ್ಷಕ ತರಬೇತಿ ಶಾಲೆಯನ್ನು ಸ್ಥಾಪಿಸುವುದರ ಮೂಲಕ ಶಿಕ್ಷಕರ ತರಬೇತಿಗೆ ವ್ಯವಸ್ಥೆಯನ್ನು ಮಾಡಲಾಗಿತ್ತು. ಮುಂಬೈ ಪ್ರಾಂತ್ಯದಲ್ಲಿದ್ದ ಧಾರವಾಡದಲ್ಲಿಯೂ ಸಹ ಒಂದು ಶಿಕ್ಷಕರ ತರಬೇತಿ ಶಾಲೆಯನ್ನು ೧೮೬೭ರಲ್ಲಿ ಸ್ಥಾಪಿಸಲಾಯಿತು. ಅದು ನಂತರದಲ್ಲಿ ಮೆಟ್ರಿಕ್ ನಂತರದ ತರಬೇತಿ ಕಾಲೇಜಾಯಿತು. ಹಳೆಯ ಮೈಸೂರಿನಲ್ಲಿ ಹೋಬಳಿಗೊಂದು ಶಾಲೆ ಪದ್ಧತಿ ಬಂದ ಮೇಲೆ ಶಿಕ್ಷಕರ ತರಬೇತಿ ಶಾಲೆಗಳನ್ನು ಎಲ್ಲಾ ಜಿಲ್ಲಾ ಕೇಂದ್ರದಲ್ಲಿಯೂ ತೆರೆಯಲಾಯಿತು. ಇಂತಹ ಒಂದು ಶಾಲೆಯನ್ನು ಮೈಸೂರಿನಲ್ಲಿ ೧೮೯೩ರಲ್ಲಿ ತೆರೆದು ಹಿರಿಯ ಪ್ರೌಢ ಮತ್ತು ಪಂಡಿತ್ ಕ್ರಮ ಅನುಸರಿಸಲಾಯಿತು. ೧೮೯೭ರಲ್ಲಿ ಮೊದಲು ಕೋಲಾರ ಮತ್ತು ತುಮಕೂರಿನಲ್ಲಿ ತೆರೆದು ನಂತರ ಬೆಂಗಳೂರು, ಹಾಸನ ಮತ್ತು ಚಿತ್ರದುರ್ಗದಲ್ಲಿ ಇನ್ನೂ ಮೂರು ಶಿಕ್ಷಕ ತರಬೇತಿ ಕೇಂದ್ರ ತೆರೆಯಲಾಯಿತು. ತುಮಕೂರಿನಲ್ಲಿ ವೆಸ್ಲಿಯನ್ ಮಿಶನ್ ಖಾಸಗಿ ಶಾಲೆ ಪ್ರಾರಂಭವಾಯಿತು. ೧೮೮೮ರಲ್ಲಿ ಮೈಸೂರಿನಲ್ಲಿ ಸ್ತ್ರೀಯರಿಗೆ ಶಿಕ್ಷಕ ತರಬೇತಿ ಶಾಲೆಯನ್ನು ಮಹಾರಾಣಿ ಕಾಲೇಜಿನಲ್ಲಿ ತೆರೆಯಲಾಯಿತು. ೧೯೧೬ರಲ್ಲಿ ಮೈಸೂರಿನಲ್ಲಿ ಜನಾನಾ ಉರ್ದು ಶಿಕ್ಷಕ ತರಬೇತಿ ಶಾಲೆ ತೆರೆಯಲಾಯಿತು. ೧೯೧೩ರಲ್ಲಿ ಮೊದಲ ಬಾರಿಗೆ ಮಾಧ್ಯಮಿಕ ಶಾಲಾ ಶಿಕ್ಷಕರಿಗೆ ತರಬೇತಿ ನೀಡುವ ವ್ಯವಸ್ಥೆ ಮೈಸೂರಿನಲ್ಲಿ ಪ್ರಾರಂಭಿಸಿ, ಅದೇ ರೀತಿ ೧೯೨೮ರಲ್ಲಿ ಮೈಸೂರಿನ ಮಹಾರಾಣಿ ಮಹಿಳಾ ಶಿಕ್ಷಕ ತರಬೇತಿ ಕೇಂದ್ರ ತೆರೆಯಲಾಯಿತು. ೧೯೫೦ರಲ್ಲಿ ಇದಕ್ಕೆ ಶಿಕ್ಷಕರ ಸರ್ಟಿಫಿಕೇಟ್ ಹೈಯರ್ ಕೋರ್ಸ್ ಎಂದು ನಾಮಕರಣ ಮಾಡಲಾಯಿತು.

ಪ್ರಾಥಮಿಕ ಶಾಲಾ ಶಿಕ್ಷಕರ ಸೇವಾಪೂರ್ವ ತರಬೇತಿ ನೀಡುವ ಸಂಸ್ಥೆಗಳನ್ನು ರಾಜ್ಯದಲ್ಲಿ ಹಿಂದೆ ಸ್ವಾತಂತ್ರ್ಯಪೂರ್ವದಲ್ಲಿ ನಾರ್ಮಲ್ ಸ್ಕೂಲುಗಳೆಂಬ ಹೆಸರಿನಿಂದ ಕರೆಯಲಾಗುತ್ತಿತ್ತು. ಸ್ವಾತಂತ್ರ್ಯಾನಂತರ ಟೀಚರ್ಸ್ ಸರ್ಟಿಫಿಕೇಟ್ ಲೋಯರ್ ಮತ್ತು ಟೀಚರ್ಸ್ ಸರ್ಟಿಫಿಕೇಟ್ ಹೈಯರ್ ಕೋರ್ಸುಗಳನ್ನು ನಡೆಸಲಾಗುತ್ತಿತ್ತು. ೧೯೬೧ ರಲ್ಲಿ ಪರಿಷ್ಕರಣಗೊಂಡು ಜಾರಿಯಲ್ಲಿದ್ದ ಟಿ.ಸಿ.ಹೆಚ್. ಪಠ್ಯಕ್ರಮವನ್ನು ೨೦೦೨ ರಲ್ಲಿ ಪುನ: ಪರಿಷ್ಕರಿಸಿ ಡಿ.ಎಡ್. ಎಂಬ ಹೆಸರಿನಿಂದ ಕರೆಯಲಾಗಿದೆ. ದೈಹಿಕ ಶಿಕ್ಷಣ ಶಿಕ್ಷಕರ ತರಬೇತಿ ಕೋರ್ಸ್‌ನ್ನು ಸಿ.ಪಿ.ಎಡ್. ಬದಲು ಡಿ.ಪಿ.ಎಡ್. ಎಂದು ಪುನರ್ ನಾಮಕರಣಗೊಳಿಸಲಾಗಿದೆ. ಮೊದಲು ಟಿ.ಸಿ.ಹೆಚ್/ಸಿ.ಪಿ.ಎಡ್ ಗೆ ಪ್ರವೇಶ ಪಡೆಯಲು ಎಸ್.ಎಸ್.ಎಲ್.ಸಿ. ಉತ್ತೀರ್ಣತೆ ಸಾಕಾಗಿತ್ತು. ಶಿಕ್ಷಣದ ಗುಣಮಟ್ಟ ಸುಧಾರಣೆಗೆ ಪೂರಕವಾಗಿ ಶಿಕ್ಷಕರ ಗುಣಮಟ್ಟವನ್ನು ಉತ್ತಮಪಡಿಸುವ ದೃಷ್ಟಿಯಿಂದ ಈಗ ಕೆಲವು ವರ್ಷಗಳಿಂದ ಪಿ.ಯು.ಸಿ. ಉತ್ತೀರ್ಣತೆಯನ್ನು ನಿಗದಿಪಡಿಸಲಾಗಿದೆ. ೨ ವರ್ಷದ ಅವಧಿಯ ಈ ಕೋರ್ಸಿಗೆ ಪ್ರವೇಶ ಪಡೆಯಲು ಸಂಬಂಧಪಟ್ಟ ಟಿ.ಟಿ.ಐ. ಮೂಲಕ ಇಲಾಖೆಯ ಕೇಂದ್ರೀಕೃತ ದಾಖಲಾತಿ ಘಟಕಕ್ಕೆ ಅರ್ಜಿಗಳನ್ನು ಸಲ್ಲಿಸಬೇಕು. ಪಿ.ಯು.ಸಿ.. ಪರೀಕ್ಷೆಯ ಅಂಕಗಳ ಶೇಕಡಾವಾರು ಮತ್ತು ಮೀಸಲಾತಿ ನಿಯಮಗಳ ಆಧಾರದ ಮೇಲೆ ಆಯ್ಕೆ ಮಾಡಿ ಕೌನ್ಸಿಲಿಂಗ್ ಮೂಲಕ ಸೀಟುಗಳನ್ನು ಅಲಾಟ್ ಮಾಡಲಾಗುತ್ತದೆ. ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು ಪರೀಕ್ಷೆ ನಡೆಸಿ ಪ್ರಮಾಣ ಪತ್ರಗಳನ್ನು ನೀಡುವ ಪ್ರಾಧಿಕಾರವಾಗಿದೆ.

**ಕೋಷ್ಟಕ ೧೦.೧೬: ರಾಜ್ಯದಲ್ಲಿ ಕಾಲಕಾಲಕ್ಕೆ ಅಸ್ತಿತ್ವದಲ್ಲಿದ್ದ ಸೇವಾ ಪೂರ್ವ ಪ್ರಾಥಮಿಕ ಶಿಕ್ಷಕ ತರಬೇತಿ ಸಂಸ್ಥೆಗಳು**

| ವರ್ಷ | ಸಂಖ್ಯೆ |
|---|---|
| ೧೮೯೦– ೧೯೧೧ | ೦೬ |
| ೧೯೧೨–೧೯೨೧ | ೦೪ |
| ೧೯೨೨–೧೯೩೧ | ೦೬ |
| ೧೯೩೨–೧೯೪೧ | ೦೬ |
| ೧೯೪೨–೧೯೫೧ | ೧೭ |
| ೧೯೫೨–೧೯೬೧ | ೩೯ |
| ೧೯೬೨–೧೯೭೧ | ೫೮ |
| ೧೯೭೨–೧೯೮೧ | ೭೭ |
| ೧೯೮೨–೧೯೯೧ | ೧೩೪ |
| ೧೯೯೨–೨೦೦೦ | ೧೩೪ |
| ೨೦೦೦–೨೦೧೪ | ೮೨೫ |

**ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ (ಸಿಟಿಇ) ಗಳು:** ೧೯೮೬ ರಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ ಘೋಷಣೆಯಾಗುವ ಮೊದಲು ರಾಜ್ಯದಲ್ಲಿ ಒಟ್ಟು ೬ ಸರ್ಕಾರಿ ಬಿ.ಎಡ್. ಕಾಲೇಜುಗಳು (ಮೈಸೂರು, ಮಂಗಳೂರು, ಚಿತ್ರದುರ್ಗ, ಜಮಖಂಡಿ, ಬೆಳಗಾವಿ ಮತ್ತು ಕಲಬುರಗಿ) ಅಸ್ತಿತ್ವದಲ್ಲಿದ್ದವು.. ಕೆಲವು ವರ್ಷಗಳ ಹಿಂದೆ ಚಿಕ್ಕಬಳ್ಳಾಪುರದ ಪುರಸಭಾ ಆಡಳಿತಕ್ಕೆ ಒಳಪಟ್ಟಿದ್ದ ಬಿ.ಎಡ್ ಕಾಲೇಜನ್ನು ಸರ್ಕಾರದ ವಶಕ್ಕೆ ಪಡೆಯಲಾಗಿದೆ. ಈ ಕಾಲೇಜುಗಳು ಆಡಳಿತಾತ್ಮಕವಾಗಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧೀನಕ್ಕೆ ಒಳಪಟ್ಟರೆ, ಪಠ್ಯಕ್ರಮ, ಪರೀಕ್ಷೆ ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ಆಯಾ ಪ್ರದೇಶದ ವ್ಯಾಪ್ತಿಯ ವಿಶ್ವವಿದ್ಯಾಲಯಗಳ ಅಧೀನಕ್ಕೆ ಒಳಪಟ್ಟಿವೆ. ಕೇಂದ್ರ ಸರ್ಕಾರಿ ಸ್ವಾಮ್ಯದ ಎನ್.ಸಿ.ಇ.ಆರ್.ಟಿ. ಅಂಗಸಂಸ್ಥೆಯಾದ ಪ್ರಾದೇಶಿಕ ಶಿಕ್ಷಣ ಮಹಾ ವಿದ್ಯಾಲಯ ಮೈಸೂರಿನಲ್ಲಿದ್ದು, ಶಿಕ್ಷಕರ ತರಬೇತಿ ಮತ್ತು ಶೈಕ್ಷಣಿಕ ಸಂಶೋಧನೆ, ತಂತ್ರಜ್ಞಾನ ಕ್ಷೇತ್ರಗಳಲ್ಲಿ ಉನ್ನತ ಸಂಸ್ಥೆಯಾಗಿ ಕಾರ್ಯ ನಿರ್ವಹಿಸುತ್ತಿದೆ.

**ಕೋಷ್ಟಕ ೧೦.೧೭: ರಾಜ್ಯದಲ್ಲಿರುವ ಪ್ರೌಢ ಶಾಲಾ ಶಿಕ್ಷಕರ ಸೇವಾಪೂರ್ವ ತರಬೇತಿ ಸಂಸ್ಥೆ/ ಬಿ.ಎಡ್ ಕಾಲೇಜುಗಳು**

| | | |
|---|---|---|
| ೧ | ಸರ್ಕಾರಿ ಬಿ.ಎಡ್. ಕಾಲೇಜುಗಳು | ೦೬ |
| ೨. | ವಿಶ್ವ ವಿದ್ಯಾಲಯ ಅಧ್ಯಪಕರ ಕಾಲೇಜು, ದಾರವಾಡ | ೦೧ |
| ೩ | ಖಾಸಗಿ ಅನುದಾನಿತ ಬಿ.ಎಡ್ ಕಾಲೇಜುಗಳು | ೨೨ |
| ೪ | ಖಾಸಗಿ ಅನುದಾನರಹಿತ ಬಿ.ಎಡ್ ಕಾಲೇಜುಗಳು | ೩೯ |
| ೫ | ರಾಮಕೃಷ್ಣ ಇನ್ಸ್ಟಿಟ್ಯೂಟ್ ಆಫ್ ಮಾರಲ್ ಅಂಡ್ ಸ್ಪಿರಿಚುವಲ್ ಎಜುಕೇಶನ್, ಮೈಸೂರು | ೦೧ |
| ೬ | ಕೇಂದ್ರ ಸರ್ಕಾರದ ಪ್ರಾದೇಶಿಕ ಶಿಕ್ಷಣ ಸಂಸ್ಥೆ (ಎನ್.ಸಿ.ಇ.ಆರ್.ಟಿ), ಮೈಸೂರು | ೦೧ |
| | **ಒಟ್ಟು** | **೭೦** |

ಸರ್ಕಾರಿ ವಲಯದ ಮೈಸೂರು, ಮಂಗಳೂರು, ಚಿತ್ರದುರ್ಗ, ಬೆಳಗಾವಿ, ಜಮಖಂಡಿ ಸೇರಿ ಒಟ್ಟು ೦೬ ಬಿ.ಎಡ್. ಕಾಲೇಜುಗಳನ್ನು ಕಾಲೇಜ್ ಆಫ್ ಟೀಚರ್ ಎಜುಕೇಷನ್ (ಸಿ.ಟಿ.ಇ.) ಗಳಾಗಿ ಉನ್ನತೀಕರಿಸಲಾಗಿದೆ. ಬೆಂಗಳೂರಿನ ಅವುಗಳೆಂದರೆ: ಬೆಂಗಳೂರಿನ ಎಂ.ಇ.ಎಸ್. ಟೀಚರ್ಸ್ ಕಾಲೇಜು, ವಿಜಯ ಟೀಚರ್ಸ್ ಕಾಲೇಜು, ಬಳ್ಳಾರಿಯ ಕೊಟ್ಟೂರುಸ್ವಾಮಿ ಕಾಲೇಜ್ ಆಫ್ ಟೀಚರ್ ಎಜುಕೇಷನ್ ಹಾಗೂ ಎಂ.ಎಲ್. ಎಂ.ಎನ್. ಕಾಲೇಜ್ ಆಫ್ ಟೀಚರ್ ಎಜುಕೇಷನ್, ಚಿಕ್ಕಮಗಳೂರು ಇವುಗಳನ್ನು ಸಿ.ಟಿ.ಇ. ಎಂಬುದಾಗಿಮತ್ತು ಬೆಂಗಳೂರಿನ ರಾಷ್ಟ್ರೀಯ ವಿದ್ಯಾಲಯ ಶಿಕ್ಷಕರ ಕಾಲೇಜನ್ನು ಉನ್ನತ ಅಧ್ಯಯನ ಸಂಸ್ಥೆ (ಐ.ಎ.ಎಸ್.ಇ) ಎಂಬುದಾಗಿ ಉನ್ನತೀಕರಿಸಲಾಗಿದೆ

**ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳು (DIET):** ೧೯೮೬ ರ ರಾಷ್ಟ್ರೀಯ ಶಿಕ್ಷಣ ನೀತಿಯ ಶಿಫಾರಸುಗಳ ಅನುಪಾಲನಾ ಕಾರ್ಯಕ್ರಮದ ಫಲಶೃತಿಯೇ ದೇಶದಾದ್ಯಂತ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳ ಸ್ಥಾಪನೆ. ಇದು ಸಂಪೂರ್ಣ ಕೇಂದ್ರ ಸರ್ಕಾರದ ಅನುದಾನದೊಂದಿಗೆ ಅನುಷ್ಠಾನಗೊಳಿಸಲಾದ ಕಾರ್ಯಕ್ರಮ. ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಒತ್ತಿ ಹೇಳಲಾದ ಹಲವು ಅಂಶಗಳ ಪೈಕಿ ಪ್ರಾಥಮಿಕ ಶಿಕ್ಷಣ ಸಾರ್ವತ್ರೀಕರಣ, ಗುಣಮಟ್ಟ ಸುಧಾರಣೆ ಮತ್ತು ಶಿಕ್ಷಕರ ಬೋಧನಾ ಕೌಶಲ್ಯ ಉತ್ತಮ ಪಡಿಸುವುದು ಬಹಳ ಪ್ರಮುಖವಾದವುಗಳಾಗಿದ್ದವು. ಇದಕ್ಕೆ ಬೇಕಾದ ಸೇವಾಪೂರ್ವ ಮತ್ತು ಸೇವಾನಿರತ ಶಿಕ್ಷಕ ತರಬೇತಿ ಸಂಸ್ಥೆಗಳ ಸ್ಥಾಪನೆ ಒಂದು ಪ್ರಮುಖ ಶಿಫಾರಸು. ಈ ಉದ್ದೇಶಗಳ ಸಾಧನೆಗಾಗಿ ಹಲವು ಕಾರ್ಯತಂತ್ರಗಳನ್ನು ರೂಪಿಸಲಾಯಿತು. ಇದರ ಅಂಗವಾಗಿ ಪ್ರಾಥಮಿಕ ಶಿಕ್ಷಕರಿಗೆ ನಿರಂತರವಾಗಿ ಶೈಕ್ಷಣಿಕ ಸಂಪನ್ಮೂಲದ

ಬೆಂಬಲ ಒದಗಿಸುವುದಕ್ಕಾಗಿ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (DIET)ಗಳ ಸ್ಥಾಪನೆ ಒಂದು ಪ್ರಮುಖ ಹೆಜ್ಜೆಯಾಗಿತ್ತು.

**ಪ್ರಾಥಮಿಕ ಶಿಕ್ಷಕರ ತರಬೇತಿ ಸಂಸ್ಥೆಗಳು (ಡಿ.ಎಡ್. ಕಾಲೇಜುಗಳು):** ಪ್ರಾಥಮಿಕ ಶಾಲಾ ಶಿಕ್ಷಕರ ಸೇವಾಪೂರ್ವ ತರಬೇತಿ ನೀಡುವ ಸಂಸ್ಥೆಗಳನ್ನು ರಾಜ್ಯದಲ್ಲಿ ಹಿಂದೆ ಸ್ವಾತಂತ್ರ್ಯಪೂರ್ವದಲ್ಲಿ ನಾರ್ಮಲ್ ಸ್ಕೂಲುಗಳೆಂಬ ಹೆಸರಿನಿಂದ ಕರೆಯಲಾಗುತ್ತಿತ್ತು. ಸ್ವಾತಂತ್ರ್ಯಾನಂತರ ಟೀಚರ್ಸ್ ಸರ್ಟಿಫಿಕೇಟ್ ಲೋಯರ್ ಮತ್ತು ಟೀಚರ್ಸ್ ಸರ್ಟಿಫಿಕೇಟ್ ಹೈಯರ್ ಕೋರ್ಸುಗಳನ್ನು ನಡೆಸಲಾಗುತ್ತಿತ್ತು. ೧೯೯೧ ರಲ್ಲಿ ಪರಿಷ್ಕರಣಗೊಂಡು ಜಾರಿಯಲ್ಲಿದ್ದ ಟಿ.ಸಿ.ಹೆಚ್. ಪಠ್ಯಕ್ರಮವನ್ನು ೨೦೦೨ ರಲ್ಲಿ ಪುನ: ಪರಿಷ್ಕರಿಸಿ ಡಿ.ಎಡ್. ಎಂಬ ಹೆಸರಿನಿಂದ ಕರೆಯಲಾಗಿದೆ. ದೈಹಿಕ ಶಿಕ್ಷಣ ಶಿಕ್ಷಕರ ತರಬೇತಿ ಕೋರ್ಸ್‌ನ್ನು ಸಿ.ಪಿ.ಎಡ್. ಬದಲು ಡಿ.ಪಿ.ಎಡ್. ಎಂದು ಪುನರ್ ನಾಮಕರಣಗೊಳಸಲಾಗಿದೆ. ಮೊದಲು ಟಿ.ಸಿ.ಹೆಚ್/ಸಿ.ಪಿ.ಎಡ್‌ಗೆ ಪ್ರವೇಶ ಪಡೆಯಲು ಎಸ್.ಎಸ್.ಎಲ್.ಸಿ. ಉತ್ತೀರ್ಣತೆ ಸಾಕಾಗಿತ್ತು. ಶಿಕ್ಷಣದ ಗುಣಮಟ್ಟ ಸುಧಾರಣೆಗೆ ಪೂರಕವಾಗಿ ಶಿಕ್ಷಕರ ಗುಣಮಟ್ಟವನ್ನು ಉತ್ತಮಪಡಿಸುವ ದೃಷ್ಟಿಯಿಂದ ಈಗ ಕೆಲವು ವರ್ಷಗಳಿಂದ ಪಿ.ಯು.ಸಿ. ಉತ್ತೀರ್ಣತೆಯನ್ನು ನಿಗದಿಪಡಿಸಲಾಗಿದೆ. ೨ ವರ್ಷದ ಅವಧಿಯ ಈ ಕೋರ್ಸಿಗೆ ಪ್ರವೇಶ ಪಡೆಯಲು ಸಂಬಂಧಪಟ್ಟ ಟಿ.ಟಿ.ಐ. ಮೂಲಕ ಇಲಾಖೆಯ ಕೇಂದ್ರೀಕೃತ ದಾಖಲಾತಿ ಘಟಕಕ್ಕೆ ಅರ್ಜಿಗಳನ್ನು ಸಲ್ಲಿಸಬೇಕು. ಪಿ.ಯು.ಸಿ.. ಪರೀಕ್ಷೆಯ ಅಂಕಗಳ ಶೇಕಡಾವಾರು ಮತ್ತು ಮೀಸಲಾತಿ ನಿಯಮಗಳ ಆಧಾರದ ಮೇಲೆ ಆಯ್ಕೆ ಮಾಡಿ ಕೌನ್ಸಿಲಿಂಗ್ ಮೂಲಕ ಸೀಟುಗಳನ್ನು ಅಲಾಟ್ ಮಾಡಲಾಗುತ್ತದೆ. ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು ಪರೀಕ್ಷೆ ನಡೆಸಿ ಪ್ರಮಾಣ ಪತ್ರಗಳನ್ನು ನೀಡುವ ಪ್ರಾಧಿಕಾರವಾಗಿದೆ.

**ಕೋಷ್ಟಕ ೧೦.೧೮: ಪ್ರಸ್ತುತ ಇರುವ ಸೇವಾ ಪೂರ್ವ ಪ್ರಾಥಮಿಕ ಶಿಕ್ಷಕ ತರಬೇತಿ ಸಂಸ್ಥೆಗಳು/ಡಿ.ಎಡ್ ಕಾಲೇಜುಗಳು**

| | | |
|---|---|---|
| ೧ | ಸರ್ಕಾರಿ ವಲಯದ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಕೇಂದ್ರಗಳು (ಡಯಟ್) | ೨೬ |
| ೨ | ಸರ್ಕಾರಿ ಶಿಕ್ಷಕ ತರಬೇತಿ ಕೇಂದ್ರಗಳು (ಡಿ.ಎಡ್ ಕಾಲೇಜುಗಳು) | ೧೧ |
| ೩ | ಖಾಸಗಿ ಅನುದಾನಿತ ಶಿಕ್ಷಕ ತರಬೇತಿ ಕೇಂದ್ರಗಳು (ಡಿ.ಎಡ್ ಕಾಲೇಜುಗಳು) | ೩೯ |
| ೪ | ಖಾಸಗಿ ಅನುದಾನರಹಿತ ಶಿಕ್ಷಕ ತರಬೇತಿ ಕೇಂದ್ರಗಳು (ಡಿ.ಎಡ್ ಕಾಲೇಜುಗಳು) | ೭೪೯ |
| | ಒಟ್ಟು | ೮೨೫ |
| | ಡಿ.ಪಿಎಡ್ ಕಾಲೇಜುಗಳು | |
| ೧ | ಸರ್ಕಾರಿ | ೦೧ |
| ೨ | ಖಾಸಗಿ ಅನುದಾನಿತ | ೦೩ |
| ೩ | ಖಾಸಗಿ ಅನುದಾನರಹಿತ | ೨೭ |
| | ಒಟ್ಟು | ೩೧ |

**ಷರಾ: ೧೯೯೨ ರಿಂ ೨೦೧೫ ರ ವರೆಗೆ ವಿವಿಧ ದಿನಾಂಕಗಳಲ್ಲಿ ೨೪ ಸರ್ಕಾರಿ ಶಿಕ್ಷಕ ತರಬೇತಿ ಸಂಸ್ಥೆಗಳನ್ನು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಕೇಂದ್ರ (ಡಯಟ್) ಎಂದು ಉನ್ನತೀಕರಿಸಲಾಗಿದೆ ಹಾಗೂ ೧೦ ಡಯಟ್ ಗಳನ್ನು ಹೊಸದಾಗಿ ಮಂಜೂರು ಮಾಡಿ ಸ್ಥಾಪಿಸಲಾಗಿದೆ.ಮಾಹಿತಿ ಆಧಾರ: ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ**

**ಬ್ಲಾಕ್ ಸಂಪನ್ಮೂಲ ಕೇಂದ್ರಗಳು:** ೧೯೯೪ ರ ಪೂರ್ವದಲ್ಲಿ ರಾಜ್ಯದಲ್ಲಿ ಇಂತಹ ವ್ಯವಸ್ಥೆ ಇರಲಿಲ್ಲ. ೧೯೯೪-೯೫ರಲ್ಲಿ ಪ್ರಾರಂಭವಾದ ಡಿ.ಪಿ.ಇ.ಪಿ. ಕಾರ್ಯಕ್ರಮದ ಅಡಿಯಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಸೇವಾ ನಿರತ ತರಬೇತಿಗಳನ್ನು ನಡೆಸಲು ಈ ವ್ಯವಸ್ಥೆಯನ್ನು ಸ್ಥಾಪನೆ ಮಾಡಲಾಯಿತು. ತಮ್ಮ ಬ್ಲಾಕಿಗೆ ಸಂಬಂಧಿಸಿದಂತೆ – ಕಲಿಕಾ ಗುಣಮಟ್ಟ ಸುಧಾರಣೆ ಇವರ ಪ್ರಮುಖ ಜವಾಬ್ದಾರಿಯಾಗಿದೆ. ಪ್ರಾಥಮಿಕಶಾಲಾ ಹಂತದ ಕಲಿಕೆಯ ಸಾಮರ್ಥ್ಯಗಳು ಮತ್ತು ಕಲಿಕಾಂಶಗಳ ಕುರಿತು ಅಧ್ಯಾಪಕರಿಗೆ ಮಾರ್ಗದರ್ಶನ ನೀಡುವುದು. ಸೇವಾ ನಿರತ ಶಿಕ್ಷಕರಿಗೆ ನಿಗದಿಪಡಿಸಿದ ದಿನಗಳ ತರಬೇತಿಗಳನ್ನು ಆಯೋಜಿಸುವುದು. ಶೈಕ್ಷಣಿಕ ವರ್ಷದ ಆರಂಭದಲ್ಲಿ ಸೇತುಬಂಧ ಕಾರ್ಯಕ್ರಮ, ಘಟಕ ಅಥವಾ ಸಾಮರ್ಥ್ಯ ಬೋಧನೆಯ ತರುವಾಯ ಪರಿಹಾರ ಬೋಧನೆ ಕಾರ್ಯಕ್ರಮಗಳ ಉಸ್ತುವಾರಿ ಮಾಡುವುದು. ಅಧ್ಯಾಪಕರಲ್ಲಿ ವೃತ್ತಿಪರತೆ ಮತ್ತು ವೃತ್ತಿ ಬೆಳವಣಿಗೆಯ ದೃಷ್ಟಿಯಿಂದ, ವಿಚಾರ ಸಂಕಿರಣ, ಶೈಕ್ಷಣಿಕ ಮೌಲ್ಯವುಳ್ಳ ಪ್ರದರ್ಶನಗಳು, ಅಧ್ಯಯನ ಪ್ರವಾಸ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಂಘಟಿಸುವುದು ಈ ಕೇಂದ್ರಗಳ ಜವಾಬ್ದಾರಿಯಾಗಿದೆ.

**ಕ್ಲಸ್ಟರ್ ಸಂಪನ್ಮೂಲ ಕೇಂದ್ರಗಳು:** ಇದಕ್ಕೆ ಪೂರ್ವದಲ್ಲಿ ನಮ್ಮ ರಾಜ್ಯದಲ್ಲಿ ಟೀಚರ್ ಅಸೋಸಿಯೇಷನ್ ಸೆಂಟರ್‌ಗಳು ಎಂಬ ಹೆಸರಿನಲ್ಲಿ ಹೋಬಳಿ ಮಟ್ಟದ ಒಂದು ಕೇಂದ್ರ ಸ್ಥಳದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರು ಪ್ರತಿ ತಿಂಗಳು ಒಂದು ದಿನ ಸಭೆ ಸೇರುವ ವ್ಯವಸ್ಥೆ ಇತ್ತು. ಶೈಕ್ಷಣಿಕ ವಿಷಯಗಳನ್ನು ಚರ್ಚಿಸುವ ಸಲುವಾಗಿ ಹಾಗೂ ಶಿಕ್ಷಕರು ವೇತನವನ್ನು ಪಡೆಯುವ ಸಲುವಾಗಿ ಈ ರೀತಿ ಸಭೆ ಸೇರುವ ದಿನವನ್ನು ಅನ್ಯ ಕಾರ್ಯದ ದಿನವೆಂದು ಪರಿಗಣಿಸಲು ಇಲಾಖೆಯು ಅನುಮತಿ ನೀಡಿತ್ತು. ಈ ಮಾಸಿಕ ಸಭೆಗಳಲ್ಲಿ ನುರಿತ ಶಿಕ್ಷಕರಿಂದ ಮಾದರಿ ಪಾಠ ಬೋಧನೆಯ ಒಂದು ಪ್ರಾತ್ಯಕ್ಷಿಕೆ ಮತ್ತು ಇಲಾಖೆಯ ಸುತ್ತೋಲೆಗಳನ್ನು ಓದಿ ತಿಳಿಸುವ ಪ್ರಕ್ರಿಯೆ ನಡೆಯುತ್ತಿತ್ತು.

ಕ್ಲಸ್ಟರ್ ಸಂನ್ಮೂಲ ಕೇಂದ್ರಗಳ ಪರಿಕಲ್ಪನೆ ಪ್ರಥಮವಾಗಿ ಡಿ.ಪಿ.ಇ.ಪಿ. ಕಾರ್ಯಕ್ರಮದ ಅಡಿಯಲ್ಲಿ ಪ್ರಾರಂಭವಾಯಿತು. ೧೫-೨೦ ಶಾಲೆಗಳ ೫೦-೭೫ ಶಿಕ್ಷಕರಿರುವ ಭೌಗೋಳಿಕ ಘಟಕದ ಒಂದು ಕೇಂದ್ರ ಸ್ಥಳದಲ್ಲಿ ಶಿಕ್ಷಕರಿಗೆ ತಮ್ಮ ಬೋಧನಾ ಕೌಶಲಗಳನ್ನು ಉತ್ತಮಪಡಿಸಿಕೊಳ್ಳಲು ಅನುಕೂಲವಾಗುವಂತೆ ಸಭೆ ಸೇರಿ ಚರ್ಚಿಸಲು, ಪರಸ್ಪರ ವಿಚಾರ ವಿನಿಮಯ ಮಾಡಿಕೊಳ್ಳಲು, ಹೊಸ ವಿಧಾನಗಳು, ಬೋಧನಾ ಕಲಿಕಾ ಉಪಕರಣಗಳನ್ನು ಪ್ರದರ್ಶಿಸಲು ಅನುಕೂಲವಾಗುವಂತೆ ಒಂದು ಸಂಪನ್ಮೂಲ ಕೇಂದ್ರವನ್ನು ಅಭಿವೃದ್ಧಿಪಡಿಸುವುದು ಇದರ ಉದ್ದೇಶವಾಗಿತ್ತು. ಈ ವ್ಯವಸ್ಥೆಯಲ್ಲಿ ಒಬ್ಬ ಪ್ರಾಥಮಿಕ ಶಾಲಾ ಶಿಕ್ಷಕರ ವೃಂದಕ್ಕೆ ಸೇರಿದ ಸಂಪನ್ಮೂಲ ವ್ಯಕ್ತಿ ಇರುತ್ತಾರೆ. ಈ ಕೇಂದ್ರಗಳಿಗೆ ಕಟ್ಟಡ, ಪೀಠೋಪಕರಣ, ಪಾಠೋಪಕರಣ, ಗ್ರಂಥಾಲಯ ಸೌಲಭ್ಯಗಳನ್ನು ಒದಗಿಸಲು ಅನುದಾನಗಳನ್ನು ಒದಗಿಸಲಾಯಿತು. ಮಾಸಿಕ ಸಭೆಗಳಿಗೆ ಮಾದರಿ ಕಾರ್ಯಸೂಚಿಯನ್ನು ನಿಗದಿಪಡಿಸಲಾಯಿತು. ಸಭೆಯಲ್ಲಿ ಭಾಗವಹಿಸುವ ಶಿಕ್ಷಕರು ಅರ್ಥಪೂರ್ಣ ಚರ್ಚೆಯಲ್ಲಿ ಭಾಗವಹಿಸಲು ಪ್ರೇರೇಪಿಸುವ ಉದ್ದೇಶದಿಂದ ಅವರಿಗೆ ಮಾಸಿಕ ಸಭೆಗೆ ಬಂದು ಹೋಗಲು ವಾಸ್ತವಿಕ ಪ್ರಯಾಣ ವೆಚ್ಚ ಹಾಗೂ ಮಧ್ಯಾಹ್ನ ಊಟವನ್ನು ನೀಡಲು ಅವಕಾಶ ಕಲ್ಪಿಸಲಾಗಿತ್ತು.

**೧೯೯೯ರ ತರುವಾಯ ಪ್ರಾರಂಭವಾದ ಕೆಲವು ನೂತನ ಶೈಕ್ಷಣಿಕ ಕಾರ್ಯಕ್ರಮಗಳು:** ಈ ಅವಧಿಯಲ್ಲಿ ಕರ್ನಾಟಕ ಸರ್ಕಾರವು ಶಿಕ್ಷಣದ ನೀತಿ ಮತ್ತು ಉದ್ದೇಶಗಳನ್ನು ಪುರುಚ್ಚರಿಸಿ ಈ ಕೆಳಕಂಡಂತೆ ಘೋಷಣೆ ಮಾಡಿಕೊಂಡಿತು.ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ-ಪ್ರತಿ ಮಗುವೂ ಶಾಲೆಯಲ್ಲಿರಬೇಕು, ಪ್ರತಿ ಶಿಕ್ಷಕನೂ ಶಾಲೆಯಲ್ಲಿರಬೇಕು, ಪ್ರತಿ ಮಗುವೂ ಗೊತ್ತುಪಡಿಸಿದ ಕಲಿಕಾ ಮಟ್ಟಗಳನ್ನು ತಲುಪಬೇಕು, ಶಾಲೆಯ ಅಭಿವೃದ್ಧಿ ಹಾಗೂ ನಿಯಂತ್ರಣದಲ್ಲಿ ಸಮುದಾಯವು ಪಾಲ್ಗೊಳ್ಳುವಂತೆ ಪ್ರಾಥಮಿಕ ಶಿಕ್ಷಣವನ್ನು ಜನಾಂದೋಳನವಾಗಿಸುವುದು, ೬ರಿಂದ ೧೪ ವರ್ಷ ವಯಸ್ಸಿನ ಎಲ್ಲ ಮಕ್ಕಳಿಗೆ ಶಾಲೆಯು ಸಮೀಪದಲ್ಲಿ ಲಭ್ಯವಿರಬೇಕು, ಪರಿಶಿಷ್ಟ ಜಾತಿ/ವರ್ಗ ಹಾಗೂ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ವಿಶೇಷ ಆದ್ಯತೆ.ಪ್ರೌಢ ಶಿಕ್ಷಣ ಕ್ಷೇತ್ರದಲ್ಲಿ -ವಿದ್ಯಾರ್ಥಿಗಳ ಉನ್ನತ ಶೈಕ್ಷಣಿಕ ಅಧ್ಯಯನಕ್ಕೆ ಅರ್ಹರಾಗುವಂತೆ ಮಾಡಲು ಪ್ರೌಢ ಶಿಕ್ಷಣ ಹಂತದಲ್ಲಿ ಸಾಮಾನ್ಯ ಶಿಕ್ಷಣವನ್ನು ನೀಡುವುದು, ವೃತ್ತಿ ಶಿಕ್ಷಣ ಅಥವಾ ಔದ್ಯೋಗಿಕ ಶಿಕ್ಷಣಕ್ಕೆ ಅರ್ಹರನ್ನಾಗಿಸುವುದು.

**ದಾಖಲಾತಿ ಮತ್ತು ಹಾಜರಾತಿ ಉತ್ತಮಪಡಿಸಲು ಮುಂದುವರಿಸಲಾದ ಪ್ರೋತ್ಸಾಹಕ ಯೋಜನೆಗಳು** : ಉಚಿತ ಸಮವಸ್ತ್ರ, ಉಚಿತ ಪಠ್ಯಪುಸ್ತಕ, ಶಾಲಾ ಬ್ಯಾಗ್, ಮಧ್ಯಾಹ್ನ ಉಪಾಹಾರ, ೧ರಿಂದ ೧೨ನೇ ತರಗತಿವರೆಗೆ ಎಲ್ಲ ವರ್ಗದ ಹೆಣ್ಣುಮಕ್ಕಳಿಗೆ ಸರ್ಕಾರಿ ಶಾಲೆಗಳಲ್ಲಿ ಉಚಿತ ಶಿಕ್ಷಣ, ಈ ಉದ್ದೇಶಗಳಿಗೆ ಪೂರಕವಾಗಿ ಕೆಳಕಂಡ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಲಾಯಿತು.

**ಸಮುದಾಯದತ್ತ ಶಾಲಾ ಕಾರ್ಯಕ್ರಮ:** ಈ ಕಾರ್ಯಕ್ರಮದಲ್ಲಿ ಪ್ರತಿ ತಿಂಗಳೂ ಶಿಕ್ಷಣ ಸಚಿವರು, ಕಾರ್ಯದರ್ಶಿಯವರು, ಆಯುಕ್ತರು, ಇಲಾಖೆಯ ಎಲ್ಲ ಹಿರಿಯ ಮತ್ತು ಕಿರಿಯ ಅಧಿಕಾರಿಗಳು ಮತ್ತು ಪ್ರೌಢಶಾಲಾ ಶಿಕ್ಷಕರು ಪ್ರಾಥಮಿಕ ಶಾಲಾ ಶಿಕ್ಷಕರೊಂದಿಗೆ ಗ್ರಾಮಗಳಲ್ಲಿ ವಾಸ್ತವ್ಯ ಮಾಡಿ ಸಮುದಾಯದೊಂದಿಗೆ ಮತ್ತು ಪೋಷಕರೊಂದಿಗೆ ಶಿಕ್ಷಣದ ಗುಣಮಟ್ಟದ ಅಭಿವೃದ್ಧಿಯ ಪ್ರಜ್ಞೆಯನ್ನು ಮೂಡಿಸುವ ಸಲುವಾಗಿ ಸಮಾಲೋಚಿಸುವಂತೆ ನಿರೀಕ್ಷಿಸಲಾಗಿತ್ತು. ತದನಂತರ ಪ್ರೌಢಶಾಲೆಗಳಿಗೂ ವಿಸ್ತರಿಸಲಾಯಿತು. ಕ್ರಮೇಣ ಈ ಕಾರ್ಯಕ್ರಮ ವರ್ಷಕ್ಕೆ ೪ ಬಾರಿ, ೩ ಬಾರಿ ಹೀಗೆ ಮಾರ್ಪಾಡುಗೊಂಡು ಕಡೆಗೆ ಈಗ ವರ್ಷಕ್ಕೆರಡುಬಾರಿ ಅನುಷ್ಠಾಗೊಳ್ಳುತಿದೆ.

**ಚೈತ್ರದ ಚಿಗುರು/ಪ್ರತಿಭಾ ಕಾರಂಜಿ/ಕ್ರೀಡಾ ಆಟೋಟಗಳಿಗೆ ಹೆಚ್ಚಿನ ಪ್ರೋತ್ಸಾಹ:** ಶಾಲಾಮಕ್ಕಳಲ್ಲಿ ಹುದುಗಿರುವ ಸೃಜನಶೀಲತೆಯನ್ನು ಪ್ರೋತ್ಸಾಹಿಸಲು ಬೇಸಿಗೆ ರಜಾದಿನಗಳಲ್ಲಿ ಕ್ಷೇತ್ರ, ಜಿಲ್ಲೆ ಮತ್ತು ರಾಜ್ಯ ಮಟ್ಟಗಳಲ್ಲಿ ಚಿತ್ರಕಲೆ, ನೃತ್ಯ, ಮತ್ತು ಸಂಗೀತ ವಿಷಯಗಳಲ್ಲಿ ಬೇಸಿಗೆ ಶಿಬಿರ ಹಾಗೂ ಸ್ಪರ್ಧೆಗಳನ್ನು ನಡೆಸಲಾಗುತ್ತಿದೆ. ಶಾಲಾ ಹಂತದಿಂದ, ಕ್ಲಸ್ಟರ್, ವಲಯ, ಜಿಲ್ಲೆ ಮತ್ತು ರಾಜ್ಯ ಮಟ್ಟದಲ್ಲಿ ಪ್ರತಿಭಾಕಾರಂಜಿ ಹೆಸರಿನಲ್ಲಿ ಸಾಂಸ್ಕೃತಿಕ ಸ್ಪರ್ಧೆಗಳನ್ನು ಏರ್ಪಡಿಸಿ ವಿಜೇತರಿಗೆ ಬಹುಮಾನಗಳನ್ನು ನೀಡುವ ಕಾರ್ಯಕ್ರಮ ಇದೇ ಅವಧಿಯಲ್ಲಿ ಪ್ರಾರಂಭವಾಗಿ ಇನ್ನೂ ಜಾರಿಯಲ್ಲಿದೆ. ಶಾಲಾ ಹಂತದಿಂದ, ಕ್ಲಸ್ಟರ್, ವಲಯ, ಜಿಲ್ಲೆ ಮತ್ತು ರಾಜ್ಯ ಮಟ್ಟದಲ್ಲಿ ಕ್ರೀಡೆ, ಆಟೋಟಗಳ ಸ್ಪರ್ಧೆಗಳನ್ನು ಏರ್ಪಡಿಸಿ ವಿಜೇತರಿಗೆ ಆಕರ್ಷಕ ಬಹುಮಾನಗಳನ್ನು ನೀಡುವ ಕಾರ್ಯಕ್ರಮ ಈ ಅವಧಿಯಲ್ಲಿ ಪ್ರಾರಂಭವಾಗಿ ಇನ್ನೂ ಜಾರಿಯಲ್ಲಿದೆ.

**ಚಿಣ್ಣರ ಅಂಗಳ ಬೇಸಿಗೆ ಸೇತು ಬಂಧ ಶಿಬಿರಗಳು:** ಶಾಲೆ ಬಿಟ್ಟು ಶಾಲೆಯಿಂದ ಹೊರಗುಳಿದ, ದಾಖಲಾಗದೇ ಇರುವ ಎಲ್ಲ ಮಕ್ಕಳನ್ನು ಮುಖ್ಯವಾಹಿನಿಗೆ ತರುವ ಉದ್ದೇಶದಿಂದ ಪ್ರಾರಂಭಿಸಲಾದ ಚಿಣ್ಣರ ಅಂಗಳ ಬೇಸಿಗೆ ಶಿಬಿರಗಳು ಈ ಗಲೂ ಸರ್ವ ಶಿಕ್ಷಣ ಅಭಿಯಾನ ಅಡಿಯಲ್ಲಿ ದೊಡ್ಡ ಪ್ರಮಾಣದಲ್ಲಿ ಜಾರಿಗೊಳ್ಳುತ್ತಿವೆ.

**ವಿದ್ಯಾರ್ಥಿ ಕ್ಷೇಮ ವಿಮಾ ಯೋಜನೆ:** ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಕಲ್ಯಾಣ ನಿಧಿ, ರೋಟರಿ ಇಂಟರ್ ನ್ಯಾಷನಲ್ ಸಂಸ್ಥೆ ಮತ್ತು ಓರಿಯೆಂಟಲ್ ಇನ್ಷೂರೆನ್ಸ್ ಕಂಪನಿ ಇವರ ಸಹಯೋಗದಲ್ಲಿ ವಿದ್ಯಾರ್ಥಿ ಕ್ಷೇಮ ವಿಮಾ ಯೋಜನೆಯನ್ನು ಪ್ರಾರಂಭಿಸಲಾಯಿತು. ಸರ್ಕಾರಿ, ಅನುದಾನಿತ, ಅನುದಾನರಹಿತ ಶಾಲೆಗಳ ಮಕ್ಕಳು ಈ ಯೋಜನೆಯ ವ್ಯಾಪ್ತಿಗೆ ಬರುತ್ತಾರೆ. ಅಪಘಾತದಲ್ಲಿ ವಿದ್ಯಾರ್ಥಿಯ ಮರಣ ಅಥವಾ ಸಂಪೂರ್ಣ ಅಂಗವಿಕಲತೆಯಾದಲ್ಲಿ ರೂ.೨೫೦೦೦. ಭಾಗಶಃ ಅಂಗವಿಕಲತೆಯಾದರೆ ರೂ ೧೨,೫೦೦ ಹಾಗೂ ಗರಿಷ್ಠ ರೂ ೧೦೦೦ ಆಸ್ಪತ್ರೆ ವೆಚ್ಚವನ್ನು ಈ ಯೋಜನೆಯ ಅಡಿಯಲ್ಲಿ ಪಡೆಯಲು ಅವಕಾಶವಿದೆ. ಈ ಯೋಜನೆ ಈಗಲೂ ಮುಂದುವರೆದಿದೆ.

**ಮಾಹಿತಿ ಸಿಂಧು- ಕಂಪ್ಯೂಟರ್ ಶಿಕ್ಷಣ:** ಪ್ರಾರಂಭಿಕವಾಗಿ ೨೦೦೦-೦೧ ನೇ ಸಾಲಿನಲ್ಲಿ ೧೦೦೦ ಸರ್ಕಾರಿ ಪ್ರೌಢಶಾಲೆಗಳಲ್ಲಿ ಪ್ರಾರಂಭವಾದ ಕಂಪ್ಯೂಟರ್ ಶಿಕ್ಷಣ ಈಗ ಐ.ಸಿ.ಟಿ. ಅಡಿಯಲ್ಲಿ ಹಂತ ಹಂತವಾಗಿ ಎಲ್ಲ ಸರ್ಕಾರಿ ಮತ್ತು ಅನುದಾನಿತ ಪ್ರೌಢಶಾಲೆಗಳಿಗೆ ವಿಸ್ತರಿಸಲಾಗಿದೆ.

**ಶಾಲಾ ದತ್ತು ಯೋಜನೆ:** ಸರ್ಕಾರಿ ಶಾಲೆಗಳಲ್ಲಿ ಭೌತಿಕ ಸೌಲಭ್ಯಗಳನ್ನು ಅಭಿವೃದ್ಧಿ ಪಡಿಸುವ ಸಲುವಾಗಿ ಮತ್ತು ಗುಣ ಮಟ್ಟದ ಶಿಕ್ಷಣ ನೀಡುವ ಸಲುವಾಗಿ ೨೦೦೦-೦೧ ರಲ್ಲಿ ಈ ಯೋಜನೆಯನ್ನು ಪ್ರಾರಂಭಿಸಲಾಯಿತು. ಒಂದೇ ವರ್ಷದಲ್ಲಿ ೨೨೧೫ಕ್ಕೂ ಹೆಚ್ಚು ಶಾಲೆಗಳನ್ನು ವಿವಿಧ ಗಣ್ಯರು ಮತ್ತು ಸರ್ಕಾರೇತರ ಸಂಸ್ಥೆಗಳು ದತ್ತು ಸ್ವೀಕಾರ ಮಾಡಿದ ದಾಖಲೆಯಿದೆ.

**ಆರ್.ಐ.ಡಿ.ಎಫ್. ನೆರವಿನಿಂದ ಶಾಲಾ ಕಟ್ಟಡಗಳ ನಿರ್ಮಾಣ:** ಶಾಲೆಗಳಿಗೆ ಕೊಠಡಿಗಳ ಕೊರತೆಯನ್ನು ನೀಗಿಸುವ ಸಲುವಾಗಿ ನಬಾರ್ಡ್ ನಿಂದ ಹಣಕಾಸಿನ ನೆರವು ಪಡೆಯಲು ಪ್ರಾರಂಭವಾದ ಯೋಜನೆ ಇನ್ನೂ ಮುಂದುವರೆದಿದೆ.

**ಹೊಸ ಶೈಕ್ಷಣಿಕ ಜಿಲ್ಲೆ ಮತ್ತು ವಲಯಗಳ ಸ್ಥಾಪನೆ:** ಶೈಕ್ಷಣಿಕ ಆಡಳಿತ ವ್ಯವಸ್ಥೆಯ ಗಾತ್ರ ದಿನದಿಂದ ದಿನಕ್ಕೆ ವಿಸ್ತಾರವಾಗುತ್ತಿದೆ. ಶಾಲೆಗಳು, ವಿದ್ಯಾರ್ಥಿಗಳು ಮತ್ತು ಶಿಕ್ಷಕರ ಸಂಖ್ಯೆಯಲ್ಲಿ ಗಣನೀಯ ಹೆಚ್ಚಳವಾಗಿದೆ ಇದನ್ನು ಗಮನಿಸಿದ ಸರ್ಕಾರ ೨೦೦೧ ರಲ್ಲಿ ಬೆಳಗಾವಿ, ಕಲಬುರಗಿ, ತುಮಕೂರು ಮತ್ತು ಕೋಲಾರ ಕಂದಾಯ ಜಿಲ್ಲೆಗಳನ್ನು ವಿಭಜಿಸಿ ಕ್ರಮವಾಗಿ ಚಿಕ್ಕೋಡಿ, ಯಾದಗಿರಿ, ಮಧುಗಿರಿ ಮತ್ತು ಚಿಕ್ಕಬಳ್ಳಾಪುರ ಈ ನಾಲ್ಕು ಶೈಕ್ಷಣಿಕ ಜಿಲ್ಲೆಗಳನ್ನು ಸ್ಥಾಪಿಸಲಾಯಿತು. ಈ ಜಿಲ್ಲೆಗಳಲ್ಲಿ ಉಪನಿರ್ದೇಶಕರ ಕಚೇರಿಗಳನ್ನು ಸ್ಥಾಪಿಸಲು ಬೇಕಾದ ಮೂಲಭೂತ ಸೌಲಭ್ಯ ಮತ್ತು ಅಗತ್ಯ ಸಿಬ್ಬಂಧಿ ಹುದ್ದೆಗಳನ್ನು ಒದಗಿಸಲಾಯಿತು. ಈ ಪೈಕಿ ಚಿಕ್ಕಬಳ್ಳಾಪುರ ೨೦೦೭ರಲ್ಲಿ ಸ್ವತಂತ್ರ ಜಿಲ್ಲೆಯಾಯಿತು. ಇದರ ಜೊತೆಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯನ್ನು ವಿಭಜಿಸಿ ರಾಮನಗರವನ್ನು ಹೊಸ ಜಿಲ್ಲೆಯನ್ನಾಗಿ ಮಾಡಲಾಗಿದೆ. ೨೦೦೯-೧೦ ಸುಮಾರಿಗೆ ಉತ್ತರ ಕನ್ನಡ ಜಿಲ್ಲೆಯನ್ನು ವಿಭಜಿಸಿ

ಶಿರಸಿ ಶೈಕ್ಷಣಿಕ ಜಿಲ್ಲೆಯನ್ನು ರಚಿಸಲಾಗಿದೆ. ಪ್ರಸ್ತುತ ರಾಜ್ಯದಲ್ಲಿ ೩೪ ಶೈಕ್ಷಣಿಕ ಜಿಲ್ಲೆಗಳಿವೆ. ಅದೇ ರೀತಿ ಆಡಳಿತದ ದೃಷ್ಟಿಯಿಂದ ದೊಡ್ಡದಾದ ಶೈಕ್ಷಣಿಕ ವಲಯಗಳನ್ನು ವಿಭಜಿಸಿ ಹೊಸ ಶೈಕ್ಷಣಿಕ ವಲಯಗಳನ್ನು ರಚಿಸಲಾಗಿದೆ. ಹಾಲೀ ರಾಜ್ಯದಲ್ಲಿರುವ ಶೈಕ್ಷಣಿಕ ವಲಯಗಳ ಸಂಖ್ಯೆ: ಒಟ್ಟು ೨೧೧

**ಆಕಾಶವಾಣಿ ಫೋನ್ ಇನ್ ಕಾರ್ಯಕ್ರಮ:** ಪ್ರತಿ ೧೫ ದಿಗಳಗೊಮ್ಮೆ ಆಕಾಶವಾಣಿ ಸ್ಟುಡಿಯೋದಲ್ಲಿ, ಸಚಿವರು, ಶಿಕ್ಷಣ ಕಾರ್ಯದರ್ಶಿಗಳು ಮತ್ತು ನಿರ್ದೇಶಕರುಗಳು ಭಾಗವಹಿಸಿ ದೂರವಾಣಿ ಮುಖಾಂತರ ಸಾರ್ವಜನಿಕರು ಪ್ರಸ್ತಾಪಿಸುವ ಸಮಸ್ಯೆಗಳಿಗೆ ಪರಿಹಾರವನ್ನು ಒದಗಿಸಲಾಗುತ್ತಿತ್ತು. ಸಾರ್ವಜನಿಕರು ದೂರವಾಣಿ ಮೂಲಕ ತಮ್ಮ ಸಮಸ್ಯೆಗಳಲ್ಲದೆ ಶಿಕ್ಷಣ ಕ್ಷೇತ್ರದ ಸಮಸ್ಯೆಗಳಿಗೆ ಪರಿಹಾರ ಪಡೆಯುವುದಲ್ಲದೆ ತಮ್ಮದೇ ಆದ ಸಲಹೆ ಸೂಚನೆಗಳನ್ನು ನೀಡಲು ಅವಕಾಶವಿತ್ತು. ಈ ಕಾರ್ಯಕ್ರಮ ಈಗಲೂ ಆಗಾಗ ನಡೆಯುತ್ತಿರುತ್ತೆ ಆದರೆ ಮೊದಲಿನಷ್ಟು ವ್ಯಾಪಕವಾಗಿಲ್ಲ.

**ಶಿಕ್ಷಕರ ಕಲ್ಯಾಣ ನಿಧಿ ಮತ್ತು ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ:೧೯೬೩ ರಲ್ಲಿ. ಪ್ರಾರಂಭವಾಗಿರುವ ಈ ನಿಧಿಗಳ ಉದ್ದೇಶ:** ವಿವಿಧ ಯೋಜನೆಗಳ ಮೂಲಕ ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಆರ್ಥಿಕ ಸಹಾಯವನ್ನು ಒದಗಿಸುವುದು. ಮತ್ತು ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಅಭ್ಯುದಯಕ್ಕಾಗಿ ಹಲವು ಪ್ರೋತ್ಸಾಹಕ ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು. ರಾಜ್ಯ ಸರ್ಕಾರದ ಶಿಕ್ಷಣ ಸಚಿವರು ಈ ನಿಧಿಗಳ ಅಧ್ಯಕ್ಷರು. ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರು ಕಾರ್ಯದರ್ಶಿ ಮತ್ತು ಖಜಾಂಚಿಯಾಗಿರುತ್ತಾರೆ. ಅಲ್ಲದೆ, ಶಿಕ್ಷಣ ಇಲಾಖೆಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆಯ ಕಾರ್ಯದರ್ಶಿ, ಅಧ್ಯಕ್ಷರು ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ, ರಾಜ್ಯ ಪ್ರೌಢಶಾಲಾ ಶಿಕ್ಷಕರ ಸಂಘ, ಪ್ರೌಢಶಾಲಾ ಮುಖ್ಯೋಪಾಧ್ಯಾಯರ ಮತ್ತು ಪದವಿ ಪೂರ್ವ ಕಾಲೇಜು ಪ್ರಾಂಶುಪಾಲರ ಸಂಘ, ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕಾಲೇಜು ಶಿಕ್ಷಣ ಇಲಾಖೆ, ಮತ್ತು ರಾಜ್ಯ ಸರ್ಕಾರದಿಂದ ನಾಮ ನಿರ್ದೇಶನ ಮಾಡಲಾದ ಮೂವರು ಶಿಕ್ಷಣ ತಜ್ಞರು ಸದಸ್ಯರಾಗಿರುತ್ತಾರೆ.

**ಪ್ರಮುಖ ಕಾರ್ಯಕ್ರಮಗಳು:** ರಾಷ್ಟ್ರೀಯ ಶಿಕ್ಷಕರ ಪ್ರತಿಷ್ಠಾನ:ಗಂಭೀರವಾದ ಖಾಯಿಲೆಗಳಿಂದ ನರಳುವ ಶಿಕ್ಷಕರು ಮತ್ತು ಅವರ ಅವಲಂಬಿತರಿಗೆ ೩,೦೦೦ ದಿಂದ ಗರಿಷ್ಠ ೧೫,೦೦೦ ರೂಪಾಯಿಗಳವರೆಗೆ ವೈದ್ಯಕೀಯ ಚಿಕಿತ್ಸೆಗಾಗಿ ಆರ್ಥಿಕ ಸಹಾಯವನ್ನು ಒದಗಿಸಲಾಗುತ್ತದೆ. 'ಡಿ', 'ಇ', 'ಎಫ್' ಎಂದು ವರ್ಗೀಕರಿಸಿದ ಖಾಯಿಲೆಗಳಿಂದ ನರಳುತ್ತಿದ್ದು ಆಸ್ಪತ್ರೆ ಮತ್ತು ನರ್ಸಿಂಗ್ ಹೋಂ ಗಳಲ್ಲಿ ಚಿಕಿತ್ಸೆ ಪಡೆಯುವ ಶಿಕ್ಷಕರು ಅಥವಾ ಅವರ ಒಬ್ಬರು ಅವಲಂಬಿತರಿಗೆ ವರ್ಷಕ್ಕೊಮ್ಮೆ ಈ ಸೌಲಭ್ಯ ವನ್ನು ನೀಡಲಾಗುವುದು.ಸೇವೆಯಲ್ಲಿದ್ದಾಗ ಮೃತರಾಗುವ ಶಿಕ್ಷಕರ ಕುಟುಂಬವರ್ಗದವರಿಗೆ ಅವರ ಕುಟುಂಬ ಪಿಂಚಣಿ ಮಂಜೂರಾತಿ ಇತ್ಯರ್ಥವಾಗುವ ಮೊದಲು ೭,೦೦೦ ರೂಪಾಯಿಗಳನ್ನು ಮತ್ತು ಸೇವೆಯಿಂದ ನಿವೃತ್ತರಾದ ನಂತರ ಮೃತರಾದ ಶಿಕ್ಷಕರ ಕುಟುಂಬದವರಿಗೆ ೨,೦೦೦ ರೂಪಾಯಿಗಳ ಸಹಾಯಧನವನ್ನು ನೀಡಲಾಗುತ್ತದೆ. ಇದಕ್ಕಾಗಿ ಶಿಕ್ಷಕರು ಮೃತರಾದ ೧೮೦ ದಿನಗಳ ಒಳಗೆ ಮರಣ ಪ್ರಮಾಣ ಪತ್ರ ಮತ್ತು ವಾರಸುದಾರ ಪ್ರಮಾಣ ಪತ್ರ ವನ್ನು ಲಗತ್ತಿಸಿ ಅರ್ಜಿ ಸಲ್ಲಿಸಬೇಕು.ಶಿಕ್ಷಕರ ಮಕ್ಕಳು ಪದವಿ ಪೂರ್ವ, ಪದವಿ ಮತ್ತು ಡಿಪ್ಲೊಮಾ ತರಗತಿಗಳಲ್ಲಿ ವ್ಯಾಸಂಗ ಮಾಡುವವವರಿಗೆ ರೂ ೩೦೦ ರಿಂದ ೧,೦೦೦ ರೂಪಾಯಿಗಳವರೆಗೆ ಉನ್ನತ ಶಿಕ್ಷಣಕ್ಕಾಗಿ ಆರ್ಥಿಕ ಸಹಾಯವನ್ನು ನೀಡಲಾಗುತ್ತದೆ. ಈ ಸೌಲಭ್ಯವು ಒಂದು ವರ್ಷದಲ್ಲಿ ಒಂದು ಮಗುವಿಗೆ ಮತ್ತು ತಂದೆ ತಾಯಿ ಇಬ್ಬರೂ ಶಿಕ್ಷಕರಾಗಿದ್ದಲ್ಲಿ ಇಬ್ಬರಿಂದ ಸೇರಿ ಒಂದು ಮಗುವಿಗೆ ಮಾತ್ರ ಸೀಮಿತಗೊಳಿಸಲಾಗುತ್ತದೆ.

**ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ:** ಜಿಲ್ಲಾ ಮಟ್ಟದಲ್ಲಿ ಉತ್ತಮ ಸೇವೆ ಸಲ್ಲಿಸಿದ ತಲಾ ಐದು ಪ್ರಾಥಮಿಕ ಮತ್ತು ಐದು ಪ್ರೌಢಶಾಲಾ ಶಿಕ್ಷಕರನ್ನು ಗುರುತಿಸಿ ಪ್ರತಿ ವರ್ಷ ಶಿಕ್ಷಕರ ದಿನಾಚರಣೆಯಂದು ಪ್ರಶಸ್ತಿಗಳನ್ನು ನೀಡಲಾಗುತ್ತದೆ. ಶಿಕ್ಷಕರ ಮಕ್ಕಳಿಗೆ ನೀಡಲಾಗುವ ಪ್ರತಿಭಾವಂತ ವಿದ್ಯಾರ್ಥಿವೇತನಗಳು: ೧) ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಿದವರಿಗೆ ಒಂದು ಜಿಲ್ಲೆಗೆ ೧೦ ರಂತೆ ತಲಾ ೫೦೦ ರೂಪಾಯಿಗಳು, ೨) ಪಿ.ಯು.ಸಿ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಿದವರಿಗೆ ಒಂದು ಜಿಲ್ಲೆಗೆ ೪ ರಂತೆ ತಲಾ ೧,೦೦೦ ರೂಪಾಯಿಗಳು, ೩) ಪದವಿ ತರಗತಿಗಳಲ್ಲಿ ಉತ್ತಮ ಅಂಕ ಗಳಿಸಿದವರಿಗೆ ಒಂದು ವಿಷಯಕ್ಕೆ ಒಂದರಂತೆ ತಲಾ ೧,೫೦೦ ರೂಪಾಯಿಗಳು ಮತ್ತು ೪) ಸ್ನಾತಕೋತ್ತರ ಪದವಿ ತರಗತಿಗಳಲ್ಲಿ ಉತ್ತಮ ಅಂಕ ಗಳಿಸಿದವರಿಗೆ ಒಂದು ವಿಷಯಕ್ಕೆ ಒಂದರಂತೆ ತಲಾ ೨,೦೦೦ ರೂಪಾಯಿಗಳು.

**ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ :** ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ ಪರೀಕ್ಷೆಯಲ್ಲಿ ಶೇಕಡ ೧೦೦ ಫಲಿತಾಂಶ ಪಡೆದ ಶಿಕ್ಷಣ ಸಂಸ್ಥೆಗಳಿಗೆ ವಿಭಾಗ ಮಟ್ಟದಲ್ಲಿ ಸಮಾರಂಭ ಏರ್ಪಡಿಸಿ ನಗದು ಪುರಸ್ಕಾರ ನೀಡಿ ಗೌರವಿಸಲಾಗುವುದು. ರಾಷ್ಟ್ರೀಯ ಪ್ರತಿಭಾನ್ವೇಷಣಾ ವಿದ್ಯಾರ್ಥಿವೇತನಕ್ಕೆ ಆಯ್ಕೆ ಮಾಡಲು ನಡೆಸಲಾಗುವ ಪರೀಕ್ಷೆಯಲ್ಲಿ ರಾಜ್ಯಮಟ್ಟದಲ್ಲಿ ಆಯ್ಕೆಯಾಗಿ ರಾಷ್ಟ್ರ ಮಟ್ಟದಲ್ಲಿ ವಿಫಲರಾದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಾರ್ಷಿಕ ೨೦೦೦ ರೂಪಾಯಿಗಳ ವಿದ್ಯಾರ್ಥಿ ವೇತನವನ್ನು ನೀಡಲಾಗುತ್ತದೆ. ಅಲ್ಲದೆ, ರಾಜ್ಯ ಮಟ್ಟದಲ್ಲಿ ಆಯ್ಕೆಯಾದ ಕನ್ನಡ ಮಾಧ್ಯಮದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ೨೦೦ ರೂಪಾಯಿಗಳ ಪ್ರೋತ್ಸಾಹ ವೇತನ ನೀಡಲಾಗುತ್ತದೆ.ಪ್ರೌಢಶಾಲೆಗಳು, ಪದವಿಪೂರ್ವ ಕಾಲೇಜುಗಳು ಮತ್ತು ಪದವಿ ಕಾಲೇಜುಗಳಲ್ಲಿ ಸಂಗ್ರಹವಾದ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ ವಂತಿಗೆಯ ಪೈಕಿ ಪ್ರೌಢಶಾಲೆಗಳಲ್ಲಿ ಶೇಕಡ ೫೦ರಂತೆ ಹಾಗೂ ಪದವಿಪೂರ್ವ ಕಾಲೇಜುಗಳು ಮತ್ತು ಪದವಿ ಕಾಲೇಜುಗಳಲ್ಲಿ ಶೇಕಡ ೬೦ ರಂತೆ ಹಣವನ್ನು ಆಯಾ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುವ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳ ಬೋಧನಾ ಶುಲ್ಕ ಮತ್ತು ಪರೀಕ್ಷಾ ಶುಲ್ಕವನ್ನು ಪಾವತಿಸಲು ಮತ್ತು ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿಗೆ ಸಂಬಂಧಿಸಿದ ಇನ್ನಿತರ ಕಾರ್ಯಕ್ರಮಗಳನ್ನು ಆಯೋಜಿಸಲು ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರಿಗೆ ಅವಕಾಶವಿದೆ. ಆಪತ್ಕಾಲದಲ್ಲಿ ಜನರ ಪ್ರಾಣ ಮತ್ತು ಆಸ್ತಿ ರಕ್ಷಣೆಗಾಗಿ ಶೌರ್ಯ ಮತ್ತು ಸಾಹಸಗಳನ್ನು ಪ್ರದರ್ಶಿಸುವ ವಿದ್ಯಾರ್ಥಿಗಳಿಗೆ ತಲಾ ೧,೦೦೦ ರೂಪಾಯಿಗಳ ಶೌರ್ಯ ಪ್ರಶಸ್ತಿಯನ್ನು ನೀಡಲಾಗುವುದು. ಕರ್ನಾಟಕ ರಾಜ್ಯ ಶಿಶು ಕ್ಷೇಮಾಭಿವೃದ್ಧಿ ಪರಿಷತ್ತಿನ ವತಿಯಿಂದ ಆಯ್ಕೆ ಮಾಡಲಾದವರಿಗೆ ಈ ಪ್ರಶಸ್ತಿಯನ್ನು ನೀಡಲಾಗುವುದು.

**ಕ್ರೀಡಾ ಪ್ರಶಸ್ತಿಗಳು:** ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ ಆಯೋಜಿಸಲಾಗುವ ರಾಜ್ಯ ಮಟ್ಟದ ಆಟೋಟಗಳ ಸ್ಪರ್ಧೆಗಳಲ್ಲಿ ಪ್ರಥಮ ಮೂರು ವೈಯಕ್ತಿಕ ಚಾಂಪಿಯನ್ ಸ್ಥಾನಗಳನ್ನು ಪಡೆಯುವ ವಿದ್ಯಾರ್ಥಿಗಳಿಗೆ ಕ್ರಮವಾಗಿ ೨,೦೦೦; ೧,೫೦೦ ಮತ್ತು ೧,೦೦೦ ರೂಪಾಯಿಗಳ ಹಾಗೂ ಗುಂಪು ಆಟಗಳಲ್ಲಿ ಪ್ರಥಮ ಮೂರು ಚಾಂಪಿಯನ್ ಸ್ಥಾನಗಳನ್ನು ಪಡೆದವರಿಗೆ ಕ್ರಮವಾಗಿ ೧,೦೦೦; ೭೫೦, ಮತ್ತು ೫೦೦ ರೂಪಾಯಿಗಳ ನಗದು ಪುರಸ್ಕಾರವನ್ನು ನೀಡಲಾಗುವುದು.

**ವಿದ್ಯಾರ್ಥಿ, ಶಿಕ್ಷಕರ ಸುರಕ್ಷಾ ವಿಮೆ ಸೌಲಭ್ಯ:** ಈ ವಿನೂತನ ಕಾರ್ಯಕ್ರಮವನ್ನು ೨೦೦೧-೦೨ನೇ ಸಾಲಿನಲ್ಲಿ ಪ್ರಪ್ರಥಮವಾಗಿ ಅಂದಿನ ಶಿಕ್ಷಣ ಮಂತ್ರಿಗಳಾಗಿದ್ದ ಮಾನ್ಯ ಹೆಚ್.ವಿಶ್ವನಾಥ್ ರವರ ಮಾರ್ಗದರ್ಶನದಂತೆ ಓರಿಯೆಂಟಲ್ ಇನ್ಶೂರೆನ್ಸ್ ಕಂಪನಿ ಸಹಯೋಗದಲ್ಲಿ ಪ್ರಾರಂಭಿಸಲಾಯಿತು. ರಾಜ್ಯದಲ್ಲಿ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಶಾಲೆಗಳಲ್ಲಿ ೧ ರಿಂದ ೧೦ ನೇ ತರಗತಿಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಈ ಯೋಜನೆಯ ವ್ಯಾಪ್ತಿಗೆ ಒಳಪಡುತ್ತಾರೆ. ವಾರ್ಷಿಕ ಪ್ರೀಮಿಯಂ ಮೊತ್ತವನ್ನು ಕ್ರಮವಾಗಿ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ ಮತ್ತು ಶಿಕ್ಷಕರ ಕಲ್ಯಾಣ ನಿಧಿ ವತಿಯಿಂದ ಪಾವತಿಸಲಾಗುತ್ತದೆ. ಯಾವುದೇ ರೀತಿಯ ಅಪಘಾತಗಳಿಂದಾಗಿ ಪ್ರಾಣಹಾನಿ ಅಥವಾ ಅಂಗಾಂಗಗಳ ನ್ಯೂನತೆಗೆ ಈಡಾಗುವ ವಿದ್ಯಾರ್ಥಿಗಳ ಅಥವಾ ಶಿಕ್ಷಕರ ಕುಟುಂಬದವರಿಗೆ ಪರಿಹಾರವನ್ನು ಈ ಸುರಕ್ಷಾ ವಿಮಾ ಸೌಲಭ್ಯದ ಅಡಿಯಲ್ಲಿ ಪಾವತಿಸಲಾಗುತ್ತದೆ. ವಿದ್ಯಾರ್ಥಿಗಳಿಗೆ ವೈದ್ಯಕೀಯ ಸಹಾಯ: ಶಿಕ್ಷಕರಿಗೆ ಇರುವಂತೆ ವಿದ್ಯಾರ್ಥಿಗಳಿಗೂ ಗರಿಷ್ಠ ೧೫,೦೦೦ ರೂಪಾಯಿಗಳ ವರೆಗೆ ವೈದ್ಯಕೀಯ ಚಿಕಿತ್ಸಾ ವೆಚ್ಚಗಳನ್ನು ಭರಿಸಲಾಗುತ್ತದೆ.

ಎಸ್.ಎಸ್.ಎಲ್.ಸಿ ಮತ್ತು ಪಿಯು.ಸಿ. ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಪುರಸ್ಕಾರ:ಪ್ರತಿ ಜಿಲ್ಲೆಯಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಅತ್ಯಂತ ಹೆಚ್ಚು ಅಂಕಗಳನ್ನು ಗಳಿಸಿದ ೧೦ ವಿದ್ಯಾರ್ಥಿಗಳಿಗೆ (೫ ಕನ್ನಡ ಮಾಧ್ಯಮ + ೫ ಇತರೆ ಮಾಧ್ಯಮ) ತಲಾ ೧,೦೦೦ ರೂಪಾಯಿಗಳ ಪುರಸ್ಕಾರ ವನ್ನು ನೀಡಲಾಗುತ್ತದೆ. ಅದೇರೀತಿ ಪ್ರತಿ ಜಿಲ್ಲೆಯಲ್ಲಿ ಪಿ.ಯು.ಸಿ ಪರೀಕ್ಷೆಯಲ್ಲಿ ಅತ್ಯಂತ ಹೆಚ್ಚು ಅಂಕಗಳನ್ನು ಗಳಿಸಿದ ಐದು ವಿದ್ಯಾರ್ಥಿಗಳಿಗೆ (ಎರಡು ವಿಜ್ಞಾನ ವಿಷಯಗಳಿಗೆ+ ಮೂರು ಇತರೆ ವಿಷಯಗಳಿಗೆ) ತಲಾ ೨,೦೦೦ ರೂಪಾಯಿಗಳ ಪುರಸ್ಕಾರವನ್ನು ನೀಡಲಾಗುತ್ತದೆ. ಈ ನಿಧಿಗಳ ವತಿಯಿಂದ ರಾಜ್ಯದ ರಾಜಧಾನಿ ಬೆಂಗಳೂರು ನಗರದ ಕೇಂದ್ರ ಭಾಗವಾದ ಕೆಂಪೇಗೌಡ ರಸ್ತೆಯಲ್ಲಿ ೧೦ ಕೋಟಿ ರೂಪಾಯಿಗಳಿಗೂ ಮೇಲ್ಪಟ್ಟು ವೆಚ್ಚದಲ್ಲಿ ಶಿಕ್ಷಕರ ಸಧನ ಕಟ್ಟಡವನ್ನು ನಿರ್ಮಿಸಲಾಗಿದೆ. ಇದು ಬೃಹತ್ ಸಭಾಂಗಣ, ಸಭಾ ಕೊಠಡಿಗಳು, ಉತ್ತಮ ಶ್ರೇಣಿಯ ಅತಿಥಿ ಗೃಹ, ಮುಂತಾದ ಸೌಲಭ್ಯಗಳನ್ನು ಹೊಂದಿದೆ. ಶಿಕ್ಷಕರು ಈ ಸೌಲಭ್ಯಗಳ ಪ್ರಯೋಜನವನ್ನು ಪಡೆಯಬಹುದಾಗಿದೆ.

**ವಸತಿ ಶಾಲೆಗಳು:** ಭಾರತ ಸರ್ಕಾರದ ಜವಾಹರ ನವೋದಯ ವಿದ್ಯಾಶಾಲೆಗಳ ಮಾದರಿಯಲ್ಲಿ ರಾಜ್ಯ ಸರ್ಕಾರವು ಪ್ರಾರಂಭಿಕವಾಗಿ ೧೯೯೧ ರಲ್ಲಿ ನಾಲ್ಕು ಮುರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಶಿಕ್ಷಣ ಇಲಾಖೆಯ ಅಡಿಯಲ್ಲಿ ಪ್ರಾರಂಭಿಸಿತು. ಗ್ರಾಮಾಂತರ ಪ್ರದೇಶಗಳ ದುರ್ಬಲ ವರ್ಗಕ್ಕೆ ಸೇರಿದ ಮಕ್ಕಳ ಶೈಕ್ಷಣಿಕ ಅಗತ್ಯಗಳನ್ನು ಪೂರೈಸುವ ಸಲುವಾಗಿ ಇದೇ ಕಾರ್ಯಕ್ರಮವನ್ನು ಮುಂದುವರಿಸಿ ೧೯೯೯-೨೦೦೨ ರ ಅವಧಿಯಲ್ಲಿ ೨೦ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು, ಐದು ಉರ್ದು ಭಾಷಾ ಅಲ್ಪಸಂಖ್ಯಾತ ವಸತಿಶಾಲೆಗಳು ಮತ್ತು ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗದ ಪ್ರತಿಭಾವಂತ ಹೆಣ್ಣುಮಕ್ಕಳಿಗಾಗಿ ನಾಲ್ಕು ವಸತಿ ಶಾಲೆಗಳನ್ನು ಪ್ರಾರಂಭಿಸಲಾಯಿತು. ೧೯೯೬-೯೭ ರಲ್ಲಿ ಪುನಃ ೪೦ ಶಾಲೆಗಳನ್ನು ಮಂಜೂರು ಮಾಡಲಾಯಿತು. ಅದೇ ರೀತಿ ಪ್ರತಿ ವರ್ಷ ಈ ಶಾಲೆಗಳ ಸಂಖ್ಯೆ ಇನ್ನೂ ಅಧಿಕಗೊಂಡು ಪ್ರಸ್ತುತ ಈ ಶಾಲೆಗಳ ಆಡಳಿತ ನಿರ್ವಹಣೆಗಾಗಿ ಸಮಾಜ ಕಲ್ಯಾಣ ಇಲಾಖೆಯ ಅಧೀನದಲ್ಲಿ ೨೦೦೦ ಇಸವಿಯಲ್ಲಿ 'ವಸತಿ ಶಿಕ್ಷಣ ಸಂಸ್ಥೆಗಳ ಸಂಘ'ವನ್ನು ಸ್ಥಾಪಿಸಲಾಗಿದೆ. ಪ್ರಸ್ತುತ ರಾಜ್ಯದಲ್ಲಿ ಒಟ್ಟು ೪೭೭ ವಸತಿ ಶಾಲೆಗಳು ಮತ್ತು ೨೬ ಪದವಿ ಪೂರ್ವ ಕಾಲೇಜು ಸೇರಿ ಒಟ್ಟು ೫೦೩ ವಸತಿ ಶಿಕ್ಷಣ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ. ಈ ಶಾಲೆಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ, ಅಲ್ಪ ಸಂಖ್ಯಾತ ವರ್ಗಗಳಿಗೆ ಸೇರಿದ, ಗ್ರಾಮೀಣ ಭಾಗದ ವಿದ್ಯಾರ್ಥಿಗಳು ೬ ರಿಂದ ೧೦/೧೨ ನೇ ತರಗತಿವರೆಗೆ ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಈ ವಿದ್ಯಾರ್ಥಿಗಳಿಗೆ ಊಟ, ವಸತಿ, ಸಮವಸ್ತ್ರ, ಪಠ್ಯ ಪುಸ್ತಕ, ಲೇಖನ ಸಾಮಗ್ರಿಗಳನ್ನು ಉಚಿತವಾಗಿ ಒದಗಿಸುತ್ತಿರುವುದಲ್ಲದೆ, ಆರೋಗ್ಯ ತಪಾಸಣೆ ಮತ್ತು ವೈದ್ಯಕೀಯ ವೆಚ್ಚಗಳನ್ನು ಸರ್ಕಾರದ ವತಿಯಿಂದ ಭರಿಸಲಾಗುತ್ತಿದೆ. ಎಲ್ಲ ಪ್ರವರ್ಗದ ವಸತಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಪ್ರವೇಶಾತಿಗಾಗಿ ಒಟ್ಟಾರೆ ೧,೧೬,೯೫೦ ಸೀಟುಗಳ ಲಭ್ಯತೆ ಇದೆ. ಈ ಸಂಸ್ಥೆಗಳಲ್ಲಿ ಆರನೇ ತರಗತಿಯಿಂದ ಪ್ರವೇಶ ದಾಖಲಾತಿಯನ್ನು ಮಾಡಿಕೊಳ್ಳಲಾಗುತ್ತದೆ. ಪ್ರತಿ ವರ್ಷ ಮೇ ತಿಂಗಳಲ್ಲಿ ಐದನೇ ತರಗತಿಯನ್ನು ಪೂರ್ಣಗೊಳಿಸಿದ ವಿದ್ಯಾರ್ಥಿಗಳಿಗೆ ಪ್ರವೇಶ ಪರೀಕ್ಷೆಯನ್ನು ನಡೆಸಿ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳು, ಮೀಸಲಾತಿ ಪ್ರವರ್ಗದ ಆಧಾರದ ಮೇಲೆ ರ್‍ಯಾಂಕಿಂಗ್ ಪಟ್ಟಿ ತಯಾರಿಸಿ ಅದರ ಆಧಾರದ ಮೇಲೆ ದಾಖಲಾತಿ ಮಾಡಿಕೊಳ್ಳಲಾಗುತ್ತದೆ.

**ಕೋಷ್ಟಕ ೧೦.೧೯: ರಾಜ್ಯದಲ್ಲಿರುವ ವಸತಿ ಶಾಲೆಗಳು ಮತ್ತು ಪದವಿ ಪೂರ್ವ ಕಾಲೇಜುಗಳು (೨೦೧೫-೧೬)**

| ಕ್ರ. ಸಂ | ವಸತಿ ಶಾಲೆಯ ವಿಧ | ಪ.ಜಾ | ಪ.ಪಂ. | ಹಿಂ,ವರ್ಗ | ಸಾಮಾನ್ಯ | ಒಟ್ಟು |
|---|---|---|---|---|---|---|
| ೧ | ಮುರಾರ್ಜಿ ದೇಸಾಯಿ ವಸತಿ ಶಾಲೆಗಳು | ೧೫೭ | ೩೩ | ೧೩೭ | ೨೪ | ೩೫೧ |
| ೨ | ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳು * | ೮೨ | ೩೩ | – | – | ೧೧೫ |
| ೩ | ಏಕಲವ್ಯ ವಸತಿ ಶಾಲೆಗಳು | – | ೦೬ | – | – | ೦೬ |
| ೪ | ಅಟಲ ಬಿಹಾರಿ ವಾಜಪೇಯಿ ವಸತಿ ಶಾಲೆಗಳು | ೦೨ | – | ೦೩ | – | ೦೫ |
| ೫ | ಪದವಿ ಪೂರ್ವ ಕಾಲೇಜುಗಳು | ೧೨ | ೦೨ | ೧೨ | | ೨೬ |
| ೬ | ಒಟ್ಟು | ೨೫೩ | ೭೪ | ೧೫೨ | ೨೪ | ೫೦೩ |

**ಮಾಹಿತಿ ಆಧಾರ: ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ**

**ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ:** ೧೯೮೬ ರ ರಾಷ್ಟ್ರೀಯ ಶಿಕ್ಷಣ ನೀತಿ ೧೯೯೨ ರಲ್ಲಿ ಪುನರ್ ವಿಮರ್ಶಿಸಲ್ಪಟ್ಟಿತು. ಅಲ್ಲದೆ ಇದರ ಅನುಷ್ಠಾನಕ್ಕಾಗಿ ೧೯೯೨ರಲ್ಲಿ ಕ್ರಿಯಾ ಯೋಜನೆಯನ್ನು ರೂಪಿಸಲಾಯಿತು. ಅದರಂತೆ ಕ್ರಿ.ಶ. ೨೦೦೦ ಇಸವಿ ಒಳಗೆ ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸಿ ಮಕ್ಕಳ ಕಲಿಕೆಯ ಗುಣ ಮಟ್ಟವನ್ನು ಉತ್ತಮಪಡಿಸುವ ಗುರಿಯನ್ನು ಹೊಂದಲಾಯಿತು. ಈ ಗುರಿ ಸಾಧನೆಗಾಗಿ ಹಮ್ಮಿಕೊಳ್ಳಲಾದ ವಿಶಿಷ್ಟ ಯೋಜನೆ ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ (ಡಿ.ಪಿ.ಇ.ಪಿ). ಕೇಂದ್ರ ಪುರಸ್ಕೃತ ಹಣಕಾಸಿನ ನೆರವಿನ ಈ ಕಾರ್ಯಕ್ರಮವನ್ನು ಕರ್ನಾಟಕದಲ್ಲಿ ಮೊದಲನೇ ಹಂತದಲ್ಲಿ ೧೯೯೪ ಜನವರಿ ೨೬ ರಿಂದ ಕೋಲಾರ, ಮಂಡ್ಯ, ರಾಯಚೂರು ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಮತ್ತು ಎರಡನೇ ಹಂತದಲ್ಲಿ ಅಕ್ಟೋಬರ್ ೧೯೯೭ರಿಂದ ಮೈಸೂರು, ಬಳ್ಳಾರಿ, ಬೀದರ್, ವಿಜಯಪುರ, ಧಾರವಾಡ, ಕಲಬುರಗಿ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಪ್ರಾರಂಭಿಸಲಾಯಿತು. ಕಾರ್ಯಕ್ರಮ ಪ್ರಾರಂಭವಾದ ನಂತರ ೧೯೯೭-೯೮ ರಲ್ಲಿ ಮೈಸೂರು (ಮೈಸೂರು, ಚಾಮರಾಜನಗರ), ವಿಜಯಪುರ (ವಿಜಯಪುರ, ಬಾಗಲಕೋಟೆ), ರಾಯಚೂರು (ರಾಯಚೂರು, ಕೊಪ್ಪಳ), ಧಾರವಾಡ (ಧಾರವಾಡ, ಗದಗ, ಹಾವೇರಿ) ಜಿಲ್ಲೆಗಳ ವಿಭಜನೆಯಾಗಿ ನೂತನವಾಗಿ ರಚನೆಯಾದ ಏಳು ಜಿಲ್ಲೆಗಳನ್ನು ಸೇರಿ ಒಟ್ಟು ೧೬ ಜಿಲ್ಲೆಗಳಲ್ಲಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಯಿತು.

**ಧ್ಯೇಯೋದ್ದೇಶಗಳು:** ಸಾಮಾಜಿಕ ವರ್ಗೀಕರಣ ಹಾಗೂ ಲಿಂಗಭೇದದ ಕಾರಣಗಳಿಂದಾಗಿ ಶಾಲಾ ದಾಖಲಾತಿ ಮತ್ತು ಕಲಿಕಾ ಸಾಧನೆಯಲ್ಲಿ ವಿವಿಧ ಮಕ್ಕಳ ನಡುವೆ ಇರುವ ಅಂತರವನ್ನು ಹಾಗೂ ಮಧ್ಯದಲ್ಲಿ ಶಾಲೆ ಬಿಡುವ ಮಕ್ಕಳ ಪ್ರಮಾಣವನ್ನು ಶೇಕಡಾ ೫ಕ್ಕಿಂತ ಕಡಿಮೆಗೊಳಿಸುವುದು. ಭಾಷೆ ಹಾಗೂ ಗಣಿತ ವಿಷಯಗಳಲ್ಲಿ ಕಲಿಕಾ ಮಟ್ಟವನ್ನು ಮೌಲ್ಯಾಂಕಾಧಾರಿತ ಮಟ್ಟದಿಂದ ಶೇಕಡಾ ೨೫ ರಷ್ಟು ಹೆಚ್ಚಿಸುವುದು. ಇತರೆ ವಿಷಯಗಳಲ್ಲಿ ಪ್ರಾಥಮಿಕ ಶಾಲೆಯ ಎಲ್ಲ ಮಕ್ಕಳ ಕನಿಷ್ಠ ಕಲಿಕಾ ಸಾಮರ್ಥ್ಯವನ್ನು ಶೇಕಡಾ ೪೦ ಕ್ಕಿಂತ ಹೆಚ್ಚು ಮಾಡುವುದು.ಪ್ರಾಥಮಿಕ ಹಂತದಲ್ಲಿ ಶಾಲೆ ತೊರೆಯುವ ಮಕ್ಕಳ ಒಟ್ಟಾರೆ ಪ್ರಮಾಣವನ್ನು ಶೇಕಡಾ ೧೦ಕ್ಕಿಂತ ಕಡಿಮೆಗೊಳಿಸುವುದು.

**ರಾಜ್ಯ ಯೋಜನಾ ಕಚೇರಿ:** ಈ ಕಚೇರಿಯು ೧೯೯೪ ರಲ್ಲಿ ಮೊದಲು ಜಯನಗರ ೭ನೇ ಬ್ಲಾಕಿನಲ್ಲಿ ಒಂದು ಬಾಡಿಗೆ ಕಟ್ಟಡದಲ್ಲಿ ಪ್ರಾರಂಭವಾಯಿತು. ಆಮೇಲೆ ಕಚೇರಿಯನ್ನು ವಿಧಾನ ಸೌಧದ ಬಳಿ ಗೋಪಾಲಗೌಡ ಸರ್ಕಲ್‌ನಲ್ಲಿ ಇದ್ದ ಸರ್ಕಾರಿ ಮುದ್ರಣಾಲಯದ ಆವರಣದ ಒಂದು ಕಟ್ಟಡಕ್ಕೆ ಸ್ಥಳಾಂತರಿಸಲಾಯಿತು. ತದನಂತರ ವಿಕಾಸ ಸೌಧ ನಿರ್ಮಾಣಕ್ಕಾಗಿ ಆ ಕಟ್ಟಡವನ್ನು ತೆರವು ಮಾಡಬೇಕಾಯಿತು. ಸ್ವಲ್ಪ ಕಾಲ ಹೊಸಕೆರೆಹಳ್ಳಿಯಲ್ಲಿ ಹೊಸದಾಗಿ ನಿರ್ಮಾಣ ಕೈಗೊಂಡು ಅಪೂರ್ಣ ಸ್ಥಿತಿಯಲ್ಲಿದ್ದ ಡಿ.ಎಸ್.ಇ.ಆರ್.ಟಿ. ಕಟ್ಟಡಕ್ಕೆ, ಅಲ್ಲಿಂದ ಕನ್ನಿಂಗ್ ಹ್ಯಾಂ ರಸ್ತೆಯಲ್ಲಿನ ಕೆ.ಎಸ್.ಸಿ.ಎಫ್.ಸಿ. ಕಟ್ಟಡಕ್ಕೆ ಸ್ಥಳಾಂತರಿಸಲಾಯಿತು. ೨೦೦೦ ಇಸವಿಯಿಂದಲೇ ಪ್ರಾರಂಭವಾಗಿ ಆಯುಕ್ತರ ಕಚೇರಿಯಲ್ಲಿ ಒಂದು ಶಾಖೆಯಾಗಿ ಸರ್ವಶಿಕ್ಷಣ ಅಭಿಯಾನ ಸಮಿತಿಯು ಕಾರ್ಯ ನಿರ್ವಹಿಸುತ್ತಿತ್ತು. ೨೦೦೨ ರಲ್ಲಿ ಡಿ.ಪಿ.ಇ.ಪಿ. ಕಾರ್ಯಕ್ರಮದ ಎಲ್ಲ ಆಸ್ತಿಗಳು ಮತ್ತು ದಾಯಿತ್ವಗಳ ಸಹಿತ ಸರ್ವ ಶಿಕ್ಷಣ ಅಭಿಯಾನದ ಅಧೀನಕ್ಕೆ ವಿಲೀನಗೊಳಿಸಲಾಯಿತು. ಅಲ್ಲಿಗೆ ಡಿ.ಪಿ.ಇ.ಪಿ. ಅಧ್ಯಾಯ ಮುಗಿದು 'ಸರ್ವ ಶಿಕ್ಷಣ ಅಭಿಯಾನ' ಎಂಬ ಹೊಸ ಅಧ್ಯಾಯ ಪ್ರಾರಂಭವಾಯಿತು. ಆ ವೇಳೆಗೆ ಆಯುಕ್ತರ ಕಚೇರಿಯ ಅನೆಕ್ಸ್ ಕಟ್ಟಡ ನಿರ್ಮಾಣವಾಗಿತ್ತು. ಪ್ರಸ್ತುತ 'ಸರ್ವ ಶಿಕ್ಷಣ ಅಭಿಯಾನ' ಅಲ್ಲಿಂದ ಕಾರ್ಯ ನಿರ್ವಹಿಸುತ್ತಿದೆ.

**ಸರ್ವಶಿಕ್ಷಣ ಅಭಿಯಾನ ಮಿಷನ್:** 'ಸರ್ವ ಶಿಕ್ಷಣ ಅಭಿಯಾನ' ಕಾರ್ಯಕ್ರಮವನ್ನು ಡಿ.ಪಿ.ಇ.ಪಿ. ಕಾರ್ಯಕ್ರಮದ ಉತ್ತರಾಧಿಕಾರಿಯೆಂದೇ ಕರೆಯಬಹುದು. ಇದೂ ಸಹ ಪ್ರಾಥಮಿಕ ಶಿಕ್ಷಣದ ಪುನಶ್ಚೇತನ ಮತ್ತು ಸಾರ್ವತ್ರೀಕರಣಕ್ಕಾಗಿ ಕೈಗೊಳ್ಳಲಾದ ಕಾರ್ಯಕ್ರಮವೇ ಆಗಿದೆ. ಈ ಎರಡರ ನಡುವಿನ ಕೆಲವು ವ್ಯತ್ಯಾಸಗಳೆಂದರೆ: ಡಿ.ಪಿ.ಇ.ಪಿ. ಕಾರ್ಯಕ್ರಮ ಕಿರಿಯ ಪ್ರಾಥಮಿಕ ಹಂತಕ್ಕೆ ಮಾತ್ರ ಸೀಮಿತವಾಗಿದ್ದರೆ ಎಸ್.ಎಸ್.ಎ. ಕಾರ್ಯಕ್ರಮ ಹಿರಿಯ ಪ್ರಾಥಮಿಕ ಹಂತಕ್ಕೂ (೮ನೇ ತರಗತಿವರೆಗೆ) ವಿಸ್ತರಿಸಲಾಗಿದೆ. ಡಿ.ಪಿ.ಇ.ಪಿ. ಕಾರ್ಯಕ್ರಮವನ್ನು ವಿಶ್ವ ಬ್ಯಾಂಕಿನ ನೆರವಿನಿಂದ ಕೈಗೊಳ್ಳಲಾಗಿದ್ದರೆ, ಎಸ್.ಎಸ್.ಎ. ಕಾರ್ಯಕ್ರಮ ಕೇಂದ್ರ ಪುರಸ್ಕೃತ ಕಾರ್ಯಕ್ರಮವಾಗಿದೆ. ಡಿ.ಪಿ.ಇ.ಪಿ. ಕಾರ್ಯಕ್ರಮವನ್ನು ಶೈಕ್ಷಣಿಕವಾಗಿ ಹಿಂದುಳಿದ, ಅದರಲ್ಲೂ ವಿಶೇಷವಾಗಿ ಮಹಿಳಾ ಸಾಕ್ಷರತೆ ರಾಷ್ಟ್ರೀಯ ಸರಾಸರಿಗಿಂತ ಕಡಿಮೆ ಇದ್ದ ಆಯ್ದ ಜಿಲ್ಲೆಗಳಲ್ಲಿ ಮಾತ್ರ ಅನುಷ್ಠಾನ ಗೊಳಿಸಲ್ಪಟ್ಟರೆ, ಎಸ್.ಎಸ್.ಎ. ಕಾರ್ಯಕ್ರಮ ರಾಜ್ಯದಾದ್ಯಂತ ಎಲ್ಲ ಜಿಲ್ಲೆಗಳಲ್ಲಿ ಅನುಷ್ಠಾನ ಗೊಳಿಸಲ್ಪಡುತ್ತಿದೆ. ಉಳಿದಂತೆ ಎರಡೂ ಕಾರ್ಯಕ್ರಮಗಳ ಧ್ಯೇಯೋದ್ದೇಶಗಳು ಹೆಚ್ಚು ಕಡಿಮೆ ಒಂದೇ ಆಗಿವೆ. ಆದ್ದರಿಂದ ಇದನ್ನು ಡಿ.ಪಿ.ಇ.ಪಿ. ಕಾರ್ಯಕ್ರಮದ ಉತ್ತರಾಧಿಕಾರಿಯೆಂದರೆ ತಪ್ಪಾಗಲಾರದು. ಈ ಕಾರ್ಯಕ್ರಮ ಕರ್ನಾಟಕದಲ್ಲಿ ೨೦೦೧-೦೨ ನೇ ಸಾಲಿನಲ್ಲಿ ಪ್ರಾರಂಭವಾಯಿತು. 'ಎಲ್ಲರೂ ಕಲಿಯೋಣ-ಎಲ್ಲರೂ ಬೆಳೆಯೋಣ' ಇದರ ಘೋಷ ವಾಕ್ಯ.

**ಗುರಿಗಳು:** ೨೦೦೭ನೇ ಇಸವಿಯೊಳಗೆ ೧೪ ವರ್ಷದ ಒಳಗಿನ ಎಲ್ಲ ಮಕ್ಕಳಿಗೆ ೧ರಿಂದಲನೇ ತರಗತಿವರೆಗಿನ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ.೨೦೧೦ ನೇ ಇಸವಿಯೊಳಗೆ ಪ್ರಾಥಮಿಕ ಶಿಕ್ಷಣದಲ್ಲಿ ಎಲ್ಲ ಮಕ್ಕಳ ದಾಖಲಾತಿ ಮತ್ತು ಹಾಜರಾತಿಯ ಸಾರ್ವತ್ರೀಕರಣ ಹಾಗೂ ಎಲ್ಲ ಮಕ್ಕಳು ೮ ವರ್ಷದ ಶಿಕ್ಷಣವನ್ನು ಪೂರ್ಣಗೊಳಿಸುವುದು. ವಯೋಮಾನಕ್ಕೆ ತಕ್ಕಂತೆ ನಿರ್ದಿಷ್ಟ ತರಗತಿಗಳಲ್ಲಿ ಮಕ್ಕಳ ದಾಖಲಾತಿ ಹಾಗೂ ಪೂರ್ಣಪ್ರಮಾಣದಲ್ಲಿ ಶಾಲೆಯಲ್ಲಿ ಉಳಿಯುವುದು.ಅರ್ಥಪೂರ್ಣ ಜೀವನಕ್ಕೆ ಬೇಕಾಗುವ ಗುಣಮಟ್ಟದ ಪ್ರಾಥಮಿಕ ಶಿಕ್ಷಣವನ್ನು ಒದಗಿಸುವುದು.ಶಿಕ್ಷಣಾ ವಕಾಶಗಳು, ಸಹಭಾಗಿತ್ವ, ಹಾಗೂ ಗುಣಾತ್ಮಕ ಶಿಕ್ಷಣವನ್ನು ಒದಗಿಸುವಲ್ಲಿ ಸಾಮಾಜಿಕ ಗುಂಪುಗಳು, ಲಿಂಗ ಹಾಗೂ ಪ್ರದೇಶಗಳ ನಡುವೆ ಇರುವ ಕಂದಕಗಳನ್ನು ಸಂಪೂರ್ಣವಾಗಿ ತೊಡೆದು ಹಾಕುವುದು.ಶಾಲಾ ನಿರ್ವಹಣೆಯಲ್ಲಿ ಗ್ರಾಮ ಮಟ್ಟದವರೆಗೂ ಸಮುದಾಯಗಳು ಹಾಗೂ ವಿಶೇಷವಾಗಿ ಸರ್ಕಾರಿ ಸ್ಥಳೀಯ ಸಂಸ್ಥೆಗಳನ್ನು ಸಂಪೂರ್ಣ ಸಹಭಾಗಿಗಳನ್ನಾಗಿ ಮಾಡಿಕೊಂಡು ಸ್ವಯಂ-ನಿರ್ವಹಿತ ಶಾಲೆಗಳ ಗುರಿಯತ್ತ ಸಾಗುವುದು.ಮೇಲಿನ ಪ್ರತಿಯೊಂದು ಕಾರ್ಯಚಟುವಟಿಕೆ ಅಡಿಯಲ್ಲಿ ವಿವಿಧ ಪೂರಕ ಚಟುವಟಿಕೆಗಳು ಮತ್ತು ಕಾರ್ಯಕ್ರಮಗಳನ್ನು ರೂಪಿಸಲಾಗಿದೆ.

**ಶಿಕ್ಷಕರ ನೇಮಕಾತಿ ಮತ್ತು ತರಬೇತಿ:** ಕರ್ನಾಟಕ ರಾಜ್ಯದಲ್ಲಿ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ತರಬೇತಿ ಹೊಂದಿದ ಅರ್ಹ ಶಿಕ್ಷಕರನ್ನು ರಾಜ್ಯ ಮಟ್ಟದ ಸಾಮಾನ್ಯ ಪ್ರವೇಶ ಪರೀಕ್ಷೆಯ ಮೂಲಕ ಎಸ್‌ಎಸ್‌ಎ ಮತ್ತು ರಾಜ್ಯ ಕಾರ್ಯತತ್ವರತೆಯಡಿಯಲ್ಲಿ ಆದ್ಯತೆ ಮೇರೆಗೆ ನೇಮಕ ಮಾಡಲಾಗುತ್ತಿದೆ. ೨೦೦೮–೦೯ರಲ್ಲಿ ೧,೧೬೫ ಪ್ರಾಥಮಿಕ ಶಾಲಾ ಶಿಕ್ಷಕರನ್ನು ಮತ್ತು ಎಂಟನೇ ತರಗತಿಗೆ ೧೦೧ ಶಿಕ್ಷಕರನ್ನು ನೇಮಿಸಿಕೊಳ್ಳಲಾಗಿದೆ. ೨೦೦೯–೧೦ರ ಸರ್ವಶಿಕ್ಷಾ ಅಭಿಯಾನದಡಿಯಲ್ಲಿ ೧೮,೭೩೩ ಶಿಕ್ಷಕರನ್ನು ನೇಮಿಸಿಕೊಳ್ಳಲಾಗಿದೆ. ಎಂಟನೇ ತರಗತಿ ಮಟ್ಟಕ್ಕೇರಿಸಲ್ಪಟ್ಟ ಶಾಲೆಗಳಿಗೆ ಒಬ್ಬ ವಿಜ್ಞಾನ ವಿಷಯದಲ್ಲಿ (ಪಿಸಿಎಂಬಿ) ಪದವಿ ಪಡೆದ ತರಬೇತಿ ಹೊಂದಿದ ಶಿಕ್ಷಕರನ್ನು ನೇಮಿಸಲಾಗಿದೆ. ಹೊಸದಾಗಿ ನೇಮಿಸಲಾದ ಶಿಕ್ಷಕರ ವೇತನವನ್ನು ಎಸ.ಎಸ್.ಎ. ಅನುದಾನದಿಂದ ಪಾವತಿಸಲಾಗುತ್ತದೆ.

**ಬಾಲಕಿಯರ ಶಿಕ್ಷಣ:** ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಬಾಲಕಿಯರ ಸಾಕ್ಷರತಾ ಪ್ರಮಾಣ ಕಡಿಮೆ ಇದ್ದು, ಬಾಲಕಿಯರ ಸಾಕ್ಷರತಾ ಪ್ರಮಾಣವನ್ನು ಅಭಿವೃದ್ಧಿಪಡಿಸುವ ಸಲುವಾಗಿ ಸರ್ಕಾರವು ಹಲವಾರು ಕ್ರಮಗಳನ್ನು ತೆಗೆದುಕೊಂಡಿದೆ. ಅದರಂತೆ ರಾಜ್ಯದಲ್ಲಿ ಬಾಲಕಿಯರಿಗಾಗಿಯೇ ೧,೮೬೮ ಹಿರಿಯ ಪ್ರಾಥಮಿಕ ಶಾಲೆಗಳಿವೆ. ರಾಜ್ಯ ಸರ್ಕಾರವು ಎಲ್ಲಾ ಪಂಗಡಗಳ ಬಾಲಕಿಯರಿಗೂ ೧೨ನೇ ತರಗತಿಯವರೆಗೂ ಸರ್ಕಾರಿ ಮತ್ತು ಅನುದಾನಿತ ಸಂಸ್ಥೆಗಳಲ್ಲಿ ಉಚಿತ ಶಿಕ್ಷಣ ನೀಡುತ್ತಿದೆ. ಅವರ ದಾಖಲಾತಿ ಮತ್ತು ಶಿಕ್ಷಣವನ್ನು ಯಶಸ್ವಿಯಾಗಿ ಪೂರೈಸುವ ಸಲುವಾಗಿ ಮಧ್ಯಾಹ್ನದ ಬಿಸಿಯೂಟ, ಉಚಿತ ಸಮವಸ್ತ್ರ, ಶುಲ್ಕ ರಿಯಾಯಿತಿ, ಉಚಿತ ಸೈಕಲ್‌ಗಳ ವಿತರಣೆ ಇತ್ಯಾದಿ ಪ್ರೋತ್ಸಾಹದಾಯಕ ಸೌಕರ್ಯಗಳನ್ನು ನೀಡುತ್ತಿದ್ದು, ಇದರ ಪರಿಣಾಮವಾಗಿ ಶಾಲೆಯಲ್ಲಿ ಬಾಲಕಿಯರ ಸಾಧನೆ ಮತ್ತು ದಾಖಲಾತಿಯ ಪ್ರಮಾಣ ಹೆಚ್ಚಾಗಿದೆ. ೨೦೦೩–೦೪ರಲ್ಲಿ ಶೇ.೪೭.೯೦ ಇದ್ದ ಇವರ ದಾಖಲಾತಿ ಪ್ರಮಾಣವು ೨೦೦೯–೧೦ರ ವೇಳೆಗೆ ಶೇ.೪೮.೨೫ರಷ್ಟು ಹೆಚ್ಚಾಗಿದೆ. ೨೦೧೪–೧೫ ರಲ್ಲಿ ಈ ಪ್ರಮಾಣವು ೪೮.೮೪ ಇದೆ. ಅಲ್ಲದೆ, ಹೆಣ್ಣುಮಕ್ಕಳ ಸಾಕ್ಷರತಾ ಪ್ರೋತ್ಸಾಹಕ್ಕಾಗಿ ಈ ಕೆಳಕಂಡ ಯೋಜನೆಗಳನ್ನೂ ಸಹ ಜಾರಿಗೊಳಿಸಲಾಗಿದೆ.

**ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯಗಳು:** ಸರ್ವ ಶಿಕ್ಷಾಣ ಅಭಿಯಾನ ಕಾರ್ಯಕ್ರಮವು ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರಿಕೀಕರಣಗೊಳಿಸಲು ಬದ್ಧವಾಗಿದೆ. ಈ ನಿಟ್ಟಿನಲ್ಲಿ ಎಲ್ಲಾ ಮಕ್ಕಳು ಜಾತಿ, ಮತ, ಧರ್ಮ ಲಿಂಗ ಇತ್ಯಾದಿ ಭೇದಗಳನ್ನು ಪರಿಗಣಿಸದೇ ಸಮಾನ ರೀತಿಯಿಂದ ಹಾಗೂ ಸಾರ್ವತ್ರಿಕವಾಗಿ ಶಿಕ್ಷಣದಲ್ಲಿ ಪಾಲ್ಗೊಳ್ಳುವಂತೆ ಮಾಡಲು ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಿ ಅನುಷ್ಠಾನಕ್ಕೆ ತರಲಾಗಿದೆ. ಯುಇಇ (UEE–)ದ ಗುರಿಗಳನ್ನು ಸಾಧಿಸಲು ಅವಕಾಶ ವಂಚಿತ ಮಕ್ಕಳ ಗುಂಪುಗಳಿಗೆ ವಿಶೇಷ ಗಮನವನ್ನು ನೀಡುವುದು ಅತ್ಯಂತ ಮುಖ್ಯ. ಅರ್ಹ ಮಕ್ಕಳ ಒಟ್ಟೂ ಸಂಖ್ಯೆಯ ಸರಿಸುಮಾರು ಅರ್ಧದಷ್ಟಿರುವ ಬಾಲಕಿಯರು, ಪ್ರಾಥಮಿಕ ಶಿಕ್ಷಣದಲ್ಲಿನ ಅವರ ಭಾಗವಹಿಸುವಿಕೆ ಅಪೇಕ್ಷಿತ ಮಟ್ಟದಲ್ಲಿ ಇರದ ಕಾರಣ ವಿಶೇಷ ಗಮನದ ಅವಶ್ಯಕತೆಯಿರುವ ಗುಂಪಿನಲ್ಲಿ ಸೇರಿರುತ್ತಾರೆ.

ಬಾಲಕಿಯರ ಶಿಕ್ಷಣವನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ರಾಜ್ಯ ಸರ್ಕಾರವು ವಿಶೇಷ ಕಾರ್ಯಕ್ರಮಗಳನ್ನು ಕೈಗೊಂಡಿದೆ. ಸರ್ವ ಶಿಕ್ಷಾ ಅಭಿಯಾನವೂ ಕೂಡ ಇದೇ ಉದ್ದೇಶದಿಂದ, ರಾಜ್ಯ ೭೧ ಇಬಿಬಿ (EBB-)ಗಳಲ್ಲಿ ಬಾಲಕಿಯರ ಶಿಕ್ಷಣವನ್ನು ಪ್ರೋತ್ಸಾಹಿಸಲು ಕೆಜಿಬಿವಿ (KGBV) ಕಾರ್ಯಕ್ರಮವನ್ನು ಆರಂಭಿಸಿದೆ. ಗ್ರಾಮೀಣ ಸ್ತ್ರೀ ಸಾಕ್ಷರತಾ ಪ್ರಮಾಣವು ರಾಷ್ಟ್ರೀಯ ಗ್ರಾಮೀಣ ಸ್ತ್ರೀ ಸಾಕ್ಷರತಾ ಪ್ರಮಾಣ (೪೬.೧೩)ಕ್ಕಿಂತ ಕಡಿಮೆ ಇರುವ ಹಾಗೂ ಲಿಂಗ ಅಂತರವು ರಾಷ್ಟ್ರೀಯ ಲಿಂಗ ಅಂತರಕ್ಕಿಂತ (೨೧.೫೯) ಹೆಚ್ಚಿರುವ ಬ್ಲಾಕ್‌ಗಳಲ್ಲಿ ಈ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಲಾಗುತ್ತಿದೆ.

೨೦೧೩–೧೪ ನೇ ಸಾಲಿನಲ್ಲಿ ರಾಜ್ಯದ ಶೈಕ್ಷಣಿಕವಾಗಿ ಹಿಂದುಳಿದ ತಾಲ್ಲೂಕುಗಳಲ್ಲಿ ಶಿಕ್ಷಣ ಇಲಾಖೆಯ ವತಿಯಿಂದ ೩೫ ಹಾಗೂ ಮಹಿಳಾ ಸಾಮಕ್ಯ ಸಂಸ್ಥೆಯ ವತಿಯಿಂದ ೩೦, ಒಟ್ಟು ೬೫ ಕೆ.ಜಿ.ಬಿ.ವಿ. ಶಾಲೆಗಳನ್ನು ನಡೆಸಲಾಗುತ್ತಿದೆ. ಈ ಶಾಲೆಗಳಿಗೆ ಸುಸಜ್ಜಿತವಾದ ಕಟ್ಟಡ, ಉತ್ತಮ ಗುಣಮಟ್ಟದ ಆಹಾರದ ಪೂರೈಕೆ, ಕಂಪ್ಯೂಟರ್ ಶಿಕ್ಷಣ, ವೈದ್ಯಕೀಯ ತಪಾಸಣೆ, ಸಂಗೀತ, ಯೋಗ, ಕ್ರೀಡೆ, ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ವ್ಯಕ್ತಿತ್ವ ವಿಕಾಸಕ್ಕೆ ಅವಕಾಶ, ಹೊಲಿಗೆ, ಕಸೂತಿ, ಬೊಂಬೆ ತಾರಿಕೆ, ಮೊಬೈಲ್ ಮತ್ತು ಇತರೆ ಎಲೆಕ್ಟ್ರಾನಿಕ್ ಉಪಕರಣಗಳ ದುರಸ್ತಿ ಮುಂತಾದ ವೃತ್ತಿ ಕೌಶಲಗಳನ್ನು ಗಳಿಸಿಕೊಳ್ಳಲು ಅವಕಾಶ ಒದಗಿಸಲಾಗಿದೆ.

**ಪ್ರಾಥಮಿಕ ಹಂತದಲ್ಲಿ ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ರಾಷ್ಟ್ರೀಯ ಕಾರ್ಯಕ್ರಮ (ಎನ್.ಪಿ.ಜಿ.ಇ.ಎಲ್) :** ಈ ಕಾರ್ಯಕ್ರಮವು ಶಾಲೆಯ ಹೊರಗಿರುವ ಇದುವರೆಗೆ ತಲುಪಲು ಕಷ್ಟಸಾಧ್ಯವಾಗಿರುವ ಹೆಣ್ಣುಮಕ್ಕಳನ್ನು ತಲುಪಲು ಭಾರತ ಸರ್ಕಾರವು ರೂಪಿಸಿದ ಒಂದು ಕಾರ್ಯಕ್ರಮ. ೨೦೦೩ ರಲ್ಲಿ ಪ್ರಾರಂಬಿಸಲಾದ ಈ ಕಾರ್ಯಕ್ರಮ ಸರ್ವ ಶಿಕ್ಷಣ ಅಭಿಯಾನದ ಪ್ರಮುಖ ಕಾರ್ಯಕ್ರಮವಾಗಿದೆ. ಹೆಣ್ಣು ಮಕ್ಕಳ ಶಿಕ್ಷಣ ಶಿಕ್ಷಣದ ಪ್ರಗತಿಯನ್ನು ಎತ್ತರಿಸಲು ಇದುವರೆಗಿನ ಸಾಮಾನ್ಯ ಕಾರ್ಯಕ್ರಮ ಮತ್ತು ಹೂಡಿಕೆಗಳಿಂದ ಸಾಧಿಸಲಾಗದ ಗುರಿಯನ್ನು ಸಾಧಿಸಲು ವಿಶೇಷ ಪ್ರಯತ್ನಗಳನ್ನು ಮಾಡಲು ಈ ಕಾರ್ಯಕ್ರಮವನ್ನು ರೂಪಿಸಲಾಗಿದೆ. ಈ ಕಾರ್ಯಕ್ರಮದ ಮೂಲಕ ಪ್ರತಿ ಕ್ಲಸ್ಟರ್ ಮಟ್ಟದಲ್ಲಿ ಮಾದರಿ ಶಾಲೆಯನ್ನು ತೆರೆಯುವುದು ಹಾಗೂ ಸಮುದಾಯದ ಪರಿಣಾಮಕಾರಿ ಸಹಭಾಗಿತ್ವದೊಂದಿಗೆ ಶಾಲೆಗಳಲ್ಲಿ ಹೆಣ್ಣು ಮಕ್ಕಳ ದಾಖಲಾತಿಯನ್ನು ಹೆಚ್ಚಿಸುವ ಗುರಿಯನ್ನು ಹೊಂದಿದೆ. ಶಿಕ್ಷಕರಿಗೆ ಲಿಂಗ ಸಮಾನತೆಯ ಕುರಿತಾದ ಸಂವೇದನಶೀಲತೆಯನ್ನು ಮೂಡಿಸುವುದು ಹಾಗೂ ಲಿಂಗ ಸೂಕ್ಷ್ಮ ಅಧ್ಯಯನ ಸಾಮಗ್ರಿಗಳನ್ನು ರೂಪಿಸುವುದರ ಜೊತೆಗೆ ಮಕ್ಕಳಿಗೆ ಲೇಖನ ಸಾಮಗ್ರಿ, ಪುಸ್ತಕಗಳು, ಸಮವಸ್ತ್ರ ಮುಂತಾದ ಅಗತ್ಯ ಪರಿಕರಗಳನ್ನು ಬೆಂಗಾವಲು ವ್ಯವಸ್ಥೆಯನ್ನು ಒದಗಿಸುವುದು ಮುಂತಾದ ಪ್ರೋತ್ಸಾಹಕ ಸೌಲಭ್ಯಗಳು ಈ ಕಾರ್ಯಕ್ರಮದಲ್ಲಿ ಸೇರಿವೆ.

ಗ್ರಾಮೀಣ ಮಹಿಳಾ ಸಾಕ್ಷರತೆಯ ಪ್ರಮಾಣ ರಾಷ್ಟ್ರೀಯ ಸರಾಸರಿಗಿಂತ ಕಡಿಮೆ ಇರುವ, ಲಿಂಗಾನುಪಾತ ರಾಷ್ಟ್ರೀಯ ಸರಾಸರಿಗಿಂತ ಹೆಚ್ಚಾಗಿರುವ ಹಾಗೂ ಶೈಕ್ಷಣಿಕವಾಗಿ ಹಿಂದುಳಿದಿರುವ ಬ್ಲಾಕುಗಳಲ್ಲಿ ಅನುಷ್ಠಾನ ಮಾಡಲಾಗುತ್ತದೆ. ಒಂದು ವೇಳೆ ಶೈಕ್ಷಣಿಕವಾಗಿ ಹಿಂದುಳಿದಿರುವ ಬ್ಲಾಕುಗಳ ಪರಿಧಿಯಲ್ಲಿ ಬಾರದಿದ್ದರೂ ಶೇಕಡ ಐದಕ್ಕಿಂತ ಹೆಚ್ಚಿಗೆ ಪರಿಶಿಷ್ಟ ಜಾತಿ. ಪರಿಶಿಷ್ಟ ಪಂಗಡದ ಜನ ಸಂಖ್ಯೆ ಇರುವ ಗಾಗೂ ಮಹಿಳಾ ಸಾಕ್ಷರತೆ ಶೇಕಡ ೧೦ ಕ್ಕಿಂತ ಹೆಚ್ಚಾಗಿಲ್ಲದ ಪ್ರದೇಶಗಳು ಮತ್ತು

ನಗರ ಪ್ರದೇಶದ ಆಯ್ದ ಕೊಳೆಗೇರಿಗಳಲ್ಲಿ ಈ ಕಾರ್ಯಕ್ರಮವನ್ನು ಜಾರಿ ಮಾಡಲಾಗುತ್ತದೆ.

ಈ ಯೋಜನೆಯ ಮೂಲಕ ಹೆಣ್ಣು ಮಕ್ಕಳ ಅಗತ್ಯಗಳನ್ನು ಪರಿಣಾಮಕಾರಿ ರೀತಿಯಲ್ಲಿ ಗಮನಿಸಲು, ಹಾಗೂ ನಿರ್ದಿಷ್ಟವಾಗಿ ರೂಪಿಸಲಾದ ತಂತ್ರಗಳ ಮೂಲಕ ಹಾಗೂ ಶಿಕ್ಷಕರಿಗೆ ಲಿಂಗ ಸಮಾನತೆಯ ಸಂವೇದನೆಗಳನ್ನು ಅರ್ಥೈಸುವಂತಹ ನವೀನ ವಿಧಾನಗಳನ್ನು ಅಳವಡಿಸುವ ಮೂಲಕ ಪೂರೈಸಲು ಸಾಧ್ಯವಾಗುತ್ತದೆ. ಎನ್.ಪಿ.ಜಿ.ಇ.ಎಲ್ ಯೋಜನೆಯನ್ನು ರಾಜ್ಯದ ೧೮ ಜಿಲ್ಲೆಗಳ ೬೨ ಶೈಕ್ಷಣಿಕವಾಗಿ ಹಿಂದುಳಿದ ಬ್ಲಾಕುಗಳಲ್ಲಿ ಅನುಷ್ಟಾನ ಮಾಡಲಾಗಿದೆ. ನಗರ ಪ್ರದೇಶದ ೪ ಕೊಳೆಗೇರಿಗಳೂ ಸೇರಿದಂತೆ ಒಟ್ಟು ೯೨೧ ಕ್ಲಸ್ಟರುಗಳಲ್ಲಿ ಕಾರ್ಯಕ್ರಮ ಜಾರಿ ಮಾಡಲಾಗಿದೆ ಈ ೯೨೧ ಕ್ಲಸ್ಟರ್ ಪೈಕಿ ೧೦೮ ಕ್ಲಸ್ಟರ್ ಗಳನ್ನು ಮಹಿಳಾ ಸಾಮಕ್ಯದ ಮೇಲ್ವಿಚಾರಣೆಗೆ ನೀಡಲಾಗಿದೆ.

**ವಿಶೇಷ ಕಾಳಜಿ ಅವಶ್ಯಕತೆಯಿರುವ ಮಕ್ಕಳು:** (CWSN):– ರಾಷ್ಟ್ರೀಯ ನೀತಿಯನ್ನೊಳಗೊಂಡಿರುವ ಶಿಕ್ಷಣದ ಚೌಕಟ್ಟಿನಲ್ಲಿ ರಾಜ್ಯವು ವಿಭಿನ್ನವಾದ ಸಾಮರ್ಥ್ಯ ಹೊಂದಿರುವ ಮಕ್ಕಳಿಗಾಗಿ ಎಸ್‌ಎಸ್‌ಎ ಯೋಜನೆಯಡಿ ಕಾರ್ಯತತ್ಪರತೆಯನ್ನು ಕೈಗೆತ್ತಿಗೊಂಡಿದೆ. ಎನ್‌ಜಿಓಗಳು ಕೂಡ ತರಬೇತಿ, ಯೋಜನೆ, ಮನೆಯಲ್ಲಿಯೇ ಕಲಿಕೆ, ವೈದ್ಯಕೀಯ ಪುನರ್ವಸತಿ ಮತ್ತು ಜಾಗೃತಿ ಶಿಬಿರಗಳನ್ನು ಆಯೋಜಿಸುವಲ್ಲಿ ತೊಡಗಿಕೊಂಡಿವೆ. ತಂದೆತಾಯಿಗಳಿಗೆ ಜಾಗೃತಿ ಯೋಜನೆ ಮತ್ತು ಸಲಹಾ ಸೇವೆಗಳನ್ನು ಒದಗಿಸಲಾಗಿದೆ. ಮಕ್ಕಳಿಗೆ ಸಹಾಯಕ ಉಪಕರಣಗಳನ್ನು ನೀಡಲಾಗಿದೆ, ಶಾಲೆಗಳಲ್ಲಿ ರ‍್ಯಾಂಪ್‌ಗಳನ್ನು ನಿರ್ಮಿಸಲಾಗಿದೆ. ವಿಶೇಷ ತರಬೇತಿ ಪಡೆದ ಶಿಕ್ಷಕರಿಗೆ ಮತ್ತು CWSN ಮಕ್ಕಳಿಗಾಗಿ ೨೦೨ ಸಂಪನ್ಮೂಲ ಕೊಠಡಿಗಳನ್ನು ಸ್ಥಾಪಿಸಲಾಗಿದೆ. ಮಕ್ಕಳಿಗೆ ಶಾಲೆಗಳಲ್ಲಿ ಊಟ ಬಡಿಸುವಾಗ ಮನೆಯಂತಹ ವಾತಾವರಣ ನೀಡಲು ಎಲ್ಲಾ ಶಾಲೆಗಳಲ್ಲೂ ತಾಯಂದಿರ ಸಮಿತಿಯನ್ನು ರಚಿಸಲಾಗಿದೆ. ಇವು ತುಂಬಾ ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸುತ್ತಿದ್ದು, ಇವರು ಉತ್ತಮ ಗುಣಮಟ್ಟದ ಆಹಾರ ಸರಬರಾಜು ಮಾಡಲು ಸೂಕ್ತವಾದ ಸಲಹೆಗಳನ್ನು ನೀಡಬಹುದಾಗಿದೆ.

**ಸುವರ್ಣ ಆರೋಗ್ಯ ಚೈತನ್ಯ ಯೋಜನೆ:** ಈ ಯೋಜನೆಯನ್ನು ೨೦೦೬–೦೭ರಲ್ಲಿ ಜಾರಿಗೆ ತಂದು ಇದರಡಿಯಲ್ಲಿ ಒಂದರಿಂದ ಹತ್ತನೇ ತರಗತಿಯವರೆಗೆ ಕಲಿಯುತ್ತಿರುವ ಸರ್ಕಾರಿ ಅನುದಾನರಹಿತ ಶಾಲೆಗಳಲ್ಲಿನ ಎಲ್ಲಾ ಮಕ್ಕಳನ್ನು ವೈದ್ಯಕೀಯ ತಪಾಸಣೆಗೆ ಒಳಪಡಿಸಲಾಗುತ್ತದೆ. ಎಸ್‌ಎಸ್‌ಎ ಮತ್ತು ಎನ್‌ಆರ್‌ಎಂಹೆಚ್‌ನ ಜಂಟಿ ಪ್ರಯತ್ನದ ಮೂಲಕ ಆರೋಗ್ಯ ಚೀಟಿಯನ್ನು ಮುದ್ರಿಸಿ ಎಲ್ಲಾ ಶಾಲೆಗಳಿಗೆ ಹಂಚಲಾಗಿದೆ.

**೨,೪ ಮತ್ತು ೮ನೇ ತರಗತಿ ವಿದ್ಯಾರ್ಥಿಗಳ ಕಲಿಕಾ ಗುಣಮಟ್ಟ ಅಧ್ಯಯನ:** ವಿದ್ಯಾರ್ಥಿಗಳ ಕಲಿಕಾ ಗುಣಮಟ್ಟ ಖಾತ್ರಿಪಡಿಸಿಕೊಳ್ಳುವ ಸಲುವಾಗಿ ಕರ್ನಾಟಕ ರಾಜ್ಯ ಗುಣಮಟ್ಟ ಮೌಲ್ಯಾಂಕನ ಮತ್ತು ಪ್ರಾಮಾಣೀಕರಣ (KSQAAC) ಸಂಸ್ಥೆಯನ್ನು ಸ್ಥಾಪಿಸಿ ಅಧ್ಯಯನವನ್ನು ಕೈಗೊಳ್ಳಲಾಗುತ್ತಿದೆ. ೨೦೧೫–೧೬ ನೇ ಸಾಲಿನ ಅಧ್ಯಯನದ ಪ್ರಕಾರ ರಾಜ್ಯದಲ್ಲಿನ ಶಾಲಾಮಕ್ಕಳ ಸಾಧನೆ ಈ ಕೆಳಗಿನಂತಿದೆ.

| ತರಗತಿ | ವಿಷಯವಾರು, ಶೇಕಡಾವಾರು ಸಾಧನೆ | | | | |
|---|---|---|---|---|---|
| | ಕನ್ನಡ | ಗಣಿತ | ಪರಿಸರ ಅಧ್ಯಯನ | ವಿಜ್ಞಾನ | ಸಮಾಜ ವಿಜ್ಞಾನ |
| ೨ನೇ ತರಗತಿ | ೭೩.೪೩ | ೭೨.೫೬ | ೭೮.೩೧ | – | – |
| ೪ನೇ ತರಗತಿ | ೬೪.೮೭ | ೬೫.೫೩ | ೬೮.೯೦ | – | – |
| ೮ನೇ ತರಗತಿ | ೫೬.೭೬ | ೪೫.೯೮ | – | ೫೫.೪೩ | ೬೫.೫೮ |

**ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ :** ಪ್ರೌಢ ಶಾಲಾ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸುವ ನಿಟ್ಟಿನಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಹಭಾಗಿತ್ವದೊಂದಿಗೆ ಅನುಷ್ಠಾನಗೊಂಡಿರುವ ಕಾರ್ಯಕ್ರಮ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಕಾರ್ಯಕ್ರಮ. ಈ ಅಭಿಯಾನದ ಮುಖ್ಯ ಉದ್ದೇಶ ಸಾರ್ವತ್ರಿಕ ಪ್ರವೇಶ, ಸಮಾನತೆ ಮತ್ತು ಸಾಮಾಜಿಕ ನ್ಯಾಯ, ಸಮಾನ ನೀತಿ ಸಂಬಂಧ ಮತ್ತು ಅಭಿವೃದ್ಧಿ ಮತ್ತು ಪಠ್ಯಪುಸ್ತಕ ರಚನೆ, ದೃಷ್ಟಿ ಸಾರ್ವತ್ರಿಕ ಪ್ರೌಢ ಶಿಕ್ಷಣವು ಸಮಾನತೆಗೆ ಅವಕಾಶ ನೀಡುತ್ತದೆ. ಪ್ರೌಢ ಶಿಕ್ಷಣದ ಗುಣಮಟ್ಟ ಉತ್ತಮಪಡಿಸುವಿಕೆ ಮತ್ತು ಸಾರ್ವತ್ರಿಕ ಪ್ರವೇಶವು ಈ ಕಾರ್ಯಕ್ರಮದ ಉದ್ದೇಶವಾಗಿರುತ್ತದೆ. ಶಿಕ್ಷಣ ಸಂಬಂಧ ಕಾರ್ಯಭಾರದಲ್ಲಿ ಪ್ರೌಢ ಶಿಕ್ಷಣವು ಒಂದು ನಿಶ್ಚಿತ ಘಟ್ಟ, ಇದು ಪ್ರೌಢ ಶಿಕ್ಷಣ ವಿದ್ಯಾರ್ಥಿಗಳನ್ನು ಉನ್ನತ ಶಿಕ್ಷಣಕ್ಕೆ ಮತ್ತು ಮುಂದಿನ ಕೆಲಸ ಕಾರ್ಯಗಳಿಗೆ ಸಿದ್ಧಪಡಿಸುತ್ತದೆ. ಎಂಟನೇ ತರಗತಿಯವರೆಗೆ ಓದಿರುವ ವಿದ್ಯಾರ್ಥಿಗಳಿಗಿಂತ ಪ್ರೌಢ ಶಿಕ್ಷಣ ಶಾಲೆಯ ಪ್ರಮಾಣ ಪತ್ರ ಹೊಂದಿರುವವರ ಸರಾಸರಿ ಕಲಿಕೆಯು ಅರ್ಥವುಳ್ಳದ್ದಾಗಿರುತ್ತದೆ. ಮಕ್ಕಳನ್ನು ಪ್ರಾಪಂಚಿಕ ಕೆಲಸಗಳಿಗೆ ಅನುವು ಮಾಡಲು ಎಂಟು ವರ್ಷಗಳ ವಿದ್ಯಾಭ್ಯಾಸ ಸಾಲುವುದಿಲ್ಲ. ಪ್ರಾಥಮಿಕ ಶಿಕ್ಷಣವು ರಾಜ್ಯ ಶಾಸನಾನುಸಾರವಾಗಿರುವುದರಿಂದ ಸಾರ್ವತ್ರಿಕ ಪ್ರೌಢ ಶಿಕ್ಷಣದತ್ತ ದೃಷ್ಟಿಯನ್ನು ಹರಿಸುವುದು ಸಂಪೂರ್ಣವಾಗಿ ಅವಶ್ಯಕವಾಗಿರುತ್ತದೆ.

**ಗುರಿಗಳು :** ೧) ಐದು ಕಿ. ಮೀ. ವ್ಯಾಪ್ತಿಯಲ್ಲಿ ಸ್ಥಳೀಯ ಅಗತ್ಯತೆಗಳಿಗನುಗುಣವಾಗಿ ಪ್ರೌಢ ಶಿಕ್ಷಣ ಸೌಲಭ್ಯವನ್ನು ಒದಗಿಸುವುದು; ೨) ಯಾವುದೇ ವಿದ್ಯಾರ್ಥಿ ಪ್ರೌಢ ಶಿಕ್ಷಣದಿಂದ ವಂಚಿತರಾಗದಂತೆ ಕ್ರಮ ವಹಿಸುವುದು; ೩) ಎಲ್ಲಾ ಸರ್ಕಾರಿ ಪ್ರೌಢ ಶಾಲೆಗಳಲ್ಲಿಪರಿಣಾಮಕಾರಿ ಶಿಕ್ಷಣ ನೀಡಲು ಪೂರಕವಾಗುವ ಭೌತಿಕ ಸೌಲಭ್ಯಗಳನ್ನು ಒದಗಿಸುವುದು; ೪) ಎಲ್ಲಾ ವಿದ್ಯಾರ್ಥಿಗಳು ನಿರೀಕ್ಷಿತ ಗುಣ ಮಟ್ಟದ ಶಿಕ್ಷಣವನ್ನು ಪಡೆಯುವಂತೆ ಪೂರಕ ಕಾರ್ಯಕ್ರಮಗಳನ್ನು ಆಯೋಜಿಸುವುದು. ಹಿರಿಯ ಪ್ರಾಥಮಿಕ ಶಾಲೆಯ ೫ ಕಿ.ಮೀ. ವ್ಯಾಪ್ತಿಯೊಳಗೆ ಪ್ರೌಢಶಾಲೆ ಸೌಲಭ್ಯವನ್ನು ಒದಗಿಸುವುದು ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನದ ಪ್ರಮುಖ ಉದ್ದೇಶವಾಗಿದೆ. ಈ ಉದ್ದೇಶದ ಅನುಸಾರವಾಗಿ

೨೦೦೯-೧೦ ರಲ್ಲಿ ೮೦, ೨೦೧೦-೧೧ ರಲ್ಲಿ ೨೨೫, ೨೦೧೩-೧೪ ರಲ್ಲಿ ೨೮, ೨೦೧೪-೧೫ ರಲ್ಲಿ ೬೬, ೨೦೧೫-೧೬ ರಲ್ಲಿ ೪೫ ಹೀಗೆ ೨೦೦೯ ರಿಂದ ೨೦೧೫-೧೬ ರವರೆಗೆ ರಾಜ್ಯದಲ್ಲಿ ಒಟ್ಟು ೪೪೪ ಹಿರಿಯ ಪ್ರಾಥಮಿಕ ಶಾಲೆಗಳನ್ನು ಪ್ರೌಢಶಾಲೆಗಳನ್ನಾಗಿ ಉನ್ನತೀಕರಿಸಲಾಗಿದೆ.

**ಹೆಣ್ಣು ಮಕ್ಕಳ ವಸತಿ ನಿಲಯಗಳು:** ರಾಜ್ಯದಲ್ಲಿ ಶೈಕ್ಷಣಿಕವಾಗಿ ಹಿಂದುಳಿದ ೬೨ ಬ್ಲಾಕ್ ಗಳಿಗೆ ತಲಾ ಒಂದು ಹೆಣ್ಣು ಮಕ್ಕಳ ವಸತಿ ನಿಲಯ ೨೦೦೯-೧೦ ರಲ್ಲಿ ಮಂಜೂರಾಗಿದ್ದು ೨೦೧೦-೧೧ ನೇ ಸಾಲಿನಿಂದ ಕಾರ್ಯ ನಿರ್ವಹಿಸುತ್ತಿರುತ್ತವೆ. ೪೯ ವಸತಿ ನಿಲಯಗಳುಸರ್ವ ಶಿಕ್ಷಣ ಅಭಿಯಾನದ ಕೆ.ಜಿ.ಬಿ.ವಿ. ಶಾಲೆಗಳಲ್ಲಿ, ೦೯ ವಸತಿ ನಿಲಯಗಳು ಸ್ವಂತ ಕಟ್ಟಡಗಳಲ್ಲಿ ಹಾಗೂ ೧೪ ವಸತಿ ನಿಲಯಗಳು ಬಾಡಿಗೆ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಪ್ರತಿ ವಸತಿ ನಿಲಯದಲ್ಲಿ ೯ ಮತ್ತು ೧೦ ನೇ ತರಗತಿಗಳಲ್ಲಿ ವ್ಯಾಸಂಗ ಮಾಡುವ ಸರಾಸರಿ ೫೦ ಮಕ್ಕಳಿದ್ದು ಅವರಿಗೆ ಊಟ, ವಸತಿ, ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಯೋಜನೆಯ ಅಡಿಯಲ್ಲಿ ೨೩೩೬ ಶಾಲಾ ಕೊಠಡಿಗಳ ನಿರ್ಮಾಣ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು ಆ ಪೈಕಿ ೮೧೦ ಕಾಮಗಾರಿಗಳು ಮುಕ್ತಾಯವಾಗಿದ್ದು ೩೯೫ ಕಾಮಗಾರಿಗಳು ಮುಕ್ತಾಯದ ಹಂತದಲ್ಲಿರುತ್ತವೆ. ೩೩೫ ಕಾಮಗಾರಿಗಳು ಇನ್ನೂ ಪ್ರಾರಂಭವಾಗಿರುವುದಿಲ್ಲ. ಉಳಿದ ಕಾಮಗಾರಿಗಳು ವಿವಿಧ ಹಂತದ ಪ್ರಗತಿಯಲ್ಲಿವೆ.

**ಅನುದಾನ ಮತ್ತು ವೆಚ್ಚಗಳು:** ೨೦೧೫-೧೬ನೇ ಸಾಲಿನಲ್ಲಿ ಕೇಂದ್ರ ಯೋಜನಾ ಅನುಮೋದನಾ ಮಮಡಳಿಯಿಂದ ರೂ ೨೫,೭೪೩ ಲಕ್ಷ ಮೊತ್ತದ ವಾರ್ಷಿಇಕ ಕ್ರಿಯಾ ಯೋಜನೆ ಮಂಜೂರಾಗಿರುತ್ತದೆ. ಇದರಲ್ಲಿ ಶೇ ೭೫ ಕೇಂದ್ರ ಸರ್ಕಾರದ ಪಾಲು ಹಾಗೂ ಶೇ ೨೫ ರಾಜ್ಯ ಸರ್ಕಾರದ ಪಾಲು. ಅನುಮೋದಿತ ವೆಚ್ಚಗಳ ಪ್ರಕಾರ ಈ ಮೊತ್ತವನ್ನು ಶಾಲಾ ಅನುದಾನ, ಹೊಸ ಶಾಲೆಗಳ ಮುಖ್ಯ ಶಿಕ್ಷಕರ ಮತ್ತು ಶಿಕ್ಷಕರ ವೇತನ, ಸೇವಾ ನಿರತ ಶಿಕ್ಷಕರ ತರಬೇತಿ, ಹೆಣ್ಣು ಮಕ್ಕಳಿಗೆ ಸ್ವಯಂ ರಕ್ಷಣೆ ತರಬೇತಿ, ವಿಜ್ಞಾನ ಮತ್ತು ಮೆಟ್ರಿಕ್ ಮೇಳ, ಹೆಣ್ಣು ಮಕ್ಕಳ ವಸತಿ ನಿಲಯಗಳು, ಸ್ವಚ್ಛ ಭಾರತ ಸ್ವಚ್ಛ ವಿದ್ಯಾಲಯ, ಮುಂತಾದ ಬಾಬ್ತುಗಳಿಗೆ ಖರ್ಚು ಮಾಡಬೇಕಾಗಿದೆ.

**ರಾಷ್ಟ್ರೀಯ ಕೌಶಲ್ಯ ಅರ್ಹತಾ ಚೌಕಟ್ಟು:** ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವು ಕೌಶಲ್ಯ ಅರ್ಹತಾ ಚೌಕಟ್ಟು (ಎನ್.ಎಸ್.ಕ್ಯೂ.ಎಫ್) ಎಂಬ ನೂತನ ಯೋಜನೆಯನ್ನು ಪ್ರಾರಂಭಿಸಿದೆ. ಯೋಜನೆಯ ಮಾರ್ಗಸೂಚಿ ಪ್ರಕಾರ ಈ ಯೋಜನೆಯನ್ನು ಆರ್.ಎಂ.ಎಸ್.ಎ. ಅಡಿಯಲ್ಲಿ ಅನುಷ್ಠಾನ ಮಾಡಬೇಕಾಗಿದೆ. ಸಾಮಾನ್ಯ ಶಿಕ್ಷಣದಲ್ಲಿ ವಿದ್ಯಾರ್ಥಿಗಳ ಆಸಕ್ತಿಗೆ ಅನುಗುಣವಾಗಿ ವೃತ್ತಿ ಶಿಕ್ಷಣದ ವಿಷಯಗಳನ್ನು ಅಳವಡಿಸಿ ಉದ್ಯೋಗ ನಿರ್ವಹಿಸಲು ಅಗತ್ಯವಾದ ಕೌಶಲ್ಯಗಳು ಮತ್ತು ಸಾಮರ್ಥ್ಯಗಳನ್ನು ಗಳಿಸಲು ತರಬೇತಿ ನೀಡುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಈ ಯೋಜನೆ ಸ್ವಯಂ ಪ್ರೇರಿತವಾಗಿದ್ದು ಆಸಕ್ತಿಯಿರುವ ವಿದ್ಯಾರ್ಥಿಗಳು ಮಾತ್ರ ಆಯ್ಕೆ ಮಾಡಿಕೊಳ್ಳಬಹುದಾಗಿದೆ. ೯ ರಿಂದ ೧೨ ನೇ ತರಗತಿ ಹಾಗೂ ತದನಂತರ ಪದವಿ ತರಗತಿ, ಸ್ನಾತಕ ಪದವಿ ಮತ್ತು ಪಿ.ಎಚ್. ಡಿ. ವರೆಗೆ ನಿರಂತರ ಮುಂದುವರೆಯಬಹುದಾಗಿದೆ.

## ಪ್ರೌಢ ಶಿಕ್ಷಣ

೧೮೫೮ರಲ್ಲಿ ಮದರಾಸು ವಿಶ್ವವಿದ್ಯಾಲಯಕ್ಕೆ ಸಂಯೋಜನೆಗೊಂಡ ಪ್ರಥಮ ಸರ್ಕಾರಿ ಪ್ರೌಢಶಾಲೆಯನ್ನು ಬೆಂಗಳೂರಿನಲ್ಲಿ ಮೈಸೂರು ಸಂಸ್ಥಾನ ಪ್ರಾರಂಭ ಮಾಡಿತು. ನಂತರ ತುಮಕೂರು, ಶಿವಮೊಗ್ಗ ಮತ್ತು ಹಾಸನದ ಮಿಶನ್ ಸ್ಕೂಲ್‌ಗಳನ್ನು ಮೈಸೂರಿನ ಮಹಾರಾಜಾ ಸ್ಕೂಲನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಲಾಯಿತು. ಪ್ರೌಢ ಶಿಕ್ಷಣವು ಮಾಧ್ಯಮಿಕ ಶಾಲೆ ಮತ್ತು ಹೈಸ್ಕೂಲ್ ಎಂಬ ಎರಡು ಹಂತಗಳನ್ನೊಳಗೊಂಡಿತ್ತು. ಸ್ವಾತಂತ್ರ್ಯಾನಂತರ ಜಿಲ್ಲಾ ಬೋರ್ಡ್ ಅನೇಕ ಹೈಸ್ಕೂಲ್‌ಗಳನ್ನು ಪ್ರಾರಂಭಿಸಿತು. ೧೮೮೨ರಲ್ಲಿ ಬೆಳಗಾವಿ ವಿಭಾಗದಲ್ಲಿ ನಾಲ್ಕು ಪ್ರೌಢಶಾಲೆಗಳೂ, ಮದರಾಸ್ ವಿಭಾಗದಲ್ಲಿ ಎರಡು ಪ್ರೌಢಶಾಲೆಗಳೂ ಇದ್ದವು. ೧೮೭೫ರಲ್ಲಿ ಗುಲಬರ್ಗಾದ ಎ.ವಿ. ಶಾಲೆಯನ್ನು ಪ್ರೌಢಶಾಲೆಯಾಗಿ ಮೇಲ್ದರ್ಜೆಗೇರಿಸಲಾಯಿತು. ಮಡಿಕೇರಿಯ ಸೆಂಟ್ರಲ್ ಶಾಲೆಯನ್ನು ೧೮೭೯ರಲ್ಲಿ ಪ್ರೌಢಶಾಲೆಯ ಮಟ್ಟಕ್ಕೇರಿಸಲಾಯಿತು. ರಾಜ್ಯ ಪುನರ್‌ವಿಂಗಡಣೆಯ ನಂತರ ಉನ್ನತ ಶಿಕ್ಷಣವು ಪ್ರತ್ಯೇಕ ಅರ್ಥ ಪಡೆಯಿತು. ಹಳೇ ಮೈಸೂರು ಭಾಗದಲ್ಲಿ ಎಂಟನೇ ತರಗತಿಯ ನಂತರ ಮೂರು ವರ್ಷಗಳ ಕ್ರಮವನ್ನನುಸರಿಸಿದರೆ, ಬಾಂಬೆ ಕರ್ನಾಟಕದ ಭಾಗದಲ್ಲಿ ಏಳನೇ ತರಗತಿ ಅಥವಾ ಮುಲ್ಕಿ ಶಾಲೆಗಳ ನಂತರ ನಾಲ್ಕು ವರ್ಷಗಳ ಅವಧಿಯ ಕ್ರಮವನ್ನನುಸರಿಸಲಾಯಿತು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಾಥಮಿಕ (ಐದನೆ ತರಗತಿಯವರೆಗೆ) ಮಾಧ್ಯಮಿಕ (ಎಂಟನೇ ತರಗತಿಯವರೆಗೆ) ಮತ್ತು ಪ್ರೌಢ ಶಾಲೆಗಳು (೧೧ನೇ ತರಗತಿಯವರೆವಿಗೆ)ಇದ್ದವು. ಹೈದ್ರಾಬಾದ್ ಭಾಗದಲ್ಲಿಯೂ ಇದೇ ರೀತಿಯ ಪದ್ಧತಿ ಜಾರಿಯಲ್ಲಿದ್ದಿತು.

ರಾಜ್ಯ ಪುನರ್‌ವಿಂಗಡಣೆಯ ವೇಳೆಗೆ ರಾಜ್ಯದಲ್ಲಿ ೫೩೭ ಪ್ರೌಢ ಶಾಲೆಗಳಿದ್ದವು. (ಎರಡು ಮಿಲಿಟರಿ ಶಾಲೆಗಳೂ ಸೇರಿ) ಅವುಗಳಲ್ಲಿ ಒಟ್ಟು ೧,೨೫,೬೪೫ ವಿದ್ಯಾರ್ಥಿಗಳಿದ್ದರು. ಪ್ರೌಢ ಶಿಕ್ಷಣದಲ್ಲಿ ಒಂದು ಹೊಸ ಪಠ್ಯಕ್ರಮವನ್ನು ೧೯೬೦ರಲ್ಲಿ ಪ್ರಾರಂಭಿಸಿ, ಏಕರೂಪ ನಮೂನೆಯ ಪಠ್ಯಕ್ರಮ ಮತ್ತು ಪರೀಕ್ಷಾ ಪದ್ಧತಿಯನ್ನು ರಾಜ್ಯದಾದ್ಯಂತ ಜಾರಿಗೆ ತರಲಾಯಿತು. ಇದನ್ನು ೧೯೬೩ರ ವೇಳೆಗೆ ಸಾಧಿಸಲಾಯಿತು. ಪ್ರೌಢ ಶಾಲೆಯಲ್ಲಿ ಎಂಟು, ಒಂಭತ್ತು ಮತ್ತು ಹತ್ತನೇ ತರಗತಿಗಳನ್ನೊಳಗೊಂಡ ಹತ್ತು ವರ್ಷಗಳ ಅವಧಿಯ ಎಸ್.ಎಸ್.ಎಲ್.ಸಿ.ಯನ್ನು ರಾಜ್ಯದ ಎಲ್ಲೆಡೆ ಏಕರೂಪವಾಗಿ ಜಾರಿಗೆ ತರಲಾಯಿತು. ಎಂಟು, ಒಂಭತ್ತು ಮತ್ತು ಹತ್ತನೇ ತರಗತಿಯುಳ್ಳ ಶಾಲೆಗಳನ್ನು ಪ್ರೌಢ ಶಾಲಾ ತರಗತಿಗಳೆಂದು ಕರೆಯಲಾಯಿತು. ವಿದ್ಯಾರ್ಥಿಗಳು ಪ್ರಾಥಮಿಕ ಶಿಕ್ಷಣದಲ್ಲಿ ಕಲಿತ ಎಲ್ಲಾ ಸಾಮರ್ಥ್ಯಗಳನ್ನು ವಿಸ್ತರಿಸುವುದು ಮತ್ತು ಬೆಳೆಸುವುದು ಪ್ರೌಢ ಶಿಕ್ಷಣದ ಪ್ರಮುಖ ಉದ್ದೇಶವಾಗಿದೆ.ಪ್ರೌಢ ಶಾಲೆಗಳನ್ನು ಹೈಯರ್ ಸೆಕೆಂಡರಿ ಶಾಲೆಗಳನ್ನಾಗಿ ಪರಿವರ್ತಿಸುವ ಯೋಜನೆಯನ್ನು ಹನ್ನೊಂದನೇ ತರಗತಿಯನ್ನು ಪ್ರಾರಂಭ ಮಾಡುವುದರ ಮೂಲಕ ೧೯೬೪-೬೫ರಲ್ಲಿ ರಾಜ್ಯದಲ್ಲಿ ೫೦ ಶಾಲೆಗಳನ್ನು ಮೇಲ್ದರ್ಜೆಗೇರಿಸಲಾಯಿತು. ಒಂದು ವರ್ಷದ ಪದವಿ ಪೂರ್ವ ಪದ್ಧತಿಯನ್ನು ಆರಂಭಿಸಿದಾಗ ಹನ್ನೊಂದನೇ ತರಗತಿಯ ಪದ್ಧತಿಯು ಕೊನೆಗೊಂಡು ಇದು ೧೯೭೨ರಲ್ಲಿ ಎರಡು ವರ್ಷಗಳ ಅವಧಿಯದಾಯಿತು.

## ಪ್ರೌಢ ಶಿಕ್ಷಣ ನಿರ್ದೇಶನಾಲಯ

ಈ ನಿರ್ದೇಶನಾಲಯ ೧೯೭೯–೮೦ ರಿಂದ ಅಸ್ತಿತ್ವದಲ್ಲಿರುವುದಾಗಿ ತಿಳಿದು ಬರುತ್ತದೆ. ರಾಜ್ಯದಲ್ಲಿರುವ ಎಲ್ಲ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಪ್ರೌಢಶಾಲೆಗಳು ಈ ನಿರ್ದೇಶನಾಲಯದ ವ್ಯಾಪ್ತಿಗೆ ಒಳಪಡುತ್ತವೆ. ಹೊಸ ಶಾಲೆಗಳ ಸ್ಥಾಪನೆ, ಹುದ್ದೆಗಳ ಮಂಜೂರಾತಿ, ಶಿಕ್ಷಕರ ನೇಮಕಾತಿ; ಇತ್ಯಾದಿಗಳ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದು, ಸರ್ಕಾರದಿಂದ ಮಂಜೂರಾತಿ ಪಡೆದು ಅನುಷ್ಠಾನಗೊಳಿಸುವುದು, ಪ್ರೌಢಶಾಲೆಗಳಲ್ಲಿ ಹೆಚ್ಚುವರಿ ವಿಭಾಗಗಳನ್ನು ಪ್ರಾರಂಭಿಸಲು ಅನುಮತಿ ನೀಡುವುದು, ಇತ್ಯಾದಿ ಕರ್ತವ್ಯಗಳು ಸೇರಿದಂತೆ ೮ರಿಂದ ೧೦ನೇ ತರಗತಿಗಳವರೆಗಿನ ಶಾಲಾ ಶಿಕ್ಷಣದ ಸಂಪೂರ್ಣ ಉಸ್ತುವಾರಿ ಈ ನಿರ್ದೇಶನಾಲಯದ ಕೆಲಸ.ಅಲ್ಲದೆ, ವಾಣಿಜ್ಯ ಶಿಕ್ಷಣ, ದೈಹಿಕ ಶಿಕ್ಷಣ, ಕಲಾ ಶಿಕ್ಷಣ, ಸಂಗೀತ, ನೃತ್ಯ ಶಿಕ್ಷಣ ಮುಂತಾದ ವಿಭಾಗಗಳು ಈ ನಿರ್ದೇಶನಾಲಯದ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತವೆ.ಸರ್ಕಾರದ ವತಿಯಿಂದ ರಾಜ್ಯ ಮಟ್ಟದ ಕನ್ನಡ ರಾಜ್ಯೋತ್ಸವ, ಸ್ವತಂತ್ರ ದಿನಾಚರಣೆ, ಗಣರಾಜ್ಯ ದಿನಾಚರಣೆ ಮುಂತಾದ ರಾಷ್ಟ್ರೀಯ ಹಬ್ಬಗಳ ಆಚರಣೆಯಲ್ಲಿ ಪ್ರಮುಖ ಪಾತ್ರ ವಹಿಸುವುದರ ಜೊತೆಗೆ ವಿದ್ಯಾರ್ಥಿಗಳಿಂದ ಆಕರ್ಷಕವಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಡುವುದು. ಶಾಲೆ, ತಾಲ್ಲೂಕು, ಜಿಲ್ಲೆ ಮತ್ತು ರಾಜ್ಯ ಮಟ್ಟದಲ್ಲಿ ವಿದ್ಯಾರ್ಥಿಗಳ ಕ್ರೀಡೆ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳನ್ನು ಆಯೋಜಿಸುವುದು. ಶಾಲೆಗಳಲ್ಲಿ ಸ್ಕೌಟ್ಸ್, ಗೈಡ್ಸ್ ಮತ್ತು ಸೇವಾದಳ ಚಟುವಟಿಕೆಗಳನ್ನು ಪ್ರೋತ್ಸಾಹಿಸುವುದು. ಖಾಸಗಿ ಆಡಳಿತದ ಸಂಸ್ಕೃತ ಶಿಕ್ಷಣ ಮತ್ತು ದೈಹಿಕ ಶಿಕ್ಷಣ ಸಂಸ್ಥೆಗಳ ನಿಯಂತ್ರಣ. ಈ ನಿರ್ದೇಶನಾಲಯದ ವ್ಯಾಪ್ತಿಗೆ ಒಳಪಡುತ್ತದೆ.

### ಕೋಷ್ಟಕ ೧೦.೨೦: ೨೦೧೫–೧೬ರಲ್ಲಿದ್ದಂತೆ ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪ್ರೌಢಶಾಲೆಗಳ ವಿವರ

| ಶಿಕ್ಷಣ ಇಲಾಖೆಯ | ಸಮಾಜ ಕಲ್ಯಾಣ ಮತ್ತು ಸ್ಥಳೀಯ ಆಡಳಿತ | ಅನುದಾನಿತ | ಅನುದಾನರಹಿತ | ಕೇಂದ್ರ ಸರ್ಕಾರಿ ಮತ್ತು ಇತರೆ | ಅನಧಿಕೃತ | ಒಟ್ಟು ಶಾಲೆಗಳು |
|---|---|---|---|---|---|---|
| ೪೬೫೯ | ೫೬೬ | ೩,೭೬೫ | ೬,೦೧೩ | ೮೪ | ೦೧ | ೧೫,೧೪೧ |

### ಕೋಷ್ಟಕ ೧೦.೨೧: ೨೦೧೦–೧೧ ರಿಂದ ೨೦೧೫–೧೬ರ ಅವಧಿಯಲ್ಲಿ ಕರ್ನಾಟಕದ ಪ್ರೌಢಶಾಲೆಗಳಲ್ಲಿಮಕ್ಕಳ ದಾಖಲಾತಿ ವಿವರ

| ತರಗತಿಗಳು | ದಾಖಲಾದ ಒಟ್ಟು ಮಕ್ಕಳ ಸಂಖ್ಯೆ– ವರ್ಷವಾರು (ಲಕ್ಷಗಳಲ್ಲಿ) | | | | | |
|---|---|---|---|---|---|---|
| | ೨೦೧೦–೧೧ | ೨೦೧೧–೧೨ | ೨೦೧೨–೧೩ | ೨೦೧೩–೧೪ | ೨೦೧೪–೧೫ | ೨೦೧೫–೧೬ |
| ೯ ಮತ್ತು ೧೦ | ೧೬.೪೮ | ೧೬.೭೬ | ೧೬.೬೭ | ೧೬.೮೪ | ೧೭.೬೬ | ೧೭.೭೪ |

### ಕೋಷ್ಟಕ ೧೦.೨೨: ೨೦೧೫–೧೬ ನೇ ಸಾಲಿನಲ್ಲಿ ವಿವಿಧ ಪ್ರವರ್ಗದ ಮಕ್ಕಳ ದಾಖಲಾತಿ ಸಂಖ್ಯೆ:

| ತರಗತಿ | ಸಾಮಾನ್ಯ | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಹಿಂದುಳಿದ ವರ್ಗ | ಒಟ್ಟು | ವಿಶೇಷ ಚೇತನ ಮಕ್ಕಳು |
|---|---|---|---|---|---|---|
| ೯–೧೦ | ೨,೫೧,೫೬೨ | ೩,೨೦,೦೪೯ | ೧,೨೬,೫೬೩ | ೧೦,೭೬,೦೯೦ | ೧೭,೭೪,೨೬೪ | ೧೪,೪೩೭ |

### ಕೋಷ್ಟಕ ೧೦.೨೩: ೨೦೧೫–೧೬ನೇ ಸಾಲಿನಲ್ಲಿ ರಾಜ್ಯದ ವಿವಿಧ ಆಡಳಿತ ವರ್ಗದ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರ ವಿವರ

| ವಿವರಗಳು | | ಶಿಕ್ಷಣ ಇಲಾಖೆ | ಸ. ಕ. ಇಲಾಖೆ/ ಸ್ಥಳೀಯ ಆಡಳಿತ | ಕೇಂದ್ರ ಸರ್ಕಾರಿ | ಅನುದಾನಿತ | ಅನುದಾನ ರಹಿತ | ಇತರೆ | ಒಟ್ಟು |
|---|---|---|---|---|---|---|---|---|
| ಪ್ರೌಢಶಾಲೆಗಳು | ಮಂಜೂರಾದ ಹುದ್ದೆಗಳು | ೪೪,೬೩೦ | ೩,೫೦೫ | ೭೫೭ | ೩೪,೭೬೯ | ೩೯,೩೯೮ | ೪೮ | ೧,೨೩,೧೦೭ |
| | ಕಾರ್ಯ ನಿರ್ವಹಿಸುತ್ತಿರುವ ಸಂಖ್ಯೆ | ೩೮,೯೨೩ | ೨,೩೪೮ | ೬೪೮ | ೨೮,೮೫೪ | ೩೭,೦೯೧ | ೩೧ | ೧,೦೮,೧೯೫ |

### ಕೋಷ್ಟಕ ೧೦.೨೪: ೨೦೧೫–೧೬ನೇ ಸಾಲಿನಲ್ಲಿ ರಾಜ್ಯದ ವಿವಿಧ ಆಡಳಿತ ವರ್ಗದ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವವರ ಪೈಕಿ ಪುರುಷರು ಮತ್ತು ಮಹಿಳಾ ಶಿಕ್ಷಕರ ವಿವರ

| ವಿವರಗಳು | | ಶಿಕ್ಷಣ ಇಲಾಖೆ | ಸ. ಕ. ಇಲಾಖೆ/ ಸ್ಥಳೀಯ ಆಡಳಿತ | ಕೇಂದ್ರ ಸರ್ಕಾರಿ | ಅನುದಾನಿತ | ಅನುದಾನ ರಹಿತ | ಇತರೆ | ಒಟ್ಟು |
|---|---|---|---|---|---|---|---|---|
| ಪ್ರೌಢಶಾಲೆಗಳು | ಒಟ್ಟು ಸಂಖ್ಯೆ | ೩೮,೯೨೩ | ೨,೬೪೮ | ೭೫೭ | ೨೮,೮೫೪ | ೩೭,೦೯೧ | ೩೧ | ೧,೦೮,೧೯೫ |
| | ಪುರುಷರು | ೨೫,೬೭೮ | ೨,೧೯೮ | ೬೪೮ | ೨೨,೧೨೫ | ೧೮,೫೧೧ | ೩೦ | ೬೯,೧೧೫ |
| | ಮಹಿಳೆಯರು | ೧೩,೨೪೫ | ೪೫೦ | ೫೭೩ | ೬,೭೨೯ | ೧೮,೫೮೦ | ೦೧ | ೩೯,೦೮೦ |

ಆಧಾರ: ಕರ್ನಾಟಕದಲ್ಲಿ ಶಿಕ್ಷಣ ೨೦೧೦–೧೧ ರಿಂದ ೨೦೧೫–೧೬ ರ ವರದಿಗಳು ಎಸ್‌ಎಸ್‌ಎ, ಸಾರ್ವಜನಿಕ ಶಿಕ್ಷಣ ಇಲಾಖೆ

## ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ

ಪಬ್ಲಿಕ್ ಪರೀಕ್ಷೆಗಳ ಇತಿಹಾಸ:೧೦ ನೆಯ ತರಗತಿ ಪ್ರೌಢಶಾಲಾ ಶಿಕ್ಷಣದ ಪ್ರಮುಖ ಘಟ್ಟ. ಈ ಹಂತದವರೆಗೆ ಸಾಮಾನ್ಯವಾಗಿ ಪಬ್ಲಿಕ್ ಪರೀಕ್ಷೆ ಇರುವುದಿಲ್ಲ. ಇದು ದೇಶದಾದ್ಯಂತ ಸಾಮಾನ್ಯ ಸಂಗತಿ. ನಮ್ಮ ರಾಜ್ಯದಲ್ಲಿ ೧೯೬೨ಕ್ಕೆ ಮೊದಲು ೧೦ ವರ್ಷಗಳ ಶಾಲಾ ಶಿಕ್ಷಣ ಎಂದಿರಲಿಲ್ಲ. ಎಂಟು ವರ್ಷಗಳ ಶಾಲಾ ಶಿಕ್ಷಣದ ಕೊನೆಯಲ್ಲಿ ಪಬ್ಲಿಕ್ ಪರೀಕ್ಷೆ ನಡೆಸಲಾಗುತ್ತಿತ್ತು. ಇದನ್ನು ಲೋಯರ್ ಸೆಕೆಂಡರಿ (ಸಂಕ್ಷಿಪ್ತವಾಗಿ ಎಲ್.ಎಸ್.) ಎಂದು ಕರೆಯಲಾಗುತ್ತಿತ್ತು. ಈ ಹಂತವನ್ನು ದಾಟಿ ಶಿಕ್ಷಣವನ್ನು ಮುಂದುವರೆಸುವವರು ಹೈಸ್ಕೂಲು ೧ನೇ, ೨ನೇ, ಮತ್ತು ೩ನೇ ತರಗತಿಗಳನ್ನು ಫೋರ್ತ್ ಫಾರಂ, ಫಿಫ್ತ್ ಫಾರಂ ಮತ್ತು ಸಿಕ್ಸ್ತ್ ಫಾರಂ ಎಂಬ ಹೆಸರಿನಿಂದ ಕರೆಯಲಾಗುತ್ತಿತ್ತು. ಸಿಕ್ಸ್ತ್ ಫಾರಂ ಮುಗಿದ ನಂತರ ತೆಗೆದುಕೊಳ್ಳುವ ಪರೀಕ್ಷೆಯನ್ನು ಎಸ್.ಎಸ್.ಎಲ್.ಸಿ.(ಸೆಕೆಂಡರಿ ಸ್ಕೂಲ್ ಲೀವಿಂಗ್ ಸರ್ಟಿಫಿಕೇಟ್) ಎಂದು ಕರೆಯಲಾಗುತ್ತಿತ್ತು. ಅಲ್ಲಿಗೆ ಹನ್ನೊಂದು ವರ್ಷಗಳ ಶಾಲಾ ಶಿಕ್ಷಣ. ೧೯೧೬ ರ ವರೆಗೆ ಈ ಹಂತದ ಪರೀಕ್ಷೆಯನ್ನು 'ಮೆಟ್ರಿಕ್' ಪರೀಕ್ಷೆ ಎಂಬ ಹೆಸರಿನಿಂದ ಕರೆಯಲಾಗುತ್ತಿತ್ತು. ಈ ಪರೀಕ್ಷೆಯನ್ನು ಮದರಾಸ್ ವಿಶ್ವವಿದ್ಯಾಲಯ ನಡೆಸುತ್ತಿತ್ತು. ಅದರ ನಂತರ ಎರಡು ವರ್ಷದ ಇಂಟರ್‌ಮೀಡಿಯಟ್‌ಕೋರ್ಸ್, ಎಂದಿತ್ತು. ೧೯೫೭ ರಲ್ಲಿ ಇದನ್ನು ಒಂದು ವರ್ಷದ ಪಿ.ಯು.ಸಿ. ಎಂದು ಬದಲಾಯಿಸಲಾಯಿತು. ಇಲ್ಲಿ ಕಡಿಮೆಯಾದ ಒಂದು ವರ್ಷದ ಶಿಕ್ಷಣವನ್ನು ಪದವಿ ಹಂತಕ್ಕೆ ಸೇರಿಸಿ ಮೂರು ವರ್ಷದ ಪದವಿ ಶಿಕ್ಷಣ ಜಾರಿಗೆ ಬಂತು. ಅದಾದ ನಂತರ ಎರಡು ವರ್ಷದ ಪದವಿ ಶಿಕ್ಷಣ ಅಥವಾ ಮೂರು ವರ್ಷದ ಆನರ್ಸ್ ಶಿಕ್ಷಣ ಎಂದಿತ್ತು. ೧೯೭೨–೭೩ರಲ್ಲಿ ಆನರ್ಸ್ ಪದವಿಗಳನ್ನು ರದ್ದುಪಡಿಸಿ ಏಕರೂಪದ ಮೂರು ವರ್ಷದ ಪದವಿ ಶಿಕ್ಷಣವನ್ನು ಜಾರಿಗೆ ತರಲಾಯಿತು. ೧೯೬೨–೬೩ ರಲ್ಲಿ ೧೦ ವರ್ಷಗಳ ಶಾಲಾ ಶಿಕ್ಷಣದ ೪+೩+೩ ಪದ್ಧತಿ ಜಾರಿಗೆ ಬಂದಿತು. ಆಗ ಒಂದರಿಂದ ನಾಲ್ಕು ಕಿರಿಯ ಪ್ರಾಥಮಿಕ ಶಿಕ್ಷಣ, ೫–೭ ಹಿರಿಯ ಪ್ರಾಥಮಿಕ ಮತ್ತು ೮–೧೦ ಪ್ರೌಢಶಾಲೆ ವ್ಯವಸ್ಥೆ ಪ್ರಾರಂಭವಾಯಿತು. ೧೯೬೩–೬೪ ರಲ್ಲಿ ೮ನೇ ತರಗತಿ ಪಬ್ಲಿಕ್ ಪರೀಕ್ಷೆಗೆ ಪರ್ಯಾಯವಾಗಿ ೭ನೇ ತರಗತಿ ಜಿಲ್ಲಾ ಮಟ್ಟದ ಪಬ್ಲಿಕ್ ಪರೀಕ್ಷೆಯನ್ನು ನಡೆಸಲಾಯಿತು. ೭ನೇ ತರಗತಿ ಮತ್ತು ೮ನೇ ತರಗತಿ ಪರೀಕ್ಷೆಗಳನ್ನು ತೇರ್ಗಡೆಯಾದವರು ಒಟ್ಟಿಗೆ ಹೈಸ್ಕೂಲು ಪ್ರಥಮ ವರ್ಷಕ್ಕೆ ದಾಖಲಾದರು. ೧೯೭೯–೮೦ ರಲ್ಲಿ ಏಳನೇ ತರಗತಿ ಪಬ್ಲಿಕ್ ಪರೀಕ್ಷೆ ರದ್ದಾಗಿ ಶಾಲಾಮಟ್ಟದ ಪರೀಕ್ಷೆ ಪ್ರಾರಂಭವಾಯಿತು. ಪುನ: ಕೆಲವು ವರ್ಷಗಳ ನಂತರ ಡಾ: ಹೆಚ್. ನರಸಿಂಹಯ್ಯ ನವರ ಸಮಿತಿ ಶಿಫಾರಸಿನಂತೆ ಜಿಲ್ಲಾಮಟ್ಟದ ಏಳನೇ ತರಗತಿ ಪಬ್ಲಿಕ್ ಪರೀಕ್ಷೆಯನ್ನು ಪ್ರಾರಂಭಿಸಿ ನಂತರ ಅದನ್ನೂ ಕೈಬಿಡಲಾಯಿತು.

೧೯೭೦–೭೧ ರವರೆಗೆ ಒಂದು ವರ್ಷದ ಅವಧಿಯ ಪಿ.ಯು.ಸಿ. ಶಿಕ್ಷಣ ಇತ್ತು. ಇದು ವಿಶ್ವ ವಿದ್ಯಾಲಯದ ವ್ಯಾಪ್ತಿಗೆ ಸೇರಿತ್ತು. ಅಲ್ಲಿಂದೀಚೆಗೆ ಹೈಯರ್ ಸೆಕೆಂಡರಿ ಶಾಲೆಗಳಲ್ಲಿ ಎರಡು ವರ್ಷಗಳ ಪಿ.ಯು.ಸಿ. ಶಿಕ್ಷಣ ಜಾರಿಗೆ ಬಂದಿತು. ವಿಶ್ವ ವಿದ್ಯಾಲಯಗಳ ವ್ಯಾಪ್ತಿಯಲ್ಲಿದ್ದ ಒಂದು ವರ್ಷದ ಪಿ.ಯು.ಸಿ ಕೋರ್ಸನ್ನು ಎರಡು ವರ್ಷಗಳಿಗೆ ವಿಸ್ತರಿಸಿ ಪದವಿ ಕಾಲೇಜುಗಳನ್ನು ಕಾಂಪೋಸಿಟ್ ಕಾಲೇಜುಗಳೆಂದು ಕರೆಯಲಾಯಿತು. ಮತ್ತೆ ಕೆಲವು ವರ್ಷಗಳು ಇದೇ ವ್ಯವಸ್ಥೆ ಮುಂದುವರೆಯಿತು. ಇದೇ ಅವಧಿಯಲ್ಲಿ ಕೆಲವು ಸ್ವತಂತ್ರ ಪದವಿ ಪೂರ್ವ ಕಾಲೇಜುಗಳು ಪ್ರಾರಂಭವಾದವು. ಅಲ್ಲಿಗೆ ಪದವಿ ಪೂರ್ವ ತರಗತಿಗಳು ಕಂಪೋಸಿಟ್ ಕಾಲೇಜುಗಳು, ಹೈಯರ್ ಸೆಕೆಂಡರಿ ಶಾಲೆಗಳು ಮತ್ತು ಸ್ವತಂತ್ರ ಪದವಿ ಪೂರ್ವ ಕಲೇಜುಗಳು ಹೀಗೆ ೩ ವಿಭಿನ್ನ ವ್ಯವಸ್ಥೆಯಲ್ಲಿ ಮುಂದುವರಿದವು. ತದನಂತರ ಈ ಪದವಿ ಪೂರ್ವ ಶಿಕ್ಷಣ ನೀಡುವ ಎಲ್ಲ ಸಂಸ್ಥೆಗಳನ್ನು ೧೯೭೪ ರಲ್ಲಿ ಹೊಸದಾಗಿ ಸ್ಥಾಪಿಸಲಾದ ಪದವಿ ಪೂರ್ವ ಶಿಕ್ಷಣ ನಿರ್ದೇಶಕರ ಅಧೀನಕ್ಕೆ ಒಳಪಡಿಸಲಾಯಿತು.ಹಾಲಿ ವ್ಯವಸ್ಥೆಯಲ್ಲಿ ೧೦ನೆಯ ತರಗತಿವರೆಗೆ ಯಾವುದೇ ಪಬ್ಲಿಕ್ ಪರೀಕ್ಷೆ ಇರುವುದಿಲ್ಲ. ದೇಶದಾದ್ಯಂತ ಇದೇ ಮಾದರಿಯನ್ನು ಅನುಸರಿಸಲಾಗುತ್ತಿದೆ. ೧೦ನೇ ತರಗತಿ ನಂತರ ಎಸ್.ಎಸ್.ಎಲ್.ಸಿ ಪಾಸಾದವರು ಕೆಳ ಹಂತದ ಸರ್ಕಾರಿ ನೌಕರಿಗಳನ್ನು ಪಡೆಯಲು ಅರ್ಹರಾಗುತ್ತರೆ. ಹಾಗಾಗಿ ಈ ಪರೀಕ್ಷೆಗೆ ಬಹಳ ಮಹತ್ವ ಇದೆ.

೧೯೬೬ಕ್ಕೆ ಮೊದಲು ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ನಡೆಸುವ ಜವಾಬ್ದಾರಿಯೂ ಸಾರ್ವಜನಿಕ ಶಿಕ್ಷಣ ಇಲಾಖೆಯ ಏಕೈಕ ನಿರ್ದೇಶಕರಿಗೇ ಸೇರಿತ್ತು. ಶಿಕ್ಷಣ ಇಲಾಖೆಯಲ್ಲಿ ಒಂದು ಸಣ್ಣ ಘಟಕ ಈ ಕೆಲಸವನ್ನು ನಿರ್ವಹಿಸುತ್ತಿತ್ತು. ೧೯೫೭–೫೮ ರಲ್ಲಿ ಒಬ್ಬರು ಪ್ರತ್ಯೇಕ ಉಪನಿರ್ದೇಶಕರನ್ನು, ೪ ಸಹಾಯಕ ಕಮೀಷನರ್‌ಗಳನ್ನು ಇದಕ್ಕಾಗಿ ನೇಮಿಸಲಾಯಿತು. ನಿರ್ದೇಶಕರನ್ನು ಪದನಿಮಿತ್ತ ಪರೀಕ್ಷಾ ಕಮೀಷನರ್ ಎಂದು ಪದನಾಮೀಕರಿಸಲಾಯಿತು.೧೯೬೫–೬೬ ರಲ್ಲಿ ಪುನ: ಕೆಲವು ಬದಲಾವಣೆಗಳಾದವು. ೧೯೬೬–೬೭ ರಲ್ಲಿ ಈಗಿನ ಪರೀಕ್ಷಾ ಮಂಡಳಿ ಸ್ಥಾಪನೆಯಾಗಿದೆ. ೧೯೬೬ ರ ವಿಧಾನಮಂಡಲದ ಕಾಯಿದೆ ಅಡಿಯಲ್ಲಿ ಸ್ಥಾಪನೆಯಾದ ಈ ಮಂಡಳಿಗೆ ಕೆಲವು ವರ್ಷದ ವರೆಗೆ ಅಲ್ಲಿನ ನಿರ್ದೇಶಕರೇ ಅಧ್ಯಕ್ಷರೂ ಆಗಿರುತ್ತಿದ್ದರು. ಪ್ರಸ್ತುತ ವ್ಯವಸ್ಥೆಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರು ಪದನಿಮಿತ್ತ ಅಧ್ಯಕ್ಷರಾಗಿರುತ್ತಾರೆ. ಪ್ರತಿವರ್ಷ ಎಸ್.ಎಸ್.ಎಲ್.ಸಿ. ಪರೀಕ್ಷೆ ತೆಗೆದುಕೊಳ್ಳುವವರ ಸಂಖ್ಯೆ ಗಣನೀಯವಾಗಿ ಹೆಚ್ಚಾಗುತ್ತಲಿದೆ. ಮಾರ್ಚ್ ೨೦೧೬ ರಲ್ಲಿ ಪರೀಕ್ಷೆ ತೆಗೆದುಕೊಂಡವರ ಸಂಖ್ಯೆ ೮.೧೫ ಲಕ್ಷ ದಾಟಿದೆ. ಮೊದಲು ಮಾರ್ಚ್/ಏಪ್ರಿಲ್ ನಲ್ಲಿ ಮುಖ್ಯ ಪರೀಕ್ಷೆಯನ್ನು ಮತ್ತು ಸೆಪ್ಟೆಂಬರ್/ಅಕ್ಟೋಬರ್ ದಲ್ಲಿ ಪೂರಕ(ಸಪ್ಲಿಮೆಂಟರಿ) ಪರೀಕ್ಷೆಯನ್ನು ನಡೆಸಲಾಗುತ್ತಿತ್ತು. ೨೦೦೧ರಿಂದೀಚೆಗೆ ಜೂನ್ ತಿಂಗಳಲ್ಲಿಯೇ ಪೂರಕ ಪರೀಕ್ಷೆಯನ್ನು ನಡೆಸಲಾಗುತ್ತಿದೆ.

**ಇತರೆ ಪರೀಕ್ಷೆಗಳು:** ಡಿ.ಎಡ್. ಪರೀಕ್ಷೆ, ಡಿ.ಪಿ.ಎಡ್. ಪರೀಕ್ಷೆ, ನರ್ಸರಿ ಶಿಕ್ಷಕರ ತರಬೇತಿ ಪರೀಕ್ಷೆ, ಟೈಪರೈಟಿಂಗ್ ಮತ್ತು ಶಾರ್ಟ್ ಹ್ಯಾಂಡ್ (ಕಾಮರ್ಸ್ ಪರೀಕ್ಷೆಗಳು), ಸಂಗೀತ, ನೃತ್ಯ, ತಾಳವಾದ್ಯ, ಚಿತ್ರಕಲೆ, ಹಿಂದಿ ಬಿ.ಎಡ್., ಚಲನಚಿತ್ರ ನಟನೆ ಮತ್ತು ಹಿನ್ನೆಲೆ ಸಂಗೀತ, ನಾಟಕ. ಇತ್ಯಾದಿ. ಇತ್ತೀಚೆಗೆ ಪ್ರಾರಂಭವಾದ ಕೆ.ಎಸ್.ಕ್ಯು.ಎ.ಒ. ಪರೀಕ್ಷೆಯನ್ನು ನಡೆಸುವ ಜವಾಬ್ದಾರಿಯನ್ನೂ ಮಂಡಳಿಗೆ ನೀಡಲಾಗಿದೆ.

**ಪರೀಕ್ಷಾ ಸುಧಾರಣೆಗಳು:** ಇತ್ತೀಚಿನ ವರ್ಷಗಳಲ್ಲಿ ಸಂಪೂರ್ಣ ವಾಗಿ ದಾಖಲೆಗಳನ್ನು ಕಂಪ್ಯೂಟರೀಕರಿಸಲಾಗಿದ್ದು ಪರೀಕ್ಷೆಯ ಮೌಲ್ಯಮಾಪನ ಮತ್ತು ಅಂಕಗಳ ಟ್ಯಾಬುಲೇಷನ್ ಕಾರ್ಯವನ್ನು ಬಹಳ ತ್ವರಿತವಾಗಿ ಪೂರೈಸಿ ಕ್ಷಿಪ್ರವಾಗಿ ಫಲಿತಾಂಶವನ್ನು ಪ್ರಕಟಿಸಲಾಗುತ್ತಿದೆ. ಅಂಕಪಟ್ಟಿಗಳಲ್ಲಿ ಅಭ್ಯರ್ಥಿಯ ಭಾವಚಿತ್ರವನ್ನು ಎಂಬಾಸ್ ಮಾಡಿ ಲ್ಯಾಮಿನೇಷನ್ ಮಾಡುವ ವ್ಯವಸ್ಥೆ

ಇರುವುದರಿಂದ ಅಂಕಪಟ್ಟಿಯಲ್ಲಿನ ಮಾಹಿತಿಗಳನ್ನು ಟ್ಯಾಂಪರ್ ಮಾಡುವುದು ಮುಂತಾದ ಕೃತ್ಯಗಳನ್ನು ನಿವಾರಿಸಲು ನೆರವಾಗಿದೆ. ೨೦೦೬ ಮಾರ್ಚ್ ನಿಂದ ಜಾರಿಗೆ ತರಲಾಗಿರುವ ಹೊಸ ಪರೀಕ್ಷಾ ಪದ್ಧತಿಯಂತೆ ಪ್ರತ್ಯೇಕ ಪ್ರಶ್ನೆ ಪತ್ರಿಕೆ/ಉತ್ತರ ಪತ್ರಿಕೆ ಇಲ್ಲದೆ, ಪ್ರಶ್ನೆ ಪತ್ರಿಕೆಯಲ್ಲಿಯೇ ಉತ್ತರಗಳನ್ನು ಬರೆಯಲು ಅವಕಾಶ ಕಲ್ಪಿಸಲಾಗಿದೆ. ಎ ಮತ್ತು ಬಿ ಭಾಗಗಳನ್ನು ಹೊಂದಿರುವ ಉತ್ತರ ಪತ್ರಿಕೆಯಲ್ಲಿ ಶೇಕಡ ೬೦ ಅಂಕಗಳಿಗೆ ಬಹು ಉತ್ತರ ಮಾದರಿ ಪ್ರಶ್ನೆಗಳು (ಕೊಟ್ಟಿರುವ ೪ ಉತ್ತರಗಳಲ್ಲಿ ಸರಿ ಉತ್ತರಕ್ಕೆ ಟಿಕ್ ಮಾಡುವ ಮಾದರಿ) ಇರುವುದರಿಂದ ವಿದ್ಯಾರ್ಥಿಗಳ ಅಭಿವ್ಯಕ್ತಿ ಮತ್ತು ಭಾಷಾ ಸಾಮರ್ಥ್ಯಗಳನ್ನು ಮಾಪನ ಮಾಡಲು ಅವಕಾಶ ಇರುವುದಿಲ್ಲ ಎಂಬ ಟೀಕೆ ಇದೆ. ಈ ಪದ್ಧತಿಯ ಸೂಕ್ತಾಸೂಕ್ತತೆಯ ಬಗ್ಗೆ ಅಧ್ಯಯನ ಸಮಿತಿಯನ್ನು ನೇಮಿಸಲಾಗಿದ್ದು ಸಮಿತಿಯ ವರದಿಯ ಬಗ್ಗೆ ಸರ್ಕಾರದ ಹಂತದಲ್ಲಿ ತೀರ್ಮಾನ ಬಾಕಿ ಇದೆ. ಮಂಡಳಿಯ ಕಚೇರಿ ಬೆಂಗಳೂರಿನ ಮಲ್ಲೇಶ್ವರಂ ೬ನೇ ಅಡ್ಡರಸ್ತೆಯಲ್ಲಿದೆ.

**ಕೋಷ್ಟಕ ೧೦.೨೫: ೨೦೧೨ ರಿಂದ ೨೦೧೬ ಏಪ್ರಿಲ್ ವರೆಗೆ**
**ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕುಳಿತವರು ಮತ್ತು ತೇರ್ಗಡೆಯಾದ ಅಭ್ಯರ್ಥಿಗಳ ವಿವರ**

| ವರ್ಷ | ಬಾಲಕರು | | | ಬಾಲಕಿಯರು | | | ಒಟ್ಟು | | |
|---|---|---|---|---|---|---|---|---|---|
| | ಕುಳಿತವರು | ತೇರ್ಗಡೆ | ಶೇಕಡ | ಕುಳಿತವರು | ತೇರ್ಗಡೆ | ಶೇಕಡ | ಕುಳಿತವರು | ತೇರ್ಗಡೆ | ಶೇಕಡ |
| ೧೦೧೬ | ೩೯೦೨೯೪ | ೨೯೪೫೭೩ | ೭೫.೪೭ | ೩೬೮೪೦೮ | ೩೦೩೪೧೮ | ೮೨.೩೬ | ೭೫೮೭೦೨ | ೫೯೭೯೯೧ | ೭೮.೮೨ |
| ೨೦೧೫ | ೪೪೦೧೫೯ | ೩೪೨೬೬೩ | ೭೭.೮೫ | ೩೯೭೧೯೮ | ೩೪೨೪೯೩ | ೮೬.೨೩ | ೮೩೭೩೫೭ | ೬೮೫೧೫೬ | ೮೧.೮೨ |
| ೨೦೧೪ | ೪೩೨೫೮೫ | ೩೩೪೯೯೪ | ೭೭.೪೪ | ೩೮೧೦೧೭ | ೩೨೫೬೫೬ | ೮೫.೪೭ | ೮೧೩೬೦೨ | ೬೬೦೬೫೦ | ೮೧.೨೦ |
| ೨೦೧೩ | ೪೪೫೬೫೪ | ೩೨೬೪೪೯ | ೭೩.೨೫ | ೩೯೦೬೮೮ | ೩೨೧೫೦೨ | ೮೨.೨೯ | ೮೩೬೩೪೨ | ೬೪೭೯೫೧ | ೭೭.೪೭ |
| ೨೦೧೨ | ೪೩೯೯೮೯ | ೩೧೫೬೨೩ | ೭೧.೭೩ | ೩೮೫೧೪೨ | ೩೧೨೫೮೨ | ೮೧.೧೬ | ೮೨೫೧೩೧ | ೬೨೮೨೦೫ | ೭೬.೧೩ |

### ಉರ್ದು ಮತ್ತು ಇತರೆ ಭಾಷಾ ಅಲ್ಪಸಂಖ್ಯಾತ ಶಾಲೆಗಳ ನಿರ್ದೇಶನಾಲಯ

**ಸರ್ಕಾರದ ಆದೇಶ ಸಂಖ್ಯೆ:** ಇಡಿ-೧೨೫-ಎಂಇಎಸ್-೮೬, ದಿನಾಂಕ ೨೬-೫-೧೯೮೭ ರ ಅನುಸಾರ ಈ ನಿರ್ದೇಶನಾಲಯ ಅಸ್ತಿತ್ವಕ್ಕೆ ಬಂದಿದೆ. ಈ ನಿರ್ದೇಶನಾಲಯದ ಸ್ಥಾಪನೆಯ ಹಿಂದಿನ ಉದ್ದೇಶಗಳು ಮತ್ತು ನಿರ್ವಹಿಸುವ ಪ್ರಮುಖ ಕೆಲಸ ಕಾರ್ಯಗಳು : ಅಲ್ಪಸಂಖ್ಯಾತ ಭಾಷಾ ಮಾಧ್ಯಮದ ಶಿಕ್ಷಣ ಸಂಸ್ಥೆಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುವಂತೆ ನೋಡಿಕೊಳ್ಳುವುದು. ಅಲ್ಪಸಂಖ್ಯಾತ ಭಾಷಾ ಮಾಧ್ಯಮದ ಶಿಕ್ಷಣ ಸಂಸ್ಥೆಗಳ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಗಳಿಂದ ಮಂಜೂರಾದ ಕಾರ್ಯಕ್ರಮಗಳನ್ನು ಅನುಷ್ಠಾನಗಳಿಸುವುದು. ಸರ್ಕಾರದ ಅನುದಾನದಿಂದ ಅಲ್ಪಸಂಖ್ಯಾತ ಭಾಷಾ ಮಾಧ್ಯಮದ ಶಾಲೆಗಳಿಗೆ ಬೇಕಾದ ಪೀಠೋಪಕರಣ ಮತ್ತು ಪಾಠೋಪಕರಣಗಳನ್ನು ಒದಗಿಸುವುದು. ೧ ರಿಂದ ೧೦ ನೇ ತರಗತಿಗಳಲ್ಲಿ ಮತ್ತು ಡಿ.ಎಡ್. ತರಗತಿಗಳಲ್ಲಿ ವ್ಯಾಸಂಗ ಮಾಡುವ ಆಂಗ್ಲೋ ಇಂಡಿಯನ್ ವಿದ್ಯಾರ್ಥಿಗಳಿಗೆ ಶುಲ್ಕ ಮರು ಪಾವತಿ. ಅಲ್ಪಸಂಖ್ಯಾತ ಭಾಷಾ ಮಾಧ್ಯಮದ ಶಾಲಾ ಶಿಕ್ಷಕರಿಗೆ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುವುದು. ಅಲ್ಪಸಂಖ್ಯಾತ ಭಾಷಾ ಮಾಧ್ಯಮದ ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಇಲಾಖೆಯ ಇತರೆ ವಿಭಾಗಗಳು ಮತ್ತು ಅನ್ಯ ಇಲಾಖೆಗಳೊಂದಿಗೆ ಸಮನ್ವಯ ಕಾರ್ಯ ನಿರ್ವಹಿಸುವುದು.

ಅರೇಬಿಕ್ ಮತ್ತು ಹಿಂದಿ ಶಿಕ್ಷಣ ವಿಭಾಗ. ಸಾರ್ವಜನಿಕ ಕುಂದು ಕೊರತೆ ನಿವಾರಣೆ ವಿಭಾಗ. ಪ್ರಧಾನ ಮಂತ್ರಿಗಳ ೧೫ ಅಂಶಗಳ ಕಾರ್ಯಕ್ರಮ. ಭಾರತ ಸರ್ಕಾರದಿಂದ ಅಲ್ಪಸಂಖ್ಯಾತ ಭಾಷಾ ಮಾಧ್ಯಮದ ಶಿಕ್ಷಣ ಸಂಸ್ಥೆಗಳಿಗಾಗಿ ಇರುವ ಕಾರ್ಯಕ್ರಮಗಳು ಮತ್ತು ಅನುದಾನಗಳ ನಿರ್ವಹಣೆ. ಸಮನ್ವಯ ಶಿಕ್ಷಣ. ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳಿಗೆ ಸಂಬಂಧಿಸಿದ ವಿಚಾರಗಳನ್ನು ಇತ್ತೀಚೆಗೆ ನಿರ್ದೇಶನಾಲಯದ ವ್ಯಾಪ್ತಿಗೆ ಒಳಪಡಿಸಲಾಗಿದೆ. ಭಾಷಾ ಅಲ್ಪಸಂಖ್ಯಾತವರ್ಗಕ್ಕೆ ಸೇರಿದ ಹಿಂದುಳಿದ ಜನ ಸಮುದಾಯಗಳ ಶೈಕ್ಷಣಿಕ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರದ Area Intensive Programme for Educationally Backward Minorities ಕಾರ್ಯಕ್ರಮವನ್ನು ರಾಜ್ಯದ ಆಯ್ದ ೬ ಜಿಲ್ಲೆಗಳ ೧೦ ಬ್ಲಾಕ್ ಗಳಲ್ಲಿ ಅನುಷ್ಠಾನಗೊಳಸಲಾಗುತ್ತಿದೆ. ಅಂತಹ ಸೌಲಭ್ಯ ಪಡೆದ ಬ್ಲಾಕುಗಳೆಂದರೆ: ಬೀದರ್, ಹುಮ್ನಾಬಾದ್ (ಬೀದರ್ ಜಿಲ್ಲೆ), ಕಲಬುರಗಿ, ಚಿತ್ತಾಪುರ (ಕಲಬುರಗಿ ಜಿಲ್ಲೆ), ಸವಣೂರು, ಶಿಗ್ಗಾವಿ (ಹಾವೇರಿ ಜಿಲ್ಲೆ), ಬೆಳ್ತಂಗಡಿ, ಬಂಟ್ವಾಳ (ದಕ್ಷಿಣ ಕನ್ನಡ ಜಿಲ್ಲೆ), ರಾಯಚೂರು (ರಾಯಚೂರು ಜಿಲ್ಲೆ), ಭಟ್ಕಳ (ಉತ್ತರ ಕನ್ನಡ ಜಿಲ್ಲೆ). ಈ ಕಾರ್ಯಕ್ರಮ ಅನುಷ್ಠಾನವನ್ನು ಈ ನಿರ್ದೇಶನಾಲಯ ನಿರ್ವಹಿಸುತ್ತದೆ.

**ಹಿಂದಿ ಶಿಕ್ಷಣ** : ೨೦೦೫-೧೬ ರಲ್ಲಿ ಒಟ್ಟು ೪೭ ಹಿಂದಿ ಶಾಲೆಗಳು ಭಾಗಶಃ ಅನುದಾನಿತ, ಮತ್ತು ಐದು ಸ್ವಯಂ ಸೇವಾ ಸಂಸ್ಥೆಗಳಿಂದ ನಡೆಸಲ್ಪಡುವ ಶಾಲೆಗಳಿವೆ. ರಾಜ್ಯ ಸರ್ಕಾರವು ಆಗ್ರಾದ ಕೇಂದ್ರೀಯ ಹಿಂದಿ ಸಂಸ್ಥಾನದ ಸಹಯೋಗದಲ್ಲಿ ಹಿಂದಿ ಪಾರಂಗತ ಕಾಲೇಜನ್ನು ಮೈಸೂರಿನಲ್ಲಿ ನಡೆಡುತ್ತಿದೆ. ರಾಷ್ಟ್ರ ಭಾಷೆಯ ಅಭಿವೃದ್ಧಿಗಾಗಿ ಹಿಂದಿಯೇತರ ಪ್ರದೇಶಗಳಲ್ಲಿ ಹಿಂದಿ ಶಿಕ್ಷಕರ ವೇತನವನ್ನು ಪಾವತಿಸಲು ಕೇಂದ್ರ ಸರ್ಕಾರದ ವತಿಯಿಂದ ಅನುದಾನವನ್ನು ನೀಡಲಾಗುತ್ತಿದೆ.

**ಸಂಗೀತ ಶಿಕ್ಷಣ** : ಭಾರತೀಯ ಸಂಸ್ಕೃತಿಯಲ್ಲಿ ಸಂಗೀತ ನೃತ್ಯ ಇತ್ಯಾದಿ ಲಲಿತ ಕಲೆಗಳಿಗೆ ಪ್ರಾಮುಖ್ಯತೆ ಇದ್ದು, ರಾಜ್ಯದಲ್ಲಿ

ಇದೇ ವರ್ಷದಲ್ಲಿ ೩೪ ಅನುದಾನಿತ ಮತ್ತು ೭೫ ಅನುದಾನ ರಹಿತ ವಿಶೇಷ ಸಂಗೀತ, ನೃತ್ಯ ಮತ್ತು ನಾಟಕ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದು,. ಮೇ ೨೦೦೫-೧೯ರ ಸಾಲಿನಲ್ಲಿ ಸಂಗೀತದ ವಿವಿಧ ಕಲಾ ಪ್ರಕಾರಗಳಲ್ಲಿ ನಡೆದ ಕಿರಿಯ ಮತ್ತು ಹಿರಿಯ ದರ್ಜೆ ಪರೀಕ್ಷೆಗಳಲ್ಲಿ ಒಟ್ಟು ೧೧,೦೦೮ ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಅವರಲ್ಲಿ ೯,೩೬೧ ಅಭ್ಯರ್ಥಿಗಳು ತೇರ್ಗಡೆಯಾಗುವ ಮೂಲಕ ಶೇಕಡ ೮೭.೭೬ ಫಲಿತಾಂಶ ಬಂದಿರುತ್ತದೆ.

**ಅರೇಬಿಕ್ ಶಿಕ್ಷಣ:** ರಾಜ್ಯದಲ್ಲಿ ಒಟ್ಟು ೩೧೪ ಅರೇಬಿಕ್ ಶಿಕ್ಷಣ ನೀಡುವ ಶಾಲೆಗಳಿವೆ. ಆ ಪೈಕಿ ೯೪ ಅನುದಾನಿತ ಹಾಗೂ ೨೨೦ ಅನುದಾನರಹಿತ ಶಾಲೆಗಳಾಗಿವೆ. ಒಟ್ಟು ಏಳು ಅರೇಬಿಕ್ ಕಾಲೇಜುಗಳಿದ್ದು ಅದರಲ್ಲಿ ಮೂರು ಅನುದಾನಿತ ಕಾಲೇಜುಗಳು ಮತ್ತು ನಾಲ್ಕು ಅನುದಾನರಹಿತ ಕಾಲೇಜುಗಳಾಗಿವೆ. ೨೦೧೫ ನೇ ಸಾಲಿನಲ್ಲಿ ಫೌಖಾನಿಯ ಪರೀಕ್ಷೆಗೆ ಹಾಜರಾದವರ ಸಂಖ್ಯೆ ೧,೨೨೫. ತೇರ್ಗಡೆಯಾದವರು ೧,೦೦೪, ಶೇಕಡಾವಾರು ಫಲಿತಾಂಶ ೮೧.೯೬.

**ಕರ್ನಾಟಕ ಮುಕ್ತ ಶಾಲಾ ಪರೀಕ್ಷೆ:** ಶಿಕ್ಷಣ ವಂಚಿತರಿಗೆ ಓದುವ ಅವಕಾಶ ಕಲ್ಪಿಸಿಕೊಟ್ಟು ಬೇರೆ ವಿದ್ಯಾರ್ಥಿಗಳಂತೆ ಮುಖ್ಯವಾಹಿನಿಯಲ್ಲಿ ಅವರನ್ನು ವಿಲೀನಗೊಳಿಸುವ ಉದ್ದೇಶದಿಂದ ಪ್ರಾರಂಭವಾದ ಪರೀಕ್ಷೆ ಕರ್ನಾಟಕ ಮುಕ್ತ ಶಾಲಾ ಪರೀಕ್ಷೆ (Karnataka Open School) ಈ ಪರೀಕ್ಷೆಗಳು ಈಗ ಎಸ್. ಎಸ್.ಎಲ್.ಸಿ., ಪರೀಕ್ಷೆಗಳಿಗೆ ತತ್ಸಮಾನವೆಂದು ಸರ್ಕಾರವು ಘೋಷಿಸಿದೆ. ೨೦೧೫-೧೯ರ ಸಾಲಿನಲ್ಲಿ ೨,೯೬೦ ಅಭ್ಯರ್ಥಿಗಳು ಈ ಪರೀಕ್ಷೆಗೆ ಹಾಜರಾಗಿ ೧೭೦೨ ಅಭ್ಯರ್ಥಿಗಳು ಉತ್ತೀರ್ಣರಾಗಿದ್ದು, ಶೇ.೫೭.೫೦ ರಷ್ಟು ಫಲಿತಾಂಶ ದೊರಕಿದೆ.

**ಶಿಕ್ಷಣ ಹಕ್ಕು ಕಾಯ್ದೆ ೨೦೦೯:** ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯ್ದೆಯು (ಕೇಂದ್ರದ ಕಾಯಿದೆ ಸಂಖ್ಯೆ: ಸಂಖ್ಯೆ ೩೫/೨೦೦೯ ದಿನಾಂಕ: ೨೬ ಆಗಸ್ಟ್, ೨೦೦೯ ರಂದು ಪಾರ್ಲಿಮೆಂಟಿನಲ್ಲಿ ಅನುಮೋದನೆಯಾದ ನಂತರ ರಾಷ್ಟ್ರದಲ್ಲಿ ೨೦೧೦ ರ ಏಪ್ರಿಲ್ ೧ನೇ ತಾರೀಖಿನಿಂದ ಜಾರಿಗೆ ಬಂದಿದೆ. ೨೮ ಏಪ್ರಿಲ್ ೨೦೧೨ ರಂದು ರಾಜ್ಯ ಸರ್ಕಾರದ ನಿಯಮಾವಳಿಗಳನ್ನು ಅಧಿಸೂಚಿಸುವ ಮೂಲಕ ಕರ್ನಾಟಕ ರಾಜ್ಯದಲ್ಲಿ ಈ ಕಾಯ್ದೆಯ ಅನುಷ್ಠಾನದ ಪ್ರಕ್ರಿಯೆ ಪ್ರಾರಂಭವಾಯಿತು.

**ಕಾಯ್ದೆಯ ಮುಖ್ಯಾಂಶಗಳು:** ೬-೧೪ ವಯಸ್ಸಿನವರೆಗೆ ತಮ್ಮ ನೆರೆ ಹೊರೆಯ ಶಾಲೆಯಲ್ಲಿ ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯುವ ಹಕ್ಕು ಈ ಕಾಯ್ದೆಯ ಮೂಲಕ ಎಲ್ಲ ಮಕ್ಕಳಿಗೆ ದತ್ತವಾಗಿದೆ. ತಮ್ಮ ನೆರೆ ಹೊರೆಯಲ್ಲಿರುವ ತಮಗಿಷ್ಟವಾದ ಶಾಲೆಯಲ್ಲಿ ಪ್ರವೇಶ ಪಡೆಯಬಹುದು. ಖಾಸಗಿ ಅನುದಾನರಹಿತ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ತರಗತಿ ಅಥವಾ ೧ನೇ ತರಗತಿ ಪ್ರವೇಶಕ್ಕೆ ನೆರೆ ಹೊರೆಯ ಅನಾನುಕೂಲ ಪರಿಸ್ಥಿತಿಯಲ್ಲಿರುವ ಮತ್ತು ದುರ್ಬಲವರ್ಗದ ಮಕ್ಕಳಿಗೆ ಶೇಕಡ ೨೫ ಸೀಟುಗಳ ಮೀಸಲಾತಿ ಸೌಲಭ್ಯ ಕಲ್ಪಿಸಲಾಗಿದೆ. ಮೀಸಲಾತಿ ಕೋಟಾದ ಅಡಿಯಲ್ಲಿ ದಾಖಲಾದ ಮಕ್ಕಳ ಪರವಾಗಿ ಸರ್ಕಾರದಿಂದ ಪ್ರತಿ ವಿದ್ಯಾರ್ಥಿಯ ಶಿಕ್ಷಣದ ವೆಚ್ಚವನ್ನು ಮರುಪಾವತಿ ಮಾಡಲಾಗುತ್ತದೆ.

ಕಾಯ್ದೆಯ ಅನುಸಾರವಾಗಿ ಮಕ್ಕಳು ಯಾವುದೇ ಶುಲ್ಕವನ್ನು ಪಾವತಿಸಬೇಕಾಗಿಲ್ಲ. ದೈಹಿಕ ನ್ಯೂನತೆ ಹೊಂದಿದ ಮಕ್ಕಳಿಗೆ ವಿಶೇಷ ಶಿಕ್ಷಣ ಪಡೆಯುವ ಹಕ್ಕು ಲಭ್ಯವಾಗುದೆ. ಶಾಲಾ ದಾಖಲಾತಿಗೆ ವಯಸ್ಸಿನ ಗರಿಷ್ಠ ಮಿತಿ ಇರುವುದಿಲ್ಲ. ೧೪ ವರ್ಷ ತುಂಬಿಲ್ಲದ ಮಕ್ಕಳು ತಮ್ಮ ವಯಸ್ಸಿಗೆ ಅನುಗುಣವಾದ ತರಗತಿಗೆ ನೇರವಾಗಿ ದಾಖಲಾತಿ ಪಡೆಯುವ ಅವಕಾಶವನ್ನು ಮಕ್ಕಳಿಗೆ ಕಲ್ಪಿಸಲಾಗಿದೆ. ಅಂತಹ ಮಕ್ಕಳಿಗೆ ವಿಶೇಷ ತರಬೇತಿ ನೀಡಬೇಕಾದ ಜವಾಬ್ದಾರಿ ಶಾಲೆ ಮತ್ತು ಶಿಕ್ಷಕರದ್ದಾಗಿದೆ. ಬೇರೆ ಶಾಲೆಗೆ ವರ್ಗಾವಣೆ ಪಡೆಯುವ ಹಕ್ಕು ಮಕ್ಕಳಿಗೆ ಇದ್ದು ಹಾಗೆ ವರ್ಗಾವಣೆ ಪಡೆದಾಗ ಹಿಂದಿನ ಶಾಲೆಯ ಮುಖ್ಯ ಶಿಕ್ಷಕರು ತಕ್ಷಣ ವರ್ಗಾವಣೆ ಪತ್ರ ನೀಡಬೇಕು. ವರ್ಗಾವಣೆ ಪತ್ರ ಇಲ್ಲದ ಕಾರಣ ನೀಡಿ ಪ್ರವೇಶ ನಿರಾಕರಿಸುವಂತಿಲ್ಲ. ವರ್ಗಾವಣೆ ಪತ್ರ ನೀಡಲು ವಿಳಂಭ ಮಾಡುವ ಮುಖ್ಯ ಶಿಕ್ಷಕರ ವಿರುದ್ಧ ಶಿಸ್ತು ಕ್ರಮ ಜರುಗಿಸಬಹುದು. ನಿಗದಿಪಡಿಸಿದ ಅಂತರದಲ್ಲಿ ಶಾಲೆಯನ್ನು ಸ್ಥಾಪಿಸುವ ಜವಾಬ್ದಾರಿ ಸರ್ಕಾರದ್ದು. ಕಾಯ್ದೆಯ ಅನುಷ್ಠಾನದ ಕಾರಣ ತಗಲುವ ಹೆಚ್ಚವರಿ ಆರ್ಥಿಕ ಹೊರೆಯನ್ನು ಅಂದಾಜು ಮಾಡಿ ಕೇಂದ್ರ ಸರ್ಕಾರ ರಾಜ್ಯಗಳಿಗೆ ನೆರವು ನೀಡಬೇಕು. ಶಿಕ್ಷಕರ ತರಬೇತಿಗೆ ಮಾನಕಗಳನ್ನು ನಿಗಧಿಪಡಿಸುವುದರ ಜೊತೆಗೆ ಕೇಂದ್ರವು ರಾಜ್ಯಗಳಿಗೆ ತಾಂತ್ರಿಕ ನೆರವು ನೀಡಬೇಕು.

ಪ್ರವೇಶ ದಾಖಲಾತಿಗಾಗಿ ಆಯ್ಕೆ ಪರೀಕ್ಷೆ ನಡೆಸುವಂತಿಲ್ಲ. ನಡೆಸಿದಲ್ಲಿ ಮೊದಲಿಗೆ ೨೫ ಸಾವಿರ ಮತ್ತು ೨ನೇ ಬಾರಿ ಮತ್ತು ಮುಂದಕ್ಕೆ ಪ್ರತಿ ಬಾರಿಗೆ ರೂ ೫೦ ಸಾವಿರ ದಂಡನೆಯನ್ನು ವಿಧಿಸಬಹುದು. ಕ್ಯಾಪಿಟೇಷನ್ ಶುಲ್ಕ ಅಥವಾ ದೇಣಿಗೆ ತೆಗೆದು ಕೊಳ್ಳುವಂತಿಲ್ಲ. ತಗೆದುಕೊಂಡಲ್ಲಿ ಶಿಕ್ಷಾರ್ಹ ಅಪರಾಧವಾಗುತ್ತದೆ. ೮ನೇ ತರಗತಿ ಮುಗಿಯುವವರೆಗೆ ಯಾವುದೇ ಮಗುವನ್ನು ಅನುತ್ತೀರ್ಣಗೊಳಿಸುವಂತಿಲ್ಲ. ಯಾವುದೇ ಬೋರ್ಡ್ (ಪಬ್ಲಿಕ್) ಪರೀಕ್ಷೆಯನ್ನು ನಡೆಸುವಂತಿಲ್ಲ. ೮ ವರ್ಷದ ಶಿಕ್ಷಣವನ್ನು ಪೂರ್ಣಗೊಳಿಸಿದ ಬಗ್ಗೆ ಪ್ರಮಾಣಪತ್ರವನ್ನು ನೀಡಬೇಕು. ಮಕ್ಕಳಿಗೆ ದೈಹಿಕ ಮತ್ತು ಮಾನಸಿಕ ಹಿಂಸೆ ನೀಡುವಂತಿಲ್ಲ. ಕಾಯಿದೆ ಜಾರಿಗೆ ಬಂದ ನಂತರ ಎಲ್ಲ ಖಾಸಗಿ ಶಾಲೆಗಳು ಮಾನ್ಯತೆಯನ್ನು ಪಡೆದುಕೊಳ್ಳಬೇಕು. ಶಾಲೆಗಳಿಗೆ ವಿಧಿಗಳು ಮತ್ತು ಮಾನಕಗಳನ್ನು ನಿಗದಿಪಡಿಸಲಾಗಿದೆ. ಕನಿಷ್ಠ ವಿಧಿಗಳು ಮತ್ತು ಮಾನಕಗಳನ್ನು ಪೂರೈಸದ ಶಾಲೆಗಳ ಮಾನ್ಯತೆಯನ್ನು ಹಿಂದಕ್ಕೆ ಪಡೆಯಲು ಅವಕಾಶವಿದೆ. ಮಾನ್ಯತೆ ಪಡೆಯದೆ ಯಾವುದೇ ಶಾಲೆಯನ್ನು ನಡೆಸುವಂತಿಲ್ಲ. ನಡೆಸಿದಲ್ಲಿ ಮೊದಲಿಗೆ ೫೦ ಸಾವಿರ ದಂಡ ವಿಧಿಸಬಹುದು, ತದನಂತರ ಪ್ರತಿ ದಿನಕ್ಕೆ ೧೦ ಸಾವಿರ ದಂಡ ವಿಧಿಸಬಹುದು.

ಎಲ್ಲ ಶಾಲೆಗಳಲ್ಲಿ ಶಾಲಾ ಅಭಿವೃದ್ಧಿ ಮತ್ತು ನಿರ್ವಹಣಾ ಸಮಿತಿಗಳನ್ನು ರಚಿಸಬೇಕು. ಶಿಕ್ಷಕರಿಗೆ ವಿದ್ಯಾರ್ಹತೆ ಮತ್ತು ಸೇವಾ ನಿಬಂಧನೆಗಳನ್ನು ನಿಗದಿ ಪಡಿಸಲಾಗಿದೆ. ಶಿಕ್ಷಕರು ನಿಯಮಿತವಾಗಿ ಹಾಜರಾಗಬೇಕು. ನಿಗದಿಪಡಿಸಿದ ಪಠ್ಯಕ್ರಮವನ್ನು ಪೂರ್ಣಗೊಳಿಸ ಬೇಕು. ಮಕ್ಕಳ ಕಲಿಕಾ ಮಟ್ಟವನ್ನು ಮರ್ವಲ್ಯಮಾನಮಾಡಿ ಅಗತ್ಯವಿದ್ದಲ್ಲಿ ಪರಿಹಾರ ಬೋಧನೆಯನ್ನು ಮಾಡಬೇಕು. ಶಿಕ್ಷಕರನ್ನು ಬೋಧಕೇತರ ಕೆಲಸಗಳಿಗೆ ನಿಯೋಜಿಸುವುದನ್ನು ನಿಷೇಧಿಸಲಾಗಿದೆ. ಖಾಸಗಿ ಮನೆ ಪಾಠ ಮಾಡುವುದನ್ನು ನಿಷೇಧಿಸಲಾಗಿದೆ. ವಿದ್ಯಾರ್ಥಿ ಶಿಕ್ಷಕರ ಅನುಪಾತ ೪೦ ಕ್ಕಿಂತ ಹೆಚ್ಚಿರಬಾರದು.

### ಕೋಷ್ಟಕ ೧೦.೨೬: ಶಿಕ್ಷಣ ಹಕ್ಕು ಕಾಯ್ದೆ ಸೆಕ್ಷನ್ ೧೨-೧ (ಸಿ) ಪ್ರಕಾರ ಖಾಸಗಿ ಅನುದಾನ ರಹಿತ ಶಾಲೆಗಳಲ್ಲಿ ಶೇ ೨೫ ಮೀಸಲಾತಿ ಅಡಿಯಲ್ಲಿ ಪ್ರವೇಶ ಪಡೆದ ಮಕ್ಕಳ ಸಂಖ್ಯೆ

| ವರ್ಷ | ಲಭ್ಯವಿದ್ದ ಸೀಟುಗಳು | | | ಭರ್ತಿಯಾದ ಸೀಟುಗಳು | | |
|---|---|---|---|---|---|---|
| | ಪೂ. ಪ್ರಾ | ೧ನೇ ತರಗತಿ | ಒಟ್ಟು | ಪೂ. ಪ್ರಾ | ೧ನೇ ತರಗತಿ | ಒಟ್ಟು |
| ೨೦೧೫-೧೬ | * | * | ೧೧೧೧೩೧ | ೪೯೪೨೯ | ೫೦೬೦೬ | ೧೦೦೦೩೫ |
| ೨೦೧೪-೧೫ | * | * | ೧೧೦೭೯೪ | ೪೦೫೦೧ | ೫೩೧೮೯ | ೯೩೬೯೦ |
| ೨೦೧೩-೧೪ | * | * | ೧೦೮೩೪೪ | ೨೪೨೪೯ | ೪೮೮೫೯ | ೭೩೧೦೮ |
| ೨೦೧೨-೧೩ | * | * | ೧೧೬೨೧೪ | ೫೬೫೬ | ೪೩೬೨೬ | ೪೯೨೮೨ |

* ಪೂರ್ವ ಪ್ರಾಥಮಿಕ ಮತ್ತು ಪ್ರಾಥಮಿಕ ತರಗತಿಗಳಿಗೆ ಪ್ರತ್ಯೇಕವಾಗಿ ಲಭ್ಯವಿರುವ ಸೀಟುಗಳ ಮಾಹಿತಿ ನಿಖರವಾಗಿ ಲಭ್ಯವಿಲ್ಲ.

ಮಾಹಿತಿ ಆಧಾರ: ಶಿಕ್ಷಣ ಹಕ್ಕು ಕೋಶ, ಸರ್ವ ಶಿಕ್ಷಣ ಅಭಿಯಾನ ರಾಜ್ಯ ಯೋಜನಾ ನಿರ್ದೇಶಕರ ಕಚೇರಿ.

## ಪದವಿಪೂರ್ವ ಶಿಕ್ಷಣ

ಸ್ವಾತಂತ್ರ್ಯ ಪೂರ್ವರಾಜ್ಯದಲ್ಲಿ ಇಂಟರ್ ಮೀಡಿಯಟ್ ಎಂಬ ಹೆಸರಿನಲ್ಲಿ ಎರಡು ವರ್ಷಗಳ ಶಿಕ್ಷಣ ವ್ಯವಸ್ಥೆ ಜಾರಿಯಲ್ಲಿತ್ತು. ೧೯೫೬ ರಲ್ಲಿ ಏಕೀಕರಣದ ನಂತರ ಒಂದು ವರ್ಷದ ಪಿ.ಯು.ಸಿ. ವ್ಯವಸ್ಥೆ ಜಾರಿಗೆ ಬಂತು. ಇದು ಆಡಳಿತಾತ್ಮಕವಾಗಿ ಪದವಿ ಕಾಲೇಜುಗಳಿಗೆ ಲಗತ್ತಾಗಿತ್ತು. ಪಠ್ಯ ಕ್ರಮ ನಿಗದಿ, ಪರೀಕ್ಷೆ, ಮೌಲ್ಯಮಾಪನ ಮತ್ತು ಪ್ರಮಾಣ ಪತ್ರ ನೀಡುವ ಅಧಿಕಾರ ವಿಶ್ವ ವಿದ್ಯಾಲಯಗಳ ವ್ಯಾಪ್ತಿಗೆ ಸೇರಿತ್ತು. ಈ ವ್ಯವಸ್ಥೆ ೧೯೬೯ ರ ವರೆಗೆ ಜಾರಿಯಲ್ಲಿತ್ತು. ೧೯೭೦ ರಲ್ಲಿ ಪದವಿ ಪೂರ್ವ ಶಿಕ್ಷಣ ಮಂಡಳಿಯನ್ನು ಸ್ಥಾಪಿಸಿ ಪಿ.ಯು.ಸಿ. ಶಿಕ್ಷಣವನ್ನು ಅದರ ವ್ಯಾಪ್ತಿಯಲ್ಲಿ ತರಲಾಯಿತು. ೧೯೭೧-೭೨ ರಿಂದ ರಾಷ್ಟ್ರೀಯ ಮಾದರಿಯ ೧೦+೨+೩ ವರ್ಷಗಳ ಶಿಕ್ಷಣ ಪದ್ಧತಿಯನ್ನು ಅನುಸರಿಸಲು ಪದವಿ ಪೂರ್ವ ಶಿಕ್ಷಣವನ್ನು ಎರಡು ವರ್ಷದ ಅವಧಿಗೆ ಹೆಚ್ಚಿಸಲಾಯಿತು.

ಆ ಹಂತದಲ್ಲಿ ಪದವಿ ಪೂರ್ವ ಶಿಕ್ಷಣ ನೀಡುವ ಸಂಸ್ಥೆಗಳು ೩ ವಿಧದ ಆಡಳಿತ ವ್ಯಾಪ್ತಿಗೆ ಸೇರಿದ್ದವು. ೮,೯,೧೦,೧೧, ಮತ್ತು ೧೨ ನೇ ತರಗತಿಗಳನ್ನು ಹೊಂದಿದ ಸೆಕೆಂಡರಿ ಶಾಲೆಗಳು, ೧೧, ೧೨, ನೇ ತರಗತಿಗಳನ್ನು ಹೊಂದಿದ ಪದವಿ ಪೂರ್ವ ಕಾಲೇಜುಗಳು, ಮತ್ತು ಎರಡು ವರ್ಷಗಳ ಪದವಿಪೂರ್ವ ತರಗತಿಗಳೊಂದಿಗೆ ಮೂರು ವರ್ಷದ ಪದವಿ ತರಗತಿಗಳನ್ನೊಳಗೊಂಡ ಪದವಿ ಕಾಲೇಜುಗಳು. ನಂತರ ಪದವಿ ಪೂರ್ವ ತರಗತಿಗಳನ್ನು ಪದವಿ ಕಾಲೇಜುಗಳಿಂದ ಪೂರ್ಣವಾಗಿ ಪ್ರತ್ಯೇಕಿಸಿ ಪದವಿಪೂರ್ವ ಶಿಕ್ಷಣ ಮಂಡಳಿಯ ಅಧೀನಕ್ಕೆ ಒಳಪಡಿಸಲಾಯಿತು.

### ಕೋಷ್ಟಕ ೧೦.೨೭: ೨೦೦೯-೧೦ ರಿಂದ ೨೦೧೫-೧೬ ರವರೆಗೆ ಪದವಿ ಪೂರ್ವ ಕಾಲೇಜುಗಳ ವಿವರಗಳು

| ವರ್ಷ | ಸರ್ಕಾರಿ | ಅನುದಾನಿತ | ಅನುದಾನರಹಿತ | ಬಿ.ಬಿ.ಎಂ.ಪಿ. | ಒಟ್ಟು |
|---|---|---|---|---|---|
| ೨೦೧೫-೧೬ | ೧೨೦೩ | ೭೯೫ | ೨೭೭೮ | ೧೩ | ೪,೭೮೯ |
| ೨೦೧೪-೧೫ | ೧೨೦೩ | ೭೯೫ | ೨೩೪೬ | ೧೩ | ೪,೫೧೯ |
| ೨೦೧೩-೧೪ | ೧೨೦೩ | ೭೯೫ | ೨೧೪೫ | ೧೩ | ೪,೩೧೮ |
| ೨೦೧೨-೧೩ | ೧೨೦೧ | ೭೭೫ | ೧೯೯೫ | ೧೩ | ೪,೧೨೭ |
| ೨೦೧೧-೧೨ | ೧೨೦೦ | ೬೭೫ | ೧೮೭೪ | ೧೩ | ೩,೯೨೪ |
| ೨೦೧೦-೧೧ | ೧೧೯೧ | ೬೪೦ | ೧೭೩೭ | ೧೩ | ೩,೭೪೩ |
| ೨೦೦೯-೧೦ | ೧೧೮೮ | ೬೪೦ | ೧೫೩೩ | ೧೩ | ೩,೫೩೬ |

### ಕೋಷ್ಟಕ ೧೦.೨೮: ೨೦೦೯-೧೦ರ ಸಾಲಿನ ಪದವಿಪೂರ್ವ ಶಿಕ್ಷಣದ ದಾಖಲಾತಿಗಳ ವಿವರ

| ವಿವಿಧ ಕಾಲೇಜು ಗಳು | ಕಾಲೇಜು ಗಳ ಸಂಖ್ಯೆ | ದಾಖಲಾತಿ | | |
|---|---|---|---|---|
| | | ಬಾಲಕರು | ಬಾಲಕಿಯರು | ಒಟ್ಟು |
| ಸರ್ಕಾರಿ | ೧,೨೦೦ | ೧,೪೫,೧೧೬ | ೧,೭೭೯೧೩ | ೩,೨೩,೦೨೯ |
| ಅನುದಾನಿತ | ೮೦೩ | ೧,೯೪,೭೦೦ | ೧,೭೩,೩೨೯ | ೩,೬೮,೦೨೯ |
| ಅನುದಾನ ರಹಿತ | ೧,೬೨೭ | ೧,೫೦,೧೯೩ | ೧,೩೧,೦೨೬ | ೨,೮೧,೨೧೯ |
| ಇತರೆ | ೧೩ | ೧,೨೦೧ | ೪,೦೧೧ | ೫,೨೧೨ |

ಆಧಾರ: ಪದವಿ ಪೂರ್ವ ಶಿಕ್ಷಣ ಇಲಾಖೆ.

ಪದವಿಪೂರ್ವ ಶಿಕ್ಷಣದಲ್ಲಿ ಸರ್ಕಾರದ ಪಾತ್ರ ಮಹತ್ವದ್ದಾಗಿದೆ. ವಿದ್ಯಾರ್ಥಿನಿಯರು ಹೆಚ್ಚಿನ ಸಂಖ್ಯೆಯಲ್ಲಿ ಪದವಿಪೂರ್ವ ಶಿಕ್ಷಣಕ್ಕೆ ಸೇರಲು ಪ್ರೋತ್ಸಾಹಿಸಬೇಕೆಂಬ ಉದ್ದೇಶದಿಂದ ಸರ್ಕಾರಿ ಪದವಿಪೂರ್ವ ಕಾಲೇಜುಗಳಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿನಿಯರಿಗೆ ಉಚಿತ ಶಿಕ್ಷಣವನ್ನು ಕೊಡುತ್ತಿರುವುದರಿಂದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಆಗುವ ಆರ್ಥಿಕ ನಷ್ಟವನ್ನು ಸರ್ಕಾರವೇ ಸಂಬಂಧಿಸಿದ ಕಾಲೇಜುಗಳಿಗೆ ಮರುಪಾವತಿ ಮಾಡುವುದರ ಮೂಲಕ ಸರಿದೂಗಿಸಲಾಗುತ್ತಿದೆ. ಹೆಚ್ಚಿನ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ವಿದ್ಯಾರ್ಥಿನಿಯರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಇದು ಭವಿಷ್ಯತ್ತಿನಲ್ಲಿ ವಿದ್ಯಾರ್ಥಿನಿಯರ ಶಿಕ್ಷಣಕ್ಕಾಗಿ ಇನ್ನೂ ಹೆಚ್ಚಿನ ಕಾಲೇಜುಗಳನ್ನು ಸ್ಥಾಪಿಸುವಂತೆ ಸೂಚಿಸುತ್ತದೆ.

### ಕೋಷ್ಟಕ ೧೦.೨೯: ೨೦೦೬-೦೭ ರಿಂದ ೨೦೧೦-೧೧ ರ ವರೆಗೆ ಹೊಸದಾಗಿ ಪ್ರಾರಂಭಿಸಲಾದ ಹೊಸ ಕಾಲೇಜುಗಳ ವಿವರ

| ವರ್ಷಾವಾರು ಪ್ರಾರಂಭಿಸಲಾದ ಹೊಸ ಕಾಲೇಜುಗಳ ಸಂಖ್ಯೆ | | |
|---|---|---|
| ವರ್ಷ | ಸರ್ಕಾರಿ | ಖಾಸಗಿ |
| ೨೦೧೫-೧೬ | – | ೪೬೨ |
| ೨೦೧೪-೧೫ | – | ೨೧೧ |
| ೨೦೧೩-೧೪ | ೦೨ | ೭೬ |
| ೨೦೧೨-೧೩ | ೦೧ | ೨೩೯ |
| ೨೦೧೧-೧೨ | ೦೮ | ೧೭೨ |
| ೨೦೧೦-೧೧ | ೦೩ | ೧೯೨ |
| ೨೦೦೯-೧೦ | – | ೧೩೮ |
| ೨೦೦೮-೦೯ | – | ೯೫ |
| ೨೦೦೭-೦೮ | ೨೯೩ | ೨೧೭ |
| ೨೦೦೬-೦೭ | ೧೯೯ | ೨೭೫ |

ಪದವಿಪೂರ್ವ ಕಾಲೇಜುಗಳ ಮೂಲಸೌಕರ್ಯಗಳ ಅಗತ್ಯ ವಸ್ತುಗಳನ್ನು ರಚಿಸಲು ನಬಾರ್ಡ್ – ಆರ್‌ಐಡಿಎಫ್ ಮತ್ತು ವಿಶೇಷ ಅಭಿವೃದ್ಧಿ ಯೋಜನೆಯನ್ನು ಬಳಸಿಕೊಳ್ಳಲಾಗುತ್ತಿದೆ. ಉಪನ್ಯಾಸಕರ ಜ್ಞಾನಮಟ್ಟವನ್ನು ಹೆಚ್ಚಿಸಿಕೊಳ್ಳಲು ಮತ್ತು ಉತ್ತ ಮ ಫಲಿತಾಂಶವನ್ನು ಪಡೆಯಲು ಪರಿಚಯಾತ್ಮಕ ಕಾರ್ಯಕ್ರಮಗಳನ್ನು ಇಲಾಖಾ ವತಿಯಿಂದ ಆಯೋಜಿಸಲಾಗುತ್ತಿದೆ. ರಾಜ್ಯದಲ್ಲಿ ೧೯೯೪-೯೫ರಲ್ಲಿ ಒಟ್ಟು ೧೮೯೩ ಪದವಿಪೂರ್ವ ಕಾಲೇಜುಗಳಿದ್ದವು. ಇದರಲ್ಲಿ ೨೨೦ ಕಾಲೇಜುಗಳು (೧೮೪ ಖಾಸಗಿ ಮತ್ತು ೩೬ ಸರ್ಕಾರಿ) ಪ್ರಥಮ ದರ್ಜೆ ಕಾಲೇಜುಗಳಿಗೆ ಹೊಂದಿಕೊಂಡಿದ್ದು. ೩೧೩ (೨೯೫ ಖಾಸಗಿ ಮತ್ತು ೧೮ ಸರ್ಕಾರಿ) ಸ್ವತಂತ್ರ ಕಾಲೇಜುಗಳಿದ್ದವು. ೧೩೬೦ (೮೩೮ ಖಾಸಗಿ ಮತ್ತು ೫೨೨ ಸರ್ಕಾರಿ) ಕಾಲೇಜುಗಳು ಸಂಯುಕ್ತ ಪದವಿಪೂರ್ವ ಕಾಲೇಜುಗಳಾಗಿದ್ದವು. ಮೇಲಿನ ಎಲ್ಲಾ ಸಂಸ್ಥೆಗಳಿಂದ ಒಟ್ಟು ೩,೫೮,೨೨೫ ವಿದ್ಯಾರ್ಥಿಗಳು ಮಾರ್ಚ್ ೧೯೯೩ರ ಪದವಿಪೂರ್ವ ಪರೀಕ್ಷೆಗೆ ಹಾಜರಾಗಿ ಅವರಲ್ಲಿ ೧,೩೯,೧೧೦ (ಶೇ.೩೮.೮೩) ಮಂದಿ ತೇರ್ಗಡೆಯಾದರು. ಏಪ್ರಿಲ್ ೧೯೯೪ರ ಪರೀಕ್ಷೆಗೆ ಕುಳಿತ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ೩,೩೦,೭೦೦ ಅವರಲ್ಲಿ ೧,೨೪,೪೬೨ (ಶೇ.೩೭.೬೪) ಮಂದಿ ತೇರ್ಗಡೆಯಾದರು. ೨೦೦೫-೦೬ರಲ್ಲಿ ೪,೨೧,೮೮೨ ಪ್ರಥಮ ಪದವಿಪೂರ್ವ ಮತ್ತು ೩,೭೭,೮೧೬ ದ್ವಿತೀಯ ಪದವಿಪೂರ್ವ ತರಗತಿಯ ವಿದ್ಯಾರ್ಥಿಗಳು ೨,೫೫೪ ಪದವಿಪೂರ್ವ ಕಾಲೇಜುಗಳಲ್ಲಿ ಅಭ್ಯಾಸ ಮಾಡಿದರು. ೨೦೦೬-೦೭ರಲ್ಲಿ ಒಟ್ಟು ಪದವಿಪೂರ್ವ ಕಾಲೇಜುಗಳ ಸಂಖ್ಯೆ ೩೦೨೭ ಇದ್ದು ವಿದ್ಯಾರ್ಥಿಗಳ ಸಂಖ್ಯೆಯು ಪ್ರಥಮ ವರ್ಷದಲ್ಲಿ ೪,೯೬,೪೫೫ ಮತ್ತು ಎರಡನೆಯ ವರ್ಷದಲ್ಲಿ ೪,೦೪,೬೫೬ ಇದ್ದಿತು.

೨೦೦೭-೦೮ ರಿಂದ ಪದವಿ ಪೂರ್ವ ಶಿಕ್ಷಣದ ದಾಖಲಾತಿಯಲ್ಲಿ ಮಹತ್ವ ಪೂರ್ಣ ಬದಲಾವಣೆಯಾಗಿದೆ. ಪದವಿ ಪೂರ್ವ ಶಿಕ್ಷಣದ ಬೇಡಿಕೆಯು ೧೦ ನೇ ತರಗತಿ ಪರೀಕ್ಷೆಯಲ್ಲಿನ ಉತ್ತೀರ್ಣತೆಯ ಮೇಲೆ ಅವಲಂಬಿತವಾಗಿದೆ. ೨೦೦೭ ನೇ ಇಸವಿಯ ನಂತರ ೧೦ ನೇ ತರಗತಿಯ ಉತ್ತೀರ್ಣತೆಯ ಪ್ರಮಾಣ ತ್ವರಿತವಾಗಿ ಏರಿಕೆಯಾಗಿದೆ. ಅದರ ಪರಿಣಾಮ ಪದವಿ ಪೂರ್ವ ತರಗತಿಗಳಿಗೆ ದಾಖಲಾತಿಯ ಪ್ರಮಾಣವೂ ಹೆಚ್ಚಾಗಿದೆ.

### ಕೋಷ್ಟಕ ೧೦.೩೦: ವರ್ಷಾವಾರು ಪದವಿ ಪೂರ್ವ ತರಗತಿಗಳಲ್ಲಿ ದಾಖಲಾತಿ ಪಡೆದ ವಿದ್ಯಾರ್ಥಿಗಳ ಸಂಖ್ಯೆ

| ವರ್ಷ | ೧ನೇ ಪಿ.ಯು.ಸಿ. | ೨ನೇ ಪಿ.ಯು.ಸಿ | ವ್ಯತ್ಯಾಸ | ಶೇಕಡ |
|---|---|---|---|---|
| ೨೦೧೫-೧೬ | ೬೪೩೫೩೨ | ೫೧೬೫೦೮ | ೯೫೦೬೨ | ೧೫.೫೪ |
| ೨೦೧೪-೧೫ | ೬೧೧೫೭೦ | ೪೯೬೨೫೫ | ೬೬೧೯೪ | ೧೧.೭೭ |

| | | | | |
|---|---|---|---|---|
| ೨೦೧೩-೧೩ | ೫೬೨೪೪೯ | ೪೬೭೯೮೫ | ೧೫೭೫೫೭ | ೨೫.೧೯ |
| ೨೦೧೨-೧೩ | ೬೨೫೫೪೨ | ೪೮೦೨೬೮ | ೯೫೪೦೫ | ೧೬.೫೭ |
| ೨೦೧೧-೧೨ | ೫೭೫೬೭೩ | ೪೩೦೬೨೫ | ೮೭೫೫೪ | ೧೬.೯೦ |
| ೨೦೧೦-೧೦ | ೫೧೮೧೭೯ | ೪೫೦೭೦೦ | ೧೦೫೨೭೭ | ೧೮.೯೪ |
| ೨೦೦೯-೧೦ | ೫೫೫೯೭೭ | ೪೨೮೫೮೦ | ೧೦೫೮೫೦ | ೧೯.೮೧ |

೨೦೧೫-೧೬ ರಲ್ಲಿ ೧೨೦೩ ಸರ್ಕಾರಿ, ೭೯೫ ಅನುದಾನಿತ ೧೩ ಬಿ.ಬಿ.ಎಂ.ಪಿ. ೨೭೭೮ ಅನುದಾನರಹಿತ ಕಾಲೇಜುಗಳಲ್ಲಿ ವಿವಿಧ ಕೋರ್ಸುಗಳಿಗೆ ದಾಖಲಾತಿ ಪಡೆದ ವಿದ್ಯಾರ್ಥಿಗಳ ಸಂಖ್ಯೆ.

| ತರಗತಿ | ಕಲೆ | ವಾಣಿಜ್ಯ | ವಿಜ್ಞಾನ | ಒಟ್ಟು |
|---|---|---|---|---|
| ೧ ನೇ ವರ್ಷ | ೨೦೪೭೭೦ | ೨೩೭೭೮೪ | ೨೦೦೯೭೮ | ೬೪೩೫೩೨ |
| ೨ನೇ ವರ್ಷ | ೧೬೧೪೫೩ | ೧೯೧೪೯೪ | ೧೬೩೫೬೧ | ೫೧೫೫೦೮ |
| **ಶೇಕಡಾವಾರು ಅನುಪಾತ** | | | | |
| ೧ ನೇ ವರ್ಷ | ೩೧.೮೨ | ೩೬.೯೫ | ೩೧.೨೩ | ೧೦೦ |
| ೨ನೇ ವರ್ಷ | ೩೧.೨೬ | ೩೭.೦೭ | ೩೧.೬೭ | ೧೦೦ |

**ಆಧಾರ ಪದವಿ ಪೂರ್ವ ಶಿಕ್ಷಣ ಇಲಾಖೆ ಹಾಗೂ ಕರ್ನಾಟಕ ಆರ್ಥಿಕ ಸಮೀಕ್ಷೆ ಪುಟ ೬೦೩**

**ಹೊಸ ಪಠ್ಯಪುಸ್ತಕಗಳು:** ಶಿಕ್ಷಣ ತಜ್ಞರ ಮಾರ್ಗದರ್ಶನದಲ್ಲಿ ಆಧುನಿಕ ವಿದ್ಯಮಾನಗಳಿಗೆ ಹೊಂದುವಂತಹ ಪುನರ್‌ವಿಮರ್ಶಿತ ಪಠ್ಯಕ್ರಮಕ್ಕೆ ಅಗತ್ಯವಾಗುವಂತಹ ಹೊಸ ಪಠ್ಯಪುಸ್ತಕಗಳನ್ನು ಹೊರತರಲಾಯಿತು. ೨೦೦೪-೦೫ನೇ ಶೈಕ್ಷಣಿಕ ವರ್ಷದಿಂದ ಇವುಗಳ ಬೋಧನೆ ಪ್ರಾರಂಭವಾಯಿತು. ಶಿಕ್ಷಕರ ತರಬೇತಿ:ಕಳೆದ ಒಂದು ದಶಕದಿಂದ ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನ್ಯಾಸಕರಿಗೆ ಮತ್ತು ಪ್ರಾಂಶುಪಾಲರಿಗೆ ವೃತ್ತಿ ಸಾಮರ್ಥ್ಯ ಸುಧಾರಣೆಗಾಗಿ ನಿರಂತರವಾಗಿ ತರಬೇತಿಶಿಬಿರಗಳನ್ನು ಆಯೋಜಿಸಿಕೊಂಡು ಬರುತ್ತಿದೆ.

**ಕೋಷ್ಟಕ ೧೦.೩೧: ೨೦೧೪-೧೫ ನೇ ಸಾಲಿನ ಪದವಿ ಪೂರ್ವ ಪರೀಕ್ಷೆಯ ಫಲಿತಾಂಶದ ವಿವರಗಳು**

| ಸಾಧನೆ | ಕಲೆ | ವಾಣಿಜ್ಯ | ವಿಜ್ಞಾನ | ಒಟ್ಟು |
|---|---|---|---|---|
| ಹಾಜರಾದವರು | ೨೨೯೬೩೩ | ೨೦೮೬೫೧ | ೧೭೨೦೩೯ | ೬೧೦೩೨೩ |
| ಪಾಸಾದವರು | ೧೧೭೩೯೪ | ೧೩೯೯೩೨ | ೧೧೨೧೪೮ | ೩೬೯೪೭೪ |
| ಶೇಕಡಾವಾರು | ೫೧.೧೨ | ೬೭.೦೬ | ೬೫.೧೯ | ೬೦.೫೪ |

**ಸಾಮಾನ್ಯ ಪ್ರವೇಶ ಪರೀಕ್ಷೆ (CET):** ದಿನಾಂಕ ೨೫-೦೭-೨೦೦೭ರ ಸರ್ಕಾರದ ಆದೇಶದಲ್ಲಿ ಹಿಂದೆ ಅಸ್ತಿತ್ವದಲ್ಲಿದ್ದ ಸಾಮಾನ್ಯ ಪ್ರವೇಶ ಪರೀಕ್ಷಾ (Common Entrance Test) ಘಟಕವನ್ನು 'ಕರ್ನಾಟಕ ಪರೀಕ್ಷೆಗಳ ಪ್ರಾಧಿಕಾರ' ಎಂಬ ಹೆಸರಿನಲ್ಲಿ ನೋಂದಾಯಿತ ಸೊಸೈಟಿಯನ್ನಾಗಿ ಪರಿವರ್ತಿಸಲು ಅನುಮತಿ ನೀಡಿದ್ದರಿಂದ ಕರ್ನಾಟಕ ಸಂಘಗಳ ನೋಂದಣಿ ಕಾಯಿದೆ ೧೯೬೦ರ ಅಡಿ (Karnataka Act1960) ದಿನಾಂಕ ೦೬-೦೮-೨೦೦೭ರಲ್ಲಿ 'ಕರ್ನಾಟಕ ಪರೀಕ್ಷೆಗಳ ಪ್ರಾಧಿಕಾರ (Karnataka Examinations Authority - KEA) ಎಂದು ನೋಂದಾಯಿಸಲಾಗಿದೆ. ಈ ಸಂಸ್ಥೆಯ ಆಡಳಿತ ಕಛೇರಿ, ೧೮ನೇ ಕ್ರಾಸ್, ಸಂಪಿಗೆ ರಸ್ತೆ, ಮಲ್ಲೇಶ್ವರ, ಬೆಂಗಳೂರು-೧೨ರಲ್ಲಿ ಇರುತ್ತದೆ. ಈ ಪ್ರಾಧಿಕಾರದ ಮುಖ್ಯ ಉದ್ದೇಶಗಳೆಂದರೆ: (ಅ) ರಾಜ್ಯದಲ್ಲಿನ ಸರ್ಕಾರಿ/ಖಾಸಗಿ ಅನುದಾನಿತ, ಖಾಸಗಿ ಅನುದಾನರಹಿತ ವೃತ್ತಿ ಶಿಕ್ಷಣ ಸಂಸ್ಥೆಗಳಲ್ಲಿನ ಸರ್ಕಾರದ ಪಾಲಿನ ಸೀಟುಗಳಾದ ಮೆಡಿಕಲ್, ಡೆಂಟಲ್, ಭಾರತೀಯ ವೈದ್ಯ ಪದ್ಧತಿ ಹಾಗೂ ಹೋಮಿಯೋಪತಿ, ಎಂಜಿನಿಯರಿಂಗ್ ಹಾಗೂ ಆರ್ಕಿಟೆಕ್ಚರ್ ಕೋರ್ಸ್‌ಗಳ ಸೀಟುಗಳನ್ನು ಅರ್ಹ ಅಭ್ಯರ್ಥಿಗಳಿಗೆ ಹಂಚಿಕೆ ಮಾಡಲು ಸಾಮಾನ್ಯ ಪ್ರವೇಶ ಪರೀಕ್ಷೆ ನಡೆಸುವುದು, ಅಭ್ಯರ್ಥಿಗಳು ಅರ್ಹತಾ ಪರೀಕ್ಷೆ ಹಾಗೂ ಸಿಇಟಿ ಪರೀಕ್ಷೆಗಳಲ್ಲಿ ಗಳಿಸಿದ ಅಂಕಗಳನ್ನು ಪರಿಗಣಿಸಿ ರ್‍ಯಾಂಕ್ ಪಟ್ಟಿ ತಯಾರಿಸುವುದು ಹಾಗೂ ಸರ್ಕಾರ ನೀಡುವ ಸೀಟ್ ಮ್ಯಾಟ್ರಿಕ್ಸ್‌ನಂತೆ ವಿವಿಧ ಕೋರ್ಸ್‌ಗಳಿಗೆ ಸರ್ಕಾರದ ಮೀಸಲಾತಿಯನ್ನು ಅನುಸರಿಸಿ ಸೀಟು ಹಂಚಿಕೆ ಮಾಡುವುದು, (ಬಿ) ಸರ್ಕಾರದ ವಿವಿಧ ಇಲಾಖೆಗಳಲ್ಲಿ ಹಾಗೂ ಖಾಸಗಿ ಕಾರ್ಪೋರೇಟ್ ಸಂಸ್ಥೆಗಳಲ್ಲಿ ಅವರ ಅಪೇಕ್ಷೆಯಂತೆ ಖಾಲಿ ಇರುವ ವಿವಿಧ ಹುದ್ದೆಗಳನ್ನು ಭರ್ತಿ ಮಾಡಲು ಸಾಮಾನ್ಯ ಪ್ರವೇಶ ಪರೀಕ್ಷೆ ನಡೆಸುವುದು ಮತ್ತು ಅಭ್ಯರ್ಥಿಗಳು ಪ್ರವೇಶ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳನ್ನು ಆಧರಿಸಿ ಅರ್ಹತಾ ಪಟ್ಟಿ ತಯಾರಿಸಿಕೊಡುವುದು, ಸಿ) ಸರ್ಕಾರ ಕಾಲಕಾಲಕ್ಕೆ ನಿಗದಿಪಡಿಸುವ ಇತರ ಪರೀಕ್ಷೆಗಳನ್ನು ನಡೆಸುವುದು ಮತ್ತು (ಡಿ) ಪ್ರಾಧಿಕಾರ ನಡೆಸುವ ಸಿಇಟಿ, ಪರೀಕ್ಷೆಯಲ್ಲಿನ ಎಲ್ಲಾ ಹಂತಗಳಲ್ಲಿಯೂ ಪಾರದರ್ಶಕತೆಯನ್ನು ಕಾಪಾಡುವುದು.

ಸೀಟು ಹಂಚಿಕೆ ಪ್ರಕ್ರಿಯೆಯನ್ನು ೨೦೦೯ನೇ ಸಾಲಿನಲ್ಲಿ ಮೊದಲ ಬಾರಿಗೆ ವಿಕೇಂದ್ರೀಕರಣಗೊಳಿಸಿ, ಬೆಂಗಳೂರು ಕೇಂದ್ರವೂ ಸೇರಿದಂತೆ ರಾಜ್ಯದ ಗುಲ್ಬರ್ಗಾ ಹಾಗೂ ಹುಬ್ಬಳ್ಳಿ ಕೇಂದ್ರಗಳಿಂದಲೂ ನಡೆಸಲಾಯಿತು ಹಾಗೂ ೨೦೧೦ರಲ್ಲಿ ಧಾರವಾಡ ಮತ್ತು ಮಂಗಳೂರು ಕೇಂದ್ರಗಳಿಗೂ ವಿಸ್ತರಿಸಲಾಯಿತು. ಸೀಟು ಹಂಚಿಕೆಯನ್ನು ಸರ್ಕಾರದ ಮೀಸಲಾತಿ ನೀತಿಯಂತೆ ಹಂಚಿಕೆ ಮಾಡಲಾಗಿದ್ದು, ಪ್ರಕ್ರಿಯೆಯ ಎಲ್ಲಾ ಹಂತಗಳಲ್ಲಿಯೂ ಪಾರದರ್ಶಕತೆಯನ್ನು ಕಾಯ್ದುಕೊಳ್ಳಲಾಗಿದೆ.

## ವೃತ್ತಿ ಶಿಕ್ಷಣ

**ಹಿನ್ನೆಲೆ:** ವೃತ್ತಿ ಶಿಕ್ಷಣದ ಉಗಮವನ್ನು ವೇದಗಳ ಕಾಲದಿಂದ ಗುರುತಿಸಬಹುದಾಗಿದೆ. ತಮ್ಮ ಕುಲ ಕಸಬನ್ನು ಪೋಷಕರಿಂದ ಮಕ್ಕಳು ಕಲಿಯುವ ಪರಿಪಾಠ ಪ್ರಾಚೀನವಾದುದಾಗಿದೆ. ಕ್ರಮೇಣ ಮಧ್ಯಯುಗದಲ್ಲಿ ಇದಕ್ಕೆ ಕೈಗಾರಿಕೆಯ ಸ್ವರೂಪವನ್ನು ನೀಡಲಾಯಿತು. ಶಿಕ್ಷಣ ಕುರಿತಾದ ಸುಧಾರಣೆಗಳನ್ನು ಸೂಚಿಸಿದ ಹಲವಾರು ಆಯೋಗಗಳು ಶಿಕ್ಷಣದಲ್ಲಿ ವೃತ್ತಿಪರತೆಯನ್ನು ಒಳಪಡಿಸಲು ಶಿಫಾರಸು ಮಾಡಿದ್ದವು. ಸೆಕೆಂಡರಿ ಶಿಕ್ಷಣದ ಹಂತದಲ್ಲಿ ವಿದ್ಯಾರ್ಥಿಗಳು ವೃತ್ತಿ ಸಂಬಂಧಿತ ಕೌಶಲಗಳು ಮತ್ತು ಸಾಮರ್ಥ್ಯಗಳನ್ನಕರಗತ ಮಾಡಿಕೊಂಡಲ್ಲಿ ಕೌಟುಂಬಿಕ ಆದಾಯಕ್ಕೆ ತುಸು ಗಳಿಕೆಯನ್ನು ಸೇರಿಸುವ ಮೂಲಕ ಅವರು

ಮುಂದಿನ ಜೀವನವನ್ನು ಸಮರ್ಥವಾಗಿ ಎದುರಿಸಲು ಬೇಕಾದ ಆತ್ಮವಿಶ್ವಾಸವನ್ನು ಗಳಿಸಿಕೊಳ್ಳಲು ಸಹಾಯಕವಾಗುತ್ತದೆ. ೧೯೮೬ ರ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಆರ್ಥಿಕತೆಯ ವಿವಿಧ ಹಂತಗಳಲ್ಲಿ ಮಾನವ ಶಕ್ತಿಯನ್ನು ಪೂರೈಕೆ ಮಾಡಲು ಹಾಗೂ ಶಾಲೆ ಮತ್ತು ಉದ್ಯೋಗ ಪ್ರಪಂಚದ ನಡುವಿನ ಕಂದಕವನ್ನು ನಿವಾರಿಸುವಂತೆ ಪ್ರತಿಪಾದಿಸಲಾಗಿದೆ. ವೃತ್ತಿ ಶಿಕ್ಷಣದ ಕುರಿತಂತೆ ಕೊಠಾರಿ ಶಿಕ್ಷಣ ಆಯೋಗದಲ್ಲಿ ಪ್ರಭಲವಾದ ಶಿಫಾರಸು ಮಾಡಲಾಗಿತ್ತು. ಈ ಹಿನ್ನೆಯಲ್ಲಿ ಭಾರತ ಸರ್ಕಾರವು +೨ ಹಂತದಲ್ಲಿ ವೃತ್ತಿ ಶಿಕ್ಷಣವನ್ನು ಜಾರಿಗೆ ತಂದಿದೆ.

ವೃತ್ತಿ ಶಿಕ್ಷಣವು ರಾಜ್ಯದಲ್ಲಿ ೧೯೭೭-೭೮ ರಿಂದ ಪದವಿಪೂರ್ವ ಹಂತದಲ್ಲಿ ಜಾರಿಗೆ ಬಂದಿದೆ. ಇದರ ಪ್ರಮುಖ ಉದ್ದೇಶಗಳೆಂದರೆ:- ೧) ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಮೂಡಿಸಿ ಲಾಭದಾಯಕವಾದ ಸ್ವ-ಉದ್ಯೋಗ ಕೈಗೊಳ್ಳಲು ಪ್ರೇರೇಪಿಸುವುದು. ೨) ಸಂಘಟಿತ ಹಾಗೂ ಅಸಂಘಟಿತ ಮಧ್ಯ-ಸ್ಥರ ಉದ್ದಿಮೆಗಳಿಗೆ ಅಗತ್ಯವಾಗಿ ಬೇಕಾಗುವ ನಿಪುಣ ಕೆಲಸಗಾರರು ಸಿಗುವಂತೆ ನೋಡಿಕೊಳ್ಳುವುದು, ೩) ಯಾವುದೇ ರೀತಿಯ ಆಸಕ್ತಿ ಇಲ್ಲವೇ ಉದ್ದೇಶವಿಲ್ಲದೆ ಉನ್ನತ ಶಿಕ್ಷಣಕ್ಕೆ ಹೋಗಬಯಸುವವರಿಗೆ ಪರ್ಯಾಯ ವ್ಯವಸ್ಥೆ ಮಾಡುವುದು, ೪) ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳಿಗೆ ಸ್ವ-ಉದ್ಯೋಗ ಕೈಗೊಳ್ಳಲು ಪ್ರೋತ್ಸಾಹಿಸುವುದು. ೫) ಉನ್ನತ ಶಿಕ್ಷಣಕ್ಕೆ ಇರುವ ಅನಾವಶ್ಯಕ ಒತ್ತಡ ಕಡಿಮೆಗೊಳಿಸುವುದು. ೬) ವಿದ್ಯಾರ್ಥಿಗಳಲ್ಲಿ ಇರುವ ಕುಶಲತೆಯನ್ನು ಗುರುತಿಸಿ ಪರಿಣತಿ ಪಡೆಯುವಂತೆ ಮಾಡುವುದು.

೧೯೭೭ ರಲ್ಲಿ +೨ ಹಂತದಲ್ಲಿ ವೃತ್ತಿ ಶಿಕ್ಷಣವನ್ನು ಪ್ರಾರಂಭಿಸಿದ ರಾಜ್ಯಗಳ ಪೈಕಿ ಕರ್ನಾಟಕವು ಮುಂಚೂಣಿಯಲ್ಲಿತ್ತು. ಈ ಶಿಕ್ಷಣದ ಉಸ್ತುವಾರಿಯನ್ನು ನೋಡಿಕೊಳ್ಳಲು ಪ್ರತ್ಯೇಕ ನಿರ್ದೇಶನಾಲಯವನ್ನು ಪ್ರಾರಂಭಿಸಲಾಯಿತು. ಪ್ರಾರಂಭದ ಹಂತದಲ್ಲಿ ಪ್ರಮುಖವಾಗಿ ಕೃಷಿ, ೨. ವಾಣಿಜ್ಯ ಮತ್ತು ವ್ಯಾಪಾರ ೩. ತಾಂತ್ರಿಕ ಕೋರ್ಸುಗಳು ೪. ವೃತ್ತಿಗೆ ಜೋಡಿಸಿದ ಕೋರ್ಸುಗಳು ೫. ಗೃಹ ವಿಜ್ಞಾನ ಇತ್ಯಾದಿವೃತ್ತಿ ಶಿಕ್ಷಣ ಕೋರ್ಸುಗಳನ್ನು ಗುರುತಿಸಲಾಯಿತು. ಎಂಟನೆಯ ಪಂಚವಾರ್ಷಿಕ ಯೋಜನೆಯ ಅಂತ್ಯದ ವರೆಗೆ ಕೇಂದ್ರ ಸರ್ಕಾರದಿಂದ ಈ ಕೋರ್ಸುಗಳ ಅಗತ್ಯತೆಗಳಾದ ಉಪಕರಣಗಳು, ಕಟ್ಟಡ ಮುಂತಾದ ಉದ್ದೇಶಗಳಿಗಾಗಿ ಶೇಕಡ ೧೦೦ ರಷ್ಟು ಅನುದಾನ ನೀಡಲಾಗುತ್ತಿತ್ತು. ಪ್ರಸ್ತುತ ವೃತ್ತಿ ಶಿಕ್ಷಣ ಇಲಾಖೆಯು ರಾಜ್ಯ ಸರ್ಕಾರದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿದ್ದು ಸುಮಾರು ೫೦೦ ಕಾಲೇಜುಗಳಲ್ಲಿ ೨೯ ವೃತ್ತಿಗಳಿಗೆ ಸಂಬಂಧಿಸಿದ ೮೯೧ ಕೋರ್ಸ್ ಘಟಕಗಳನ್ನು ಪದವಿ ಪೂರ್ವ ಕಾಲೇಜುಗಳು, ಪದವಿ ಕಾಲೇಜುಗಳು, ಪಾಲಿಟೆಕ್ನಿಕ್ ಕಾಲೇಜುಗಳು ಮುಂತಾದ ಸಂಸ್ಥೆ ಗಳಲ್ಲಿ ನಡೆಸಲಾಗುತ್ತಿದೆ.

### ಲೋಕಶಿಕ್ಷಣ

ಹಲವು ದಶಕಗಳ ಪ್ರಯತ್ನದ ಫಲವಾಗಿ ಕರ್ನಾಟಕ ರಾಜ್ಯದ ೨೦೧೧ ರ ಜನಗನತಿಯ ಪ್ರಕಾರ ಶೇಕಡ ೭೫.೬೦ ಸಾಕ್ಷರತೆಯನ್ನು ಸಾಧಿಸಲಾಗಿದೆ. . ಆದರೆ ಶಾಕ್ಷರತೆ ಪ್ರಮಾಣ ಶೇಕಡ ೧೦೦ ನ್ನು ಸಾಧಿಸಲು ಇನ್ನೂ ಸಾಕಷ್ಟು ಶ್ರಮಿಸಬೇಕಾಗಿದೆ. ಇನ್ನೂ ಅನಕ್ಷರಸ್ಥರಾದ ಶೇಕಡ ೨೫ ರಷ್ಟು ಜನಸಂಖ್ಯೆ ಬಹುಭಾಗ ಗ್ರಾಮೀಣ ಭಾಗದಲ್ಲಿ ವಯಸ್ಕರಲ್ಲಿ ವಿಶೇಷವಾಗಿ ಮಹಿಳೆಯರು ಮತ್ತು ದುರ್ಬಲವರ್ಗದವರಲ್ಲಿ ಕೇಂದ್ರೀಕೃತವಾಗಿದೆ. ರಾಜ್ಯದ ವಿವಿಧ ಭೌಗೋಳಿಕ ಪ್ರದೇಶಗಳನ್ನು ಪರಿಶೀಲಿಸಿದಾಗ ಅನಕ್ಷರತೆಯ ಪ್ರಮಾಣ ಈಶಾನ್ಯ ಕರ್ನಾಟಕದ ಜಿಲ್ಲೆಗಳಲ್ಲಿ ಅಧಿಕವಾಗಿರುವುದು ಕಂಡು ಬರುತ್ತದೆ.

ಅನಕ್ಷರತೆಯ ನಿರ್ಮೂಲನೆಗಾಗಿ ಮೈಸೂರು ರಾಜ್ಯದಲ್ಲಿ ಸ್ವಾತಂತ್ರ್ಯಪೂರ್ವದಲ್ಲಿಯೇ ಪ್ರಯತ್ನಗಳು ಸಾಗಿದ್ದವು. ೧೯೪೨ ರಲ್ಲಿ ಮೈಸೂರು ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯು ಪ್ರಾರಂಭವಾಯಿತು. ಸ್ವಾತಂತ್ರ್ಯಾ ನಂತರ ಈ ಕಾರ್ಯಕ್ಕೆ ಇನ್ನಷ್ಟು ಒತ್ತು ನೀಡಲಾಯಿತು. ೧೯೫೬-೫೯ ರ ಅವಧಿಯಲ್ಲಿ ೧೨ ವಿದ್ಯಾಪೀಠಗಳನ್ನು ಸ್ಥಾಪಿಸಲಾಯಿತು. ಕೇಂದ್ರ ಸರ್ಕಾರದ ನೆರವಿನಿಂದ ಮೈಸೂರಿನಲ್ಲಿ ರಾಜ್ಯ ಸಂಪ್ಮೂಲ ಕೇಂದ್ರವನ್ನು ಪ್ರಾರಂಭಿಸಲಾಯಿತು. ೧೯೭೮ ರಲ್ಲಿ ಕೇಂದ್ರ ಸರ್ಕಾರವು ರಾಷ್ಟ್ರೀಯ ವಯಸ್ಕರ ಶಿಕ್ಷಣ ಕಾರ್ಯಕ್ರಮವನ್ನು ಪ್ರಾರಂಭಿಸಿತು. ಕಾಲಕ್ರಮೇಣ ವಯಸ್ಕರ ಶಿಕ್ಷಣಕ್ಕೆ ಪ್ರತ್ಯೇಕ ನಿರ್ದೇಶನಾಲಯವನ್ನು ಪ್ರಾರಂಭಿಸಲಾಯಿತು. ಇದೇ ನಿರ್ದೇಶನಾಲವಯವು ಈಗ ಲೋಕ ಶಿಕ್ಷಣ ನಿರ್ದೇಶನಾಲಯ ಎಂಬ ಹೆಸರಿನಲ್ಲಿ ಕಾರ್ಯ ನಿರ್ವಹಿಸುತ್ತಿದೆ. ವಯಸ್ಕರ ಶಿಕ್ಷಣ ಕಾರ್ಯಕ್ರಮಗಳನ್ನು ಜಿಲ್ಲಾ ಸಾಕ್ಷರತಾ ಸಮಿತಿ ಮತ್ತು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ.

**ಉದ್ದೇಶಗಳು** : ೧) ಕರ್ನಾಟಕದ ಎಲ್ಲ ಅನಕ್ಷರಸ್ತರಿಗೆ, ನವ ಸಾಕ್ಷರರಿಗೆ ಮತ್ತು ಮಧ್ಯದಲ್ಲಿ ಶಾಲೆ ಬಿಟ್ಟವರಿಗೆ ಮೂಲ ಸಾಕ್ಷರತೆ, ಮುಂದುವರಿಕೆ ಮತ್ತು ಜೀವನ ಪರ್ಯಂತ ಶಿಕ್ಷಣದ ಅವಕಾಶ ಕಲ್ಪಿಸುವುದು; ೨) ರಾಷ್ಟ್ರೀಯ ಸಾಕ್ಷರತಾ ಮಿಷನ್ನಿನ ಚಟುವಟಿಕೆಗಳನ್ನು ಮತ್ತು ಸಾಕ್ಷರತಾ ಕಾರ್ಯಕ್ರಮಗಳನ್ನು ಕರ್ನಾಟಕ ರಾಜ್ಯದಲ್ಲಿ ಅನುಷ್ಠಾನಗೊಳಿಸುವುದು; ೩) ಜಿಲ್ಲಾ ಮಟ್ಟದಲ್ಲಿ ಸಾಕ್ಷರತಾ ಸಮಿತಿಗಳ ಅಸ್ತಿತ್ವ ಮತ್ತು ಸಮರ್ಥ ಕಾರ್ಯ ನಿರ್ವಹಣೆಗೆ ಅಗತ್ಯವಾದ ಕಾರ್ಯ ನಿರ್ವಹಣೆಗೆ ಅಗತ್ಯವಾದ ಗುಂಪನ್ನು ರೂಪಿಸಲು ಸಹಕರಿಸುವುದು. ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಸಾಕ್ಷರತಾ ಅನುಷ್ಠಾನ್ಕೆ ಅಗತ್ಯವಾದ ಅಧಿಕಾರವನ್ನು ವಕೇಂದ್ರೀಕರಿಸುವುದು; ೪) ಜೀವನ ಗುಣಮಟ್ಟ ಸುಧಾರಣಾ ಕಾರ್ಯಕ್ರಮಗಳನ್ನು ರೂಪಿಸುವುದು; ೫) ನವ ಸಾಕ್ಷರರಿಗೆ ಅಗತ್ಯವಾದ ಆದಯ ಹೆಚ್ಚಿಸುವ ಕಾರ್ಯಕ್ರಮಗಳನ್ನು ರೂಪಿಸಿ ಅವರ ಸಕ್ರಿಯ ಸಹಕಾರದೊಡನೆ ಅನುಷ್ಠಾನಗೊಳಿಸುವುದು; ೬) ವಯಸ್ಕರ ಶಿಕ್ಷಣ ಮತ್ತು ಅದರ ಆಡಳಿತ ನಿರ್ವಹಣೆಗೆ ಸಂಬಂಧಿಸಿದಂತೆ ಅಧ್ಯಯನಗಳು, ಪ್ರಯೋಗಗಳು, ಅನ್ವೇಷಣಾ ಚಟುವಟಿಕೆಗಳು ಮತ್ತು ಸಂಶೋಧನೆಗಳನ್ನು ಕೈಗೊಳ್ಳಲು ಪ್ರೋತ್ಸಾಹಿಸುವುದು; ೭) ಶೈಕ್ಷಣಿಕ ಸಾಮಗ್ರಿಗಳನ್ನು ರಚಿಸುವುದು, ಪ್ರಕಟಿಸುವುದು ಮತ್ತು ಸಾಕ್ಷರತಾ ಕಾರ್ಯಕ್ಷೇತ್ರಕ್ಕೆ ವಿತರಿಸುವುದು ಹಾಗೂ ೮) ರಾಷ್ಟ್ರೀಯ ಮುಕ್ತ ಶಾಲೆಯ ಸಹಯೋಗದಲ್ಲಿ ರಾಜ್ಯ ಮುಕ್ತ ಶಾಲೆಗಳನ್ನು ಸ್ಥಾಪಿಸುವುದು.

### ಕಾಲೇಜು ಶಿಕ್ಷಣ

೧೮೬೮ರಲ್ಲಿ ಮಂಗಳೂರಿನಲ್ಲಿ ಮದರಾಸ್ ಸರ್ಕಾರ ಸ್ಥಾಪಿಸಿದ ದ್ವಿತೀಯ ದರ್ಜೆ ಕಾಲೇಜು ಉನ್ನತ ಶಿಕ್ಷಣದ ಮೊಟ್ಟ ಮೊದಲ

ಸಂಸ್ಥೆ. ೧೮೭೦ರಲ್ಲಿ ಸರ್ಕಾರಿ ಪ್ರೌಢ ಶಾಲೆಯನ್ನು ಕಾಲೇಜಾಗಿ ಉನ್ನತೀಕರಿಸಿ ಅದನ್ನು ೧೮೭೫ರಲ್ಲಿ 'ಸೆಂಟ್ರಲ್ ಕಾಲೇಜ್' ಎಂದು ನಾಮಕರಣ ಮಾಡಲಾಯಿತು. ೧೮೭೯ ರಲ್ಲಿ ಮೈಸೂರಿನ ಮಹಾರಾಜಾ ಪ್ರೌಢ ಶಾಲೆ ಮತ್ತು ಶಿವಮೊಗ್ಗದ ಸರ್ಕಾರಿ ಪ್ರೌಢ ಶಾಲೆಗಳು ಮದರಾಸ್ ವಿಶ್ವವಿದ್ಯಾಲಯದ ಎಫ್.ಎ. ಪರೀಕ್ಷೆಗೆ ಅಭ್ಯರ್ಥಿಗಳಿಗೆ ತರಬೇತಿ ನೀಡುತ್ತಿದ್ದವು. ಜಸುಯೇಟ್ಸ್‌ಗಳು ೧೮೭೯ರಲ್ಲಿ ಸಂತ ಅಲೋಷಿಯಸ್ ಕಾಲೇಜನ್ನು ಮಂಗಳೂರಿನಲ್ಲಿ ಪ್ರಾರಂಭಿಸಿದರು. ನಂತರ ೧೮೮೨ರಲ್ಲಿ ಸಂತ ಜೋಸೆಫ್‌ರ ಕಾಲೇಜನ್ನು ಬೆಂಗಳೂರಿನಲ್ಲಿ ಪ್ರಾರಂಭಿಸಿದರು.

೧೮೬೪ರಲ್ಲಿ ಮೈಸೂರಿನಲ್ಲಿ ಮಹಾರಾಜಾ ದ್ವಿತೀಯ ದರ್ಜೆ ಕಾಲೇಜನ್ನು ಸ್ಥಾಪಿಸಿ ಅದನ್ನು ೧೯೦೨ರಲ್ಲಿ ಪ್ರಥಮ ದರ್ಜೆಗೇರಿಸಿ ಮದರಾಸು ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಟ್ಟಿತು. ಮೈಸೂರು ವಿಶ್ವವಿದ್ಯಾಲಯವು ೧೯೧೬ರಲ್ಲಿ ಸ್ಥಾಪಿತವಾಯಿತು. ಈ ವಿಶ್ವವಿದ್ಯಾಲಯವು ೧೯೧೭ರಲ್ಲಿ ಮೊದಲ ಎಂಜಿನಿಯರಿಂಗ್ ಕಾಲೇಜನ್ನು ಮತ್ತು ೧೯೨೪ರಲ್ಲಿ ವೈದ್ಯಕೀಯ ಕಾಲೇಜನ್ನು ಬೆಂಗಳೂರಿನಲ್ಲಿ ಪ್ರಾರಂಭಿಸಿತು. ನಂತರ ವೈದ್ಯಕೀಯ ಕಾಲೇಜನ್ನು ೧೯೩೦ರಲ್ಲಿ ಮೈಸೂರಿಗೆ ಸ್ಥಳಂತರಿಸಲಾಯಿತು. ಇಡೀ ರಾಜ್ಯದ ಮೊದಲ ಮಹಿಳಾ ಕಾಲೇಜಾದ ಮಹಾರಾಣಿ ಕಾಲೇಜನ್ನು (೧೯೦೧) ೧೯೨೦ರಲ್ಲಿ ಪ್ರಥಮ ದರ್ಜೆ ಕಾಲೇಜಾಗಿ ಉನ್ನತೀಕರಿಸಲಾಯಿತು. ೧೯೧೭ರಲ್ಲಿ ಧಾರವಾಡದಲ್ಲಿ ಕರ್ನಾಟಕ ಕಾಲೇಜು ಹಾಗೂ ಕೆ.ಎಲ್.ಇ. ಸೊಸೈಟಿಯವರು ಲಿಂಗರಾಜಾ ಕಾಲೇಜನ್ನು ಬೆಳಗಾವಿಯಲ್ಲಿ ೧೯೩೩ರಲ್ಲಿ ಪ್ರಾರಂಭಿಸಿದರು. ಖಾಸಗಿ ಸಂಸ್ಥೆಯವರಿಂದ ನ್ಯಾಷನಲ್ ಕಾಲೇಜು ಮತ್ತು ಬಸಪ್ಪ ಕಾಲೇಜು ೧೯೪೫ರಲ್ಲಿ ಬೆಂಗಳೂರಿನಲ್ಲಿ ಪ್ರಾರಂಭವಾದವು. ೧೯೫೬ರ ವೇಳೆಗೆ ಹಳೆಯ ಮೈಸೂರು ರಾಜ್ಯದಲ್ಲಿ ೧೪ ಪ್ರಥಮ ದರ್ಜೆ ಕಾಲೇಜುಗಳು, ೧೪ ಇಂಟರ್‌ಮೀಡಿಯಟ್ ಕಾಲೇಜುಗಳು ಮತ್ತು ೧೪ ವೃತ್ತಿಪರ ಕಾಲೇಜುಗಳಿದ್ದವು.

### ಕಾಲೇಜು ಶಿಕ್ಷಣ ಇಲಾಖೆ

ಕಾಲೇಜು ಶಿಕ್ಷಣ ನಿರ್ದೇಶನಾಲಯವು ೧೯೬೦ರಲ್ಲಿ ಪ್ರಾರಂಭವಾಯಿತು. ಇದು ಸಾಮಾನ್ಯ ಶಿಕ್ಷಣ ನೀಡುವ ಕಾಲೇಜುಗಳ ಆಡಳಿತದಲ್ಲಿ ಏಕರೂಪ ತರುವ ಉದ್ದೇಶದಿಂದ ಸ್ಥಾಪಿತವಾಯಿತು. ಆ ವೇಳೆಗೆ ೧೭ ಸರ್ಕಾರಿ ಮತ್ತು ೨೫ ಖಾಸಗಿ ಒಟ್ಟು ೪೨ ಕಾಲೇಜುಗಳಿದ್ದು ಅವುಗಳಲ್ಲಿ ಒಟ್ಟು ೨೭,೩೩೮ ವಿದ್ಯಾರ್ಥಿಗಳಿದ್ದರು. ೧೯೯೪–೯೫ರಲ್ಲಿ ರಾಜ್ಯದಲ್ಲಿ ಒಟ್ಟು ೬೭೯ ಪದವಿ ಕಾಲೇಜುಗಳಿದ್ದವು. ಅವುಗಳಲ್ಲಿ ೧೩೬ ಸರ್ಕಾರಿ, ೨೬೭ ಖಾಸಗಿ ಅನುದಾನಿತ ಕಾಲೇಜುಗಳು ಮತ್ತು ೨೭೬ ಅನುದಾನ ರಹಿತ ಕಾಲೇಜುಗಳು ೨೦೦೩–೦೪ರಲ್ಲಿ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ಇವುಗಳು ಆರು ವಿಶ್ವವಿದ್ಯಾಲಯಗಳಲ್ಲಿ ಸಂಯೋಜನೆಗೊಂಡಿದ್ದವು. ಇದಕ್ಕೆ ಕೋಲಾರದಲ್ಲಿ ಸರ್ಕಾರಿ ಕಾನೂನು ಕಾಲೇಜೂ ಸೇರಿದ್ದಿತು. ಇವುಗಳಲ್ಲಿ ೧೬೫ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು, ೩೦೦ ಖಾಸಗಿ ಅನುದಾನಿತ ಮತ್ತು ೫೩೨ ಖಾಸಗಿ ಅನುದಾನರಹಿತ ಪ್ರಥಮ ದರ್ಜೆ ಕಾಲೇಜುಗಳಿದ್ದವು. ಕಾಲೇಜು ಶಿಕ್ಷಣ ಇಲಾಖೆಯ ಪ್ರಮುಖ ದೃಷ್ಟಿಕೋನಗಳೆಂದರೆ, ಸಾಮಾಜಿಕ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಸಮಾಜದ ಎಲ್ಲಾ ವರ್ಗದವರಿಗೂ ಉನ್ನತ ಶಿಕ್ಷಣ ಪಡೆಯುವ ಅವಕಾಶವನ್ನು ಕಲ್ಪಿಸುವುದು, ವಿದ್ಯಾರ್ಥಿಗಳನ್ನು ಉತ್ತಮ ನಾಗರೀಕರಾಗಿ ರೂಪುಗೊಳ್ಳುವಂತೆ ಸರ್ವತೋಮುಖ ಅಭಿವೃದ್ಧಿಪಡಿಸುವುದು ಮತ್ತು ಉನ್ನತ ಶಿಕ್ಷಣದಿಂದ ಮಹಿಳೆಯರ ಮತ್ತು ದುರ್ಬಲ ವರ್ಗದವರನ್ನು ಸಬಲೀಕರಣಗೊಳಿಸುವುದಾಗಿದೆ.

ಈ ಇಲಾಖೆಯ ಮುಖ್ಯ ಉದ್ದೇಶಗಳೆಂದರೆ ಪದವಿ ಶಿಕ್ಷಣದಲ್ಲಿ ಗುಣಮಟ್ಟವನ್ನು ಹೆಚ್ಚಿಸುವುದು, ಪದವಿ ಶಿಕ್ಷಣ ವಲಯದ ಬಗ್ಗೆ ಯೋಜನೆಗಳನ್ನು ರೂಪಿಸುವುದು, ಮೇಲ್ವಿಚಾರಣೆ ಮತ್ತು ಸಮನ್ವಯ ಕೈಗೊಳ್ಳುವುದು, ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳ ಮುಖಾಂತರ ಉಪನ್ಯಾಸಕರ ಮತ್ತು ವಿದ್ಯಾರ್ಥಿಗಳ ಮಾನವಸಂಪನ್ಮೂಲ ಅಭಿವೃದ್ಧಿ, ಸರ್ಕಾರಿ ಪದವಿ ಕಾಲೇಜುಗಳ ಸ್ಥಾಪನೆ, ಅಭಿವೃದ್ಧಿ ಮತ್ತು ಆಡಳಿತ, ಖಾಸಗಿ ಅನುದಾನಿತ ಕಾಲೇಜುಗಳ ಕಾರ್ಯವೈಖರಿಯ ಮೇಲ್ವಿಚಾರಣೆ ಮತ್ತು ವೇತನಾನುದಾನವನ್ನು ರಾಜ್ಯ ಸರ್ಕಾರದ ನೀತಿಯಂತೆ ಒದಗಿಸುವುದು, ಪ್ರತಿಭಾವಂತರಾದ ಮತ್ತು ಆರ್ಥಿಕವಾಗಿ ದುರ್ಬಲರಾದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಒದಗಿಸಿ ಪ್ರೋತ್ಸಾಹ ನೀಡುವುದು, ರಾಜ್ಯದ ವಿಶ್ವವಿದ್ಯಾನಿಲಯಗಳು, ಯುಜಿಸಿ ಮತ್ತು ನ್ಯಾಕ್ ಸಂಸ್ಥೆಗಳೊಡನೆ ಸಂಯೋಜನೆ, ರಾಜ್ಯದ ಸರ್ಕಾರಿ ಪದವಿಕಾಲೇಜುಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು, ಬೋಧಕರು ಮತ್ತು ಬೋಧಕೇತರರ ನೇಮಕಾತಿ ಮತ್ತು ಸೇವಾ ವಿಷಯಗಳ ನಿರ್ವಹಣೆ ಹಾಗೂ ಆಡಳಿತವನ್ನು ಆಧುನೀಕರಣಗೊಳಿಸಿ ಇ–ಆಡಳಿತವನ್ನು ಜಾರಿಗೊಳಿಸುವುದಾಗಿದೆ.

**ಕೋಷ್ಟಕ ೧೦.೩.೨: ೨೦೧೫–೧೬ರಲ್ಲಿದ್ದಂತೆ ಇಲಾಖೆಯ ವ್ಯಾಪ್ತಿಯಲ್ಲಿರುವ ಕಾಲೇಜುಗಳು, ವಿದ್ಯಾರ್ಥಿಗಳು ಮತ್ತು ಶಿಕ್ಷಕರ ವಿವರ**

| ಕಾಲೇಜುಗಳು | | | | ವಿದ್ಯಾರ್ಥಿಗಳು | | ಶಿಕ್ಷಕರು |
|---|---|---|---|---|---|---|
| ಸರ್ಕಾರಿ | ಅನು ದಾನಿತ | ಅನುದಾನ ರಹಿತ | ಒಟ್ಟು | ಪುರುಷರು | ಮಹಿಳೆ ಯರು | |
| ೪೧೧ | ೩೨೧ | ೧೭೪೦ | ೨೪೭೨ | ೧.೩೧ಲಕ್ಷ | ೧.೭೩ಲಕ್ಷ | ೫೪೦೦ |

ಆಧಾರ: ಕಾಲೇಜು ಶಿಕ್ಷಣ ಇಲಾಖೆ ವೆಬ್ ಸೈಟ್

ಗುಣಮಟ್ಟ ಭರವಸೆ ಕೋಶ: ಕಾಲೇಜು ಶಿಕ್ಷಣ ಇಲಾಖೆಯು ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ನಿರಂತರ ಹೊಸತನವನ್ನು ಅಪೇಕ್ಷಿಸಿದ್ದು, ಸರ್ವರಿಗೂ ಉತ್ಕೃಷ್ಟತೆಯ ಗುಣಮಟ್ಟದ ಶಿಕ್ಷಣವನ್ನು ದೊರಕಿಸಲು ಶ್ರಮಿಸುತ್ತಿದ್ದು, ಗ್ರಾಮೀಣ ಭಾಗದಲ್ಲಿ ಸರ್ಕಾರಿ ಕಾಲೇಜುಗಳನ್ನು ಪ್ರಾರಂಭಿಸುವುದರ ಮೂಲಕ ಎಲ್ಲಾ ವರ್ಗದವರಿಗೂ ಸದೃಢವಾದ ಶಿಕ್ಷಣವನ್ನು ನೀಡುತ್ತಿದೆ. ಪದವಿ ಕಾಲೇಜುಗಳ ಗುಣಮಟ್ಟವನ್ನು ನ್ಯಾಕ್ ಸಂಸ್ಥೆಯು ಮೌಲ್ಯಮಾಪನ ಮಾಡುತ್ತಿದ್ದು, ಇದು ಐದು ವರ್ಷಕ್ಕೊಮ್ಮೆ ನಡೆಯುವ ನಿಯತಕಾಲಿಕ ಮೌಲ್ಯಮಾಪನ ಕಾರ್ಯವಾಗಿದೆ. ಇದರೊಂದಿಗೆ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಅಂಗವಾದ ಕಾಲೇಜು ಶಿಕ್ಷಣ ಇಲಾಖೆಯು ಪದವಿ ಕಾಲೇಜುಗಳ ಗುಣಮಟ್ಟವನ್ನು ಹಾಗೂ ಶೈಕ್ಷಣಿಕ ಅಭಿವೃದ್ಧಿಯ ಪ್ರಗತಿ ಪರಿಶೀಲನೆಯನ್ನು ನಡೆಸುತ್ತಿದೆ. ಕೆಲವು ಕಾಲೇಜುಗಳಲ್ಲಿ ಆಂತರಿಕ ಗುಣಮಟ್ಟ ಭರವಸೆಗಳ ಘಟಕಗಳು (ಐಕ್ಯೂಎಸಿ) ಕಾರ್ಯನಿರ್ವಹಿಸುತ್ತಿದೆಯಾದರೂ ಇದು ನ್ಯಾಕ್ ಮೌಲ್ಯಮಾಪನಕ್ಕೆ ಮಾತ್ರ ಮಹತ್ವ ನೀಡುತ್ತಿದೆ.

### ತಾಂತ್ರಿಕ ಶಿಕ್ಷಣ

ಹತ್ತೊಂಭತ್ತನೆಯ ಶತಮಾನದ ಉತ್ತರಾರ್ಧದಲ್ಲಿ ತಾಂತ್ರಿಕ ಶಿಕ್ಷಣವು ಪಠ್ಯ ವಿಷಯದ ಒಂದು ಅಂಗವಾಗಿ ಬೋಧಿಸಲ್ಪಡುವುದರ ಮೂಲಕ ಪ್ರಾರಂಭವಾಯಿತು. ಮದರಾಸು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಟ್ಟ ಎಂಜಿನಿಯರಿಂಗ್ ಶಾಲೆಯೆಂಬ ಪ್ರಥಮ ತಾಂತ್ರಿಕ ಸಂಸ್ಥೆಯು ಬೆಂಗಳೂರಿನಲ್ಲಿ ೧೮೬೨ರಲ್ಲಿ ಸ್ಥಾಪಿತವಾಯಿತು. ರಾವ್ ಬಹದ್ದೂರ್ ಆರ್ಕಾಟ್ ನಾರಾಯಣಸ್ವಾಮಿ ಮೊದಲಿಯಾರ್‌ರವರು ೧೮೭೩ ರಲ್ಲಿ ಬೆಂಗಳೂರಿನ ಸಿವಿಲ್ ಮತ್ತು ಮಿಲಿಟರಿ ಸ್ಟೇಷನ್‌ನಲ್ಲಿ ಒಂದು ತಾಂತ್ರಿಕ ಸಂಸ್ಥೆಯನ್ನು ಸ್ಥಾಪಿಸಿದರು. ಅಲ್ಲಿ ವಿದ್ಯಾರ್ಥಿಗಳನ್ನು ಲೋಕೋಪಯೋಗಿ ಇಲಾಖೆಯ ಕಿರಿಯ ದರ್ಜೆಯ ತಾಂತ್ರಿಕ ಸೇವೆಗಳಿಗೆ ಸಿದ್ಧಗೊಳಿಸಲಾಗುತ್ತಿತ್ತು. ಧಾರವಾಡದ ಕೈಗಾರಿಕಾ ಶಾಖೆಯು ೧೮೭೩ರಲ್ಲಿ ಆರಂಭವಾಯಿತು. ಹಾಸನದಲ್ಲಿ ೧೮೮೯ರಲ್ಲಿ ಮತ್ತು ಮೈಸೂರಿನಲ್ಲಿ ೧೮೯೨ರಲ್ಲಿ ಒಂದೊಂದು ಕೈಗಾರಿಕಾ ಶಾಲೆಗಳು ಸ್ಥಾಪಿತವಾದವು.

ಬೀದರ್‌ನಲ್ಲಿ ೧೯೦೫ರಲ್ಲಿ ಪ್ರಾರಂಭವಾದ ಕೈಗಾರಿಕಾ ಶಾಲೆಯಲ್ಲಿ ಬಿದರಿ ಕೆಲಸವನ್ನು ಹೇಳಿಕೊಡಲಾಗುತ್ತಿತ್ತು. ಬೆಂಗಳೂರಿನಲ್ಲಿ ೧೯೧೩ರಲ್ಲಿ ಒಂದು ಮೆಕ್ಯಾನಿಕಲ್ ಎಂಜಿನಿಯರಿಂಗ್ ಶಾಲೆ ಪ್ರಾರಂಭವಾಯಿತು. ನಂತರ ಈ ಶಾಲೆಗಳನ್ನು ಉದ್ಯೋಗ ಮತ್ತು ವಾಣಿಜ್ಯ ಇಲಾಖೆಯ ಅಧೀನಕ್ಕೆ ಒಳಪಡಿಸಲಾಯಿತು. ಚಾಮರಾಜೇಂದ್ರ ತಾಂತ್ರಿಕ ಶಾಲೆ, ಮೈಸೂರು ಮತ್ತು ಬೆಂಗಳೂರಿನ ನೇಯ್ಗೆ ಶಾಲೆಗಳ ಜೊತೆಗೆ ಮೈಸೂರು, ಹಾಸನ, ಚಿಕ್ಕಮಗಳೂರು, ಶಿವಮೊಗ್ಗ, ಚಿತ್ರದುರ್ಗ, ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರ, ಸಾಗರ ಮತ್ತು ನೆಲಮಂಗಲಗಳಲ್ಲಿ ಸರ್ಕಾರಿ ಕೈಗಾರಿಕಾ ಶಾಲೆಗಳಿದ್ದವು. ಚನ್ನಪಟ್ಟಣದ ಜನಾನಾ ಗೃಹಕೈಗಾರಿಕಾ ಸಂಸ್ಥೆಯು ಮಹಿಳೆಯರಿಗೆ ಔದ್ಯಮಿಕ ತರಬೇತಿ ಕೊಡುತ್ತಿದ್ದ ಏಕೈಕ ಅನುದಾನಿತ ಸಂಸ್ಥೆಯಾಗಿತ್ತು. ರಾಜ್ಯ ಪುನರ್‌ವಿಂಗಡಣೆಯಾಗುವ ಕಾಲಕ್ಕೆ ಹಳೇ ಮೈಸೂರು ರಾಜ್ಯದಲ್ಲಿ ೧೪ ಕೈಗಾರಿಕಾ ಶಾಲೆಗಳಿದ್ದವು. ೧೯೫೨ರಲ್ಲಿ ಮೈಸೂರು ಸರ್ಕಾರವು ತಾಂತ್ರಿಕ ಶಿಕ್ಷಣ ಇಲಾಖೆಯ ನಿರ್ದೇಶಕರು ಮೈಸೂರಿನ ತಾಂತ್ರಿಕ ಶಿಕ್ಷಣಕ್ಕೆ ಪದನಿಮಿತ್ತ ನಿರ್ದೇಶಕರಾಗಿದ್ದರು. ರಾಜ್ಯ ತಾಂತ್ರಿಕ ಪರೀಕ್ಷಾ ಮಂಡಳಿಯು ೧೯೫೨ರಲ್ಲಿ ಅಸ್ತಿತ್ವಕ್ಕೆ ಬಂದು ೧೯೫೩-೫೪ರಿಂದ ಡಿಪ್ಲೊಮಾ ಪರೀಕ್ಷೆಯ ಅರ್ಹತಾ ಪತ್ರಗಳನ್ನು ಕೊಡಲಾರಂಭಿಸಿತು.

ಪಸ್ತುತ ರಾಜ್ಯದಲ್ಲಿ ತಾಂತ್ರಿಕ ಶಿಕ್ಷಣ ಇಲಾಖಾ ವ್ಯಾಪ್ತಿಯಲ್ಲಿ ಒಟ್ಟು ೧೮೭ ಎಂಜಿನಿಯರಿಯಂಗ್ ಕಾಲೇಜುಗಳು, ೨೯೧ ಪಾಲಿಟೆಕ್ನಿಕ್‌ಗಳು, ಹಾಗೂ ೧೨ ಕಿರಿಯ ತಾಂತ್ರಿಕ ಶಾಲೆಗಳು ಇರುತ್ತವೆ. ೨೦೧೦-೧೧ ನೇ ಸಾಲಿನಲ್ಲಿ ಹಾಸನ, ರಾಮನಗರ, ಕಾರವಾರ, ಚಾಮರಾಜನಗರ, ಕೆ.ಆರ್.ಪೇಟೆ, ಹೂವಿನಹಡಗಲಿ, ಹಾವೇರಿ, ಕುಶಾಲನಗರ, ರಾಯಚೂರು ಮತ್ತು ಬೆಂಗಳೂರಿನ ಎಸ್.ಕೆ.ಜೆಟಿ ದಲ್ಲಿ ಹೊಸ ಎಂಜಿನಿಯರಿಂಗ್ ಕಾಲೇಜುಗಳನ್ನು ಸ್ಥಾಪನೆ ಮಾಡಲಾಗಿದೆ. ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳಿಗೆ ಸಿಇಟಿ., ಮುಖಾಂತರ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವನ್ನು ನೀಡಲಾಗುತ್ತಿದೆ. ವಿಶ್ವಬ್ಯಾಂಕ್ ನೆರವಿನೊಡನೆ ಭಾರತ ಸರ್ಕಾರವು ತಾಂತ್ರಿಕ ಶಿಕ್ಷಣದ ಗುಣಮಟ್ಟ ಅಭಿವೃದ್ಧಿ ಯೋಜನೆ(Technical Education Quality Improvement Project - TEQIP)ಯನ್ನು ರಾಷ್ಟ್ರೀಯ ಪರಿಯೋಜನಾ ಕಾರ್ಯರೂಪ ಘಟಕ (ಎನ್‌ಪಿಐಯು) ದ ಸಹಯೋಗದೊಂದಿಗೆ ಪ್ರಾರಂಭಿಸಿದ್ದು, ಇದರ ಮುಖ್ಯ ಉದ್ದೇಶ ಸರ್ಕಾರದ ಅಭಿವೃದ್ಧಿ ನೀತಿಯನ್ನು ಉನ್ನತೀಕರಿಸುವುದು, ತಾಂತ್ರಿಕ ಶಿಕ್ಷಣ ಸಂಸ್ಥೆಗಳನ್ನು ಗುಣಾತ್ಮಕವಾಗಿ, ಕ್ರಿಯಾಶಕ್ತಿಯುತವಾಗಿ ಬೇಡಿಕೆಗೆ ಅನುಗುಣವಾಗಿ ದಕ್ಷ ಮತ್ತು ಸಾಮರ್ಥ್ಯದೊಂದಿಗೆ ಪಾರದರ್ಶಕತೆ ಪಡೆದ ತಾಂತ್ರಿಕ ಬದಲಾವಣೆಗೆ ಅನುಗುಣವಾಗಿ ಮಾರ್ಪಾಡು ಮಾಡುವುದು ಹಾಗೂ ತಾಂತ್ರಿಕ ಶಿಕ್ಷಣವನ್ನು ಉನ್ನತ ದರ್ಜೆಗೇರಿಸುವುದು ಆಗಿದೆ.ಉನ್ನತ ಶಿಕ್ಷಣವನ್ನು ಪ್ರೋತ್ಸಾಹಿಸಲು ಕಾರ್ಯನೀತಿ ರೂಪಿಸಲು ಉನ್ನತ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ಹಾಗೂ ಪ್ರಮುಖ ಸದಸ್ಯರನ್ನೊಳಗೊಂಡ ಉನ್ನತ ಶಿಕ್ಷಣಕ್ಕೆ ಕರ್ನಾಟಕ ರಾಜ್ಯ ಪರಿಷತ್ತನ್ನು ರಚಿಸಲಾಗಿದೆ. ೨೦೧೦-೧೧ನೇ ಸಾಲಿನಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧೀನದಲ್ಲಿದ್ದ ೭೬ ಕಲಾ ಕಾಲೇಜುಗಳನ್ನು ತಾಂತ್ರಿಕ ಶಿಕ್ಷಣ ಇಲಾಖೆಗೆ ವರ್ಗಾಯಿಸಿದ್ದು, ಅವುಗಳ ಪೈಕಿ ೦೨ ಸರ್ಕಾರಿ ೨೬ ಅನುದಾನಿತ ಹಾಗೂ ೪೮ ಖಾಸಗಿ ಕಲಾ ಕಾಲೇಜುಗಳಾಗಿರುತ್ತವೆ.

ಪ್ರಸ್ತುತ ಡಿಪ್ಲೊಮಾ ವ್ಯಾಸಂಗ ಮಾಡಿದ ಅಭ್ಯರ್ಥಿಗಳಿಗೆ ತಾಂತ್ರಿಕ ಶಿಕ್ಷಣದಲ್ಲಿ ಪ್ರೋತ್ಸಾಹವನ್ನು ನೀಡುವ ದೃಷ್ಟಿಯಿಂದ ಎಂಜಿನಿಯರಿಂಗ್ ಪದವಿ ಪ್ರವೇಶದಲ್ಲಿ 'ಲ್ಯಾಟರೆಲ್ ಎಂಟ್ರಿ' ಸ್ಕೀಂಅನ್ನು ೨೦೧೦-೧೧ನೇ ಸಾಲಿನಲ್ಲಿ ಜಾರಿಗೊಳಿಸಲಾಗಿದ್ದು, ಶೇ.೧೦ ರಷ್ಟಿದ್ದ ಪ್ರವೇಶಾವಕಾಶವನ್ನು ಶೇ.೨೦ ಕ್ಕೆ ಹೆಚ್ಚಿಸಲಾಗಿದೆ. ಇದರಿಂದ ಡಿಪ್ಲೊಮಾ ಪಾಸಾದ ಅರ್ಹ ಅಭ್ಯರ್ಥಿಗಳಿಗೆ ಎಂಜಿನಿಯರಿಂಗ್ ಕಾಲೇಜಿಗೆ ಮೂರನೇ ಸೆಮಿಸ್ಟರ್‌ಗೆ ನೇರ ಪ್ರವೇಶಾವಕಾಶವನ್ನು ಕಲ್ಪಿಸಲಾಗುತ್ತಿದೆ. ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಮಹಿಳಾ ವಿದ್ಯಾರ್ಥಿಗಳಿಗೆ ಶೇ.೩೦ ರಷ್ಟು ಸ್ಥಾನಗಳನ್ನು ಕಾಯ್ದಿರಿಸಲಾಗಿದೆ. ಮತ್ತು ರಾಜ್ಯದಲ್ಲಿ ಎಂಟು ಪಾಲಿಟೆಕ್ನಿಕ್‌ಗಳಿಗೆ ಶೈಕ್ಷಣಿಕ ಸ್ವಾಯತ್ತತೆಯನ್ನು ನೀಡಲಾಗಿದೆ. ಅಂಗವಿಕಲ ವಿದ್ಯಾರ್ಥಿಗಳಿಗಾಗಿ ಎಲ್ಲಾ ರೀತಿಯ ಸುಸಜ್ಜಿತವಾದ ಒಂದು ಅನುದಾನಿತ ಪಾಲಿಟೆಕ್ನಿಕ್‌ನ್ನು ಮೈಸೂರಿನಲ್ಲಿ ಸ್ಥಾಪಿಸಲಾಗಿದೆ ಹಾಗೂ ರಾಜ್ಯದಲ್ಲಿನ ಮೂರು ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಬೇಕಾಗುವ ಸೌಲಭ್ಯಗಳನ್ನೂ ಸಹ ಒದಗಿಸಲಾಗುತ್ತಿದೆ ಮತ್ತು ತಾಂತ್ರಿಕ ಸಂಸ್ಥೆಗಳ ಒಟ್ಟು ಪ್ರವೇಶಾವಕಾಶದಲ್ಲಿ ಶೇ.೦.೩ರಷ್ಟು ಸ್ಥಾನಗಳನ್ನು ಈ ವಿದ್ಯಾರ್ಥಿಗಳಿಗೆ ಮೀಸಲಿರಿಸಲಾಗಿದೆ.

**ಕೋಷ್ಟಕ ೧೦.೩೩: ರಾಜ್ಯದಲ್ಲಿರುವ ಎಂಜಿನಿಯರಿಂಗ್ ಕಾಲೇಜು ಪಾಲಿ ಟೆಕ್ನಿಕ್ ಮತ್ತು ಜೆ.ಟಿ.ಸಿಗಳು**

| ಸಂಸ್ಥೆಗಳು | ಕಾಲೇಜುಗಳು | ಪಾಲಿಟೆಕ್ನಿಕ್ | ಜೆ.ಟಿ.ಸಿ | ಒಟ್ಟು |
|---|---|---|---|---|
| ಸರ್ಕಾರಿ | ೧೦ +೧* | ೮೧ | ೦೬ | – |
| ಅನುದಾನಿತ | ೦೯+೨* | ೪೩ | – | ೭೬ |
| ಅನುದಾನರಹಿತ | ೧೪೬ +೧* | ೧೬೭ | ೦೬ | – |
| ವಿಶ್ವವಿದ್ಯಾಲಯ | ೦೨+೧* | – | – | – |
| ಅಲ್ಪ ಸಂಖ್ಯಾತ | ೧೫ | – | – | – |
| **ಒಟ್ಟು** | **೧೮೭** | **೨೯೧** | **೧೨** | **೭೬** |

*** ಸಂಜೆ ಕಾಲೇಜುಗಳು**

### ಕರ್ನಾಟಕ ಜ್ಞಾನ ಆಯೋಗ

ಕರ್ನಾಟಕ ಜ್ಞಾನ ಆಯೋಗ ಒಂದು ಉನ್ನತ ಅಧಿಕಾರಸ್ಥ ಆಯೋಗ, ಕರ್ನಾಟಕವನ್ನು ಜ್ಞಾನ ಸಮಾಜವನ್ನಾಗಿ ಪರಿವರ್ತಿಸಲು ಈ ಆಯೋಗವನ್ನು ೦೫-೦೮-೨೦೦೮ರಲ್ಲಿ ರಚಿಸಲಾಗಿದೆ. ರಾಷ್ಟ್ರೀಯ ಯೋಜನಾ ಆಯೋಗ, ಭಾರತ ಸರ್ಕಾರದ ಸದಸ್ಯರು ಮತ್ತು ಖ್ಯಾತ ಬಾಹ್ಯಾಕಾಶ ವಿಜ್ಞಾನಿ ಡಾ.ಕೆ.ಕಸ್ತೂರಿ ರಂಗನ್ ಅವರ ನೇತೃತ್ವದಲ್ಲಿ ಈ ಆಯೋಗ ರಚನೆಯಾಗಿದೆ. ಶಿಕ್ಷಣ, ಕೈಗಾರಿಕೆ, ಕೃಷಿ, ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಆರೋಗ್ಯ ಮುಂತಾದ ವಲಯಗಳ ೨೬ ತಜ್ಞರು ಆಯೋಗದ ಸದಸ್ಯರಾಗಿದ್ದಾರೆ. ಆಯೋಗವು ಆರು ವಲಯಗಳನ್ನು ಪರಿಗಣಿಸಿದ್ದು, ಉಲ್ಲೇಖಿತ ಗುರಿಯನ್ನು ಸಾಧಿಸುವ ಸಲುವಾಗಿ ಪ್ರತಿ ವಲಯವು ಕೆಳಕಂಡ ಕಾರ್ಯತಂಡಗಳನ್ನು ರಚಿಸಿವೆ. ೧) ಸಾಕ್ಷರತೆ ಮತ್ತು ಶಾಲಾ ಶಿಕ್ಷಣ, ೨) ಉನ್ನತ ಶಿಕ್ಷಣ, ೩) ವೃತ್ತಿ ಶಿಕ್ಷಣ, ೪) ಮಾನವಿಕ ಮತ್ತು ಸಮಾಜ ವಿಜ್ಞಾನಗಳು, ಕಾನೂನು ನಿರ್ವಹಣೆ, ೫) ಆರೋಗ್ಯ ವಲಯ, ೬) ಗ್ರಂಥಾಲಯ ಮತ್ತು ಜ್ಞಾನ ಸಂಪರ್ಕಜಾಲ. ಈ ಕಾರ್ಯತಂಡಗಳು ಆಯಾ ವಲಯಗಳಿಗೆ ಸಂಬಂಧಿಸಿದ ತಜ್ಞರುಗಳನ್ನು ಒಳಗೊಂಡಿದ್ದು, ಭಾಗಿದಾರರುಗಳ ಸಮಾಲೋಚನೆ ಮತ್ತು ಸಮಗ್ರ ಚರ್ಚೆಗಳ ಆಧಾರದ ಮೇಲೆ ಶಿಫಾರಸ್ಸುಗಳನ್ನು ಮಂಡಿಸುವುದು ಕಾರ್ಯತಂಡಗಳ ಪ್ರಮುಖ ಗುರಿಯಾಗಿದೆ

ಸರ್ಕಾರಕ್ಕೆ ಸಲ್ಲಿಸಲಾದ ಕೆಳಕಂಡ ೧೨ ಶಿಫಾರಸ್ಸುಗಳು ಸಂಬಂಧಪಟ್ಟ ಇಲಾಖೆಗಳ ಸಹಕಾರದೊಂದಿಗೆ ಅನುಷ್ಠಾನ ಗೊಳ್ಳುತ್ತಿದೆ.

೧) ಇತರ ವಿಶ್ವವಿದ್ಯಾಲಯಗಳಿಗೆ ಮಾರ್ಗದರ್ಶಕವಾಗುವಂತೆ ಈಗಾಗಲೇ ಇರುವ ಎರಡು ವಿಶ್ವವಿದ್ಯಾಲಯಗಳನ್ನು ಮಾದರಿ ವಿಶ್ವವಿದ್ಯಾಲಯಗಳಾಗಿ ಪರಿವರ್ತಿಸುವುದು.

೨) ವಿಕೇಂದ್ರೀಕೃತ ಮುಂಚೂಣಿ ಸಂಪನ್ಮೂಲ ಸಂಸ್ಥೆಗಳಾಗುವಂತೆ ಕರ್ನಾಟಕದಲ್ಲಿರುವ ಡಿಎಸ್‌ಇಆರ್‌ಟಿ., ಡಯಟ್‌ಗಳು, ಬಿಆರ್‌ಸಿ.,ಗಳು ಮತ್ತು ಸಿಆರ್‌ಸಿ.,ಗಳನ್ನು ಸಬಲಗೊಳಿಸುವುದು.

೩) ಡಿ.ಇಡಿ., ಮತ್ತು ಬಿ.ಇಡಿ., ಪದವಿಗಳ ಪಠ್ಯ ಪರಿಷ್ಕರಣೆಯ ಮೂಲಕ ಹಾಗೂ ಪ್ರಾಥಮಿಕ ಶಿಕ್ಷಕರ ತರಬೇತಿಯನ್ನು ಪದವಿ ಮಟ್ಟಕ್ಕೆ ಮೇಲ್ದರ್ಜೆಗೇರಿಸುವ ಮತ್ತು ಪದವೀಧರ ಪ್ರಾಥಮಿಕ ಶಿಕ್ಷಕರ ಸಂಖ್ಯೆಯನ್ನು ಹೆಚ್ಚಿಸುವ ಮೂಲಕ ಸೇವಾಪೂರ್ವ ಮತ್ತು ಸೇವಾನಿರತ ಶಿಕ್ಷಕರ ತರಬೇತಿಯಲ್ಲಿ ಸುಧಾರಣೆ ತರುವುದು,

೪) ವೃತ್ತಿ ಶಿಕ್ಷಣ ಮತ್ತು ತರಬೇತಿಗೆ ಹೆಚ್ಚಿನ ಚಲನಶೀಲತೆಯನ್ನೂ ಪ್ರಸ್ತುತತೆಯನ್ನೂ ತರಲು ಕರ್ನಾಟಕದಲ್ಲಿ ಸ್ವಾಯತ್ತ ಪ್ರಮಾಣೀಕರಣ ಮತ್ತು ಆಡಳಿತಾತ್ಮಕ ಸಂಸ್ಥೆಯನ್ನು ರೂಪಿಸುವುದು.

೫) ಆನ್ ಲೈನಿನಲ್ಲಿ ಲಭ್ಯವಿರುವ ಜ್ಞಾನ ಸಂಪನ್ಮೂಲದ ಬಗ್ಗೆ ಅರಿವು ಮತ್ತು ಆಸಕ್ತಿ ಹುಟ್ಟಿಸುವ ಉದ್ದೇಶದಿಂದ ಕರ್ನಾಟಕದ ಪ್ರತಿ ಜಿಲ್ಲೆಯಲ್ಲೂ ಸಂಚಾರಿ ಅಂತರ್ಜಾಲ ವಾಹನವನ್ನು ರೂಪಿಸಿ ನಿಯೋಜಿಸುವುದು.

೬) ಕನ್ನಡದಲ್ಲಿ ವಿಕಿಪೀಡಿಯಾ ಮಾದರಿಯ ಅಂತರ್ಜಾಲ ತಾಣವನ್ನು ರೂಪಿಸುವುದು.,

೭) ಕಾಲೇಜು ಮತ್ತು ವಿಶ್ವವಿದ್ಯಾಲಯಗಳು ಕಾಲಿಕ ಸಂಶೋಧನೆಗಳನ್ನು ಕೈಗೊಳ್ಳಲು ಉತ್ತೇಜನ ದೊರೆಯುವಂತೆ "ಕರ್ನಾಟಕ ರಾಜ್ಯ ಸಂಶೋಧನೆ ಮತ್ತು ನಾವೀನ್ಯತೆ ನಿಧಿ" ಸ್ಥಾಪಿಸುವುದು.

೮) ಸದ್ಯ ಬೆಂಗಳೂರಿನ ಕಬ್ಬನ್ ಉದ್ಯಾನದಲ್ಲಿರುವ ಇಂದಿರಾ ಪ್ರಿಯದರ್ಶಿನಿ ಮಕ್ಕಳ ಗ್ರಂಥಾಲಯವನ್ನು ಕರ್ನಾಟಕದ ವಿವಿಧ ಶಾಲಾ ಮಕ್ಕಳಿಗೆ ವಿಜ್ಞಾನ, ತಂತ್ರಜ್ಞಾನ, ಗಣಿತ, ಸಂಗೀತ, ಸಂಸ್ಕೃತಿ, ಇತಿಹಾಸ, ಶೋಧನೆಗಳು ಮತ್ತು ನಾವೀನ್ಯ ಮೊದಲಾದವನ್ನು ಕುರಿತ ಅನನ್ಯ ಸಂಪನ್ಮೂಲ ಕೇಂದ್ರವಾಗುವಂತೆ ಮೇಲ್ದರ್ಜೆಗೇರಿಸುವುದು,

೯) ಉನ್ನತ ಶಿಕ್ಷಣದಲ್ಲಿ ಸ್ಥೂಲ ದಾಖಲಾತಿ ಪ್ರಮಾಣವನ್ನು ಶೇ.೧೧.೬ ರಿಂದ ಶೇ.೧೫ಕ್ಕೆ ಪದವಿ ಪ್ರವೇಶಾವಕಾಶ ಹೆಚ್ಚಿಸುವುದು.

೧೦) ಪದವಿ, ಸ್ನಾತಕೋತ್ತರ, ಎಂ.ಫಿಲ್, ಪಿಹೆಚ್‌ಡಿ.,ಯೂ ಸೇರಿದಂತೆ ಎಲ್ಲ ಕೋರ್ಸುಗಳಿಗೂ ಪ್ರವೇಶಾತಿ, ಪರೀಕ್ಷೆ, ಫಲಿತಾಂಶ ಘೋಷಣೆ, ಮಾರ್ಕ್ಸ್ ಕಾರ್ಡುಗಳ ವಿತರಣೆ ಮತ್ತು ಘಟಿಕೋತ್ಸವಗಳಿಗೆ ಸಂಬಂಧಿಸಿದಂತೆ ಕರ್ನಾಟಕದ ಎಲ್ಲ ವಿಶ್ವವಿದ್ಯಾಲಯಗಳಲ್ಲೂ ನಿರ್ದಿಷ್ಟ ದಿನಾಂಕಗಳುಳ್ಳ ಏಕರೂಪದ ಶೈಕ್ಷಣಿಕ ಕ್ಯಾಲೆಂಡರ್ ಜಾರಿಗೊಳಿಸುವುದು,

೧೧) ಉದ್ಯೋಗ ಮಾರುಕಟ್ಟೆಗೆ ಅನುಗುಣವಾಗಿ ಸೂಕ್ತ ಬದಲಾವಣೆ ಬರುವಂತೆ ಕರ್ನಾಟಕದಲ್ಲಿ ಹಾಲಿ ಇರುವ ಶಿಷ್ಯವೃತ್ತಿ ನೀತಿಗೆ ತಿದ್ದುಪಡಿ ತರುವುದು.

೧೨) ಕರ್ನಾಟಕದ ಎರಡು ಜಿಲ್ಲೆಗಳಲ್ಲಿ ಪ್ರಸ್ತುತ ಬಿ.ಎ., ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪ್ರಾಯೋಗಿಕವಾಗಿ ರೀಟೇಲ್ ವ್ಯವಹಾರ, ಸಂವಹನ ಕೌಶಲ್ಯ, ಜೀವನ ಕೌಶಲ್ಯ ದತ್ತಾಂಶ ದಾಖಲಾತಿ ನಿರ್ವಹಣೆ, ಉದ್ಯಮಶೀಲತೆ ಮೊದಲಾದ ಕ್ಷೇತ್ರಗಳ ತರಬೇತಿಯನ್ನು ನೀಡುವುದು.

### ವೈದ್ಯಕೀಯ ಶಿಕ್ಷಣ

ಹಳೇ ಮೈಸೂರು ರಾಜ್ಯದ ಬೆಂಗಳೂರಿನಲ್ಲಿ ೧೯೧೭ರಲ್ಲಿ ಒಂದು ವೈದ್ಯಕೀಯ ಕಾಲೇಜು ಪ್ರಾರಂಭವಾಗಿ ಆರೋಗ್ಯ ಇಲಾಖೆಯ ಮುಖ್ಯಸ್ಥರಾದ ಸೀನಿಯರ್ ಸರ್ಜನ್‌ರ ಅಧೀನದಲ್ಲಿತ್ತು. ನಾಲ್ಕು ವರ್ಷಗಳ ತರಬೇತಿಯು ಅಭ್ಯರ್ಥಿಗಳು ವೈದ್ಯಕೀಯ ವೃತ್ತಿಯನ್ನು ಕೈಗೊಳ್ಳಲು ಅರ್ಹತೆಯನ್ನು ನೀಡುತ್ತಿತ್ತು (ಐಒಕ).ಮೊದಲನೇ ವೈದ್ಯಕೀಯ ಕಾಲೇಜು ವಿದ್ಯಾರ್ಥಿಗಳಿಗೆ ಎಂ.ಬಿ.ಬಿ.ಎಸ್., ಗೆ ತರಬೇತಿ ನೀಡಲು ಬೆಂಗಳೂರಿನಲ್ಲಿ ೧೯೨೪ರಲ್ಲಿ ಸ್ಥಾಪಿತವಾಯಿತು. ಇವೆರಡೂ ಸಂಸ್ಥೆಗಳು ಮುಂದಿನ ಆರು ವರ್ಷಗಳು ಒಂದೇ ಬೋಧಕ ಸಿಬ್ಬಂದಿಯಿಂದ ನಡೆಸಲ್ಪಟ್ಟವು. ನಂತರ ೧೯೩೦ರಲ್ಲಿ ವೈದ್ಯಕೀಯ ಕಾಲೇಜನ್ನು ಮೈಸೂರಿಗೆ ವರ್ಗಾಯಿಸಲಾಯಿತು. ಶಾಲೆಯು ಬೆಂಗಳೂರಿನಲ್ಲಿ ಉಳಿಯಿತು. ನಂತರ ೧೯೫೬ರಲ್ಲಿ ಇದನ್ನು ಮುಚ್ಚಲಾಯಿತು.

ಬೆಂಗಳೂರು ಮೆಡಿಕಲ್ ಕಾಲೇಜು ೧೯೫೫ರಲ್ಲಿ ಪ್ರಾರಂಭವಾಯಿತು. ನಂತರ ಮಣಿಪಾಲದಲ್ಲಿ ಕಸ್ತೂರ್‌ಬಾ ಮೆಡಿಕಲ್ ಕಾಲೇಜನ್ನು, ಕರ್ನಾಟಕ ಮೆಡಿಕಲ್ ಕಾಲೇಜನ್ನು ಹಾಗೂ ಹುಬ್ಬಳ್ಳಿಯಲ್ಲಿ ಕರ್ನಾಟಕ ವೈದ್ಯಕೀಯ ಕಾಲೇಜನ್ನು ಕ್ರಮವಾಗಿ ೧೯೫೩ ಮತ್ತು ೧೯೫೬ರಲ್ಲಿ ಸ್ಥಾಪಿಸಲಾಯಿತು. ನಂತರ ೧೯೮೦ರ ವೇಳೆಗೆ ರಾಜ್ಯದಲ್ಲಿ ೧೨ ವೈದ್ಯಕೀಯ ಕಾಲೇಜುಗಳಿದ್ದವು. ಇವುಗಳಲ್ಲಿ ನಾಲ್ಕು ಸರ್ಕಾರಿ ಮತ್ತು ಎಂಟು ಖಾಸಗಿ ಸಂಸ್ಥೆಗಳಾಗಿದ್ದವು. ಬಳ್ಳಾರಿಯ ಸರ್ಕಾರಿ ಮೆಡಿಕಲ್ ಕಾಲೇಜು (೧೯೬೧) ೧೯೯೫ರಲ್ಲಿ ಸ್ವಾಯತ್ತತೆಯನ್ನು ಪಡೆಯಿತು. ಅಖಿಲ ಭಾರತ ಮಾನಸಿಕ ಸ್ವಾಸ್ಥ್ಯ ಮತ್ತು ನರರೋಗ ವಿಜ್ಞಾನಗಳ ಸಂಸ್ಥೆಯು ಮನಃಶಾಸ್ತ್ರ ಮತ್ತು ನರಶಸ್ತ್ರ ಚಿಕಿತ್ಸೆಗಳಲ್ಲಿ ಸ್ನಾತಕೋತ್ತರ ಪದವಿಗಳನ್ನು ನೀಡುತ್ತದೆ. ಬೆಂಗಳೂರಿನಲ್ಲಿ ಸ್ನಾತಕೋತ್ತರ ಶಿಕ್ಷಣವನ್ನು (ಎಂ.ಡಿ. ಮೆಡಿಸಿನ್) ಮತ್ತು ಎಮ್.ಸಿ.ಎಚ್. (ನರಶಸ್ತ್ರಚಿಕಿತ್ಸೆ)ಗಳಿಗೆ ನೀಡುತ್ತದೆ. ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯು ವೈದ್ಯಕೀಯ ಕಾಲೇಜಿನ ಅಂಗರಚನಾ ಶಾಸ್ತ್ರ ವಿಭಾಗ, ಶರೀರ ವಿಜ್ಞಾನ ವಿಭಾಗ ಮತ್ತು ರೋಗಶಾಸ್ತ್ರ ವಿಭಾಗಗಳ ಅನುಕೂಲಗಳನ್ನು ಪಡೆಯುವುದರ ಜೊತೆಗೆ ಕೆ.ಆರ್. ಆಸ್ಪತ್ರೆಯ ಇ.ಎನ್.ಟಿ. ನರಶಾಸ್ತ್ರ ವಿಭಾಗಗಳ ಅನುಕೂಲಗಳನ್ನು ಪಡೆಯುತ್ತಿದೆ.

೧೯೯೩-೯೪ರಲ್ಲಿ ನಾಲ್ಕು ಸರ್ಕಾರಿ ವೈದ್ಯಕೀಯ ಕಾಲೇಜುಗಳ ನ್ನೊಳಗೊಂಡಂತೆ ೧೯ ವೈದ್ಯಕೀಯ ಕಾಲೇಜುಗಳು, ಒಂದು ಸರ್ಕಾರಿ ದಂತ ವೈದ್ಯಕೀಯ ಕಾಲೇಜೂ ಸೇರಿದಂತೆ ೪೧ ದಂತ ವೈದ್ಯಕೀಯ ಕಾಲೇಜುಗಳು, ಬೆಂಗಳೂರಿನ ಸರ್ಕಾರಿ ಔಷಧ ಶಾಸ್ತ್ರದ ಕಾಲೇಜೂ ಸೇರಿದಂತೆ ೬೧ ಔಷಧ ಶಾಸ್ತ್ರದ ಕಾಲೇಜುಗಳು, ರಾಜ್ಯದಲ್ಲಿ ಬೆಂಗಳೂರಿನ ಸರ್ಕಾರಿ ಶುಶ್ರೂಷಕಿಯರ ಕಾಲೇಜೂ ಸೇರಿದಂತೆ ೧೧ ಶುಶ್ರೂಷಕಿಯರ ಕಾಲೇಜುಗಳಿದ್ದವು. ಇವುಗಳ ಜೊತೆಗೆ ತಮ್ಮ ತಮ್ಮ ವೈದ್ಯಕೀಯ ಪದ್ಧತಿಯಲ್ಲಿ ಪದವಿಗಳನ್ನು ನೀಡುವ ಆಯುರ್ವೇದ, ಹೋಮಿಯೋಪತಿ ಮತ್ತು ಯುನಾನಿ ವೈದ್ಯಕೀಯ ಕಾಲೇಜುಗಳು ಇವೆ. ರಾಜ್ಯದಲ್ಲಿ ಒಟ್ಟು ೧೬ ಆಯುರ್ವೇದ ಕಾಲೇಜುಗಳು ಇವುಗಳಲ್ಲಿ ಮೈಸೂರಿನ ಭಾರತೀಯ ವೈದ್ಯ ಪದ್ಧತಿಯ ಕಾಲೇಜು ೧೯೦೮, ಬಳ್ಳಾರಿಯ ತಾರಾನಾಥ ಕಾಲೇಜು ೧೯೪೭ ಮತ್ತು ಬೆಂಗಳೂರಿನ ಜಯಚಾಮರಾಜೇಂದ್ರ ಆಯುರ್ವೇದ ಕಾಲೇಜುಗಳು ಸರ್ಕಾರದಿಂದ ನಡೆಸಲ್ಪಡುತ್ತಿವೆ. ಇವುಗಳಲ್ಲಿ ಬೆಳಗಾವಿ, ಬಿಜಾಪುರ, ಹುಬ್ಬಳ್ಳಿ, ಉಡುಪಿ ಮತ್ತು ಧರ್ಮಸ್ಥಳಗಳಲ್ಲಿ ಮೊದಲು ಪ್ರಾರಂಭವಾದವು. ರಾಜ್ಯದಲ್ಲಿ ಮೂರು ಹೋಮಿಯೋಪತಿ ಕಾಲೇಜುಗಳು, ಎಲ್‌ಸಿಇಹೆಚ್ ಮತ್ತು ಜಿಸಿ ಪದವಿಗಳನ್ನು ನೀಡುತ್ತಿವೆ. ಬೆಂಗಳೂರಿನಲ್ಲಿರುವ ರಾಜ್ಯದ ಏಕೈಕ ಯುನಾನಿ ಕಾಲೇಜು (೧೯೭೫) ಐದೂವರೆ ವರ್ಷಗಳ ಅವಧಿಯ ಬಿಯುಎಂಎಸ್., ಪದವಿಯನ್ನು ನೀಡುತ್ತಿದೆ.

ಕರ್ನಾಟಕದಲ್ಲಿ ವೈದ್ಯಕೀಯ ಶಿಕ್ಷಣ ಕ್ಷೇತ್ರವು ಇತ್ತೀಚಿನ ದಶಕಗಳಲ್ಲಿ ಕ್ಷಿಪ್ರವಾಗಿ ಬೆಳವಣಿಗೆಯನ್ನು ಕಾಣುತ್ತಿರುವ ಕ್ಷೇತ್ರವಾಗಿದೆ. ವರ್ಷ ವರ್ಷವೂ ರಾಜ್ಯ ಸರ್ಕಾರವು ಹೊಸದಾಗಿ ಸರ್ಕಾರಿ ಮೆಡಿಕಲ್ ಕಾಲೇಜುಗಳನ್ನು ಪ್ರಾರಂಭಿಸುವುದರ ಜೊತೆಗೆ ಹಲವಾರು ಖಾಸಗಿ ಸಂಸ್ಥೆಗಳೂ ಪೈಪೋಟಿ ಮೇಲೆ ಕಾಲೇಜುಗಳನ್ನು ತೆರೆಯುತ್ತಿವೆ. ಭಾರತೀಯ ಮೆಡಿಕಲ್ ಕೌನ್ಸಿಲ್ ವಿಧಿಸಿದ ನಿಬಂಧನೆಗಳ ಕಾರಣದಿಂದಾಗಿ ಖಾಸಗಿ ಸಂಸ್ಥೆಗಳು ಮನಸೋ ಇಚ್ಛೆ ಕಾಲೇಜುಗಳನ್ನು ತೆರೆಯುವುದಕ್ಕೆ ಸ್ವಲ್ಪ ಮಟ್ಟಿಗೆ ಕಡಿವಾಣ ಹಾಕಿದೆ. ಸರ್ಕಾರವು ಪ್ರತಿ ಜಿಲ್ಲೆಗೆ ಒಂದು ಸರ್ಕಾರಿ ಮೆಡಿಕಲ್ ಕಾಲೇಜನ್ನು ತೆರೆಯಲು ಬಯಸಿ ಆ ದಿಕ್ಕಿನಲ್ಲಿ ಕ್ರಮ ಕೈಗೊಳ್ಳುತ್ತಿದೆ. ೨೦೧೦ ರಿಂದೀಚೆಗೆ ಮಂಡ್ಯ, ಹಾಸನ,ಬೆಳಗಾವಿ, ಶಿವಮೊಗ್ಗ, ಬೀದರ್,ರಾಯಚೂರುಗಳಲ್ಲಿ ಸರ್ಕಾರಿ ಮೆಡಿಕಲ್ ಕಾಲೇಜುಗಳನ್ನು ಪ್ರಾರಂಭಿಸಲಾಗಿದೆ. ಈ ಕಾಲೇಜುಗಳಲ್ಲಿ ಎಂ.ಬಿ.ಬಿಎಸ್. ಶಿಕ್ಷಣವನ್ನು ನೀಡಲಾಗುತ್ತದೆ. ಅಲ್ಲದೆ ಬೆಂಗಳೂರು, ಮೈಸೂರು, ಹುಬ್ಬಳ್ಳಿ ಮತ್ತು ಬಳ್ಳಾರಿಯಲ್ಲಿ ಈ ಮೊದಲೇ ಸರ್ಕಾರಿ ಮೆಡಿಕಲ್ ಕಾಲೇಜುಗಳಿದ್ದು ಈ ಕಾಲೇಜುಗಳಲ್ಲಿ ಎಂ.ಬಿ.ಬಿ.ಎಸ್. ಪದವಿಯ ಜೊತೆಗೆ ಪಿ.ಜಿ. ಕೋರ್ಸುಗಳನ್ನೂ ನಡೆಸಲಾಗುತ್ತಿದೆ. ಒಟ್ಟಾರೆ ರಾಜ್ಯದಲ್ಲಿ ೧೦ ಸರ್ಕಾರಿ ಮೆಡಿಕಲ್ ಕಾಲೇಜುಗಳಲ್ಲದೆ ಅನುದಾನಿತ ಮತ್ತು ಅನುದಾನರಹಿತ ಖಾಸಗಿ ಕಾಲೇಜುಗಳು ಸೇರಿ ಒಟ್ಟು ೫೦ ಅಲೋಪತಿ ಮೆಡಿಕಲ್ ಕಾಲೇಜುಗಳು, ೫೬ ಆಯುರ್ವೇದ ಕಾಲೇಜುಗಳು, ೧೧ ಹೋಮಿಯೋಪತಿ ಕಾಲೇಜುಗಳು ಊದು ಯುನಾನಿ ಕಾಲೇಜುಗಳು, ನಾಲ್ಕು ನ್ಯಾಚುರೋಪತಿ ಮತ್ತು ಯೋಗ ವಿಜ್ಞಾನ ಕಾಲೇಜುಗಳು, ೩೮ ದಂತ ವೈದ್ಯಕೀಯ ಕಾಲೇಜುಗಳು, ೬೧ ಬಿ ಫಾರ್ಮ ಕಾಲೇಜುಗಳು, ೨೮೭ ನರ್ಸಿಂಗ್ ಕಾಲೇಜುಗಳು ಕಾರ್ಯ ನಿರ್ವಹಿಸುತ್ತಿವೆ.

**ಕೋಷ್ಟಕ ೧೦.೩೪: ವಿವಿಧ ಕೋರ್ಸುಗಳಿಗೆ ದಾಖಲಾದ ವಿದ್ಯಾರ್ಥಿಗಳ ಸಂಖ್ಯೆ**

| ಕ್ರ.ಸಂ | ಕಾಲೇಜು / ಕೋರ್ಸಿನ ಹೆಸರು | ಕಾಲೇಜುಗಳ ಸಂಖ್ಯೆ | ದಾಖಲಾತಿ |
|---|---|---|---|
| ೧ | ವೈದ್ಯಕೀಯ (ಎಂ.ಬಿ.ಬಿ.ಎಸ್.) | ೫೦ | ೬೨೪೫ |
| ೨ | ಆಯುರ್ವೇದ (ಜಿ.ಸಿ.ಐ.ಎಂ.) | ೫೬ | ೨೮೪೩ |
| ೩ | ಹೋಮಿಯೋಪತಿ (ಬಿ.ಹೆಚ್.ಎಂ.ಎಸ್) | ೧೧ | ೮೫೬ |
| ೪ | ಯುನಾನಿ ಕಾಲೇಜು | ೦೫ | ೨೦೧ |
| ೫ | ನ್ಯಾಚುರೋಪತಿ ಮತ್ತು ಯೋಗ ವಿಜ್ಞಾನ (ಬಿ.ಎನ್.ವೈ.ಎಸ್.) | ೦೪ | ೧೭೨ |
| ೬ | ದಂತ ವೈದ್ಯಕೀಯ (ಬಿ.ಡಿ.ಎಸ್.) | ೩೮ | ೨೭೦೦ |
| ೭ | ಔಷದ ವಿಜ್ಞಾನ (ಬಿ.ಡಿ.ಎಸ್) | ೬೧ | ೪೭೮೪ |
| ೮ | ಶುಶ್ರೂಷಾ (ಬಿ.ಎಸ್.ಸಿ.ನರ್ಸಿಂಗ್) | ೨೮೭ | ೧೨೭೨೫ |

ಮಾಹಿತಿ: ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಆರ್ಥಿಕ ಸಮೀಕ್ಷೆ

## ಕಾನೂನು ಶಿಕ್ಷಣ

ಬೆಳಗಾವಿಯಲ್ಲಿ ೧೯೩೯ರಲ್ಲಿ ಕರ್ನಾಟಕ ಲಾ ಸೊಸೈಟಿ ಎಂಬ ಖಾಸಗಿ ಸಂಸ್ಥೆಯು ರಾಜ್ಯದ ಮೊದಲನೆಯ ಕಾನೂನು ಕಾಲೇಜನ್ನು ಸ್ಥಾಪಿಸಿ ಅದಕ್ಕೆ 'ರಾಜ ಲಖಮಗೌಡ ಕಾನೂನು ಕಾಲೇಜು' ಎಂದು ನಾಮಕರಣ ಮಾಡಿತು. ರಾಜ್ಯ ಪುನರ್ವಿಂಗಡಣೆಯ ಕಾಲಕ್ಕೆ ರಾಜ್ಯದಲ್ಲಿ ನಾಲ್ಕು ಕಾನೂನು ಕಾಲೇಜುಗಳಿದ್ದು, ಅವುಗಳಲ್ಲಿ ಎರಡು ಮೈಸೂರು ಪ್ರದೇಶದಲ್ಲಿ ಮತ್ತು ಎರಡು ಬೆಳಗಾವಿ ಪ್ರದೇಶದಲ್ಲಿ ಹಂಚಿದ್ದವು. ಅವುಗಳಲ್ಲಿದ್ದ ವಿದ್ಯಾರ್ಥಿಗಳ ಸಂಖ್ಯೆ ಇಬ್ಬರು ಮಹಿಳೆಯರೂ ಸೇರಿದಂತೆ ೭೫೮ ಆಗಿದ್ದಿತು.

ಶಿಕ್ಷಣ ಅವಧಿಯು ಎರಡು ವರ್ಷಾದ್ದಾಗಿದ್ದು, ಮೈಸೂರು ವಿಶ್ವವಿದ್ಯಾಲಯ ಬಿ.ಎಲ್.ಪದವಿಯನ್ನು ಮತ್ತು ಕರ್ನಾಟಕ ವಿಶ್ವವಿದ್ಯಾಲಯ ಎಲ್.ಎಲ್.ಬಿ. ಪದವಿಯನ್ನು ನೀಡುತ್ತಿದ್ದವು. ಎರಡನೆಯದು ಕಾನೂನಿನ ಸ್ನಾತಕೋತ್ತರ ಪದವಿಗೆ ಪರೀಕ್ಷೆ ನಡೆಸುತ್ತಿತ್ತು. ರಾಜ್ಯದಲ್ಲಿ ೧೯೬೮ರ ವೇಳೆಗೆ ಇದ್ದ ಕಾಲೇಜುಗಳ ಸಂಖ್ಯೆ ೧೩. ಮೈಸೂರು ಪ್ರದೇಶದಲ್ಲಿ ಎಂಟು, ಬೆಳಗಾವಿ ಪ್ರದೇಶದಲ್ಲಿ ಮೂರು (ಧಾರವಾಡದ ವಿಶ್ವವಿದ್ಯಾಲಯದ ಕಾಲೇಜು ಸೇರಿದಂತೆ) ಮಂಗಳೂರು ಮತ್ತು ಕಲಬುರಗಿ ಗಳಲ್ಲಿ ತಲಾ ಒಂದೊಂದು. ಉದ್ಯೋಗದಲ್ಲಿದ್ದವರಿಗೆ ಅನುಕೂಲವಾಗುವಂತೆ ತರಗತಿಗಳನ್ನು ಬೆಳಗ್ಗೆ ಅಥವಾ ಸಾಯಂಕಾಲ ನಡೆಸುತ್ತಿದ್ದರು.

ಹಿಂದೆ ಕಾನೂನನ್ನು ಪದವಿಯ ನಂತರ ಅಧ್ಯಯನ ಮಾಡಬೇಕಿತ್ತು. ಆದರೆ ಭಾರತದ ವಕೀಲರ ಮಂಡಳಿಯು ಇತರ ವೃತ್ತಿ ಶಿಕ್ಷಣದಂತೆ ಕಾನೂನು ಶಿಕ್ಷಣವನ್ನು ಬದಲಾಯಿಸಲು ಸೂಚಿಸಿತು. ಪದವಿ ಪೂರ್ವ ಶಿಕ್ಷಣದ ನಂತರ ಐದು ವರ್ಷಗಳ ಕಾನೂನು ಶಿಕ್ಷಣವನ್ನು ದೇಶಾದ್ಯಂತ ರೂಪಿಸಲು ಸೂಚಿಸಿದೆ. ೧೯೯೨ರಲ್ಲಿ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ವಿಶ್ವವಿದ್ಯಾಲಯ ಸ್ಥಾಪನೆಯಾಗಿದ್ದು, ಇದು ಭಾರತದಲ್ಲಿ ಪ್ರಾಮುಖ್ಯತೆಯನ್ನು ಪಡೆದಿರುವ ಕಾನೂನು ವಿಶ್ವವಿದ್ಯಾಲಗಳಲ್ಲೊಂದಾಗಿದೆ. ಈಗ ರಾಜ್ಯದಲ್ಲಿ ಪದವಿಯ ನಂತರ ಬೆಳಗ್ಗೆ ಅಥವಾ ಸಂಜೆ ಪಾರ್ಟ್ ಟೈಂ ಕಾನೂನು ಶಿಕ್ಷಣ ನೀಡುವ ಕಾಲೇಜುಗಳು ಬಹುತೇಕ ಇಲ್ಲವಾಗಿದೆ.

ಎಲ್ಲ ಕಾಲೇಜುಗಳು ಪಿ.ಯು.ಸಿ ನಂತರ ೫ ವರ್ಷಗಳ ಪೂರ್ಣ ಕಾಲಿಕ ಕಾನೂನು ಶಿಕ್ಷಣ ನೀಡುವ ಕಾಲೇಜುಗಳಾಗಿ ಪರಿವರ್ತಿತವಾಗಿವೆ. ಈ ಕಾಲೇಜುಗಳಲ್ಲಿ ೫ ವರ್ಷಗಳ ಇಂಟಿಗ್ರೇಟೆಡ್ ಕೋರ್ಸು ನಡೆಸಿ ಐದು ವರ್ಷಗಳ ಅವಧಿಯನ್ನು ಪೂರೈಸಿದ ನಂತರ ಸಾಮಾನ್ಯ ಕಲೆ ಅಥವ ವಿಜ್ಞಾನ ವಿಷಯದ ಪದವಿಯ ಜೊತೆಗೆ ಕಾನೂನು ಪದವಿಯನ್ನು ನೀಡಲಾಗುತ್ತದೆ. ಈ ಶಿಕ್ಷಣದ ಅವಧಿಯಲ್ಲಿ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಇಂಟರ್ನ್ ಶಿಫ್ ತರಬೇತಿಯನ್ನೂ ಸೇರಿಸಲಾಗಿದೆ. ಪ್ರಸ್ತುತ ರಾಜ್ಯದಲ್ಲಿ ಪ್ರಸ್ತುತ ೯೦ ಕಾಲೇಜುಗಳಲ್ಲಿ ಕಾನೂನು ಶಿಕ್ಷಣವನ್ನು ನೀಡಲಾಗುತ್ತಿದ್ದು ಎಲ್ಲ ಕಾಲೇಜುಗಳನ್ನು ಹುಬ್ಬಳ್ಳಿಯಲ್ಲಿ ಸ್ಥಾಪಿಸಲಾಗಿರುವ ಕರ್ನಾಟಕ ರಾಜ್ಯ ಕಾನೂನು ವಿಶ್ವ ವಿದ್ಯಾಲಯದ ವ್ಯಾಪ್ತಿಗೆ ಒಳಪಡಿಸಲಾಗಿದೆ.

**ಕೋಷ್ಟಕ ೧೦.೩೫: ೨೦೧೨-೧೩ ರಲ್ಲಿದ್ದಂತೆ ರಾಜ್ಯದಲ್ಲಿರುವ ಕಾನೂನು ಕಾಲೇಜುಗಳು, ವಿದ್ಯಾರ್ಥಿಗಳು, ಶಿಕ್ಷಕರ ಮಾಹಿತಿ**

| ಕ್ರ. ಸಂ. | ಕಾಲೇಜುಗಳ ವಿವರ | ಕಾಲೇಜುಗಳ ಸಂಖ್ಯೆ | ವಿದ್ಯಾರ್ಥಿಗಳು | ಶಿಕ್ಷಕರು |
|---|---|---|---|---|
| ೧ | ಕೆ.ಎಸ್.ಎಲ್. ಯು ಲಾ ಸ್ಕೂಲ್ | ೦೧ | ೧೫೦ | ೨೧ |
| ೨ | ಸರ್ಕಾರಿ ಕಾಲೇಜುಗಳು | ೦೪ | ೪೧೬ | ೫೦ |
| ೩ | ಖಾಸಗಿ ಅನುದಾನಿತ ಕಾಲೇಜುಗಳು | ೦೮ | ೧೨೦೮ | ೧೦೮ |
| ೪ | ಖಾಸಗಿ ಅನುದಾನರಹಿತ ಕಾಲೇಜುಗಳು | ೭೬ | ೧೩೫೨೬ | ೮೮೫ |
| ೫ | ಸ್ವಾಯತ್ತ ಕಾಲೇಜುಗಳು | ೦೧ | ೪೭೬ | ೨೮ |
| | ಒಟ್ಟು | ೯೦ | ೧೫೭೭೬ | ೧೦೯೨ |

## ವಿಶ್ವವಿದ್ಯಾಲಯಗಳು

೧೯೪೮ನೇ ಇಸವಿಯಲ್ಲಿ ಸಂಯುಕ್ತ ರಾಷ್ಟ್ರ ಸಂಸ್ಥೆಯು ಅಂಗೀಕರಿಸಿದ ಸಾರ್ವತ್ರಿಕ ಮಾನವ ಹಕ್ಕುಗಳ ಪ್ರಕಟಣೆಗೆ ಉನ್ನತ ಶಿಕ್ಷಣದ ಕಾರ್ಯ ನೀತಿ ಗುರುತಿಸಬಹುದಾಗಿದೆ. ಇದು ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯ ಎಂದು ಘೋಷಿಸಿತು. ತಾಂತ್ರಿಕ ಮತ್ತು ವೃತ್ತಿ ಶಿಕ್ಷಣವು ಸಾಮಾನ್ಯವಾಗಿ ಎಲ್ಲರಿಗೂ ದೊರಕುವಂತಾಗ ಬೇಕು ಮತ್ತು ಅರ್ಹತೆ ಮೇರೆಗೆ ಉನ್ನತ ಶಿಕ್ಷಣವು ಎಲ್ಲರಿಗೂ ಸಮವಾಗಿ ಸುಲಭ ಸಾಧ್ಯವಾಗುವಂತಾಗ ಬೇಕು. ಉನ್ನತ ಶಿಕ್ಷಣವೆಂದರೆ ಪದವಿ ಶಿಕ್ಷಣ, ಸ್ನಾತಕೋತ್ತರ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಗಳನ್ನು ಒಳಗೊಂಡಿದೆ. ಕರ್ನಾಟಕದಲ್ಲಿ ಪ್ರಸ್ತುತ ಉನ್ನತ ಶಿಕ್ಷಣದ ವ್ಯವಸ್ಥೆಯು ಸಾಕಷ್ಟು ವಿಸ್ತಾರಗೊಂಡಿದೆ. ೧೧ ಅಫಿಲಿಯೇಟಿಂಗ್ ವಿಶ್ವವಿದ್ಯಾಲಯಗಳು ಒಂದು ತಾಂತ್ರಿಕ ಶಿಕ್ಷಣ, ಒಂದು ವೈದ್ಯಕೀಯ ಶಿಕ್ಷಣ, ನಾಲ್ಕು ಕೃಷಿ, ಒಂದು ತೋಟಗಾರಿಕೆ, ಎರಡುಕಾನೂನು ಶಿಕ್ಷಣ, ಒಂದುಕನ್ನಡ, ಒಂದು ಸಂಸ್ಕೃತ, ಒಂದು ಸಂಗೀತ, ಒಂದುಜಾನಪದ, ಒಂದು ಮಹಿಳಾ, ಒಂದು ಪಶು ವೈದ್ಯಕೀಯ ಮುಂತಾದ ವಿಷಯಗಳಿಗೆ ಪ್ರತ್ಯೇಕ ವಿಶ್ವವಿದ್ಯಾಲಯಗಳಿವೆ. ಅಲ್ಲದೆ ಒಂದು ಕೇಂದ್ರೀಯ ವಿಶ್ವ ವಿದ್ಯಾಲಯ ಸೇರಿ ಒಟ್ಟು ೨೮ ವಿಶ್ವ ವಿದ್ಯಾಲಯಗಳಿವೆ. ಎರಡು ಖಾಸಗಿ ವಿಶ್ವ ವಿದ್ಯಾಲಯಗಳು, ವಿಶ್ವ ವಿದ್ಯಾಲಯ ಸ್ಥಾನಮಾನ ಪಡೆದ ಐದು ಉನ್ನತ ಶಿಕ್ಷಣ ಸಂಸ್ಥೆಗಳು, ಡೀಮ್ಡ್ ವಿಶ್ವ ವಿದ್ಯಾಲಯ ಸ್ಥಾನಮಾನ ಪಡೆದ ೧೫ ಖಾಸಗಿ ಕಾಲೇಜುಗಳು ರಾಜ್ಯದಲ್ಲಿವೆ. ೧೯೧೬ನೇ ಇಸವಿಯಲ್ಲಿ ಪ್ರಾರಂಭವಾದ ಮೈಸೂರು ವಿಶ್ವವಿದ್ಯಾಲಯವು ರಾಜ್ಯದ ಪ್ರಪ್ರಥಮ ವಿಶ್ವ ವಿದ್ಯಾಲಯ ಎಂಬ ಖ್ಯಾತಿ ಪಡೆದಿದೆ. ದಿ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ, ಬೆಂಗಳೂರು, ೧೯೯೨ ರಲ್ಲಿ ಪ್ರಾರಂಭವಾಗಿದೆ. ತದನಂತರ ೨೦೦೮, ೨೦೧೦-೧೧ರಲ್ಲಿ ಸಂಗೀತ, ಜಾನಪದ ಮತ್ತು ಸಂಸ್ಕೃತ ಮುಂತಾದ ವಿಶ್ವವಿದ್ಯಾಲಯಗಳ ಸ್ಥಾಪನೆಯಾಗಿದೆ. ಕಲಬುರ್ಗಿಯಲ್ಲಿ ಕೇಂದ್ರ ಸರ್ಕಾರದಿಂದ ಸ್ಥಾಪಿತಗೊಂಡಿರುವ ಕೇಂದ್ರೀಯ

ವಿಶ್ವವಿದ್ಯಾಲಯವು ೨೦೧೧ರಿಂದ ಕಾರ್ಯನಿರ್ವಹಿಸುತ್ತಿದೆ. ಅಲ್ಲದೆ ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದಂತೆ ವಿವಿಧ ಬೇರೆ, ಬೇರೆ ಕೇಂದ್ರಗಳಿವೆ. ಅವುಗಳೆಂದರೆ, ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಸೈನ್ಸ್ (೧೯೧೧), ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ (೧೯೭೩), ಮತ್ತು ಇನ್ಸ್‌ಟಿಟ್ಯೂಟ್ ಫಾರ್ ಸೋಷಿಯಲ್ ಅಂಡ್ ಎಕನಾಮಿಕ್ ಚೇಂಜ್, ಬೆಂಗಳೂರು (೧೯೭೨). ಭಾರತೀಯ ಮಾನಸಿಕ ಆರೋಗ್ಯ ಮತ್ತು ನರ ವಿಜ್ಞಾನ ಸಂಸ್ಥೆ ಮುಂತಾದವು ಸೇರಿವೆ. ರಾಜ್ಯದಲ್ಲಿರುವ ಎಲ್ಲ ವಿಶ್ವ ವಿದ್ಯಾಲಯಗಳ ಕುರಿತ ಸಂಕ್ಷಿಪ್ತ ಮಾಹಿತಿಯನ್ನು ಅವುಗಳು ಪ್ರಾರಂಭವಾದ ವರ್ಷದ ಅನುಕ್ರಮವಾಗಿ ಮುಂದೆ ನೀಡಲಾಗಿದೆ.

### ಮೈಸೂರು ವಿಶ್ವವಿದ್ಯಾನಿಲಯ (೧೯೧೬)

ಕರ್ನಾಟಕ ರಾಜ್ಯದ ಪ್ರಪ್ರಥಮ ವಿಶ್ವವಿದ್ಯಾನಿಲಯ ಎಂಬ ಖ್ಯಾತಿಯ ಮೈಸೂರು ವಿಶ್ವವಿದ್ಯಾನಿಲಯವು ೧೯೧೬ ರಲ್ಲಿ ಮೈಸೂರಿನಲ್ಲಿ ಸ್ಥಾಪಿತವಾಯಿತು. ಇದರ ಆಡಳಿತ ಕೇಂದ್ರ ಮತ್ತು ಮುಖ್ಯ ಕಾಲೇಜುಗಳು ಮೈಸೂರಿನಲ್ಲಿವೆ. ಬೆಂಗಳೂರು, ಅವಿಭಜಿತ ಕೋಲಾರ, ಅವಿಭಜಿತ ಮೈಸೂರು, ಮಂಡ್ಯ, ಕೊಡಗು, ದಕ್ಷಿಣ ಕನ್ನಡ, ಹಾಸನ, ಚಿಕ್ಕಮಗಳೂರು, ಶಿವಮೊಗ್ಗ, ಚಿತ್ರದುರ್ಗ ಈ ಜಿಲ್ಲೆಗಳು ಇದರ ಪ್ರಾದೇಶಿಕ ವ್ಯಾಪ್ತಿಯಲ್ಲಿದ್ದವು. ತದನಂತರ ಬೆಂಗಳೂರು ವಿಶ್ವ ವಿದ್ಯಾಲಯ, ಶಿವಮೊಗ್ಗದಲ್ಲಿ ಕುವೆಂಪು ವಿಶ್ವ ವಿದ್ಯಾಲಯ, ಮಂಗಳೂರು ಮತ್ತು ದಾವಣಗೆರೆಗಳಲ್ಲಿ ಪ್ರತ್ಯೇಕವಾಗಿವಿಶ್ವವಿದ್ಯಾನಿಲಯಗಳು ಸ್ಥಾಪಿಸಲ್ಪಟ್ಟ ನಂತರ ಈಗ ಮೈಸೂರು, ಚಾಮರಾಜನಗರ ಮತ್ತು ಮಂಡ್ಯ ಜಿಲ್ಲಾ ಪ್ರದೇಶವು ಇದರ ಆಡಳಿತ ವ್ಯಾಪ್ತಿಗೆ ಒಳಪಟ್ಟಿವೆ.

ಭಾರತದಲ್ಲಿ ಉನ್ನತ ಶಿಕ್ಷಣದ ಪ್ರಾಮುಖ್ಯತೆಯನ್ನು ಅಗತ್ಯ ಸೌಲಭ್ಯವನ್ನು ಒದಗಿಸಿಕೊಟ್ಟ ಆಶ್ರಿತ ಸಂಸ್ಥಾನಗಳಲ್ಲಿ ಮೈಸೂರು ಮೊದಲನೆಯದು. ೧೮೩೩ ರಲ್ಲಿ ಆರಂಭವಾದ ಮೈಸೂರಿನ ಮಹಾರಾಜ ಕಾಲೇಜೂ ೧೮೫೮ರಲ್ಲಿ ಆರಂಭವಾದ ಬೆಂಗಳೂರಿನ ಸೆಂಟ್ರಲ್ ಕಾಲೇಜೂ ಈ ಶತಮಾನದ ಎರಡನೆಯ ದಶಕದವರೆಗೂ ಮದರಾಸು ವಿಶ್ವವಿದ್ಯಾಲಯದ ಅಂಗೀಕೃತ ಕಾಲೇಜುಗಳಾಗಿದ್ದುವು. ೧೯೧೬ರಲ್ಲಿ ಮೈಸೂರಿನ ಸಂಸ್ಥಾನದಲ್ಲೇ ಮೊಟ್ಟ ಮೊದಲನೆಯದಾಗಿ ಆರಂಭವಾದ ಮೈಸೂರು ವಿಶ್ವವಿದ್ಯಾಲಯಕ್ಕೆ ಮೇಲಿನ ಎರಡು ಕಾಲೇಜುಗಳೂ ಕೇಂದ್ರ ಸಂಸ್ಥೆಗಳಾದವು. ೧೯೧೭ರಲ್ಲಿ ಬೆಂಗಳೂರಿನಲ್ಲಿ ಎಂಜಿನಿಯರಿಂಗ್ ಕಾಲೇಜೂ ೧೯೨೪ರಲ್ಲಿ ಮೆಡಿಕಲ್ ಕಾಲೇಜೂ (ಅನಂತರ ಇದು ಮೈಸೂರಿಗೆ ವರ್ಗವಾಯಿತು) ಆರಂಭವಾದವು. ೧೯೫೬ರ ವೇಳೆಗೆ ವಿಶ್ವವಿದ್ಯಾನಿಲಯದ ಇನ್ನೂ ೧೩ ನೂತನ ಕಾಲೇಜುಗಳು ಆರಂಭವಾದುವು. ಜೊತೆಗೆ ಅದು ೩೭ ಖಾಸಗಿ ಕಾಲೇಜುಗಳಿಗೂ ಅಂಗೀಕಾರ ನೀಡಿತು. ೧೯೬೪ರಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯ ಅಸ್ತಿತ್ವಕ್ಕೆ ಬಂದುದರ ಫಲವಾಗಿ ಆ ನಗರದ ೩೨ ಕಾಲೇಜುಗಳೂ ನೂತನ ವಿಶ್ವವಿದ್ಯಾನಿಲಯ ವ್ಯಾಪ್ತಿಗೆ ವರ್ಗವಾದುವು. ಕೇವಲ ಎರಡು ಕಾಲೇಜುಗಳಿಂದ ಆರಂಭವಾದ ಮೈಸೂರು ವಿಶ್ವವಿದ್ಯಾನಿಲಯ ೨೦೧೧ರಲ್ಲಿ ೧೨೨ ಅಫಿಲಿಯೇಟೆಡ್ (affiliated) ಕಾಲೇಜಗಳು, ಐದು ಕಾನ್‌ಸ್ಟಿಟ್ಯುಯೆಂಟ್ (Constituent) ಕಾಲೇಜುಗಳನ್ನು ಹೊಂದಿದೆ. ೫೩,೦೦೦ಕ್ಕೂ ಅಧಿಕ ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದಾರೆ. ಜೊತೆಗೆ ೩೭ ಸ್ನಾತಕೋತ್ತರ ವಿಭಾಗಗಳನ್ನು ಹೊಂದಿದ್ದು ೩,೫೦೦ ವಿದ್ಯಾರ್ಥಿಗಳು ಅಧ್ಯಯನದಲ್ಲಿ ನಿರತರಾಗಿದ್ದಾರೆ.

ವಿಶ್ವವಿದ್ಯಾನಿಲಯ ನಡೆಸುತ್ತಿದ್ದ ೧೭ ಕಾಲೇಜುಗಳಲ್ಲಿ ೧ಳನ್ನು ೧೯೬೦ರಲ್ಲಿ ಸರ್ಕಾರಕ್ಕೆ ವರ್ಗಾಯಿಸಲಾಯಿತು. ೧೯೬೪ರಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯ ಆರಂಭವಾದ್ದರಿಂದ ಸೆಂಟ್ರಲ್ ಕಾಲೇಜು ಅದಕ್ಕೆ ಸೇರಿಹೋಯಿತು. ಆದ್ದರಿಂದ ವಿವಿಧ ವಿಜ್ಞಾನ ಮತ್ತು ಗಣಿತ ಶಾಸ್ತ್ರಗಳ ಸ್ನಾತಕೋತ್ತರ ತರಗತಿಗಳನ್ನು ಮಾನಸಗಂಗೋತ್ರಿಯಲ್ಲಿ ಹೊಸದಾಗಿ ಪ್ರಾರಂಭಿಸಿ ಎರಡನೆಯ ಯೋಜನೆಯಲ್ಲಿ ಸ್ವಲ್ಪ ಮಟ್ಟಿಗೆ ಅಭಿವೃದ್ಧಿ ಸಾಧಿಸಿತು. ನೂತನವಾಗಿ ಆಡಳಿತ ವಿಭಾಗ, ಕಟ್ಟಡಗಳ ನಿರ್ಮಾಣ, ಪ್ರಯೋಗಾಲಯಗಳ ಸ್ಥಾಪನೆ, ಉಪಕರಣಾದಿಗಳ ಸರಬರಾಜು, ಅಧ್ಯಾಪಕರ ನೇಮಕ, ವಿದ್ಯಾರ್ಥಿನಿಲಯಗಳ ಆರಂಭ, ಗ್ರಂಥಾಲಯದ ಏರ್ಪಾಟು-ಇವೆಲ್ಲ ಕಾರ್ಯಗಳೂ ಮೂರನೆಯ ಯೋಜನೆಯಲ್ಲಿ ಮುಂದುವರಿದುವು. ಸಮಾಜವಿಜ್ಞಾನ, ಸಂಖ್ಯಾ ಶಾಸ್ತ್ರ, ಭೂಗೋಳಶಾಸ್ತ್ರ ಮುಂತಾದ ವಿಭಾಗಗಳು ೧೯೬೩ರಲ್ಲಿ ಆರಂಭವಾದುವು. ಅನಂತರ ಜೈನಶಾಸ್ತ್ರ ಮತ್ತು ಪ್ರಾಕೃತ, ಪ್ರತಿಕೋದ್ಯಮ, ದಕ್ಷಿಣ ಭಾರತೀಯ ಅಧ್ಯಯನ ಮುಂತಾದ ವಿಭಾಗಗಳು ಅಸ್ತಿತ್ವಕ್ಕೆ ಬಂದವು. ಈಗ (೧೯೭೭) ಸುಮಾರು ೩೦ ಕ್ಕೂ ಹೆಚ್ಚಿನ ವಿಷಯ ವಿಭಾಗಗಳಲ್ಲಿ ಸ್ನಾತಕೊತ್ತರ ಶಿಕ್ಷಣ ದೊರೆಯುವಂತೆ ವ್ಯವಸ್ಥೆ ಮಾಡಲಾಗಿದೆ.

**ವಜ್ರ ಮಹೋತ್ಸವ:** ಅರವತ್ತು ವರ್ಷಗಳ ಫಲಪ್ರದ ಸೇವೆಯನ್ನು ಸಲ್ಲಿಸಿ ಭಾರತದ ಖ್ಯಾತ ವಿದ್ಯಾ ಸಂಸ್ಥೆಯೆಂದು ಹೆಸರುಗೊಂಡಿರುವ ಮೈಸೂರು ವಿಶ್ವ ವಿದ್ಯಾನಿಲಯ ೧೯೭೬ರಲ್ಲಿ ತನ್ನ ವಜ್ರ ಮಹೋತ್ಸವವನ್ನು ಆಚರಿಸಿಕೊಂಡಿತು. ಕೇವಲ ಎರಡು ಕಾಲೇಜುಗಳಿಂದ ಆರಂಭವಾದ ವಿಶ್ವವಿದ್ಯಾನಿಲಯ ಈಗ ೧೨೭ ಕಾಲೇಜುಗಳನ್ನು ಹೊಂದಿದ್ದು. ೪,೨೫೦ಕ್ಕೂ ಹೆಚ್ಚು ಮಂದಿ ಅಧ್ಯಾಪಕರು ಈ ವಿಶ್ವವಿದ್ಯಾನಿಲಯದಲ್ಲಿದ್ದಾರೆ. ಇಲ್ಲಿಯವರೆಗೆ ಈ ವಿಶ್ವವಿದ್ಯಾನಿಲಯದಿಂದ ಹೊರಬಂದ ಎರಡು ಲಕ್ಷಕ್ಕೂ ಹೆಚ್ಚುಮಂದಿ ಸ್ನಾತಕಪೂರ್ವ ಪದವೀಧರರೂ ಹದಿನಾರು ಸಾವಿರಕ್ಕೂ ಹೆಚ್ಚು ಮಂದಿ ಸ್ನಾತಕೋತ್ತರ ಪದವೀಧರರೂ ರಾಷ್ಟ್ರದ ಹಾಗೂ ಪ್ರಪಂಚದ ವಿವಿಧ ಭಾಗಗಳಲ್ಲಿ ಸೇವೆಸಲ್ಲಿಸಿ ತಮ್ಮ ವಿದ್ಯಾಪೀಠದ ಕೀರ್ತಿ ಪ್ರತಿಷ್ಠೆಗಳನ್ನು ಎತ್ತಿಹಿಡಿದಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯವು ೨೦೦೦ ದಲ್ಲಿ ಎನ್.ಎ.ಎ.ಸಿ., (The National Assessment and Accredition Council) ನಿಂದ ಐದು ಸ್ಟಾರ್ 'ಎ' ಗ್ರೇಡ್ ಪಡೆದ ಮೊದಲ ವಿಶ್ವವಿದ್ಯಾನಿಲಯವಾಗಿದೆ. ಭಾರತ ಸರ್ಕಾರದಿಂದ 'Institution of Excellence' ಎಂದು ಗುರುತಿಸಲ್ಪಟ್ಟಿದ್ದು ೧೦೦ ಕೋಟಿ ರೂ ಅನುದಾನವನ್ನು ವಿಶ್ವವಿದ್ಯಾನಿಲಯದ ಅಭಿವೃದ್ಧಿಗಾಗಿ ಪಡೆದಿದೆ. ಸುಮಾರು ೭೫ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಸ್ನಾತಕೋತ್ತರ ಪದವಿ, ೪೧ ಪಿಜಿ., ಡಿಪ್ಲೋಮ ಮತ್ತು ಇತರೆ ಪದವಿಗಳಲ್ಲಿ ಅಭ್ಯಸಿಸುವ ಅವಕಾಶವನ್ನು ಕಲ್ಪಿಸಿದೆ. ಉತ್ತಮ ಗ್ರಂಥಾಲಯವಿದ್ದು ಸುಮಾರು ೬,೫೦,೦೦ ಗ್ರಂಥಗಳನ್ನು ಹೊಂದಿದ್ದು ೫,೦೦೦ ಇ-ಜರ್ನಲ್‌ಗಳನ್ನು ಹೊಂದಿದೆ. ಎಲ್ಲಾ ಸ್ನಾತಕೋತ್ತರ ವಿಭಾಗಗಳಲ್ಲೂ ಎಂ.ಫಿಲ್., ಮತ್ತು ಪಿಎಚ್.ಡಿ., ಪದವಿಗಳನ್ನು ನೀಡುವ ಕಾರ್ಯಕ್ರಮವಿದೆ. ಸುಮಾರು ೨೦

ದೇಶದ ಇತರೆಡೆ ಇರುವ ಮತ್ತು ಹೊರ ದೇಶದ ವಿಶ್ವವಿದ್ಯಾನಿಲಯ ಮತ್ತು ಸಂಸ್ಥೆಗಳೊಂದಿಗೆ ಸಂಶೋಧನೆ, ವ್ಯಾಸಂಗ ಮತ್ತು ಬೋಧಕ ಸಿಬ್ಬಂದಿಗಳ ವಿನಿಮಯಕ್ಕಾಗಿ ಒಪ್ಪಂದ (MOU) ಮಾಡಿಕೊಂಡಿದೆ.

### ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ (೧೯೪೯)

ಕರ್ನಾಟಕ ವಿಶ್ವವಿದ್ಯಾಲಯ ಉತ್ತರ ಕರ್ನಾಟಕದ ಹೆಮ್ಮೆಯ ಸಂಸ್ಥೆಯಾಗಿದೆ. ೧೯೪೯ರಲ್ಲಿ ಮುಂಬೈನಲ್ಲಿ ಆರಂಭವಾದ ಕರ್ನಾಟಕ ವಿಶ್ವವಿದ್ಯಾಲಯವು ಅಕ್ಟೋಬರ್ ೧೯೫೦ರ ವೇಳೆಗೆ ಧಾರವಾಡಕ್ಕೆ ಸ್ಥಳಾಂತರಗೊಂಡಿತು. ೬೦ ವರ್ಷಗಳನ್ನು ಸಾರ್ಥಕವಾಗಿ ಪೂರೈಸಿರುವ ಈ ವಿಶ್ವವಿದ್ಯಾಲಯ ಶಿಸ್ತು, ಬೋಧನಾ ಸಾಮರ್ಥ್ಯ, ಸಂಶೋಧನೆ, ಸಾಮಾಜಿಕ ಚಟುವಟಿಕೆಗಳು, ಕ್ರೀಡೆ ಇತ್ಯಾದಿಗಳಿಗೆ ಹೆಸರಾಗಿದೆ. ಅನೇಕ ಹೆಸರಾಂತ ಸಂಶೋಧಕರು ಹಾಗೂ ವಿಜ್ಞಾನಿಗಳು ಈ ವಿಶ್ವವಿದ್ಯಾಲಯದಿಂದ ಹೊರಬಂದು ದೇಶ ವಿದೇಶಗಳಲ್ಲಿ ಖ್ಯಾತಿಯನ್ನು ಪಡೆದಿದ್ದಾರೆ. ಈ ಸಂಸ್ಥೆ ವಿದ್ಯಾರ್ಥಿಗಳ ಶಿಸ್ತು, ಪ್ರಾಧ್ಯಾಪಕರ ಕ್ಷಮತೆ ಹಾಗೂ ಸಿಬ್ಬಂದಿವರ್ಗದ ಪ್ರಾಮಾಣಿಕ ಪ್ರಯತ್ನ ಇತ್ಯಾದಿಗಳನ್ನು ಒಳಗೊಂಡು ಸಾಧನೆಯ ಮಾರ್ಗದಲ್ಲಿ ಮುನ್ನಡೆದಿದೆ. ಈ ವಿಶ್ವವಿದ್ಯಾಲಯವು ೭೫೨ ಎಕರೆಗಳಿಗಿಂತ ಹೆಚ್ಚಿನ ವಿಸ್ತಾರವನ್ನು ಹೊಂದಿದೆ. 'ಛೋಟಾ ಮಹಾಬಲೇಶ್ವರ' ವೆಂದು ಕರೆಯಲ್ಪಡುವ ಗುಡ್ಡದ ಮೇಲಿರುವ ಈ ಪ್ರದೇಶವಷ್ಟೇ ಅಲ್ಲದೇ ಇತರ ಆರು ಗುಡ್ಡಗಳ ನಡುವೆ ಸುಂದರವಾಗಿ ವಿಸ್ತರಿಸಿರುವ ಧಾರವಾಡವನ್ನು ರೋಮ್ ನಗರಕ್ಕೆ ಹೋಲಿಸಲಾಗುತ್ತದೆ. ಅರವತ್ತು ವರ್ಷಗಳ ಬೆಳವಣಿಗೆಯ ಇತಿಹಾಸದಲ್ಲಿ ನಲವತ್ತೊಂಬತ್ತು ವಿವಿಧ ಅಧ್ಯಯನ ವಿಭಾಗಗಳನ್ನು ಆರಂಭಿಸಿ ವಿಶ್ವವಿದ್ಯಾಲಯದ ಆವರಣ ಚಿಕ್ಕದೆನಿಸಿದೆ. ವಿಶ್ವವಿದ್ಯಾಲಯವು ಏಳು ಜಿಲ್ಲೆಗಳ ಹರವನ್ನು ಹೊಂದಿದ್ದು ಬೆಳಗಾವಿ, ಬಿಜಾಪುರ, ಕಾರವಾರ, ಗದಗ ಮತ್ತು ಹಾವೇರಿ ಜಿಲ್ಲೆಗಳಲ್ಲಿ ತನ್ನ ಸ್ನಾತಕೋತ್ತರ ಕೇಂದ್ರಗಳನ್ನು ಸ್ಥಾಪಿಸಿದೆ. ದಾಂಡೇಲಿಯ ಬಂಗೂರ ನಗರದಲ್ಲಿ ಪಲ್ಪ್ ಮತ್ತು ಪೇಪರ್ ಸೈನ್ಸ್‌ನಲ್ಲಿ ವಿಶೇಷ ತರಬೇತಿಗೆ ಅವಕಾಶ ಕಲ್ಪಿಸಲಾಗಿದೆ. ಬೆಳಗಾವಿಯ ಭೂತರಾಮನ ಹಟ್ಟಿ ಎಂಬಲ್ಲಿ ಸ್ಥಾಪಿಸಲಾಗಿದ್ದ ಸ್ನಾತಕೋತ್ತರ ಕೇಂದ್ರವು ಈಗ ಸ್ವತಂತ್ರ ವಿಶ್ವವಿದ್ಯಾಲಯವಾಗಿ ಉನ್ನತೀಕರಣಗೊಂಡಿದೆ. ಹೊಸ ವಿಶ್ವ ವಿದ್ಯಾಲಯವು ಬೆಳಗಾವಿ, ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳ ವ್ಯಾಪ್ತಿಯನ್ನು ಹೊಂದಿದೆ.

ಕರ್ನಾಟಕ ವಿಶ್ವವಿದ್ಯಾಲಯ ಮುಂಬಯಿ ನಗರದ ಎರಡು ಕೋಣೆಗಳಲ್ಲಿ ಜನ್ಮ ತಳೆದು, ಧಾರವಾಡ ಗಂಡು ಮಕ್ಕಳ ಟ್ರೇನಿಂಗ್ ಕಾಲೇಜಿನಲ್ಲಿ ಬಾಲ್ಯಾವಸ್ಥೆಯನ್ನು ಕಳೆದು, ಛೋಟಾ ಮಹಾಬಲೇಶ್ವರದ ಹೊಸ ಆವರಣದಲ್ಲಿ ಸ್ಥಿರವಾಗಿ ನೆಲೆಸಿತು. ಅಲ್ಲಿ ಬೆಳೆಯುತ್ತ ತಾರುಣ್ಯಾವಸ್ಥೆಯನ್ನು ದಾಟುತ್ತಾ, ಪ್ರಬುದ್ಧಾವಸ್ಥೆಯನ್ನು ಪಡೆಯಿತು. ತನ್ನ ಮೊದಲ ೧೮ ವರ್ಷಗಳಲ್ಲಿ ಶಿಕ್ಷಣ ಪ್ರೇಮಿಗಳಿಗೆ ಅಚ್ಚರಿಯಾಗುವ ರೀತಿಯಲ್ಲಿ ಅದು ಬೆಳೆಯಿತು. ಹೆಮ್ಮರವಾಗಿ ಕಂಗೊಳಿಸತೊಡಗಿತು. ಪ್ರಾರಂಭದಲ್ಲಿ ೧೧ ಸಂಲಗ್ನ ಮಹಾವಿದ್ಯಾಲಯಗಳನ್ನು ಹೊಂದಿದ್ದರೆ, ೧೯೬೮ರಲ್ಲಿ ೧೪೪ ಸಂಲಗ್ನ ಮಹಾವಿದ್ಯಾಲಯಗಳನ್ನು ಹೊಂದಿತ್ತು. ಅಲ್ಲದೆ ನಾಲ್ಕು ಅಧೀನ ಮಹಾವಿದ್ಯಾಲಯಗಳ ಆಡಳಿತದ ಹೊಣೆಯನ್ನು ನೇರವಾಗಿ ನಿಭಾಯಿಸುತ್ತಿತ್ತು. ಸ್ನಾತಕೋತ್ತರ ವಿಭಾಗಗಳ ಸಂಖ್ಯೆ ನಾಲ್ಕರಿಂದ ೧೮ಕ್ಕೆ ಏರಿತು.

ರಾಷ್ಟ್ರ ಮಟ್ಟದ ಸಂಸ್ಥೆಗಳ ಪ್ರವೇಶ ಬಯಸುವ ಹಾಗೂ ನಾಗರಿಕ ಸೇವಾ ಪರೀಕ್ಷೆಗಳಲ್ಲಿ ಸ್ಪರ್ಧಿಸಬಯಸುವ ಪ್ರತಿಭಾವಂತ ವಿದ್ಯಾರ್ಥಿಗಳಿಗಾಗಿ ವಿಶ್ವವಿದ್ಯಾಲಯವು ವಿಶೇಷ ತರಬೇತಿಯನ್ನು ನೀಡುತ್ತದೆ. ಅಲ್ಲದೆ ನಾಗರಿಕ ಸೇವಾ ಪರೀಕ್ಷೆಗೆ ಸ್ಪರ್ಧಿಸಬಯಸುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ/ಅಲ್ಪ ಸಂಖ್ಯಾತ ವಿದ್ಯಾರ್ಥಿಗಳಿಗೆ ಪ್ರತ್ಯೇಕ ತರಬೇತಿ ಯೋಜನೆಗಳನ್ನು ವಿಶ್ವವಿದ್ಯಾಲಯ ನಡೆಸುತ್ತಿದೆ. ವಿಶ್ವವಿದ್ಯಾಲಯವು ತನ್ನದೇ ಆದ ಸ್ವತಂತ್ರ ಮುದ್ರಣಾಲಯ ಹಾಗೂ ಪ್ರಕಟಣಾ ವಿಭಾಗಗಳನ್ನು ಹೊಂದಿದೆ. ವಿಶ್ವವಿದ್ಯಾಲಯವು ಕಲೆ, ವಿಜ್ಞಾನ ಹಾಗೂ ಮಾನವಿಕಶಾಸ್ತ್ರಗಳಿಗೆ ಸಂಬಂಧಿಸಿದ ನಿಯತಕಾಲಿಕೆಗಳನ್ನು ಪ್ರಕಟಿಸುತ್ತದೆ. ಕನ್ನಡದಲ್ಲಿ 'ಕರ್ನಾಟಕ ಭಾರತಿ' ಮತ್ತು 'ವಿದ್ಯಾರ್ಥಿ ಭಾರತಿ' ಎಂಬ ನಿಯತಕಾಲಿಕೆಗಳನ್ನು ಪ್ರಕಟಿಸುತ್ತದೆ. ಇದರಿಂದಾಗಿ ಶಿಕ್ಷಕ ಹಾಗೂ ವಿದ್ಯಾರ್ಥಿ ಸಮುದಾಯದ ಸಂಶೋಧನೆಗೆ ಹೆಚ್ಚಿನ ಅನುಕೂಲವಾಗಿದೆ. ವಿಶ್ವವಿದ್ಯಾಲಯದ ಅಧ್ಯಾಪಕ ವರ್ಗ ಮತ್ತು ಸಂಶೋಧನಾ ವಿದ್ಯಾರ್ಥಿಗಳ ಸಂಶೋಧನಾ ಲೇಖನಗಳು ರಾಷ್ಟ್ರೀಯ, ಅಂತಾರಾಷ್ಟ್ರೀಯ ನಿಯತಕಾಲಿಕೆಗಳಲ್ಲಿ ಪ್ರಕಟಿತವಾಗುತ್ತಿವೆ.

### ಬೆಂಗಳೂರು ವಿಶ್ವವಿದ್ಯಾಲಯ (೧೯೬೪)

ಬೆಂಗಳೂರು ವಿಶ್ವವಿದ್ಯಾಲಯವು ಬೆಂಗಳೂರು–ಮೈಸೂರು ರಸ್ತೆಯಲ್ಲಿ (ಬೆಂಗಳೂರಿಗೆ ಎಂಟು ಮೈಲಿ ದೂರದಲ್ಲಿ) ೧,೧೦೦ ಎಕರೆ ಪ್ರದೇಶದಲ್ಲಿ ರೂಪುಗೊಂಡಿದೆ. 'ಜ್ಞಾನಭಾರತಿ' ಹೆಸರಿನ ವಿಶ್ವವಿದ್ಯಾಲಯದ ಈ ಕ್ಯಾಂಪಸ್ ೧೯೭೨ ರಲ್ಲಿ ಸೆಂಟ್ರಲ್ ಕಾಲೇಜ್ ಆವರಣದಿಂದ ಇಲ್ಲಿಗೆ ಸ್ಥಳಾಂತರಗೊಂಡಿತು. ೧೮೫೮ ರಲ್ಲಿ ಸರ್ಕಾರಿ ಪ್ರೌಢ ಶಾಲೆಯಾಗಿ ಪ್ರಾರಂಭವಾಗಿದ್ದ ಇದನ್ನು ೧೮೬೪ ರಲ್ಲಿ ಲೂಯಿಬೆನ್ಥಾಮ್ ಎಂಬುವವರು ಸೆಂಟ್ರಲ್ ಕಾಲೇಜನ್ನಾಗಿ ಉನ್ನತೀಕರಿಸಿದರು. ೧೮೭೫ ರಲ್ಲಿ ಪ್ರಥಮ ದರ್ಜೆ ಕಾಲೇಜಾಗಿ ಮೇಲ್ದರ್ಜೆಗೇರಿದ ಸೆಂಟ್ರಲ್ ಕಾಲೇಜಿನಲ್ಲಿ ಆಗ ಗಣಿತ ಮತ್ತು ವಿಜ್ಞಾನ ಪ್ರಮುಖ ವಿಷಯಗಳಾಗಿದ್ದವು. ೧೯೬೪ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಬೇರ್ಪಟ್ಟು ಬೆಂಗಳೂರು ವಿಶ್ವವಿದ್ಯಾನಿಲಯವಾಗಿ ರೂಪುಗೊಂಡಿತು. ೧೯೬೫ರಲ್ಲಿ ಆನರ್ಸ್ ಕೋರ್ಸುಗಳು ಪ್ರಾರಂಭವಾದವು. ಇದು ಕರ್ನಾಟಕದಲ್ಲಿನ ಮೂರನೇ ವಿಶ್ವವಿದ್ಯಾನಿಲಯವಾಯಿತು. ಇದರ ವ್ಯಾಪ್ತಿಗೆ ೩೨ ಕಾಲೇಜುಗಳು, ೧೪ ಸ್ನಾತಕೋತ್ತರ ವಿಭಾಗಗಳು ಅಫಿಲಿಯೇಟ್ ಆಗಿದ್ದವು. ಮೊದಲಿಗೆ ಬೆಂಗಳೂರು ನಗರಕ್ಕೆ ಮಾತ್ರ ಸೀಮಿತಗೊಂಡಿದ್ದು ನಂತರ ಬೆಂಗಳೂರು ಜಿಲ್ಲೆ ಸೇರಲ್ಪಟ್ಟಿತು. ೧೯೭೫ರಲ್ಲಿ ತುಮಕೂರು ಮತ್ತು ಕೋಲಾರ ಜಿಲ್ಲೆಗಳೂ ಸೇರ್ಪಟ್ಟವು. ೧೯೮೦ರಲ್ಲಿ ೯೫ ಕಾಲೇಜುಗಳ ಪೈಕಿ ೯೧ ಕಾಲೇಜು ಅಫಿಲಿಯೇಟ್ ಆಗಿದ್ದು, ನಾಲ್ಕು ಕಾಲೇಜುಗಳನ್ನು ವಿಶ್ವವಿದ್ಯಾನಿಲಯದಿಂದಲೇ ನಡೆಸಲಾಗುತ್ತಿತ್ತು. ೨೯ ಸ್ನಾತಕೋತ್ತರ ವಿಭಾಗಗಳಿದ್ದವು. ೧೯೬೪ ರಲ್ಲಿದ್ದ ವಿದ್ಯಾರ್ಥಿಗಳ ಸಂಖ್ಯೆ ೧೬,೦೦೦ದಿಂದ ೬೦,೦೦೦ ಕ್ಕೇರಿತು. ಹಾಲಿ ೬೫೬ ಕಾಲೇಜುಗಳಿಂದ ಒಟ್ಟು ೩.೫೦ ಲಕ್ಷ ವಿದ್ಯಾರ್ಥಿಗಳಿದ್ದು, ರಾಷ್ಟ್ರದಲ್ಲಿಯೇ ದೊಡ್ಡ ವಿಶ್ವವಿದ್ಯಾಲಯ ಎಂಬ ಹೆಸರು ಪಡೆದಿದೆ.

ಭವ್ಯವಾದ ವಿ.ವಿ ಕಟ್ಟಡ, ಇತರೆ ವಿಭಾಗಗಳು, ವಿಶಾಲವಾದ ಕ್ಯಾಂಪಸ್‌ನಲ್ಲಿ ನೆಲೆನಿಂತಿವೆ. ಶ್ರೀಮತಿ ಸಾವಿತ್ರಿ ಕೆ.ವೆಂಕಟಗಿರಿಗೌಡ ಇವರು ೫೦ಲಕ್ಷ ವೆಚ್ಚದಲ್ಲಿ ದಿ|| ಪ್ರೊ. ಕೆ. ವೆಂಕಟಗಿರಿಗೌಡ ಇವರ ನೆನಪಿನಲ್ಲಿ ಆಡಿಟೋರಿಯಂ ನಿರ್ಮಿಸಿಕೊಟ್ಟಿರುತ್ತಾರೆ. ಕೆಂಪೇಗೌಡ ಅಧ್ಯಯನ ಪೀಠ, ಡಾ.ಹೆಚ್.ನರಸಿಂಹಯ್ಯ ಆಡಿಟೋರಿಯಂ ಮುಂತಾದವುಗಳು ಇವೆ.೬೫೬ ಕಾಲೇಜುಗಳಂದ ಒಟ್ಟು ೩.೫೦ ಲಕ್ಷ ವಿದ್ಯಾರ್ಥಿಗಳಿದ್ದು, ಇತ್ತೀಚಿನ ವರ್ಷಗಳಲ್ಲಿ ರಾಷ್ಟ್ರದಲ್ಲಿಯೇ ಅತಿ ದೊಡ್ಡ ವಿಶ್ವವಿದ್ಯಾಲಯ ಎಂಬ ಹೆಸರು ಪಡೆದಿದೆ. ಇಡೀ ದೇಶದಲ್ಲಿಯೇ ಅತಿ ಹೆಚ್ಚು ಸಂಖ್ಯೆಯ ಕಾಲೇಜುಗಳ ವ್ಯಾಪ್ತಿಯನ್ನು ಹೊಂದಿದ ವಿಶ್ವ ವಿದ್ಯಾಲಯ ಎಂದು ಹೆಸರಾಗಿದ್ದು ಆಡಳಿತಾತ್ಮಕವಾದ ಸಮಸ್ಯೆಗಳನ್ನು ಎದುರಿಸುತ್ತಿತ್ತು. ಇದಕ್ಕೆ ಪರಿಹಾರವಾಗಿ ಸರ್ಕಾರವು ವಿಶ್ವ ವಿದ್ಯಾಲಯವನ್ನು ವಿಭಜಿಸಿ ಬೆಂಗಳೂರು ಉತ್ತರ, ದಕ್ಷಿಣ ಮತ್ತು ಕೇಂದ್ರ ಎಂಬ ಹೆಸರಿನಲ್ಲಿ ಪ್ರತ್ಯೇಕ ವಿಶ್ವ ವಿದ್ಯಾಲಯಗಳನ್ನು ಸ್ಥಾಪಿಸಲು ನಿರ್ಣಯ ಮಾಡಿ ಆ ದಿಕ್ಕಿನಲ್ಲಿ ಕಾರ್ಯ ಪ್ರವೃತ್ತವಾಗಿದೆ.

### ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು (೧೯೬೪)

ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು ಮೂರು ಕಾಲೇಜುಗಳು ಮತ್ತು ೩೩ ಸಂಶೋಧನಾ ಕೇಂದ್ರಗಳೊಂದಿಗೆ ೧೯೬೫ರಲ್ಲಿ ಸ್ಥಾಪಿತವಾಯಿತು. ೧೯೮೬ರಲ್ಲಿ ಧಾರವಾಡ ಕೃಷಿ ವಿಶ್ವವಿದ್ಯಾಲಯವು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಿಂದ ಬೇರ್ಪಟ್ಟ ನಂತರ ೧೭ ಜಿಲ್ಲೆಗಳು ಈ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಟ್ಟಿತು.ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು ಗಾಂಧಿ ಕೃಷಿ ವಿಜ್ಞಾನ ಕೇಂದ(ಜಿ.ಕೆ.ವಿ.ಕೆ), ಬೆಂಗಳೂರು, ಚಿಂತಾಮಣಿ ಹಾಗೂ ಮಂಡ್ಯಗಳಲ್ಲಿ ಬೋಧನಾ ಆವರಣಗಳನ್ನು ಹೊಂದಿದೆ. ಆರು ವಿಷಯಗಳಲ್ಲಿ ಸ್ನಾತಕ ಪದವಿಗಳನ್ನು, ೨೧ ವಿಷಯಗಳಲ್ಲಿ ಸ್ನಾತಕೋತ್ತರ ಪದವಿಯನ್ನು, ೧೪ ವಿಷಯಗಳಲ್ಲಿ ಡಾಕ್ಟರಲ್ ಹಾಗೂ ಆಯ್ದ ವಿಷಯಗಳಲ್ಲಿ ಪೋಸ್ಟ್ ಡಾಕ್ಟರಲ್ ಶಿಕ್ಷಣ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ವಿಶ್ವವಿದ್ಯಾಲಯವು ಎರಡು ವರ್ಷಾವಧಿಯ ಕೃಷಿಯಲ್ಲಿ ಡಿಪ್ಲೋಮ ಶಿಕ್ಷಣವನ್ನು ನಡೆಸಲಾಗುತ್ತಿದ್ದು ದೂರಶಿಕ್ಷಣ ಪದ್ಧತಿಯಲ್ಲಿ ಒಂದು ವರ್ಷಾವಧಿಯ ಕೃಷಿಯಲ್ಲಿ ಡಿಪ್ಲೋಮ ಮತ್ತು ಕೃಷಿ ಸ್ನಾತಕೋತ್ತರ ಡಿಪ್ಲೋಮ ಕೋರ್ಸ್‌ಗಳನ್ನು ಸಹ ನಡೆಸುತ್ತದೆ. ರಾಜ್ಯದ ಎಲ್ಲಾ ಕೃಷಿ ವಿಶ್ವವಿದ್ಯಾನಿಲಯಗಳ ವಿದ್ಯಾರ್ಥಿಗಳು ವಿವಿಧ ಸ್ನಾತಕ ಶೈಕ್ಷಣಿಕ ಕಾರ್ಯಕ್ರಮಗಳಿಗೆ ವಿದ್ಯಾರ್ಥಿಗಳ ಪ್ರವೇಶಾತಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ವತಿಯಿಂದ ಸಾಮಾನ್ಯ ಪರೀಕ್ಷೆಯ ಮೂಲಕವೇ ನೀಡಲಾಗುತ್ತದೆ. ಅದೇ ರೀತಿ ಸ್ನಾತಕೋತ್ತರ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಪ್ರವೇಶ ಪರೀಕ್ಷೆಯ ಮೂಲಕ ಪ್ರವೇಶ ನೀಡಲಾಗುತ್ತದೆ. ವಿಶ್ವವಿದ್ಯಾನಿಲಯವು ರಾಜ್ಯದ ಕೃಷಿ ಸಂಶೋಧನಾ ಅವಶ್ಯಕತೆಗಳನ್ನು ಹತ್ತು ದಕ್ಷಿಣ ಜಿಲ್ಲೆಗಳ ನಾಲ್ಕು ಕೃಷಿ ಹವಾಮಾನ ವಲಯಗಳಲ್ಲಿನ ಹದಿಮೂರು ವಿವಿಧ ಕೃಷಿ ಸಂಶೋಧನಾ ಕೇಂದ್ರಗಳ ಮೂಲಕ ಪೂರೈಸುತ್ತಿದೆ.

ವಿಶ್ವವಿದ್ಯಾನಿಲಯದ ವಿಸ್ತರಣಾ ನಿರ್ದೇಶನಾಲಯವು ರಾಜ್ಯ ಸರ್ಕಾರದ ವಿವಿಧ ಅಭಿವೃದ್ಧಿ ಇಲಾಖೆಗಳ ಪ್ರಯತ್ನಗಳಿಗೆ ಪೂರಕವಾಗಿ ಹಾಗೂ ಬೆಂಬಲವಾಗಿ ವಿಸ್ತರಣಾ ಚಟುವಟಿಕೆಗಳನ್ನು ಆಯೋಜಿಸಿ ತನ್ನ ವಿವಿಧ ಘಟಕಗಳಾದ ಏಳು ಕೃಷಿ ವಿಜ್ಞಾನ ಕೇಂದ್ರಗಳು, ಎರಡು ಕೃಷಿ ವಿಸ್ತರಣಾ ಘಟಕಗಳು, ರೈತ ತರಬೇತಿ ಸಂಸ್ಥೆ, ಸಿಬ್ಬಂದಿ ತರಬೇತಿ ಘಟಕ, ದೂರ ಶಿಕ್ಷಣ ಘಟಕ, ಕೃಷಿ ಮಾಹಿತಿ ಘಟಕ, ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ ಮತ್ತು ರಾಷ್ಟ್ರೀಯ ಕೃಷಿ ವಿಸ್ತರಣಾ ಯೋಜನೆ ಮೂಲಕ ಕಾರ್ಯಗೊಳಸುತ್ತಿದೆ. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಕೃಷಿ ಟೆಕ್ ಪೋರ್ಟಲ್ ಇ–ವಿಸ್ತರಣಾ ಸೇವೆಯನ್ನು ಪ್ರಾರಂಭಿಸಿದ್ದು ಅದರಲ್ಲಿ ಕೃಷಿ, ತೋಟಗಾರಿಕೆ, ಪಶುಸಂಗೋಪನೆ, ಮೀನುಗಾರಿಕೆ, ರೇಷ್ಮೆ,ಮಾರುಕಟ್ಟೆ ಮಾಹಿತಿ, ಹವಾಮಾನ ಮಾಹಿತಿ, ಯಶೋಗಾಥೆಗಳು ಮುಂತಾದ ಮಾಹಿತಿಯನ್ನು ರೈತರಿಗೆ ಹಾಗೂ ವಿಸ್ತರಣಾ ಸಿಬ್ಬಂದಿಗೆ ಅವಶ್ಯಕತೆ ಆಧಾರದ ಮೇಲೆ ದೊರೆಯುತ್ತದೆ. ರಾಜ್ಯದ ಇತರ ಕೃಷಿ ವಿಶ್ವವಿದ್ಯಾನಿಲಯಗಳು ತಮ್ಮಲ್ಲಿ ಬಿಡುಗಡೆಯಾದ ನೂತನ ತಾಂತ್ರಿಕತೆಗಳನ್ನು ಉನ್ನತೀಕರಿಸಲು ಅವಕಾಶವನ್ನು ಕಲ್ಪಿಸಲಾಗಿದೆ. ಏಪ್ರಿಲ್ ೧, ೨೦೧೩ ರಲ್ಲಿ ಶಿವಮೊಗ್ಗದಲ್ಲಿ ಕರ್ನಾಟಕ ಕೃಷಿ ಮತ್ತು ತೋಟಗಾರಿಕಾ ವಿಶ್ವ ವಿದ್ಯಾಲಯವು ಸ್ಥಾಪನೆಯಾದ ನಂತರ ಬೆಂಗಳೂರಿನ ಕೃಷಿ ವಿಶ್ವ ವಿದ್ಯಾಲಯದ ಆಡಳಿತ ವ್ಯಾಪ್ತಿಯಿಂದ ಏಳು ಜಿಲ್ಲೆಗಳನ್ನು ಹೊರ ತೆಗೆದು ಈ ವಿಶ್ವ ವಿದ್ಯಾಲಯದ ಆಡಳಿತ ವ್ಯಾಪ್ತಿಗೆ ವಹಿಸಲಾಗಿದೆ.

### ಗುಲಬರ್ಗಾ ವಿಶ್ವವಿದ್ಯಾಲಯ (೧೯೮೦)

ಗುಲಬರ್ಗಾ ವಿಶ್ವವಿದ್ಯಾಲಯವು ಕರ್ನಾಟಕ ವಿಶ್ವವಿದ್ಯಾಲಯದ ಒಂದು ಸ್ನಾತಕೋತ್ತರ ಕೇಂದ್ರವಾಗಿ ೧೯೭೦ರಲ್ಲಿ ಪ್ರಾರಂಭವಾಗಿ ಒಂದು ದಶಕದ ತರುವಾಯ ೧೯೮೦ರಲ್ಲಿ ಸಂಪೂರ್ಣ ವಿಶ್ವವಿದ್ಯಾಲಯವಾಗಿ ರೂಪುಗೊಂಡು ಬೀದರ್, ಕಲಬುರ್ಗಿ, ಕೊಪ್ಪಳ ಸೇರಿ ಅವಿಭಜಿತ ರಾಯಚೂರು, ಬಳ್ಳಾರಿ ಜಿಲ್ಲೆಗಳನ್ನು ಒಳಗೊಂಡಂತೆ ಶೈಕ್ಷಣಿಕವಾಗಿ ಹಿಂದುಳಿದ ಹೈದರಾಬಾದ್ ಕರ್ನಾಟಕ ಪ್ರಾಂತ್ಯದ ವಿದ್ಯಾರ್ಥಿಗಳಿಗೆ ಉನ್ನತಾಭ್ಯಾಸಕ್ಕೆ ಅನುವು ಮಾಡಿಕೊಟ್ಟಿತ್ತು. . ಸುಮಾರು ೮೫೬ ಎಕರೆ ಪ್ರದೇಶದಲ್ಲಿ ತನ್ನ ವಿವಿಧ ವಿಭಾಗಗಳನ್ನು ಹೊಂದಿದೆ. ೧೯೯೦ರ ಪೂರ್ವದಲ್ಲಿ ೨೪ ವಿಭಾಗಗಳನ್ನೂ, ಸಂಡೂರಿನ ಬಳಿ ನಂದಿಹಳ್ಳಿಯಲ್ಲಿ ಒಂದು ಸ್ನಾತಕೋತ್ತರ ಕೇಂದ್ರವನ್ನೂ ಒಂದು ಮಹಿಳಾ ಅಧ್ಯಯನ ಕೇಂದ್ರವನ್ನೂ ವಿಶ್ವವಿದ್ಯಾಲಯವು ಹೊಂದಿತ್ತು. ಈ ವಿಶ್ವವಿದ್ಯಾಲಯವು ೩೭ ವಿವಿಧ ಸ್ನಾತಕೋತ್ತರ ವಿಭಾಗಗಳನ್ನೂ, ನಂದಿಹಳ್ಳಿ, ಬಳ್ಳಾರಿ ಮತ್ತು ರಾಯಚೂರುಗಳಲ್ಲಿ ಮೂರು ಸ್ನಾತಕೋತ್ತರ ಕೇಂದ್ರಗಳನ್ನೂ, ೧೦ ವಿಶೇಷ ಕೇಂದ್ರಗಳನ್ನೂ ಎರಡು ಅಧ್ಯಯನ ಸಂಸ್ಥೆಗಳನ್ನೂ, ಒಂಭತ್ತು ವಿಷಯಗಳಲ್ಲಿ ವೃತ್ತಿ ಶಿಕ್ಷಣ ತರಗತಿಗಳನ್ನೂ, ೧೫೦ ಪದವಿ ಕಾಲೇಜುಗಳನ್ನೂ ಮತ್ತು ಒಟ್ಟು ಸುಮಾರು ಒಂದು ಲಕ್ಷ ವಿದ್ಯಾರ್ಥಿಗಳನ್ನೂ ಹೊಂದಿದೆ. ಇವಲ್ಲದೆ, ಪ್ರಸಾರಾಂಗ, ಕಾಲೇಜು ಅಭಿವೃದ್ಧಿ ಮಂಡಳಿ, ವಿದ್ಯಾರ್ಥಿಗಳ ಕಲ್ಯಾಣ ಕೇಂದ್ರ, ಕ್ರೀಡಾ ವಿಭಾಗ ಮತ್ತು ಎನ್.ಎಸ್.ಎಸ್. ಮುಂತಾದ ವಿಭಾಗಗಳು ವಿಶ್ವವಿದ್ಯಾಲಯದ ಚಟುವಟಿಕೆಗಳಿಗೆ ಪೂರಕವಾಗಿವೆ. ಈ ವಿಶ್ವವಿದ್ಯಾಲಯ ನಾಲ್ಕು ಜಿಲ್ಲೆಗಳ ೧೫೦ ಕಾಲೇಜುಗಳಿಗೆ ಸಂಯೋಜನೆ ನೀಡಿದ್ದು, ಯುಜಿಸಿ ವತಿಯಿಂದ ವಿವಿಧ ಕಾಲೇಜುಗಳಲ್ಲಿ ನಾಲ್ಕು ವೃತ್ತಿಪರ ಶಿಕ್ಷಣ ತರಗತಿಗಳನ್ನು ನಡೆಸುತ್ತಿದೆ. ಸ್ನಾತಕೋತ್ತರ ವಿಭಾಗಗಳಲ್ಲಿ ವಿಜ್ಞಾನ, ವಾಣಿಜ್ಯ, ಕಲೆ, ಶಿಕ್ಷಣ, ಕಾನೂನು, ಇವೇ ಮುಂತಾದ ವಿಷಯಗಳಲ್ಲಿ ಉನ್ನತ ಶಿಕ್ಷಣ ನೀಡಲಾಗುತ್ತಿದೆ. ವಿವಿಧ ಸ್ನಾತಕೋತ್ತರ ವಿಭಾಗಗಳಲ್ಲಿ ಒಟ್ಟು ೧೫೦ ಬೋಧಕ ಸಿಬ್ಬಂದಿ

ಇದ್ದು, ಸುಮಾರು ೨೦೦ ಮಂದಿ ಬೋಧಕೇತರ ಸಿಬ್ಬಂದಿ ಇರುತ್ತಾರೆ. ಸ್ನಾತಕೋತ್ತರ ಶಿಕ್ಷಣಕ್ಕಾಗಿ ವರ್ಷಂಪ್ರತಿ ೩,೦೦೦ ರಿಂದ ೩,೫೦೦ ವಿದ್ಯಾರ್ಥಿಗಳು ಇಲ್ಲಿಗೆ ದಾಖಲಾಗುತ್ತಾರೆ. ಪ್ರಸಾರಾಂಗ ಪಠ್ಯ ಪುಸ್ತಕಗಳ ಪ್ರಕಟಣೆಯೇ ಅಲ್ಲದೆ, ಶಿಕ್ಷಣವನ್ನು ಹಳ್ಳಿಯ ಜನರ ಬಾಗಿಲಿಗೊಯ್ಯಲು ಪ್ರಚಾರೋಪನ್ಯಾಸಗಳನ್ನು ಏರ್ಪಡಿಸುವ ಕಾರ್ಯಕ್ರಮವನ್ನೂ ಹಮ್ಮಿಕೊಂಡಿದೆ. ಒಂದು ವಿಜ್ಞಾನ ಪತ್ರಿಕೆ, ಒಂದು ಸಾಮಾಜಿಕ ವಿಜ್ಞಾನ ಪತ್ರಿಕೆ ಹಾಗೂ ಒಂದು ಕಲಾ ಪತ್ರಿಕೆಯನ್ನು ಪ್ರಕಟಿಸುವುದಲ್ಲದೆ, ಈ ಸಂಸ್ಥೆ ಒಂದು ವಾರ್ತಾ ಪತ್ರವನ್ನೂ ಪ್ರಕಟಿಸುತ್ತಿದೆ.

### ಮಂಗಳೂರು ವಿಶ್ವವಿದ್ಯಾಲಯ – ಮಂಗಳ ಗಂಗೋತ್ರಿ (೧೯೮೦)

ಮಂಗಳೂರು ನಗರದಿಂದ ೧೮ ಕಿ.ಮೀ ದೂರದಲ್ಲಿರುವ ಕೊಣಾಜೆ ಎಂಬಲ್ಲಿ ೩೫೦ ಎಕರೆ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ವಿಶ್ವವಿದ್ಯಾಲಯವು ೨೫ ವರ್ಷಗಳ ಹಿಂದೆ ೧೯೬೨ರಲ್ಲಿ ಮೈಸೂರು ವಿಶ್ವವಿದ್ಯಾಲಯದ ಒಂದು ಸ್ನಾತಕೋತ್ತರ ವಿಭಾಗದೊಂದಿಗೆ 'ಮಂಗಳ ಗಂಗೋತ್ರಿ' ಎಂಬ ಸ್ನಾತಕೋತ್ತರ ಕೇಂದ್ರಮೈಸೂರು ವಿಶ್ವವಿದ್ಯಾನಿಲಯದ ವತಿಯಿಂದ ಪ್ರಾರಂಭವಾಯಿತು.. ಕನ್ನಡ ಮತ್ತು ಭೌತಶಾಸ್ತ್ರ ವಿಭಾಗಗಳು ಅದೇ ವರ್ಷ ಪ್ರಾರಂಭವಾದವು. ಅನಂತರ ೧೯೭೦ರಲ್ಲಿ ಜೀವವಿಜ್ಞಾನ ವಿಭಾಗವೂ ೧೯೭೧ರಲ್ಲಿ ವಾಣಿಜ್ಯ ಶಾಸ್ತ್ರ ವಿಭಾಗವೂ ಪ್ರಾರಂಭವಾದವು. ಈಗ ಮಂಗಳ ಗಂಗೋತ್ರಿ ತನ್ನದೇ ಆದ ಕಟ್ಟಡಗಳಲ್ಲಿ ವಿವಿಧ ವಿಭಾಗಗಳನ್ನು ಸ್ಥಾಪಿಸಿಕೊಂಡು ಸ್ವತಂತ್ರ ವಿಶ್ವ ವಿದ್ಯಾಲಯವಾಗಿ ಕೆಲಸ ಮಾಡುತ್ತಿದೆ.

ದಕ್ಷಿಣ ಕನ್ನಡ, ಉಡುಪಿ ಹಾಗೂ ಕೊಡಗು ಜಿಲ್ಲೆಗಳ ಉನ್ನತ ಶಿಕ್ಷಣದ ಅಗತ್ಯತೆಗಳನ್ನು ಪೂರೈಸುವ ಉದ್ದೇಶದಿಂದ ಸ್ಥಾಪಿಸಲಾದ ಮಂಗಳೂರು ವಿಶ್ವವಿದ್ಯಾನಿಲಯವು ೧೯೮೦ರಲ್ಲಿ ಸ್ಥಾಪಿಸಲ್ಪಟ್ಟು ೨೦೦೪-೦೫ನೇ ಸಾಲಿನಲ್ಲಿ ತನ್ನ ಬೆಳ್ಳಿ ಹಬ್ಬವನ್ನು ಆಚರಿಸಿಕೊಂಡಿದೆ. ಇದು ಮೂಲತಃ ೧೯೬೮ರಲ್ಲಿ ಕನ್ನಡ, ವಾಣಿಜ್ಯ, ಭೌತಶಾಸ್ತ್ರ ಹಾಗೂ ಗಣಿತಶಾಸ್ತ್ರ ವಿಷಯಗಳಲ್ಲಿ ಸ್ನಾತಕೋತ್ತರ ಶಿಕ್ಷಣ ನೀಡುವ ಉದ್ದೇಶದಿಂದ ಸ್ಥಾಪನೆಗೊಂಡು, ಪ್ರಸ್ತುತದ ಕ್ಯಾಂಪಸ್ ಪ್ರಾರಂಭಕ್ಕೆ ಮೊದಲು ಸೇಂಟ್ ಅಲೋಷಿಯಸ್ ಹಾಗೂ ಕಸ್ತೂರ ಬಾ ವೈದ್ಯಕೀಯ ಕಾಲೇಜುಗಳಲ್ಲಿ ತರಗತಿಗಳನ್ನು ನಡೆಸುತ್ತಿತ್ತು. ಮಂಗಳ ಗಂಗೋತ್ರಿಯಲ್ಲಿ ೨೪ ಸ್ನಾತಕೋತ್ತರ ಕೇಂದ್ರಗಳಲ್ಲಿ ಅತ್ಯಾಧುನಿಕ ಸೌಕರ್ಯಗಳಿಂದ ಕೂಡಿದ ೩೨ ವಿವಿಧ ಕೋರ್ಸುಗಳು ನಡೆಯುತ್ತಿವೆ. ಜನವರಿ ೨೦೦೮ ರಲ್ಲಿದ್ದಂತೆ ವಿಶ್ವವಿದ್ಯಾಲಯ ಕ್ಯಾಂಪಸ್‌ನಲ್ಲಿ ೨೫ ಸ್ನಾತಕೋತ್ತರ ವಿಭಾಗಗಳು, ಎರಡು ಮಹಾವಿದ್ಯಾಲಯಗಳು, ನಾಲ್ಕು ಕಾನೂನು, ೧೩ ಶೈಕ್ಷಣಿಕ, ೫ ಸ್ವಾಯತ್ತ ಮತ್ತು ೧೧೯ ಸಂಯೋಜನೆಗೊಂಡ ಕಾಲೇಜು/ಸಂಸ್ಥೆಗಳು ಕೆಲಸ ನಿರ್ವಹಿಸುತ್ತಿದ್ದವು. ಉನ್ನತ ಶಿಕ್ಷಣಕ್ಕಾಗಿ ಅವಶ್ಯವಿರುವ ಆಧುನಿಕ ಗ್ರಂಥಾಲಯ, ವಿಶ್ವವಿದ್ಯಾಲಯ ವಿಜ್ಞಾನ ಇನ್‌ಸ್ಟ್ರುಮೆಂಟೇಷನ್ ಸೆಂಟರ್, ಮೈಕ್ರೊಟ್ರಾನ್ ಸೆಂಟರ್, ನೂತನ ಮಾನವಿಕ ವಿಭಾಗ, ಸೈಬರ್ ಕೆಫೆ ಇತ್ಯಾದಿಯಾಗಿ ಸಕಲ ಸೌಲಭ್ಯಗಳನ್ನೂ ಹೊಂದಿದೆ. ಶಿಕ್ಷಣಕ್ಕಾಗಿ ಇರುವ ರಾಷ್ಟ್ರೀಯ ನಿಯೋಗವು ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ (NMEICT) ಮೂಲಕ ಮಂಗಳೂರು ವಿಶ್ವವಿದ್ಯಾಲಯದ ಅಂತರ್ಜಾಲ ಸಂಪರ್ಕವನ್ನು ಒಂದು ಜಿಬಿಪಿಎಸ್‌ಗೆ ಮೇಲ್ದರ್ಜೆಗೇರಿಸಲಾಗಿದೆ.

### ಕೃಷಿ ವಿಶ್ವವಿದ್ಯಾಲಯ, ಧಾರವಾಡ (೧೯೮೬)

ರಾಷ್ಟ್ರದ ಅಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ ಎರಡನೇ ಮಹಾಯುದ್ಧದ ತರುವಾಯ ಕೃಷಿ ಕ್ಷೇತ್ರವನ್ನು ಆಧುನೀಕರಣಗೊಳಿಸುವ ಉದ್ದೇಶ ಫಲಪ್ರದವಾಗಬೇಕಾದರೆ ಕೃಷಿ ಮಹಾವಿದ್ಯಾಲಯಗಳನ್ನು ಸ್ಥಾಪಿಸುವುದು ಅತ್ಯವಶ್ಯಕವೆಂದು ಕೇಂದ್ರ ಸರಕಾರ ನಿರ್ಧರಿಸಿತು. ಈ ರಾಷ್ಟ್ರೀಯ ನೀತಿಗಳಿಗನುಸಾರವಾಗಿ ಅಂದಿನ ಮುಂಬೈ ಸರಕಾರ ಆಗಸ್ಟ್ ೧೯೪೭ರಲ್ಲಿ ಧಾರವಾಡದಲ್ಲಿ ಕೃಷಿ ಮಹಾವಿದ್ಯಾಲಯವನ್ನು ಸ್ಥಾಪಿಸಿತು. ಈ ಮಹಾವಿದ್ಯಾಲಯವು ಮೂರು ಮುಖ್ಯ ಉದ್ದೇಶಗಳನ್ನು ಹೊಂದಿದೆ:- ೧) ಬೋಧನೆ ೨) ಸಂಶೋಧನೆ ಹಾಗೂ ೩) ಪ್ರಾಯೋಗಿಕತೆ. ೧೯೫೦ರಲ್ಲಿ ಹೈನೋದ್ಯಮ, ಪಶು ಚಿಕಿತ್ಸಾಲಯ ವಿಭಾಗಗಳಿಗಾಗಿ ಕಟ್ಟಡಗಳನ್ನು ಪೂರ್ತಿಗೊಳಿಸಲಾಯಿತು. ಅದೇ ವರ್ಷ ಕೆಳಗಿನ ವಿಷಯಗಳಲ್ಲಿ ಸ್ನಾತಕೋತ್ತರ ಮಟ್ಟದಲ್ಲಿ ಬೋಧನೆ ಹಾಗೂ ಸಂಶೋಧನೆಗಳ ವ್ಯವಸ್ಥೆಯನ್ನು ಮಾಡಲಾಯಿತು. Agronomy,Agricultural Chemistry, Plant Pathology, Entomology, Agricultural Economics, Bacteriology, Animal Husbandry. ಈ ಮಹಾವಿದ್ಯಾಲಯ, ಪ್ರಸಿದ್ಧ ಕೃಷಿ ತಜ್ಞರನ್ನು, ಆಡಳಿತಗಾರರನ್ನು, ಪ್ರಗತಿಪರ ರೈತರನ್ನು, ಉದ್ಯಮದಾರರನ್ನು ರೂಪಿಸಿದೆ.

೧೯೮೬ರಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಿಂದ ಧಾರವಾಡ ಕೃಷಿ ವಿಶ್ವವಿದ್ಯಾಲಯವು ಬೇರ್ಪಟ್ಟು ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತಿದೆ. ೨೦೦೮ರಲ್ಲಿ ಧಾರವಾಡ ಕೃಷಿ ವಿಶ್ವವಿದ್ಯಾನಿಲಯದಿಂದ ಬೇರ್ಪಡಿಸಿ ರಾಯಚೂರು ಕೃಷಿ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲಾಗಿದೆ. ಧಾರವಾಡ ಕೃಷಿ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ರಾಜ್ಯ ಪ್ರತಿಶತ ೨೮ ರಷ್ಟು ಭೌಗೋಳಿಕ ಕ್ಷೇತ್ರ, ಪ್ರತಿಶತ ೨೭ ರಷ್ಟು ಉಳುಮೆ ಕ್ಷೇತ್ರ ಮತ್ತು ಪ್ರತಿಶತ ೧೪ ರಷ್ಟು ನೀರಾವರಿ ಕ್ಷೇತ್ರ ಬರುತ್ತದೆ. ವಿಶ್ವವಿದ್ಯಾನಿಲಯವು ಏಳು ವಿವಿಧ ಪದವಿ ಕಾರ್ಯಕ್ರಮಗಳನ್ನು (ಕೃಷಿ, ರೇಷ್ಮೆ, ಅರಣ್ಯ, ಕೃಷಿ ಮಾರುಕಟ್ಟೆ ಮತ್ತು ಸಹಕಾರ, ಕೃಷಿ ಜೈವಿಕ ಶಾಸ್ತ್ರ, ಆಹಾರ ವಿಜ್ಞಾನ ಮತ್ತು ಕೃಷಿ ಎಂಜಿನಿಯರಿಂಗ್) ಹಮ್ಮಿಕೊಂಡಿದ್ದು ಆರು ಬೋಧನಾ ಕ್ಯಾಂಪಸ್‌ಗಳನ್ನು ಹೊಂದಿದೆ. ೧೩ ವಿಭಾಗಗಳಲ್ಲಿ ಪಿಎಚ್.ಡಿ., ಶಿಕ್ಷಣದ ತರಗತಿಗಳನ್ನು ನಡೆಸುತ್ತಿದೆ. ಹೊಸದಾಗಿ ಕೃಷಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ಆಖಿಟಆಚಿ ಅಆಖಿಡಿಚಿಅನ್ನು ಪ್ರಾರಂಭಿಸಲಾಗಿದೆ. ಸದರಿ ವಿಶ್ವವಿದ್ಯಾಲಯದ ವ್ಯಾಪ್ತಿಯಡಿ ೨೦ ಸಂಶೋಧನಾ ಕೇಂದ್ರಗಳು (೧೨ ಕೃಷಿ ವಿಜ್ಞಾನ ಕೇಂದ್ರಗಳು ಮತ್ತು ೮ ಕೃಷಿ ವಿಸ್ತರಣಾ ಘಟಕಗಳು) ವಿವಿಧ ಬೆಳೆಗಳ ಬೀಜೋತ್ಪಾದನೆ, ಕೃಷಿ ಸಂಶೋಧನೆ ಮತ್ತು ವಿಸ್ತರಣಾ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕೆಲಸ ನಿರ್ವಹಿಸುತ್ತಿವೆ. ಕೃಷಿ ತಾಂತ್ರಿಕ ಮಾಹಿತಿ ಕೇಂದ್ರವು (ಂಖಿಖಅ) ರೈತರಿಗೆ ಕೃಷಿ ಮಾಹಿತಿ ಮತ್ತಿತರೆ ಬಹು ಮುಖ್ಯವಾದ ಮಾಹಿತಿಗಳನ್ನು ನೀಡುವ ಕಾರ್ಯವನ್ನು ಮಾಡುತ್ತಿದೆ. ಅಲ್ಲದೇ ರೈತರ ತರಬೇತಿ ಸಂಸ್ಥೆಯು ರೈತರಿಗೆ ಕೃಷಿ ತರಬೇತಿ ಮತ್ತು ಮಹಿಳೆಯರಿಗೆ ಬೇಕರಿ ತಿನಿಸುಗಳನ್ನು ತಯಾರಿಸುವ ಬಗ್ಗೆ ತರಬೇತಿ ನೀಡುವ ತರಬೇತಿ ಘಟಕಗಳು,

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಿಂದ ಬೇರ್ಪಡಿಸಿ ಒಂದು ಘಟಕವನ್ನೂ ಹೊಂದಿದೆ.

### ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ (೧೯೮೭)

೧೯೭೩-೭೪ರಲ್ಲಿ ಮೈಸೂರು ವಿಶ್ವ ವಿದ್ಯಾನಿಲಯದ ವತಿಯಿಂದ ಶಿವಮೊಗ್ಗದ ಬಳಿ ಮತ್ತೊಂದು ಸ್ನಾತಕೋತ್ತರ ಕೇಂದ್ರವನ್ನು (ಭದ್ರಾ ಪ್ರಾಜೆಕ್ಟ್) ಪ್ರಾರಂಭಿಸಲಾಗಿತ್ತು. ಮೊದಲ ವರ್ಷ ಕನ್ನಡ ಮತ್ತು ಔದ್ಯೋಗಿಕ ರಸಾಯನಶಾಸ್ತ್ರಗಳ ಶಿಕ್ಷಣ ಏರ್ಪಟ್ಟಿತು. ಪ್ರತಿಯೊಂದು ಸ್ನಾತಕೋತ್ತರ ವಿಷಯ ವಿಭಾಗವೂ ತನ್ನ ಕಾರ್ಯ ಕ್ಷೇತ್ರವನ್ನು ವಿಸ್ತರಿಸಿಕೊಂಡಿತ್ತು. ಕನ್ನಡ ವಿಭಾಗ ಕನ್ನಡ ಅಧ್ಯಯನ ಸಂಸ್ಥೆಯಾಗಿ (೧೯೩೩) ವ್ಯವಸ್ಥೆಗೊಡು ಎಂ.ಎ., ತರಗತಿಯ ಜೊತೆಗೆ ಇತರ ತರಗತಿಗಳನ್ನೂ ಕಾರ್ಯಕ್ರಮಗಳನ್ನೂ ವ್ಯವಸ್ಥೆಗೊಳಿಸಿ ಕೊಂಡಿದೆ. ಹಿಂದೆ ಪ್ರಾಚ್ಯ ಸಂಶೋಧನಾ ಸಂಸ್ಥೆಗೆ ಸೇರಿದ್ದ ಕನ್ನಡ ವಿಭಾಗ ಈಗ ಈ ಸಂಸ್ಥೆಗೆ ವರ್ಗವಾಗಿ ಇದರ ನೇತೃತ್ವದಲ್ಲಿ ಕೆಲಸ ಮಾಡುತ್ತಿದೆ. ಜಾನಪದ ವಿಭಾಗ, ಭಾಷಾಂತರ ವಿಭಾಗ, ಪಠ್ಯ ಮತ್ತು ಗ್ರಂಥ ಪ್ರಕಟಣೆಯ ವಿಭಾಗವೂ ಇದರ ಶಾಖೆಗಳಾಗಿ ಏರ್ಪಟ್ಟಿವೆ. ದಕ್ಷಿಣ ಭಾರತೀಯ ಭಾಷಾ ಅಧ್ಯಯನದಲ್ಲಿ ಎಂ.ಎ., ತರಗತಿಯೂ ವ್ಯವಸ್ಥೆಗೊಂಡಿದೆ. ೧೯೮೭ ರಲ್ಲಿ ಕುವೆಂಪು ವಿಶ್ವ ವಿದ್ಯಾಲಯ ಪ್ರಾರಂಭವಾದ ನಂತರ ಲಕ್ಕವಳ್ಳಿ ಸ್ನಾತಕೋತ್ತರ ಕೇಂದ್ರ ಅದರಲ್ಲಿ ಲೀನವಾಗಿದೆ.

ಈ ವಿಶ್ವವಿದ್ಯಾಲಯವು ಶಿವಮೊಗ್ಗ ಜಿಲ್ಲೆ ಕುಪ್ಪಳ್ಳಿಯ ಕುವೆಂಪು ಪ್ರತಿಷ್ಠಾನದಲ್ಲಿ ಕುವೆಂಪು ಹಾಗೂ ಇನ್ನಿತರ ಪ್ರಮುಖ ವಿಷಯಗಳ ಬಗ್ಗೆ ಸಂಶೋಧನೆ ನಡೆಸಲು ಕೇಂದ್ರವನ್ನು ತೆರೆದಿದೆ. ಅದೇ ರೀತಿ ಧಾರವಾಡದಲ್ಲಿ ಬೇಂದ್ರೆ ಟ್ರಸ್ಟ್ ಹಾಗೂ ಉಡುಪಿಯಲ್ಲಿ ಡಾ|| ಶಿವರಾಮಕಾರಂತ ಟ್ರಸ್ಟ್ ಸಹಯೋಗದಲ್ಲಿ ಸಂಶೋಧನಾ ಕೇಂದ್ರಗಳನ್ನು ತೆರೆಯಲು ಪ್ರಯತ್ನಿಸಲಾಗುತ್ತಿದೆ. ಅಲ್ಲದೇ ಬೀದರ್‌ನ ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆಯಲ್ಲಿ, ಕೆಳದಿಯ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿ, ಬೆಂಗಳೂರಿನ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದಲ್ಲಿ ಸಂಶೋಧನಾ ಕೇಂದ್ರಗಳನ್ನು ತೆರೆಯಲಾಗಿದೆ. ಬಾದಾಮಿಯ ಬನಶಂಕರಿಯಲ್ಲಿ ಈ ವಿಶ್ವವಿದ್ಯಾಲಯದ ಶಿಲ್ಪ ಮತ್ತು ವರ್ಣಚಿತ್ರಕಲಾ ವಿಭಾಗ ಕಾರ್ಯನಿರ್ವಹಿಸುತ್ತಿದೆ. ಅಲ್ಲದೆ ಬೆಂಗಳೂರಿನ ರಾಜಾಜಿನಗರದ ಚಿತ್ರಕಲಾ ಶಾಲೆಯ ಸಂಯುಕ್ತಾಶ್ರಯದಲ್ಲಿ ಚಿತ್ರಕಲೆಗೆ ಸಂಬಂಧಿಸಿದಂತೆ ಡಿಪ್ಲೊಮಾ ಮತ್ತು ಪದವಿ ತರಗತಿಗಳನ್ನು ನಡೆಸಲಾಗುತ್ತಿದೆ. ಸಾಗರದ ಹೊನ್ನೆಮರಡುವಿನಲ್ಲಿ ಅಡ್ವೆಂಚರ್ ಸ್ಕೂಲ್‌ನವರು ನಡೆಸುವ ಸಾಹಸಕ್ರೀಡೆಗಳಿಗೆ ವಿಶ್ವವಿದ್ಯಾಲಯ ಮಾನ್ಯತೆ ನೀಡಿದೆ.

### ಕನ್ನಡ ವಿಶ್ವವಿದ್ಯಾಲಯ, ಹಂಪಿ (೧೯೯೨)

ಕನ್ನಡ ವಿಶ್ವವಿದ್ಯಾಲಯ ಕನ್ನಡ ನಾಡು, ನುಡಿ, ಸಂಸ್ಕೃತಿ ಮತ್ತು ಜನಜೀವನದ ಸರ್ವಮುಖಗಳ ವಿಶಿಷ್ಟವಾದ ಅಂತರಂಗ ಮತ್ತು ಬಹಿರಂಗ ಸಂಪತ್ತನ್ನು ಕುರಿತು ಅಧ್ಯಯನ ಮಾಡುವ, ಸಂಶೋಧಿಸುವ ಮತ್ತು ಅದರ ಅಧ್ಯಯನದ ಫಲಿತಗಳನ್ನು ಜಗತ್ತಿನಾದ್ಯಂತ ಪ್ರಸಾರ ಮಾಡಿ ಕರ್ನಾಟಕದ ಬಗೆಗಿನ ಅರಿವನ್ನು ಜನಸಮುದಾಯದಲ್ಲಿ ವಿಸ್ತರಿಸುವ ಹಾಗೂ ಅನಂತಮುಖಿಯಾದ ವಿಶ್ವಜ್ಞಾನವನ್ನು ಕನ್ನಡ ಜ್ಞಾನವನ್ನಾಗಿ ಪರಿವರ್ತಿಸಿ ಅದು ಕನ್ನಡಿಗರೆಲ್ಲರಿಗೆ ದಕ್ಕುವಂತೆ ಮಾಡುವ ಮೂಲಭೂತ ಆಶಯದ ಪ್ರತಿನಿಧಿಯಾಗಿ ಸ್ಥಾಪಿತಗೊಂಡಿದೆ. ಬೋಧನೆಗಿಂತ ಸಂಶೋಧನೆ, ಸೃಷ್ಟಿಗಿಂತ ವಿಶ್ವಂಭರ ದೃಷ್ಟಿ, ಶಿಥಿಲ ವಿವರಣೆಗಿಂತ ಅತುಳ ಸಾಧ್ಯತೆಗಳನ್ನೊಳಗೊಂಡ ಅನನ್ಯ ಅಭಿವ್ಯಕ್ತಿ, ನಾಡಿನ ಕೋಟಿ ಕೋಟಿ ಶ್ರೀಸಾಮಾನ್ಯರ ವಿವಿಧ ಪ್ರತಿಭಾಶಕ್ತಿ ಮತ್ತು ಸಾಮರ್ಥ್ಯಗಳ ಸದ್ಬಳಕೆಯ ಮೂಲಕ ಅವರ ಅಂತಃಪ್ರಜ್ಞೆಯನ್ನು ಎಚ್ಚರಿಸುವ, ವಿಕಸಿಸುವ ಶ್ರದ್ಧಾನ್ವಿತ ಕಾಯಕ ಇದರ ದಾರಿಯಾಗಿದೆ.

"ವಿದ್ಯಾರಣ್ಯ" ಕನ್ನಡ ವಿಶ್ವವಿದ್ಯಾಲಯದ ಕ್ಯಾಂಪಸ್ಸಿಗೆ ಇಟ್ಟ ಸಾರ್ಥಕ ನಾಮ. ಪ್ರಾಕೃತಿಕವಾಗಿ ಮೋಹಕವಾಗಿದ್ದು ತನ್ನ ತಗ್ಗು ದಿಣ್ಣೆಗಳಿಂದ ಕಣ್ಮನ ಸೆಳೆಯುವ ಸುಮಾರು ೭೦೦ ಎಕರೆಗಳ ವಿಸ್ತಾರವಾದ ಆವರಣವಿದು. ಇಲ್ಲಿಯ ಕಟ್ಟಡಗಳು ವಿಜಯನಗರ ಕಾಲದ ಮಂಟಪಗಳ ವಿಶಿಷ್ಟತೆಯಲ್ಲಿ ರೂಪುಗೊಂಡಿದೆ. ವಿಶ್ವವಿದ್ಯಾಲಯದ ಮುಂಭಾಗಗಳಲ್ಲಿರುವ 'ಅಕ್ಷರ'ದಲ್ಲಿ ಗ್ರಂಥಾಲಯ ಮತ್ತು ವಸ್ತುಸಂಗ್ರಹಾಲಯಗಳಿವೆ. "ಕ್ರಿಯಾಶಕ್ತಿ" ಆಡಳಿತದ ಕೇಂದ್ರ. ಸಾಂಸ್ಕೃತಿಕ ಚಟುವಟಿಕೆಗಳ ತಾಣ 'ಭುವನ ವಿಜಯ'. ವಿವಿಧ ನಿಕಾಯಗಳ ವಿವಿಧ ವಿಭಾಗಗಳು 'ತ್ರಿಪದಿ', 'ಕೂಡಲಸಂಗಮ', 'ತುಂಗಭದ್ರ', 'ಘಟಿಕಾಲಯ', 'ಕೇಶಿರಾಜ', 'ಹರಿಹರ', 'ನಾಗವರ್ಮ', 'ಅಕ್ಕ', 'ಅಲ್ಲಮ', 'ನಾದಲೀಲೆ', 'ಕಂಠಪತ್ರ', 'ಜಕ್ಕಣ ಮಂಟಪ' ಮುಂತಾದ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. ಪಂಪ ಸಭಾಂಗಣ ಸಾಹಿತ್ಯ ಚಟುವಟಿಕೆಗಳ ತಾಣ. "ಸಿರಿಗನ್ನಡ" ಸಂಶೋಧನಾ ಗ್ರಂಥಾಲಯ "ಸರ್ವಜ್ಞ" ಕಟ್ಟಡದಲ್ಲಿ ಆವರಣದ ಹೃದಯಭಾಗದಲ್ಲಿ ತಲೆಯೆತ್ತಿ ನಿಂತಿದೆ. ಬುಡಕಟ್ಟು ಮತ್ತು ಜಾನಪದ ಅಧ್ಯಯನದ ನೆಲೆಯಾಗಿ ಗ್ರಾಮೀಣ ವಾಸ್ತು ಶೈಲಿಯಲ್ಲಿರುವುದು 'ಗಿರಿಸೀಮೆ'. ಗ್ರೀಕ್ ರಂಗಭೂಮಿಯ ವಿನ್ಯಾಸದಲ್ಲಿ ರೂಪುಗೊಂಡ 'ನವರಂಗ' ಬಯಲು ರಂಗಭೂಮಿ ಕೆರೆಯ ತಟದಲ್ಲಿ ಸುಂದರವಾಗಿ ಮೈದಳೆದು ನಿಂತಿದೆ. ಪ್ರಸಾರಾಂಗ ಸೇರಿದಂತೆ ವಿಶ್ವವಿದ್ಯಾಲಯದ ಇಡೀ ಆವರಣ ವಿಶಿಷ್ಟ ರೀತಿಯಲ್ಲಿ ರೂಪುಗೊಂಡಿದ್ದು ಬಸವಣ್ಣನವರ 'ಅಂತರಂಗ-ಬಹಿರಂಗ' ಸೌಂದರ್ಯದ ಸಮನ್ವಯ ಇಲ್ಲಿ ನಡೆದಿದೆ. ವಿಶ್ವವಿದ್ಯಾಲಯದ ಉದ್ದೇಶ ಸಾಧಿಸಲು ಆಡಳಿತ ವಿನ್ಯಾಸ, ಶಿಕ್ಷಣ ವಿನ್ಯಾಸ ಮತ್ತು ಪೂರಕ ವಿನ್ಯಾಸಗಳೆಂಬ ತ್ರಿಮುಖ ವಿನ್ಯಾಸಗಳನ್ನು ರೂಪಿಸಲಾಗಿದೆ.

### ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯ ಯೂನಿವರ್ಸಿಟಿ, ಬೆಂಗಳೂರು (೧೯೯೨)

ನ್ಯಾಯಾಂಗ, ಬಾರ್ ಕೌನ್ಸಿಲ್ ಆಫ್ ಇಂಡಿಯ, ಕರ್ನಾಟಕ ಬಾರ್ ಕೌನ್ಸಿಲ್, ಬೆಂಗಳೂರು ವಿಶ್ವ ವಿದ್ಯಾಲಯ ಮತ್ತು ಕರ್ನಾಟಕ ರಾಜ್ಯ ಸರ್ಕಾರಗಳು ಒಟ್ಟಾಗಿ ಕಾನೂನು ಶಿಕ್ಷಣದ ಗುಣಮಟ್ಟವನ್ನು ಸುಧಾರಣೆ ಮಾಡಲು ಹಾಗೂ ಕಾನೂನು ಆಧ್ಯಯನ ಮತ್ತು ಸಂಶೋಧನೆಗಾಗಿ ಅತ್ಯುನ್ನತ ಶಿಕ್ಷಣ ಕೇಂದ್ರವನ್ನು ಪ್ರಾರಂಭಿಸಲು ಮಾಡಿದ ಸಂಯುಕ್ತ ಪ್ರಯತ್ನದ ಫಲವಾಗಿ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ ಜನ್ಮ ತಾಳಿದೆ. ಈ ವಿಶ್ವವಿದ್ಯಾಲಯವು ಪ್ರಾಮುಖ್ಯತೆಯನ್ನು ಪಡೆದ ಭಾರತದ ಕಾನೂನು ವಿಶ್ವವಿದ್ಯಾಲಯಗಳಲ್ಲೊಂದಾಗಿದೆ. ಈ ವಿಶ್ವವಿದ್ಯಾಲಯದ ಉತ್ತಮ ಮಟ್ಟದ ಕಾರ್ಯನಿರ್ವಹಣೆಗಾಗಿ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿಗೆ ಇಂಡಿಯಾ ಟುಡೇ ಮತ್ತು ಹಿಂದೂಸ್ಥಾನ್ ಟೈಂಸ್ ಪತ್ರಿಕೆಗಳು

ನೀಡಿದ್ದ "ರ‍್ಯಾಂಕ್–೧" ಪ್ರಥಮ ಸ್ಥಾನವನ್ನು ಉಳಿಸಿಕೊಂಡು ಹ್ಯಾಟ್ರಿಕ್ ಸಾಧನೆಯನ್ನು ಮಾಡಿದೆ. ಈ ವಿಶ್ವವಿದ್ಯಾಲಯವು ಬೋಧನೆಯ ಮತ್ತು ಸಂಶೋಧನೆಯ ಅನೇಕ ಚಟುವಟಿಕೆಗಳಲ್ಲಿ ಕ್ರಿಯಾತ್ಮಕವಾಗಿ ತೊಡಗಿಕೊಂಡಿದೆ.

ಕರ್ನಾಟಕ ಸರ್ಕಾರದ ಔದಾರ್ಯದ ಫಲವಾಗಿ ವಿಶ್ವ ವಿದ್ಯಾಲಯ ಜ್ಞಾನ ಭಾರತಿ ಆವರಣದಲ್ಲಿ ೨೩ ಎಕರೆ ಭೂಮಿಯನ್ನು ಪಡೆದುಕೊಂಡು ತನ್ನ ಸ್ವಂತ ಕ್ಯಾಂಪಸ್ ನಿರ್ಮಿಸಿಕೊಳ್ಳಲು ಸಾಧ್ಯವಾಗಿದೆ. ಇದೊಂದು ಸಂಪೂರ್ಣ ವಸತಿಸಹಿತ ವಿಶ್ವ ವಿದ್ಯಾಲಯವಾಗಿದ್ದು ಪುರುಷ ಮತ್ತು ಮಹಿಳಾ ವಿದ್ಯಾರ್ಥಿಗಳಿಗೆ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಪ್ರತ್ಯೇಕ ವಸತಿ ನಿಲಯಗಳನ್ನು ಹೊಂದಿದೆ. ಅಲ್ಲದೆ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯವರಿಗೂ ಸುಸಜ್ಜಿತವಾದ ವಸತಿ ಗೃಹಗಳನ್ನು ಸಹ ಹೊಂದಿದೆ. ಇನ್ಫೋಸಿಸ್ ಮಾಲೀಕರಾದ ಸುಧಾ ಮೂರ್ತಿಯವರ ಉದಾರ ಕೊಡುಗೆಯಿಂದ ಉತ್ತಮವಾದ ಗ್ರಂಥಾಲಯವನ್ನು ಸಹ ಸಜ್ಜುಗೊಳಿಸಲಾಗಿದೆ.

ಭಾರತದ ಮುಖ್ಯ ನ್ಯಾಯಮೂರ್ತಿಗಳು ಇದರ ಕುಲಪತಿಗಳಾಗಿರುತ್ತಾರೆ (Chancellor). ಬಾರ್ ಕೌನ್ಸಿಲ್ ಆಫ್ ಇಂಡಿಯಾ ಅಧ್ಯಕ್ಷರು ಜನರಲ್ ಕೌನ್ಸಿಲ್ ಅಧ್ಯಕ್ಷರಾಗಿರುತ್ತಾರೆ. ರಾಷ್ಟ್ರಮಟ್ಟದ ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ವಿದ್ಯಾರ್ಥಿಗಳನ್ನು ಪ್ರವೇಶಕ್ಕೆ ಆಯ್ಕೆ ಮಾಡಲಾಗುತ್ತದೆ. ಇಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳು ಆಕ್ಸ್‌ಫರ್ಡ್, ಕೇಂಬ್ರಿಜ್, ಹಾರ್ವರ್ಡ್ ಯಾಲೆ, ಕೊಲಂಬಿಯ, ಮಿಚಿಗನ್, ಯಾರ್ಕ್ ಮುಂತಾದ ಪ್ರತಿಷ್ಠಿತ ವಿಶ್ವ ವಿದ್ಯಾಲಯಗಳಲ್ಲಿ ಫೆಲೋಷಿಪ್ ಗಳಿಸಿ ಉನ್ನತ ವ್ಯಾಸಂಗ ಮುಂದುವರಿಸುತ್ತಾರೆ. ಮತ್ತು ಕೆಲವರು ಹೈಕೋರ್ಟ್, ಸುಪ್ರೀಂ ಕೋರ್ಟ್ ನಲ್ಲಿ ಪ್ರಾಕ್ಟೀಸ್ ಮಾಡುತ್ತಾರೆ. ಇನ್ನು ಕೆಲವರು ಪ್ರತಿಷ್ಠಿತ ಕಂಪನಿಗಳಲ್ಲಿ ಕಾನೂನು ಸಲಹೆಗಾರರಾಗಿ ಉನ್ನತ ಹುದ್ದೆಗಳನ್ನು ಪಡೆಯಲು ಶಕ್ತರಾಗುತ್ತಾರೆ. ವಿಶ್ವವಿದ್ಯಾಲಯಕ್ಕೆ ಸಂಶೋಧನೆಗಾಗಿ ಹಲವು ದತ್ತಿ ನಿಧಿಗಳು ಪ್ರಾಪ್ತವಾಗಿವೆ.

### ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ (ಮಾನಸ ಗಂಗೋತ್ರಿ, ಮೈಸೂರು) (೧೯೯೬)

೧೯೯೬ರಲ್ಲಿ ಸ್ಥಾಪನೆಯಾದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯವು ವಿದ್ಯೆಯಲ್ಲಿ ಆಸಕ್ತಿ ಇದ್ದು, ವೈಯಕ್ತಿಕ ಸಮಸ್ಯೆಗಳಿಂದ ಶಿಕ್ಷಣ ಕಲಿಕೆಯಿಂದ ವಂಚಿತರಾಗಿದ್ದು, ಉನ್ನತ ಶಿಕ್ಷಣವನ್ನು ಪಡೆಯ ಬಯಸುವವರಿಗೆ ದೂರ ಶಿಕ್ಷಣದ ಮೂಲಕ ಶಿಕ್ಷಣ ನೀಡುವ ಉದ್ದೇಶ ಹೊಂದಿರುವ ರಾಜ್ಯದ ಏಕೈಕ ಮುಕ್ತ ವಿಶ್ವವಿದ್ಯಾನಿಲಯವಾಗಿದೆ. ದೇಶದಲ್ಲಿರುವ ಮುಕ್ತ ವಿಶ್ವವಿದ್ಯಾನಿಲಯಗಳಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಶ್ರೇಷ್ಠ ದರ್ಜೆಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಈ ಮುಕ್ತ ವಿಶ್ವವಿದ್ಯಾಲಯವು ದೇಶದ ಅದರಲ್ಲೂ ಕರ್ನಾಟಕ ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲಿ ಅನಾನುಕೂಲತೆಗಳಿಂದ ವಿದ್ಯಾಭ್ಯಾಸದಿಂದ ವಂಚಿತರಾದವರಿಗೆ ಹಣಕಾಸಿನ ತೊಂದರೆಯಿಂದ ಹಾಗೂ ಮತ್ತಿತರ ಪರಿಸ್ಥಿತಿಗಳಿಂದಾಗಿ ತಮ್ಮ ಔಪಚಾರಿಕ ಶಿಕ್ಷಣವನ್ನು ನಿಲ್ಲಿಸಿರುವ ವಿದ್ಯಾರ್ಥಿಗಳಿಗೆ, ಭೌಗೋಳಿಕವಾಗಿ ದೂರ ಪ್ರದೇಶಗಳಲ್ಲಿ ವಾಸಿಸುವ ವಿದ್ಯಾರ್ಥಿಗಳಿಗೆ, ಪೂರ್ಣಕಾಲಿಕ ವಿದ್ಯಾರ್ಥಿಗಳಾಗಿ ಶಿಕ್ಷಣವನ್ನು ಮುಂದುವರೆಸಲು ಸಾಧ್ಯವಾಗದ ಉದ್ಯೋಗ ನಿರತ ವ್ಯಕ್ತಿಗಳಿಗೆ ಮತ್ತು ಜ್ಞಾನಾರ್ಜನೆಗೋಸ್ಕರವೇ ಕಲಿಕೆಯನ್ನು ಮುಂದುವರೆಸಲು ಬಯಸುವ ವ್ಯಕ್ತಿಗಳಿಗಾಗಿ ಪದವಿ, ಡಿಪ್ಲೊಮಾ, ಸರ್ಟಿಫಿಕೇಟ್‌ಗಳ ಶಿಕ್ಷಣ ನೀಡುವ ಗುರಿ ಹೊಂದಿದ್ದು, 'ಉನ್ನತ ಶಿಕ್ಷಣ ಎಲ್ಲರಿಗೂ ಎಲ್ಲೆಡೆ' ಎಂಬ ಮಹೋನ್ನತ ಗುರಿಯನ್ನು ಸಾಧಿಸುವ ನಿಟ್ಟಿನಲ್ಲಿ ಶ್ರಮಿಸುತ್ತಿದೆ. ಪ್ರಸಕ್ತ ದಿನಗಳಲ್ಲಿ ವ್ಯಾಪಕ ಕ್ಷೇತ್ರಗಳಾದ ಏವಿಯೇಷನ್‌ನಿಂದ ಅನಿಮೇಷನ್‌ವರೆಗೆ ಮತ್ತು ಮಾಹಿತಿ ತಂತ್ರಜ್ಞಾನದವರೆಗೆ ಜೀವನಾವಶ್ಯ ಕಾರ್ಯಕ್ರಮಗಳಾದ ಆರೋಗ್ಯ ಸೇವೆಗಳು, ಕೃಷಿವಿಜ್ಞಾನ, ಪಾರಂಪರಿಕ ಮತ್ತು ನಿರ್ವಹಣಾ ಕಾರ್ಯಕ್ರಮಗಳನ್ನು ಹೆಸರಾಂತ ಶೈಕ್ಷಣಿಕ ಸಂಸ್ಥೆಗಳ ಸಹಯೋಗದೊಂದಿಗೆ ನಡೆಸುತ್ತಿದೆ. ಮನರಂಜನಾ ಉದ್ಯಮದ ಅವಶ್ಯಕತೆಗಳನ್ನು ಪೂರೈಸುವ ದೃಷ್ಟಿಯಿಂದ ಅನಿಮೇಷನ್ ಬಿ.ಎಸ್‌ಸಿ., ಪದವಿಯನ್ನು ನೀಡುತ್ತಿರುವ ಏಕೈಕ ಮುಕ್ತ ವಿಶ್ವವಿದ್ಯಾಲಯವೆಂಬ ಖ್ಯಾತಿಯನ್ನು ಹೊಂದಿದೆ. ೨೦೦೮–೧೧ರ ಸಾಲಿನಲ್ಲಿ ಪ್ರಸಾರಾಂಗದ ಮೂಲಕ ಮೌಲ್ಯಾಧಾರಿತ ಗ್ರಂಥಗಳನ್ನು ಹೊರತರಲಾಗಿದೆ.

### ರಾಜೀವ್ ಗಾಂಧಿ ಆರೋಗ್ಯ ವೈದ್ಯಕೀಯ ವಿಜ್ಞಾನಗಳ ವಿಶ್ವವಿದ್ಯಾಲಯ (RGUHS) (೧೯೯೬)

ಆಧುನಿಕ ವೈದ್ಯಕೀಯ ಭಾರತೀಯ ವೈದ್ಯಪದ್ಧತಿ, ಆಯುರ್ವೇದ ಮತ್ತು ಯುನಾನಿ ಮುಂತಾದ ಎಲ್ಲಾ ವೈದ್ಯಕೀಯ ಶಿಕ್ಷಣದಲ್ಲಿ ಬೋಧನೆ, ತರಬೇತಿ ಮತ್ತು ಸಂಶೋಧನೆಗಳನ್ನು ನಡೆಸಲು ಸರ್ಕಾರದ ಅಧೀನದಲ್ಲಿ ಒಂದು ಸುವ್ಯವಸ್ಥೆಯನ್ನು ಮೂಡಿಸುವುದಕ್ಕಾಗಿ ಒಂದು ವಿಶ್ವವಿದ್ಯಾಲಯವನ್ನು ಇಡೀ ರಾಜ್ಯಕ್ಕೆ ಅನ್ವಯಿಸುವಂತೆ ಸ್ಥಾಪಿಸಲು ಮಾಡಿದ ಆಲೋಚನೆಯ ಫಲವಾಗಿ ರಾಜೀವ್‌ಗಾಂಧಿ ವೈದ್ಯಕೀಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸ್ಥಾಪನೆಗೆ ೧–೬–೧೯೯೬ರಲ್ಲಿ ಚಾಲನೆ ನೀಡಲಾಯಿತು. ಇದರ ಮೂಲ ಉದ್ದೇಶ ಬೋಧನೆ, ಸಂಶೋಧನೆ ಮತ್ತು ಆರೋಗ್ಯ ವಿಜ್ಞಾನಗಳ ಜ್ಞಾನಪ್ರಸಾರ. ಎಲ್ಲಾ ಆರೋಗ್ಯ ವಿಜ್ಞಾನಗಳೂ ಒಂದೇ ಸೂರಿನಡಿಯಲ್ಲಿ ಕೆಲಸ ಮಾಡುವ ಉದ್ದೇಶದಿಂದ ಈ ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಗಿದೆ. ಈ ವಿಶ್ವವಿದ್ಯಾಲಯ ಆರೋಗ್ಯ ಜ್ಞಾನ ವಿಭಾಗಗಳಾದ ಮೆಡಿಕಲ್, ಡೆಂಟಲ್, ಫಾರ್ಮಸಿ, ನರ್ಸಿಂಗ್, ಭಾರತೀಯ ವೈದ್ಯಪದ್ಧತಿಯ ಆಯುರ್ವೇದ, ಯುನಾನಿ, ನ್ಯಾಚುರೋಪತಿ, ಯೋಗ ವಿಜ್ಞಾನ, ಹೋಮಿಯೋಪತಿ ಹಾಗೂ ಹಲವಾರು ಪ್ಯಾರಾ ಮೆಡಿಕಲ್ ಮತ್ತು ಫಿಸಿಯೋಥೆರಪಿ ವಿಭಾಗಗಳನ್ನು ಒಳಗೊಂಡಿದೆ. ಈ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ವಿಭಾಗಗಳಿಗೆ ಪ್ರವೇಶ ಪರೀಕ್ಷೆ ಮುಖಾಂತರ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ. ಈ ವಿಶ್ವವಿದ್ಯಾಲಯವು ಹೊಸದಾದ ಒಂದು ಡಿಜಿಟಲ್ ಲೈಬ್ರರಿಯನ್ನು ಅಭಿವೃದ್ಧಿಗೊಳಿಸುತ್ತಿದೆ. ರಾಷ್ಟ್ರೀಯ ಸೇವಾ ಯೋಜನೆ ಇಲ್ಲಿನ ಒಂದು ಮುಖ್ಯ ಕಾರ್ಯಕ್ರಮ. ರಾಷ್ಟ್ರೀಯ ಆರೋಗ್ಯ ಧೋರಣೆಯನ್ನು ಅನುಸರಿಸಿ ವೈದ್ಯಕೀಯ ವ್ಯಕ್ತಿಗೆ ಬೇಕಾದ ತರಬೇತಿಗಳನ್ನು ನೀಡುವುದು, ವೈಜ್ಞಾನಿಕ ಮನೋಭಾವಗಳನ್ನು ಬೆಳೆಸುವುದು, ಆರೋಗ್ಯ ವಿಜ್ಞಾನದಲ್ಲಿ ಸಂಶೋಧನೆ ಮಾಡುವುದು, ವಿದ್ಯಾರ್ಥಿಗಳು ಮತ್ತು ಅಧ್ಯಾಪಕರುಗಳಲ್ಲಿ ಒಂದು ಸಾಮಾಜಿಕ ಜವಾಬ್ದಾರಿಯನ್ನು ಬೆಳೆಸುವುದು ಈ ವಿಶ್ವವಿದ್ಯಾಲಯದ ಪ್ರಮುಖ ಯೋಜನೆಗಳಾಗಿವೆ. ಇಲ್ಲಿ ಎಂ.ಡಿ., ಎಂ.ಎಸ್., ಮತ್ತು ಡಿಪ್ಲೊಮಾ

ಕೋರ್ಸ್‌ಗಳು, ಬಿ.ಫಾರ್ಮ., ಎಂ.ಫಾರ್ಮ., ಬಿ.ಎಸ್‌ಸಿ., (ರೇಡಿಯೋಗ್ರಫಿ), ಬಿ.ಎಸ್‌ಸಿ., (ಸ್ಪೀಚ್ ಅಂಡ್ ಹಿಯರಿಂಗ್), ಬಿ.ಪಿ.ಟಿ., ಎಂ.ಬಿ.ಬಿ.ಎಸ್., ಬಿ.ಎಚ್.ಎಂ.ಎಸ್., ಬಿ.ಎನ್.ವೈ. ಎಸ್., ಬಿ.ಎ.ಎಂ.ಸ್., ಮುಂತಾದ ಡಿಗ್ರಿ ಕೋರ್ಸ್‌ಗಳವೆ.

ಇಡೀ ರಾಜ್ಯಕ್ಕೆ ಅನ್ವಯಿಸುವಂತಹ ಒಂದೇ ರೀತಿಯ ಪಠ್ಯಕ್ರಮವನ್ನು ಶೈಕ್ಷಣಿಕ ಬೆಳವಣಿಗೆ ತರಲು ರೂಪಿಸಲಾಗುತ್ತದೆ. ಸಂಶೋಧನಾ ನೀತಿ ಮತ್ತು ಸಂಶೋಧನಾ ಕಾರ್ಯಕ್ರಮಗಳನ್ನು ರೂಪಿಸಿ ಬೆಳೆಸಲು ಒಂದು ಸಂಶೋಧನಾ ಸಮಿತಿ ಇರುತ್ತದೆ. ಆಡಳಿತ ಮತ್ತು ಪರೀಕ್ಷಾ ವ್ಯವಸ್ಥೆಯನ್ನು ಸಂಪೂರ್ಣವಾಗಿ ಗಣಕೀಕರಣ ಮಾಡುವ ಮೂಲಕ ವಿದ್ಯಾರ್ಥಿಗಳ ಎಲ್ಲಾ ಶೈಕ್ಷಣಿಕ ಅವಶ್ಯಕತೆಗಳನ್ನು ವಿಳಂಬವಿಲ್ಲದೆ ನಿರ್ವಹಿಸಲಾಗುತ್ತಿದೆ. ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಗುಲಬರ್ಗಾ ಮತ್ತು ಬೆಳಗಾವಿಗಳಲ್ಲಿ ಎರಡು ಪ್ರಾದೇಶಿಕ ಕೇಂದ್ರಗಳನ್ನು ತೆರೆಯಲಾಗಿದೆ. ೨೦೦೬-೦೭ ರ ವೇಳೆಗೆ ಈ ವಿಶ್ವವಿದ್ಯಾಲಯವು ೬೫ ಕಾಲೇಜುಗಳನ್ನು ಹೊಂದಿದ್ದು, ಇದರಲ್ಲಿ ಎರಡು ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳಿದ್ದು ಬೋಧಕ ಸಿಬ್ಬಂದಿ ಸ್ತ್ರೀಪುರುಷರೆಲ್ಲ ಸೇರಿ ೨೦,೦೦೦ಕ್ಕೂ ಅಧಿಕವಾಗಿದ್ದಾರೆ.

೨೦೦೫-೧೬ರಲ್ಲಿ ೫೦ ಅಲೋಪತಿ ಮೆಡಿಕಲ್ ಕಾಲೇಜುಗಳಿದ್ದು ೬೨೪೫ ವಿದ್ಯಾರ್ಥಿಗಳು, ೫೬ ಆಯುರ್ವೇದ ಕಾಲೇಜುಗಳಲ್ಲಿ ೨೮೪೩ ವಿದ್ಯಾರ್ಥಿಗಳು, ೩೮ ದಂತ ವೈದ್ಯಕೀಯ ಕಾಲೇಜುಗಳಲ್ಲಿ ೨೭೦೦ ವಿದ್ಯಾರ್ಥಿಗಳು ಅಲ್ಲದೆ ಹೋಮಿಯೋಪತಿ, ಯುನಾನಿ, ನ್ಯಾಚುರೋಪತಿ, ಔಷಧ ವಿಜ್ಞಾನ, ನರ್ಸಿಂಗ್ ಕಾಲೇಜುಗಳು ಸೇರಿ ಒಟ್ಟು ೪೮೨ ಕಾಲೇಜುಗಳಲ್ಲಿ ಒಟ್ಟು ೩೧೪೯೦ ವಿದ್ಯಾರ್ಥಿಗಳು ಈ ವಿಶ್ವವಿದ್ಯಾಲಯದಡಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ.

### ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ (೧೯೯೯)

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಅಧಿನಿಯಮ ೧೯೯೪ರಂದು ಭಾರತ ರತ್ನ ಡಾ. ಸರ್ ಎಂ ವಿಶ್ವೇಶ್ವರಯ್ಯನವರ ನಾಮಾಂಕಿತದೊಂದಿಗೆ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು ಅಸ್ತಿತ್ವಕ್ಕೆ ಬಂದು, ಯುಜಿಸಿ ಯಿಂದ ೧೯೯೯ರಲ್ಲಿ ಮಾನ್ಯತೆ ಪಡೆದಿದೆ. ಅಸೋಸಿಯೇಷನ್ ಆಫ್ ಕಾಮನ್ ವೆಲ್ತ್ ಯೂನಿವರ್ಸಿಟಿ ಹಾಗೂ ಅಸೋಸಿಯೇಷನ್ ಆಫ್ ಇಂಡಿಯನ್ ಯೂನಿವರ್ಸಿಟಿಯ ಸದಸ್ಯತ್ವವನ್ನು ಸಹ ಪಡೆದಿದೆ. ವಿಶ್ವವಿದ್ಯಾಲಯದ ಮುಖ್ಯ ಕಛೇರಿಯನ್ನು ಬೆಳಗಾವಿಯಲ್ಲಿ ಸ್ಥಾಪಿಸಿದ್ದು, ನಾಲ್ಕು ಪ್ರಾದೇಶಿಕ ಕಛೇರಿಗಳನ್ನು ಬೆಂಗಳೂರು, ಮೈಸೂರು, ಗುಲಬರ್ಗಾ ಮತ್ತು ಬೆಳಗಾವಿಗಳಲ್ಲಿ ಹೊಂದಿದೆ. ಈ ವಿಶ್ವವಿದ್ಯಾಲಯವು ಕರ್ನಾಟಕ ರಾಜ್ಯದಾದ್ಯಂತ ತನ್ನ ಕಾರ್ಯ ವ್ಯಾಪ್ತಿಯನ್ನು ಹೊಂದಿದ್ದು, ಇಡೀ ಭಾರತದಲ್ಲೇ ಅತಿ ದೊಡ್ಡದಾದ ವಿಶ್ವವಿದ್ಯಾಲಯಗಳಲ್ಲಿ ಒಂದಾಗಿದೆ. ಸರ್ಟಿಫಿಕೇಟ್ ಕೋರ್ಸ್, ಬಿ.ಇ/ಬಿ.ಟೆಕ್, ಬಿ.ಆರ್ಕ್, ಪಿ.ಜಿ. ಡಿಪ್ಲೋಮ, ಎಂ.ಟೆಕ್, ಎಂ.ಬಿ.ಎ, ಎಂ.ಸಿ.ಎ, ಎಂ ಆರ್ಕ್, ಎಂ.ಎಸ್ಸಿ (ಇಂಜಿನೀಯರಿಂಗ್) ಮತ್ತು ಪಿ.ಎಚ್.ಡಿ ಪದವಿಗಳನ್ನು ಈ ವಿಶ್ವವಿದ್ಯಾಲಯವು ನೀಡುತ್ತಿದೆ. ವಿ.ಟಿ.ಯು. ದ್ವಿ-ಸೆಮಿಸ್ಟರ್ ಪದ್ಧತಿಯನ್ನು ಹೊಂದಿದ್ದು ಬೆಸ ಸಂಖ್ಯೆಯ ಸೆಮಿಸ್ಟರ್ ಆಗಸ್ಟ್‌ನಿಂದ ಫೆಬ್ರವರಿಯವರೆಗೂ ಹಾಗೂ ಸಮ ಸಂಖ್ಯೆಯ ಸೆಮಿಸ್ಟರ್ ಮಾರ್ಚ್‌ನಿಂದ ಜುಲೈವರೆಗೂ ನಡೆಯುತ್ತದೆ. ಪದವಿ ಮತ್ತು ಸ್ನಾತಕೋತ್ತರ ಪದವಿಗಳಿಗೆ ಸರ್ಕಾರದ ಪರೀಕ್ಷಾ ಪ್ರಾಧಿಕಾರ ಘಟಕಗಳಿಂದ ಹಾಗೂ ಮಹಾ ವಿದ್ಯಾಲಯಗಳ ಆಡಳಿತ ಮಂಡಳಿಗಳಿಂದ ಮತ್ತು ಸಂಶೋಧನಾ ಪ್ರೋಗ್ರಾಮ್‌ಗಳಿಗೆ ವಿಶ್ವವಿದ್ಯಾಲಯದ ಸಾಮಾನ್ಯ ಬುದ್ಧಿ ಸಾಮರ್ಥ್ಯ ಪರೀಕ್ಷೆಯ ಮೂಲಕ ಮತ್ತು ನೋಂದಣಿ ಸಮಿತಿಗಳ ಪರಿಶೀಲನೆಯ ಮುಖಾಂತರ ಪ್ರವೇಶವನ್ನು ನೀಡಲಾಗುತ್ತಿದೆ. ವಿಶ್ವವಿದ್ಯಾಲಯದ ಕುಲಪತಿಗಳು ಆಡಳಿತ ಮತ್ತು ಶೈಕ್ಷಣಿಕ ವಿಭಾಗಗಳ ಪ್ರಮುಖ ಅಧಿಕಾರಿಗಳಾಗಿದ್ದು, ಕುಲಸಚಿವರು ಪ್ರಮುಖ ಕಾರ್ಯನಿರ್ವಾಹಕ ಅಧಿಕಾರಿಯಾಗಿರುತ್ತಾರೆ.

ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳ ವಿಭಾಗಗಳು ಮತ್ತು ಅವುಗಳಿಗೆ ಸಂಯೋಜನೆ ಹೊಂದಿದ ಮಹಾವಿದ್ಯಾಲಯಗಳಲ್ಲಿ ನಡೆಯುವ ಎಂಬಿಎ/ಎಂಸಿಎ/ಎಂಟೆಕ್/ಎಂಆರ್ಕ್ ಕೋರ್ಸ್‌ಗಳಿಗೆ ಸಾಮಾನ್ಯ ಪರೀಕ್ಷೆ ನಡೆಸಿ, ಸೀಟು ಹಂಚಿಕೆ ನಡೆಸುವ ಗುರುತರ ಹೊಣೆಯನ್ನು ರಾಜ್ಯ ಸರ್ಕಾರದಿಂದ ನೇಮಕಗೊಂಡ ಕೇಂದ್ರೀಯ ಸ್ನಾತಕೋತ್ತರ ಪ್ರವೇಶಾತಿ ಸಮಿತಿಯ ನಿರ್ದೇಶನದಡಿ ವಿಶ್ವವಿದ್ಯಾಲಯವು ನಿರ್ವಹಿಸಿದೆ. ಶೈಕ್ಷಣಿಕ ವರ್ಷ ೨೦೦೮-೦೯ ರಿಂದ ವಿಶ್ವವಿದ್ಯಾಲಯಕ್ಕೆ ಸಂಯೋಜನೆಗೊಂಡ ರಾಜ್ಯದ ವಿವಿಧ ತಾಂತ್ರಿಕ ಮಹಾವಿದ್ಯಾಲಯಗಳಲ್ಲಿನ ಸಂಶೋಧನಕಾರರಿಗೆ ಪ್ರೋತ್ಸಾಹ ನೀಡಲು ವಿಶೇಷ ಸಂಶೋಧನಾ ಅನುದಾನ ಯೋಜನೆಯನ್ನು ಪ್ರಾರಂಭಿಸಲಾಗಿದೆ. ಶೈಕ್ಷಣಿಕ ವರ್ಷ ೨೦೦೭-೦೮ರಲ್ಲಿ ಅರ್ಹ ಮಹಾವಿದ್ಯಾಲಯಗಳಿಗೆ ಶೈಕ್ಷಣಿಕ ಸ್ವಾಯತ್ತತೆಯನ್ನು ಹದಿನಾಲ್ಕು ಮಹಾವಿದ್ಯಾಲಯಗಳಲ್ಲಿ ಪದವಿ ಮತ್ತು ಆರು ಮಹಾವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಪದವಿ ಕೋರ್ಸ್‌ಗಳಿಗೆ ನೀಡಲಾಗಿತ್ತು. ಶೈಕ್ಷಣಿಕ ವರ್ಷ ೨೦೦೮-೦೯ರಲ್ಲಿ ಮೂರು ಮಹಾವಿದ್ಯಾಲಯಗಳಲ್ಲಿ ಪದವಿ ಮತ್ತು ಒಂದು ಮಹಾವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿ ಕೋರ್ಸ್‌ಗೆ ಸ್ವಾಯತ್ತತೆಯನ್ನು ನೀಡಲಾಗಿದೆ. ಈ ಶೈಕ್ಷಣಿಕ ಪದ್ಧತಿಯಲ್ಲಿ ಅಂಕಗಳಿಗೆ ಬದಲಾಗಿ ಕ್ರೆಡಿಟ್‌ಗಳನ್ನು ನೀಡುವ ಪದ್ಧತಿಯನ್ನು ಅಳವಡಿಸಿಕೊಳ್ಳಲಾಗಿದೆ. ಹೊಸ ಹೊಸ ವಿಷಯಗಳನ್ನು ಪಠ್ಯಕ್ರಮದಲ್ಲಿ ಅಳವಡಿಸುವ ಸವಲತ್ತುಗಳನ್ನು ಈ ಪದ್ಧತಿ ಹೊಂದಿರುತ್ತದೆ. ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗವು ಕುಲಸಚಿವರು (ಮೌಲ್ಯಮಾಪನ) ಇವರ ನೇತೃತ್ವದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಸೆಮಿಸ್ಟರ್ ಪದ್ಧತಿಯ ಆಧಾರದ ಮೇಲೆ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ.

ಭಾರತ ಸರ್ಕಾರದ ಪ್ರತಿಷ್ಠಿತ ಇಸ್ರೋದ ಎಡ್ಯುಸ್ಯಾಟ್ ಪ್ರೊಜೆಕ್ಟಿನ ಅಡಿಯಲ್ಲಿ ದೂರ ಶಿಕ್ಷಣವನ್ನು ನೀಡುವುದು ವಿಶ್ವವಿದ್ಯಾಲಯದ ಇ-ಲರ್ನಿಂಗ್‌ನ ಧ್ಯೇಯವಾಗಿದೆ. ಎಲ್ಲಾ ಸಂಯೋಜನೆಗೊಂಡ ತಾಂತ್ರಿಕ ಮಹಾವಿದ್ಯಾಲಯಗಳು ವಿ.ಟಿ.ಯು ನೆಟ್ ವರ್ಕ್ ಹೊಂದಿರುವ ಇಡೀ ಭಾರತದಲ್ಲೇ ಮೊದಲನೇ ವಿಶ್ವವಿದ್ಯಾಲಯವಾಗಿದೆ. ವಿಶ್ವವಿದ್ಯಾಲಯದ ಆವರಣದಲ್ಲಿ ಡಿಜಿಟಲ್ ಬೋಧನಾ ಕೊಠಡಿಗಳು, ಆಧುನಿಕ ಪ್ರಯೋಗಾಲಯಗಳು, ಉತ್ತಮರೀತಿಯಲ್ಲಿ ಅಂತರ್ಜಾಲ ಹಾಗೂ ವೈದ್ಯಕೀಯ ವ್ಯವಸ್ಥೆಯನ್ನು ವಿದ್ಯಾರ್ಥಿಗಳಿಗೆ ನೀಡಲಾಗಿದೆ. ವೆಬ್ ಆಧಾರಿತ ಇ-ಕಲಿಕೆ ಯೋಜನೆಯಡಿ ವಿಟಿಯು ಎಡ್ಯುಸ್ಯಾಟ್ ನೆಟ್ ವರ್ಕ್ ವಿವಿಧ ವಿಷಯಗಳ ವಿಡಿಯೋ ಆಧಾರಿತ ಉಪನ್ಯಾಸಗಳನ್ನು ನೀಡುತ್ತಿದೆ.

ವಿಶ್ವವಿದ್ಯಾನಿಲಯವು ಶೈಕ್ಷಣಿಕ ಸಂಶೋಧನೆಯ ಮತ್ತು ವಿಸ್ತರಣೆಯ ಯೋಜನೆಗಳ ಗುರಿಯನ್ನು ತಲುಪಲು ವಿಶ್ವವಿದ್ಯಾಲಯದ ಗ್ರಂಥಾಲಯವು ಪ್ರಸ್ತುತ ಮತ್ತು ಭವಿಷ್ಯದ ಅವಶ್ಯವಿರುವ ಭೌತಿಕ ಮತ್ತು ವೈಚಾರಿಕ ಮಾಹಿತಿಯನ್ನು ಪೂರೈಸುತ್ತಿದೆ. ಗ್ರಂಥಾಲಯವು ವಿದ್ಯಾರ್ಥಿಗಳಿಗೆ, ಪ್ರಾಧ್ಯಾಪಕರಿಗೆ, ಸಂಶೋಧಕರಿಗೆ ಮತ್ತು ಆಡಳಿತಗಾರರಿಗೆ ತಾಂತ್ರಿಕ, ಆಡಳಿತ ವಿಷಯಗಳ ನಿರ್ವಹಣೆ ಮುಂತಾದ ವಿಷಯಗಳ ೧೨,೦೦೦ ಕ್ಕಿಂತ ಹೆಚ್ಚಿನ ಸಂಖ್ಯೆಯ ಗ್ರಂಥಗಳನ್ನು ಹೊಂದಿದೆ. ವಿದ್ಯುನ್ಮಾನ ಮಾಹಿತಿ ಸಂಗ್ರಹಣ ಮತ್ತು ಪೂರ್ಣ ಪ್ರಮಾಣದ ಪಾಠಗಳನ್ನು ನಿಯತಕಾಲಿಕೆಗಳಿಂದ ಪಡೆಯುವುದಕ್ಕೆ ಉತ್ತೇಜನ ನೀಡಲು ಗ್ರಂಥಾಲಯವು ಇ-ಸಂಪನ್ಮೂಲಗಳನ್ನು ವಿದ್ಯಾರ್ಥಿಗಳಿಗೆ ಮತ್ತು ಇತರ ಶೈಕ್ಷಣಿಕ ಸಮುದಾಯಕ್ಕೆ ಒದಗಿಸುತ್ತದೆ.

ಆಧುನಿಕ ತಂತ್ರಜ್ಞಾನವನ್ನು ಬಳಸಿ ಬೆಂಗಳೂರು ಹಾಗೂ ಬೆಳಗಾವಿಯಲ್ಲಿ ಏಕಕಾಲದಲ್ಲಿ ವೀಡಿಯೋ ಕಾನ್‌ಫರೆನ್ಸ್ ಮೂಲಕ ಸೀಟು ಹಂಚಿಕೆ ಮಾಡಲಾಗುತ್ತದೆ. ಇದರಿಂದ ಪಾಲಕರ ಸಮಯ ಮತ್ತು ಹಣದ ಉಳಿತಾಯವಾಗುತ್ತದೆ. ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳ ವಿಭಾಗಗಳು ಹಾಗೂ ಅವುಗಳಿಗೆ ಸಂಯೋಜನೆ ಹೊಂದಿದ ಮಹಾವಿದ್ಯಾಲಯಗಳಲ್ಲಿ ನಡೆಯುವ ಎಂಬಿಎ.,/ಎಂಸಿಎ., ಎಂ.ಟೆಕ್.,/ಎಂ.ಆರ್ಕ್ ಕೋರ್ಸ್‌ಗಳಿಗೆ ಸಾಮಾನ್ಯ ಪ್ರವೇಶ ಪರೀಕ್ಷೆ ನಡೆಸಿ ಸೀಟು ಹಂಚಿಕೆ ಮಾಡುವ ಗುರುತರ ಜವಾಬ್ದಾರಿಯನ್ನು ರಾಜ್ಯ ಸರ್ಕಾರವು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯಕ್ಕೆ ನೀಡಿದೆ.

### ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ (೨೦೦೩)

ಮಹಿಳೆಯರಿಗೆ ಸ್ನಾತಕೋತ್ತರ ಶಿಕ್ಷಣ ನೀಡುವ ಸಲುವಾಗಿ ಸ್ತ್ರೀಯರಿಗೆಂದೇ ವಿಶೇಷವಾಗಿ ವಿಶ್ವವಿದ್ಯಾಲಯವನ್ನು ಬಿಜಾಪುರ (ಇಂದಿನ ವಿಜಯಪುರ) ದಲ್ಲಿ ಆಗಸ್ಟ್ ೨೦೦೩ರಲ್ಲಿ ಪ್ರಾರಂಭಿಸಲಾಯಿತು. ಆರು ವಿಭಾಗಗಳು – ಕನ್ನಡ, ಇಂಗ್ಲಿಷ್, ಸಮಾಜಶಾಸ್ತ್ರ, ಅರ್ಥಶಾಸ್ತ್ರ, ಮಹಿಳಾ ಅಧ್ಯಯನ ಮತ್ತು ಶಿಕ್ಷಣ ಇಲ್ಲಿದ್ದವು. ೨೦೦೭-೦೮ರಲ್ಲಿ ಹೊಸ ವಿಭಾಗಗಳು ಅಂದರೆ ನಿರ್ವಹಣಾ ಅಧ್ಯಯನ, ಔಷಧ ವಿಜ್ಞಾನ, ಜೀವರಸಾಯನಶಾಸ್ತ್ರ, ವಿದ್ಯುನ್ಮಾನ, ಗಣಕ ವಿಜ್ಞಾನ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ, ಸಮಾಜ ಕಾರ್ಯ ಮತ್ತು ದೈಹಿಕ ಶಿಕ್ಷಣ ಸೇರ್ಪಡೆಗೊಂಡವು. ಸ್ಥಳಾವಕಾಶ ಲಭ್ಯವಿರದಿದ್ದ ಕಾರಣಕ್ಕಾಗಿ ಈ ವಿಶ್ವವಿದ್ಯಾಲಯವು ಜಿಲ್ಲಾ ಪ್ರವಾಸಿ ಬಂಗಲೆಯಲ್ಲಿ ಕಾರ್ಯಾಲಯ ಹೊಂದಿದೆ. ಸರ್ಕಾರವು ೨೮೩ ಎಕರೆ ಜಾಗವನ್ನು ಅಥಣಿ ರಸ್ತೆಯಲ್ಲಿ ಅಗತ್ಯ ಕಟ್ಟಡಗಳನ್ನು ಕಟ್ಟಿಕೊಳ್ಳಲು ಮಂಜೂರು ಮಾಡಿದೆ.

### ತುಮಕೂರು ವಿಶ್ವವಿದ್ಯಾನಿಲಯ (೨೦೦೪)

ಬೆಂಗಳೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರವಾಗಿದ್ದ ತುಮಕೂರಿನಲ್ಲಿ ತುಮಕೂರು ಜಿಲ್ಲೆಯ ಪರಿಮಿತಿಗೆ ಅನ್ವಯಿಸುವಂತೆ ತುಮಕೂರು ವಿಶ್ವವಿದ್ಯಾನಿಲಯವು ದಿನಾಂಕ ೨೩-೦೨-೨೦೦೪ ರಂದು ಅಸ್ತಿತ್ವಕ್ಕೆ ಬಂದಿತು. ನಾಲ್ಕು ಸ್ನಾತಕೋತ್ತರ ವಿಭಾಗಗಳು ಹಾಗೂ ಕಲಾ, ವಿಜ್ಞಾನ, ವಾಣಿಜ್ಯ, ಶಿಕ್ಷಣ ಮತ್ತು ಕಾನೂನು ಶಿಕ್ಷಣಕ್ಕೆ ಸಂಬಂಧಿಸಿದ ೪೫ ಸಂಯೋಜಿತ ಕಾಲೇಜುಗಳೊಂದಿಗೆ ಪ್ರಾರಂಭಗೊಂಡ ವಿಶ್ವವಿದ್ಯಾನಿಲಯವು ೨೦೦೫-೦೬ ರಲ್ಲಿ ಒಂಭತ್ತು ಹೊಸ ಸ್ನಾತಕೋತ್ತರ ಅಧ್ಯಯನ ವಿಭಾಗಗಳನ್ನು ಪ್ರಾರಂಭಿಸಿತು. ೨೦೧೦-೧೧ ರಲ್ಲಿ ಈ ವಿಶ್ವವಿದ್ಯಾನಿಲಯವು ತನ್ನ ಕೇಂದ್ರ ಹಾಗೂ ಸಂಯೋಜಿತ ಕಾಲೇಜುಗಳಲ್ಲಿ ೨೦ ವಿವಿಧ ಸ್ನಾತಕೋತ್ತರ ವಿಭಾಗಗಳನ್ನು ನಡೆಸುತ್ತಿದ್ದು, ೮೭ ಸಂಯೋಜಿತ ಕಾಲೇಜುಗಳನ್ನು ಹೊಂದಿರುತ್ತದೆ ಮತ್ತು ವಿಶ್ವವಿದ್ಯಾನಿಲಯದ ಆವರಣದಲ್ಲಿ ವಿವಿಧ ವಿಷಯಗಳ ೨೯ ಸಂಶೋಧನಾ ಕೇಂದ್ರಗಳನ್ನು ತೆರೆದಿರುತ್ತದೆ. ಕುಲಪತಿಗಳು ವಿಶ್ವವಿದ್ಯಾನಿಲಯದ ಮುಖ್ಯಸ್ಥರಾಗಿದ್ದು, ಕುಲಸಚಿವರು ಕಾರ್ಯನಿರ್ವಾಹಕ ಪ್ರಮುಖ ಅಧಿಕಾರಿಯಾಗಿರುತ್ತಾರೆ. ಕುಲಸಚಿವರು (ಮೌಲ್ಯ ಮಾಪನ) ಇವರು ವಿಶ್ವವಿದ್ಯಾನಿಲಯದ ಪರೀಕ್ಷಾಂಗದ ಮುಖ್ಯ ಅಧಿಕಾರಿಯಾಗಿರುತ್ತಾರೆ. ತುಮಕೂರಿನಲ್ಲಿಯ ಸರ್ಕಾರಿ ಕಲಾ ಕಾಲೇಜು ಮತ್ತು ಸರ್ಕಾರಿ ವಿಜ್ಞಾನ ಕಾಲೇಜು ಇವುಗಳನ್ನು ಸರ್ಕಾರವು ವಿಶ್ವವಿದ್ಯಾಲಯಕ್ಕೆ ದಿನಾಂಕ: ೨೧-೦೧-೨೦೧೦ರ ಆದೇಶದ ಮೂಲಕ ವರ್ಗಾಯಿಸಿದ್ದು, ಈಗ ಈ ಕಾಲೇಜುಗಳು ವಿಶ್ವವಿದ್ಯಾಲಯದ ಘಟಕ ಕಾಲೇಜುಗಳಾಗಿ ಕಾರ್ಯನಿರ್ವಹಿಸುತ್ತಿವೆ. ಸ್ನಾತಕೋತ್ತರ ಅಧ್ಯಯನ ವಿಭಾಗಗಳಲ್ಲಿ ವ್ಯಾಸಂಗ ಮಾಡುವ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರಿಗಾಗಿ ತಲಾ ಒಂದೊಂದು ವಿದ್ಯಾರ್ಥಿನಿಲಯಗಳು ಇರುತ್ತವೆ. ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳಲ್ಲಿ ೬೩ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜುಗಳು, ೧೯ ಬಿ.ಇಡಿ., ಕಾಲೇಜುಗಳು, ಒಂದು ಬಿಪಿಇಡಿ., ಹಾಗೂ ನಾಲ್ಕು ಸ್ನಾತಕೊತ್ತರ ಕಾಲೇಜುಗಳು ಇರುತ್ತವೆ.

### ದಾವಣಗೆರೆ ವಿಶ್ವ ವಿದ್ಯಾಲಯ (೨೦೦೯)

ಮೊದಲು ಅವಿಭಜಿತ ಚಿತ್ರದುರ್ಗ ಜಿಲ್ಲೆ ಮೈಸೂರು ವಿಶ್ವ ವಿದ್ಯಾಲಯದ ವ್ಯಾಪ್ತಿಗೆ ಒಳಪಟ್ಟಿತ್ತು. ೧೯೮೭ ರ ನಂತರ ಹೊಸದಾಗಿ ಸ್ಥಾಪನೆಯಾದ ಕುವೆಂಪು ವಿಶ್ವವಿದ್ಯಾಲಯ (ಲಕ್ಕವಳ್ಳಿ, ಶಿವಮೊಗ್ಗ ಜಿಲ್ಲೆ)ದ ವ್ಯಾಪ್ತಿಗೆ ಸೇರ್ಪಡೆಯಾಯಿತು. ೧೯೯೭ರಲ್ಲಿ ಚಿತ್ರದುರ್ಗ ಜಿಲ್ಲೆ ವಿಭಜನೆಯಾಗಿ ದಾವಣಗೆರೆ ಜಿಲ್ಲೆ ಅಸ್ತಿತ್ವಕ್ಕೆ ಬಂದ ನಂತರವೂ ಇದೇ ವ್ಯವಸ್ಥೆ ಮುಂದುವರೆಯಿತು. ದಾವಣಗೆರೆ ಹೊಸ ಜಿಲ್ಲೆ ಅಸ್ತಿತ್ವಕ್ಕೆ ಬಂದ ದಿನದಿಂದಲೂ ಜಿಲ್ಲೆಯ ಶಿಕ್ಷಣಾಸಕ್ತರು ಉನ್ನತ ಶಿಕ್ಷಣ ಸೌಲಭ್ಯಗಳಿಗಾಗಿ ಒತ್ತಾಯಿಸಿ 'ದಾವಣಗೆರೆ ವಿಶ್ವ ವಿದ್ಯಾಲಯ ಹೋರಾಟ ಸಮಿತಿ' ಯನ್ನು ರಚಿಸಿಕೊಂಡು ಜಿಲ್ಲೆಗೆ ಪ್ರತ್ಯೇಕ ವಿಶ್ವ ವಿದ್ಯಾಲಯ ಬೇಕೆಂದು ಹೋರಾಟ ನಡೆಸಿದ್ದರು. ಮೊದಲು ಉನ್ನತ ಶಿಕ್ಷಣಕ್ಕಾಗಿ ವಿದ್ಯಾರ್ಥಿಗಳು ಚಿತ್ರದುರ್ಗದವರು ಶಿವಮೊಗ್ಗಕ್ಕೂ, ಹಾವೇರಿಯಿಂದ ಧಾರವಾಡಕ್ಕೂ, ಬಳ್ಳಾರಿಯಿಂದ ದೂರದ ಗುಲಬರ್ಗಾ (ಇಂದಿನ ಕಲಬುರ್ಗಿ) ಕ್ಕೂ ಹೋಗಬೇಕಾದ ಅನಿವಾರ್ಯತೆ ಇತ್ತು. ದಾವಣಗೆರೆ ಪಟ್ಟಣ ಅಕ್ಕ ಪಕ್ಕದ ಜಿಲ್ಲೆಗಳಾದ ಚಿತ್ರದುರ್ಗ, ಹಾವೇರಿ ಮತ್ತು ಬಳ್ಳಾರಿ ಜಿಲ್ಲೆಗಳ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ಕೇಂದ್ರ ಸ್ಥಾನದಲ್ಲಿದ್ದು, ಇಲ್ಲಿ ವಿಶ್ವ ವಿದ್ಯಾಲಯ ಸ್ಥಾಪನೆಯಿಂದ ಈ ಎಲ್ಲ ಜಿಲ್ಲೆಗಳ ವಿದ್ಯಾರ್ಥಿಗಳಿಗೆ ಅನುಕೂಲವಾಗುವುದಾಗಿ ಹೋರಾಟ ಸಮಿತಿಯವರ ವಾದವಾಗಿತ್ತು. ಈ ಹೋರಾಟಕ್ಕೆ ಮಾನ್ಯತೆ ನೀಡಿದ ಸರ್ಕಾರವು ೨೦೦೮ ರಲ್ಲಿ ಬೆಳಗಾವಿಯಲ್ಲಿ ನಡೆದ ಶಾಸನ ಸಭಾ ಅಧಿವೇಶನದ ಕಾಲಕ್ಕೆ ಹೊಸ ವಿಶ್ವ

ವಿದ್ಯಾಲಯ ಸ್ಥಾಪನೆಗೆ ಮಂಜೂರಾತಿ ನೀಡಿತು. ಪ್ರಾರಂಭಕ್ಕೆ ೧೦ ಕೋಟಿ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡುವುದರ ಜೊತೆಗೆ ಮೈಸೂರು ವಿಶ್ವವಿದ್ಯಾಲಯದಲ್ಲಿ ಪ್ರೊಫೆಸರ್ ಆಗಿದ್ದ ಡಾ: ಇಂದುಮತಿಯವರನ್ನು ವಿಶೇಷಾಧಿಕಾರಿ ಎಂದು ನೇಮಕ ಮಾಡಿ ಹೊಸ ವಿಶ್ವ ವಿದ್ಯಾಲಯದ ಪ್ರಾರಂಭಕ್ಕೆ ಚಾಲನೆಯನ್ನು ನೀಡಿತು. ತದನಂತರ ಅವರನ್ನು ಸ್ವತಂತ್ರ ದಾವಾಣಗೆರೆ ವಿಶ್ವ ವಿದ್ಯಾಲಯಕ್ಕೆ ಕುಲಪತಿಯನ್ನಾಗಿ ನೇಮಕ ಮಾಡಲಾಯಿತು. ಈ ಮೊದಲೇ ಸ್ನಾತಕೋತ್ತರ ಅಧ್ಯಯನ ಕೇಂದ್ರವಾಗಿ ರೂಪುಗೊಂಡಿದ್ದ ತೋಳಹುಣಸೆಯ ಶಿವಗಂಗೋತ್ರಿ ಕ್ಯಾಂಪಸಿನ ೭೪ ಎಕರೆ ವಿಸ್ತೀರ್ಣದ ಪ್ರದೇಶದಲ್ಲಿ ಹೊಸ ವಿಶ್ವ ವಿದ್ಯಾಲಯ ಕಾರ್ಯಾರಂಭ ಮಾಡಿದೆ. ಹೊಸ ವಿಶ್ವ ವಿದ್ಯಾಲಯದಲ್ಲಿ ವಾಣಿಜ್ಯಶಾಸ್ತ್ರ, ಬಯೋ ಕೆಮಿಸ್ಟ್ರಿ, ಮೈಕ್ರೊ ಬಯಾಲಜಿ, ಅರ್ಥಶಾಸ್ತ್ರ, ಫುಡ್ ಟೆಕ್ನಾಲಜಿ, ಅಕೌಂಟಿಂಗ್ ಮತ್ತು ಹಣಕಾಸು, ಶಿಕ್ಷಣ, ಎಂ.ಎಸ್.ಡಬ್ಲ್ಯು., ಮುಂತಾದ ವಿಷಯಗಳಲ್ಲಿ ಸ್ನಾತಕೋತ್ತರ ಅಧ್ಯಯನದ ಅವಾಕಾಶವಿದೆ. ಇನ್ಸ್ ಟಿಟ್ಯೂಟ್ ಆಫ್ ಮ್ಯಾನೇಜ್ ಮೆಂಟ್ ಮತ್ತು ಲಲಿತ ಕಲೆಗಳ ಕಾಲೇಜು ಸಹ ಇದೆ.

### ಕರ್ನಾಟಕ ಪಶು ವೈದ್ಯಕೀಯ, ಪ್ರಾಣಿ ಮತ್ತು ಮೀನುಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ್ (KVAFSU) (೨೦೦೫)

ಬೆಂಗಳೂರು ಮತ್ತು ಧಾರವಾಡ ಕೃಷಿ ವಿಶ್ವವಿದ್ಯಾಲಯಗಳ ವ್ಯಾಪ್ತಿಯಲ್ಲಿದ್ದ ಪಶು ವೈದ್ಯಕೀಯ ಮೀನುಗಾರಿಕಾ ವಿಶ್ವವಿದ್ಯಾಲಯಗಳನ್ನು ಬೇರ್ಪಡಿಸಿ ೨೦೦೫-೦೬ರಲ್ಲಿ ನೂತನವಾಗಿ ಕರ್ನಾಟಕ ಪಶುವೈದ್ಯಕೀಯ ಮತ್ತು ಮೀನುಗಾರಿಕಾ ವಿಶ್ವವಿದ್ಯಾಲಯವನ್ನು ಬೀದರ್‌ನಲ್ಲಿ ಸ್ಥಾಪಿಸಲಾಯಿತು. ಈ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ನಾಲ್ಕು ಪಶುವೈದ್ಯಕೀಯ ಮಹಾ ವಿದ್ಯಾಲಯಗಳು (ಬೀದರ್, ಬೆಂಗಳೂರು, ಶಿವಮೊಗ್ಗ ಮತ್ತು ಹಾಸನ) ಎರಡು ಹೈನುಗಾರಿಕಾ ಮಹಾವಿದ್ಯಾಲಯಗಳು (ಬೆಂಗಳೂರು ಮತ್ತು ಕಲಬುರಗಿ) ಹಾಗೂ ಮಂಗಳೂರಿನಲ್ಲಿ ಒಂದು ಮೀನುಗಾರಿಕಾ ಮಹಾವಿದ್ಯಾಲಯ ಕಾರ್ಯನಿರ್ವಹಿಸುತ್ತಿದೆ. ಪಶುವಿಜ್ಞಾನದಲ್ಲಿ ಬಿ.ವಿ.ಎಸ್‌ಸಿ., ಮತ್ತು ಎಂ.ವಿ.ಎಸ್‌ಸಿ., ಪದವಿಗಳನ್ನು ಹಾಗೂ ಪಿಎಚ್.ಡಿ., ಪದವಿ ಶಿಕ್ಷಣವನ್ನು ನೀಡಲಾಗುತ್ತಿದೆ.

ಈ ವಿಶ್ವವಿದ್ಯಾಲಯವು ಪಶುವಿಜ್ಞಾನಕ್ಕೆ ಸಂಬಂಧಿಸಿದಂತೆ, ೧೨ ಸಂಶೋಧನಾ ಕೇಂದ್ರಗಳನ್ನು, ನಾಲ್ಕು ವಿಸ್ತರಣಾ ಘಟಕಗಳನ್ನು/ಸಂಸ್ಥೆಗಳನ್ನು ಹೊಂದಿದೆ. ಬೆಂಗಳೂರಿನಲ್ಲಿರುವ ಪ್ರಾಣಿಗಳ ಆರೋಗ್ಯ ಮತ್ತು ಪಶುವೈದ್ಯ ಜೀವ ವಿಜ್ಞಾನ ಸಂಸ್ಥೆಯು, ಈ ವಿಶ್ವವಿದ್ಯಾಲಯದ ಅಧೀನಕ್ಕೊಳಪಟ್ಟು ಕಾರ್ಯನಿರ್ವಹಿಸುತ್ತಿದೆ. ಬೆಂಗಳೂರಿನಲ್ಲಿ ೧೯೨೩ರಲ್ಲಿ ಸ್ಥಾಪಿತವಾದ ರಾಷ್ಟ್ರೀಯ ಕ್ಷೀರ ಸಂಶೋಧನಾಲಯವು (NDRI - National Dairy Research Institute) ಹೈನುಗಾರಿಕಾ ವ್ಯಾಸಂಗ ಹಾಗೂ ಸಂಶೋಧನಾ ಕೇಂದ್ರಗಳಿಗೆ ಉಪಯುಕ್ತ ಕೇಂದ್ರವಾಗಿದೆ. ಮೇವು ಉತ್ಪಾದನೆ, ಹಾಲು ಉತ್ಪಾದನೆಗಳಿಗಾಗಿ ಮಿಶ್ರತಳಿಗಳು, ತುಪ್ಪ, ಹಾಲು, ಹಾಲುಗಳ ಕಲಬೆರಕೆ ಗುರುತಿಸುವುದು ಮುಂತಾದ ವಿಷಯಗಳ ಬಗ್ಗೆ ಈ ವಿಶ್ವವಿದ್ಯಾಲಯವು ವ್ಯಾಪಕವಾದ ಸಂಶೋಧನೆಯನ್ನು ನಡೆಸಿದೆ.

### ಕರ್ನಾಟಕ ಸಂಗೀತ ವಿಶ್ವ ವಿದ್ಯಾಲಯ (೨೦೦೯)

ಕರ್ನಾಟಕ ಸಂಗೀತ ವಿಶ್ವ ವಿದ್ಯಾಲಯ ವನ್ನು ಡಾ: ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವ ವಿದ್ಯಾಲಯ ಎಂಬ ಹೆಸರಿನಲ್ಲಿ ೨೦೦೯ ರಲ್ಲಿ ಪ್ರಾರಂಭ ಮಾಡಲಾಗಿದ್ದು ಮೈಸೂರಿನಿಂದ ಕಾರ್ಯ ನಿರ್ವಹಿಸುತ್ತಿದೆ. ಈ ವಿಶ್ವ ವಿದ್ಯಾಲಯದಲ್ಲಿ ಪದವಿ, ಸ್ನಾತಕೋತ್ತರ ಹಾಗೂ ಪಿ.ಹೆಚ್.ಡಿ. ಪದವಿ ವರೆಗೆ ಶಿಕ್ಷಣವನ್ನು ನೀಡಲಾಗುತ್ತಿದೆ. ರಾಜ್ಯ ಸರ್ಕಾರದ ಕಾಯ್ದೆಯ ಪ್ರಕಾರ ಸ್ಥಾಪಿತವಾದ ಈ ವಿಶ್ವ ವಿದ್ಯಾಲಯ ಇನ್ನೂ ಸ್ವಂತ ಕಟ್ಟಡ ಮತ್ತು ಮೂಲಭೂತ ಸೌಲಭ್ಯಗಳನ್ನು ಹೊಂದಬೇಕಾಗಿದೆ.

### ಕರ್ನಾಟಕ ರಾಜ್ಯ ಕಾನೂನು ವಿಶ್ವ ವಿದ್ಯಾಲಯ, (KSLU) ಹುಬ್ಬಳ್ಳಿ (೨೦೦೯)

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾನಿಲಯವು ಆಗಸ್ಟ್ ೨೦೦೯ರಂದು ಹುಬ್ಬಳ್ಳಿಯ ನವನಗರ ದಲ್ಲಿ ಸ್ಥಾಪನೆಗೊಂಡಿದ್ದು, ರಾಜ್ಯದಲ್ಲಿ ಕಾನೂನು ಶಿಕ್ಷಣ ನೀಡುತ್ತಿರುವ ೮೭ ಕಾನೂನು ವಿದ್ಯಾಲಯಗಳನ್ನು ಒಳಗೊಂಡಿದೆ. ಈ ವಿಶ್ವವಿದ್ಯಾನಿಲಯವು ಸಂಶೋಧನೆ ಜೊತೆಗೆ ಬಿ.ಎ.ಎಲ್.ಎಲ್.ಬಿ; ಬಿ.ಬಿ.ಎ.ಎಲ್. ಎಲ್.ಬಿ; ಬಿ.ಬಿ.ಎ.ಎಲ್.ಎಲ್.ಬಿ (ಆನರ್ಸ್); ಎಲ್.ಎಲ್.ಬಿ; ಎಲ್. ಎಲ್.ಎಂ.ಪದವಿ ಶಿಕ್ಷಣ ಮತ್ತು ಸ್ನಾತಕೋತ್ತರ ಡಿಪ್ಲೊಮಾ ಪದವಿ ಶಿಕ್ಷಣವನ್ನು ನೀಡುತ್ತಿದೆ. ರಾಜ್ಯದಲ್ಲಿ ಕಾನೂನು ಶಿಕ್ಷಣ ನೀಡುವ ಕೆ.ಎಲ್.ಎಸ್.ಯು. ಲಾಸ್ಕೂಲ್, ನಾಲ್ಕು ಸರ್ಕಾರಿ ಕಾನೂನು ಕಾಲೇಜುಗಳು, ಎಂಟು ಖಾಸಗಿ ಅನುದಾನಿತ ಕಾಲೇಜುಗಳು, ೭೬ ಅನುದಾನರಹಿತ ಕಾಲೇಜುಗಳು, ಒಂದು ಸ್ವಾಯತ್ತ ಕಾಲೇಜು ಸೇರಿ ಒಟ್ಟು ೯೦ ಕಾಲೇಜುಗಳನ್ನು ಈ ವಿಶ್ವ ವಿದ್ಯಾಲಯದ ವ್ಯಾಪ್ತಿಗೆ ಒಳಪಡಿಸಲಾಗಿದೆ. ೨೦೧೨-೧೩ರ ಆಡಳಿತ ವರದಿಯಂತೆ ೧೫,೭೭೬ ವಿದ್ಯಾರ್ಥಿಗಳು ದಾಖಲಾತಿ ಪಡೆದಿದ್ದಾರೆ. ೧,೦೯೨ ಬೋಧಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಹುಬ್ಬಳ್ಳಿ ಧಾರವಾಡದ ಮಧ್ಯೆ ಹೆದ್ದಾರಿಯಲ್ಲಿ ಈ ಸಂಸ್ಥೆ ನೆಲೆಗೊಂಡಿದೆ.

### ಕರ್ನಾಟಕ ಸಂಸ್ಕೃತ ವಿಶ್ವ ವಿದ್ಯಾಲಯ, ಬೆಂಗಳೂರು– (೨೦೧೦)

ರಾಜ್ಯದಲ್ಲಿ ೨೦೦೯ ನೇ ಇಸವಿ ವರೆಗೆ ಸಂಸ್ಕೃತ ಶಿಕ್ಷಣ ಪಾಠಶಾಲೆಗಳು ಮತ್ತು ಕಾಲೇಜುಗಳುಸಾರ್ವಜನಿಕ ಶಿಕ್ಷಣ ಇಲಾಖೆಯ ಆಡಳಿತ ವ್ಯಾಪ್ತಿಗೆ ಒಳಪಟ್ಟಿದ್ದವು. ಬೆಂಗಳೂರು, ಮತ್ತು ಮೈಸೂರಿನಲ್ಲಿ ಸರ್ಕಾರಿ ಸಂಸ್ಕೃತ ಕಾಲೇಜುಗಳು, ಉಡುಪಿ ಮತ್ತು ಗೋಕರ್ಣ ಸೇರಿ ೦೯ ಅನುದಾನಿತ ಮತ್ತು ೦೩ ಅನುದಾನರಹಿತ ಖಾಸಗಿ ಕಾಲೇಜುಗಳಿದ್ದವು. ೨೦೧೦ ಸಂಸ್ಕೃತ ಶಿಕ್ಷಣದ ಉಸ್ತುವಾರಿಯನ್ನು ನೋಡಿಕೊಳ್ಳಲು ಪ್ರತ್ಯೇಕ ವಿಶ್ವ ವಿದ್ಯಾಲಯವನ್ನು ಸ್ಥಾಪಿಸಲಾಗಿದ್ದು ಪ್ರಸ್ತುತ ಈ ಎಲ್ಲ ಕಾಲೇಜುಗಳು ಹಾಗೂ ರಾಜ್ಯದಲ್ಲಿರುವ ಎಲ್ಲ ಸಂಸ್ಕೃತ ಪಾಠಶಾಲೆಗಳನ್ನು ವಿಶ್ವ ವಿದ್ಯಾಲಯ ಹಾಗೂ ಅದರ ಅಧೀನದ ನಿರ್ದೇಶನಾಲಯದ ಆಡಳಿತ ವ್ಯಾಪ್ತಿಗೆ ಒಳಪಡಿಸಲಾಗಿದೆ.

ನಮ್ಮ ದೇಶದ ಪ್ರಾಚೀನ ಜ್ಞಾನದೊಂದಿಗೆ ಆಧುನಿಕ ವಿಜ್ಞಾನ, ತಂತ್ರಜ್ಞಾನ ಮತ್ತು ಸಮಾಜ ವಿಜ್ಞಾನ ದ ಸಮರ್ಪಕ ಅರಿವು ಪಡೆಯಲು ಸಂಸ್ಕೃತ ಭಾಷೆಯ ಜ್ಞಾನ ಅತ್ಯಾವಶ್ಯಕವಾಗಿದೆ.

ಸಂಸ್ಕೃತವನ್ನು ಕೇವಲ ಒಂದು ಭಾಷಯನ್ನಾಗಿ ಪರಿಗಣಿಸದೆ ಸಂಸ್ಕೃತ ಸಾಹಿತ್ಯದಲ್ಲಿ ಅಡಕವಾಗಿರುವ ವೈಜ್ಞಾನಿಕ ಮತ್ತು ಆಧ್ಯಾತ್ಮಿಕ ಜ್ಞಾನವನ್ನು ಪರಿಗಣಿಸಬೇಕಾಗಿದೆ. ಈ ಉದ್ದೇಶದಿಂದ ರಾಜ್ಯ ಸರ್ಕಾರವು ಸಂಸ್ಕೃತ ಸಾಹಿತ್ಯದಲ್ಲಿ ಆಳವಾದ ಅಧ್ಯಯನ ಮತ್ತು ಸಂಶೋಧನೆಗಳಿಗೆ ಅವಕಾಶ ಕಲ್ಪಸುವ ದೃಷ್ಟಿಯಿಂದ ೨೦೧೦ ರಲ್ಲಿ ರಾಜ್ಯದಲ್ಲಿ ಸಂಸ್ಕೃತ ವಿಶವಿದ್ಯಾಲಯವನ್ನು ಸ್ಥಾಪನೆ ಮಾಡಿದೆ. ಸಂಸ್ಕೃತ ಭಾಷೆಯ ಮೂಲಕ ಅಧ್ಯಯನದ ನಮ್ಮ ದೇಶದ ಇತಿಹಾಸ ಮತ್ತು ಪರಂಪರೆಯನ್ನು ಅಧ್ಯಯನ ಮಾಡಲು ಅವಕಾಶ ಕಲ್ಪಿಸಲಾಗಿದೆ ಎಂಬುದಾಗಿ ವಿಶ್ವ ವಿದ್ಯಾಲಯದ ಘೋಷ ವ್ಯಾಖ್ಯೆಯಲ್ಲಿ ಹೇಳಲಾಗಿದೆ. ವಿಶ್ವ ವಿದ್ಯಾಲಯದ ಅಧೀನದಲ್ಲಿ ೩೧ ಸಂಸ್ಕೃತ ಕಾಲೇಜುಗಳು, ೨೪೩ ಅನುದಾನಿತ ವೇದ ಮತ್ತು ಪಾಠ ಶಾಲೆಗಳು ಕಾರ್ಯ ನಿರ್ವಹಿಸುತ್ತಿವೆ. ಈ ಮೊದಲು ಸಂಸ್ಕೃತ ಕಾಲೇಜುಗಳು ಮತ್ತು ಪಾಠಶಾಲೆಗಳು ಸಾರ್ವಜನಿಕ ಶಿಕ್ಷಣ ಇಲಾಖೆಯ ಆಡಳಿತ ವ್ಯಾಪ್ತಿಗೆ ಒಳಪಟ್ಟಿದ್ದವು. ಪ್ರಸ್ತುತ ಈ ಸಂಸ್ಥೆಗಳು ವಿಶ್ವ ವಿದ್ಯಾಲಯದ ಅಡಿಯಲ್ಲಿ ಸ್ಥಾಪಿಸಲಾಗಿರುವ ನಿರ್ದೇಶನಾಲಯದ ಆಡಳಿತ ವ್ಯಾಪ್ತಿಗೆ ಒಳಪಟ್ಟಿವೆ.

### ಕೃಷಿ ವಿಶ್ವವಿದ್ಯಾಲಯ, ರಾಯಚೂರು (೨೦೦೯)

೧೯೩೨ರಲ್ಲಿ ರಾಯಚೂರಿನಲ್ಲಿ ಕೃಷಿ ಸಂಶೋಧನಾ ಕೇಂದ್ರವನ್ನು ಸ್ಥಾಪಿಸಿದ್ದು, ೧೯೬೪ರಲ್ಲಿ ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯಕ್ಕೆ ಸೇರ್ಪಡೆಗೊಳಿಸಿ ಪ್ರಾದೇಶಿಕ ಸಂಶೋಧನಾ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸಲಾಯಿತು. ೧೯೬೯ರಲ್ಲಿ ಕೃಷಿ ತಾಂತ್ರಿಕ ಮಹಾವಿದ್ಯಾಲಯವನ್ನು ಪ್ರಾರಂಭಿಸಿ, ಪ್ರಾರಂಭದಲ್ಲಿ ಕೃಷಿ ತಾಂತ್ರಿಕತೆಯಲ್ಲಿ ಡಿಪ್ಲೊಮಾ ಪದವಿಯನ್ನು ನೀಡುತ್ತಿದ್ದು, ೧೯೮೭ರಲ್ಲಿ ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸಲು ಪ್ರಾರಂಭಿಸಿ ಡಿಪ್ಲೊಮಾ ಕೋರ್ಸ್‌ಗೆ ಬದಲಾಗಿ ತಾಂತ್ರಿಕ ಪದವಿಯನ್ನು ನೀಡಲು ಪ್ರಾರಂಭಿಸಿತು. ೧೯೮೮ರಲ್ಲಿ ರಾಯಚೂರಿನಲ್ಲಿ ಮತ್ತು ೨೦೦೦ದಲ್ಲಿ ಭೀಮರಾಯನ ಗುಡಿಯಲ್ಲಿ ಕೃಷಿ ಮಹಾವಿದ್ಯಾಲಯವನ್ನು ಪ್ರಾರಂಭಿಸಲಾಯಿತು. ೧೯೮೬ರಲ್ಲಿ ಧಾರವಾಡ ಕೃಷಿ ಮಹಾವಿದ್ಯಾಲಯಕ್ಕೆ ಸೇರ್ಪಡೆಗೊಂಡಿತು. ೨೦೦೮-೦೯ರಲ್ಲಿ ಧಾರವಾಡ ವಿಶ್ವವಿದ್ಯಾಲಯದಿಂದ ಪ್ರತ್ಯೇಕಗೊಂಡು ರಾಯಚೂರಿನಲ್ಲಿ ಸ್ವತಂತ್ರ ಕೃಷಿ ವಿಶ್ವವಿದ್ಯಾಲಯವಾಗಿ ಕಾರ್ಯಪ್ರಾರಂಭಿಸಿತು. ೧೯೯೫ರಲ್ಲಿ ಸ್ನಾತಕೋತ್ತರ ಪದವಿ ಕೋರ್ಸ್‌ಗಳನ್ನು ಎಂಟು ವಿಭಾಗಗಳಲ್ಲಿ ಪ್ರಾರಂಭಿಸಲಾಯಿತು. ೨೦೦೯-೧೦ರಲ್ಲಿ ಇದು ವಿಸ್ತರಣೆಗೊಂಡು ೧೩ ವಿಭಾಗಗಳಲ್ಲಿ ಕಾರ್ಯನಿರ್ವಹಿಸಲು ಪ್ರಾರಂಭಿಸಿತು. ಈ ವಿಶ್ವವಿದ್ಯಾಲಯದಲ್ಲಿ ಬಿಎಸ್.ಸಿ., (ಕೃಷಿ) ಮತ್ತು ಬಿ.ಟೆಕ್ (ಕೃಷಿ ತಾಂತ್ರಿಕ) ಪದವಿ ಮತ್ತು ಎಂ.ಎಸ್.ಸಿ., (ಕೃಷಿ) ಮತ್ತು ಎಂ.ಟೆಕ್ (ಕೃಷಿ ತಾಂತ್ರಿಕತೆ) ಸ್ನಾತಕೋತ್ತರ ಪದವಿ, ಶಿಕ್ಷಣ ನೀಡಲಾಗುತ್ತಿದೆ. ೨೦೧೦-೧೧ನೇ ಸಾಲಿನಲ್ಲಿ ಲಿಂಗಸುಗೂರು ಮತ್ತು ಕೊಪ್ಪಳಗಳಲ್ಲಿ ಎರಡು ಕೃಷಿ ವಿಸ್ತರಣಾ ಘಟಕಗಳನ್ನು ಪ್ರಾರಂಭಿಸಲಾಗಿದೆ.

### ಕೇಂದ್ರೀಯ ವಿಶ್ವ ವಿದ್ಯಾಲಯ, ಕಲಬುರ್ಗಿ (೨೦೦೯)

ಪದವಿ ಶಿಕ್ಷಣದ ಹಂತದಲ್ಲಿ ರಾಷ್ಟ್ರೀಯ ಸರಾಸರಿಯಾದ ಶೇಕಡ ೧೧ ಕ್ಕಿಂತ ಕಡಿಮೆ ದಾಖಲಾತಿ ಪ್ರಮಾಣ ಇರುವ ಶೈಕ್ಷಣಿಕವಾಗಿ ಹಿಂದುಳಿದ ಜಿಲ್ಲೆಗಳಲ್ಲಿ ಸಾರ್ವಜನಿಕರಿಗೆ ಗುಣಮಟ್ಟದ ಉನ್ನತ ಶಿಕ್ಷಣಕ್ಕೆ ಅವಕಾಶಗಳನ್ನು ಉತ್ತಮಪಡಿಸುವ ಉದ್ದೇಶದಿಂದ ವಿಶ್ವ ವಿದ್ಯಾಲಯ ಧನಸಹಾಯ ಆಯೋಗ (ಯು.ಜಿ.ಸಿ) ೧೧ ನೇ ಯೋಜನಾ ಅವಧಿಯಲ್ಲಿ ಸ್ಥಾಪಿಸಲಾದ ೧೬ ಹೊಸ ಕೇಂದ್ರೀಯ ವಿಶ್ವ ವಿದ್ಯಾಲಯಗಳ ಪೈಕಿ ಕಲಬುರಗಿಯ(ಗುಲಬರ್ಗದ) 'ಕೇಂದ್ರೀಯ ವಿಶ್ವ ವಿದ್ಯಾಲಯ ಕರ್ನಾಟಕ'ವೂ ಒಂದಾಗಿದೆ. ಕೇಂದ್ರ ಸರ್ಕಾರದ ಸೆಂಟ್ರಲ್ ಯೂನಿವರ್ಸಿಟೀಸ್ ಆಕ್ಟ್ ೨೦೦೯ ರ ಪ್ರಕಾರ ಅಸ್ತಿತ್ವಕ್ಕೆ ಬಂದಿರುವ ಈ ವಿಶ್ವ ವಿದ್ಯಾಲಯವು ಆಳಂದ ತಾಲ್ಲೂಕಿನ ಕಡಗಂಚಿ ಎಂಬಲ್ಲಿ ಸ್ಥಾಪಿತವಾಗಿದೆ. ಶೈಕ್ಷಣಿಕ ಉತ್ಕೃಷ್ಟತೆಯನ್ನು ಸಾಧಿಸುವ ಧ್ಯೇಯ, ದಾಖಲಾತಿ ಮತ್ತು ನೇಮಕಾತಿಯಲ್ಲಿ ಸಮಾನತೆಯ ತತ್ವಗಳನ್ನು ಅನುಷ್ಠಾನಗೊಳಿಸುವ ಉದ್ದೇಶದಿಂದ ಆಗಸ್ಟ್ ೨೦೦೯ ರಿಂದ ಕಾರ್ಯಾರಂಭ ಮಾಡಿರುವ, ರಾಷ್ಟ್ರಮಟ್ಟದ ಶೈಕ್ಷಣಿಕ ಮತ್ತು ಸಂಶೋಧನಾ ಸಂಸ್ಥೆಯಾದ ಈ ವಿಶ್ವವಿದ್ಯಾಲಯದ ಆಡಳಿತ ಮತ್ತು ಭೌಗೋಳಿಕ ವ್ಯಾಪ್ತಿ ಪೂರ್ಣ ಕರ್ನಾಟಕ ರಾಜ್ಯಕ್ಕೆ ವಿಸ್ತೃತವಾಗಿದೆ. ಆಳಂದ ತಾಲ್ಲೂಕಿನಲ್ಲಿ ಕಲಬುರ್ಗಿ-ವಾಗಧಾರಿ ಅಂತಾರಾಜ್ಯ ಹೆದ್ದಾರಿಯಲ್ಲಿರುವ ಕಡಗಂಚಿ ಮತ್ತು ಸುಂಟನೂರು ಗ್ರಾಮಗಳಿಗೆ ಸೇರಿದ ೬೫೦ ಎಕರೆ ಭೂಮಿಯನ್ನು ರಾಜ್ಯ ಸರ್ಕಾರವು ವಿಶ್ವ ವಿದ್ಯಾಲಯದ ಸ್ಥಾಪನೆಗಾಗಿ ಗುರುತಿಸಿ ಮಂಜೂರು ಮಾಡಿದೆ. ಈ ಸ್ಥಳದಲ್ಲಿ ಕಟ್ಟಡಗಳ ನಿರ್ಮಾಣ ಕಾರ್ಯ ಪ್ರತಿಯಲ್ಲಿದೆ.

### ರಾಣಿ ಚೆನ್ನಮ್ಮ ವಿಶ್ವ ವಿದ್ಯಾಲಯ, ಬೆಳಗಾವಿ (೨೦೧೦)

೨೦೧೦ ರಲ್ಲಿ ರಾಣಿ ಚೆನ್ನಮ್ಮ ವಿಶ್ವ ವಿದ್ಯಾಲಯ ಪ್ರಾರಂಭವಾಗುವ ಮೊದಲು ಧಾರವಾಡದ ಕರ್ನಾಟಕ ವಿಶ್ವ ವಿದ್ಯಾಲಯವು ಈ ಭಾಗದ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ಸೌಲಭ್ಯಗಳನ್ನು ಒದಗಿಸುವ ದೃಷ್ಟಿಯಿಂದ ೧೯೮೨ ರಲ್ಲಿ ಬೆಳಗಾವಿಯಲ್ಲಿ ಸ್ನಾತಕೋತ್ತರ ಶಿಕ್ಷಣ ಕೇಂದ್ರವನ್ನು ಪ್ರಾರಂಭ ಮಾಡಿತ್ತು. ೧೯೯೪ ರಲ್ಲಿ ಈ ಕೇಂದ್ರವನ್ನು ಬೆಳಗಾವಿ-ಪುಣೆ ರಾಷ್ಟ್ರೀಯ ಹೆದ್ದಾರಿಯಲ್ಲಿ ೧೮ ಕಿ.ಮೀ ದೂರದಲ್ಲಿರುವ ಭೂತರಾಮನ ಹಟ್ಟಿಯ ೧೭೨ ಎಕರೆ ವಿಸ್ತಾರದಲ್ಲಿ ಹೊಸದಾಗಿ ನಿರ್ಮಿಸಲಾದ ಕ್ಯಾಂಪಸಿಗೆ ಸ್ಥಳಾಂತರಿಸಲಾಯಿತು ಜುಲೈ ೨೦೧೦ ರಲ್ಲಿ ಈ ಕೇಂದ್ರವನ್ನು ರಾಣಿ ಚೆನ್ನಮ್ಮ ವಿಶ್ವ ವಿದ್ಯಾಲಯ ಎಂಬುದಾಗಿ ಉನ್ನತೀಕರಿಸಲಾಗಿದೆ. ಈ ವಿಶ್ವ ವಿದ್ಯಾಲಯವು ಬೆಳಗಾವಿ, ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳ ಆಡಳಿತ ವ್ಯಾಪ್ತಿಯನ್ನು ಹೊಂದಿದೆ.

ಪ್ರಸ್ತುತ ವಿಶ್ವ ವಿದ್ಯಾಲಯವು ಕಲೆ, ವಿಜ್ಞಾನ, ಸಮಾಜ ವಿಜ್ಞಾನ, ವಾಣಿಜ್ಯ ಮತ್ತು ನಿರ್ವಹಣಾ ಶಿಕ್ಷಣ ಮುಂತಾದ ೯ ವಿಷಯಗಳಲ್ಲಿ ಸ್ನಾತಕೋತ್ತರ ಶಿಕ್ಷಣವನ್ನು ನಿಡುವುದರ ಜೊತೆಗೆ ಎಂ.ಫಿಲ್ ಮತ್ತು ಪಿ.ಹೆಚ್.ಡಿ ಶಿಕ್ಷಣವನ್ನೂ ನೀಡುತ್ತಿದೆ. ಕಲಾವಿಭಾಗದ ಅರ್ಥಶಾಸ್ತ್ರ, ಸಮಾಜ ವಿಜ್ಞಾನ, ಸಾಮಾಜಿಕ ಸೇವೆ ವಿಷಯಗಳನ್ನು ಕನ್ನಡ ಮತ್ತು ಮಾರಾಠಿ ಮಾಧ್ಯಮಗಳಲ್ಲಿ ಆಧ್ಯಯನ ಮಾಡುವ ಅವಕಾಶವಿದೆ. ವಿಜ್ಞಾನ ವಿಷಯಗಳಲ್ಲಿ ಗಣಿತ, ಭೌತಶಾಸ್ತ್ರ, ರಸಾಯನಶಾಸ್ತ್ರ, ಗ್ರಂಥಾಲಯ ವಿಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನ, ವಾಣಿಜ್ಯ ಅರ್ಥಶಾಸ್ತ್ರ, ಕ್ರಿಮಿನಾಲಜಿ, ವಿಷಯಗಳಲ್ಲಿ ಸ್ನಾತಕೋತ್ತರ ಪದವಿಗೆ ಶಿಕ್ಷಣ ನೀಡಲಾಗುತ್ತಿದೆ. ಪ್ರಸ್ತುತ ಸ್ನಾತಕೋತ್ತರ ತರಗತಿಗಳಲ್ಲಿ ೫೦೦, ಎಂ.ಫಿಲ್ ಮತ್ತು ಪಿ.ಹೆಚ್. ಡಿ ವಿಭಾಗದಲ್ಲಿ ೧೦೦ ವಿದ್ಯಾರ್ಥಿಗಳು ಪದವಿ ಪಡೆದಿರುತ್ತಾರೆ.

### ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವ ವಿದ್ಯಾಲಯ, ಬಳ್ಳಾರಿ (೨೦೧೦)

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವ ವಿದ್ಯಾಲಯ, ಬಳ್ಳಾರಿ, ಈ ವಿಶ್ವ ವಿದ್ಯಾಲಯವು ೨೦೧೦ ರಲ್ಲಿ ಸ್ಥಾಪನೆಯಾಗಿದ್ದು ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಗಳ ಆಡಳಿತ ವ್ಯಾಪ್ತಿಯನ್ನು ಹೊಂದಿದೆ. ಪದವಿ ಮತ್ತು ಸ್ನಾತಕೋತ್ತರ ಶಿಕ್ಷಣ ನೀಡುವ ಸುಮಾರು ೧೦೦ ಕಾಲೇಜುಗಳು ಇದರ ವ್ಯಾಪ್ತಿಗೆ ಒಳಪಟ್ಟಿವೆ. ಬಳ್ಳಾರಿಯ ವಿನಾಯಕ ನಗರದ ಸಮೀಪ ೧೦೦ ಎಕರೆ ಪ್ರದೇಶದಲ್ಲಿ ವಿಶ್ವವಿದ್ಯಾಲಯದ ಕೇಂದ್ರ ಕಚೇರಿ 'ಜ್ಞಾನ ಸಂಗಮ' ಸ್ಥಾಪಿತವಾಗಿದೆ. ೧೪ ಸ್ನಾತಕೋತ್ತರ ವಿಭಾಗಗಳು ಕಾರ್ಯ ನಿರ್ವಹಿಸುತ್ತಿವೆ. ಸಂಡೂರು ತಾಲ್ಲೂಕಿನ ನಂದಿಹಳ್ಳಿಯಲ್ಲಿ ವಿಶ್ವ ವಿದ್ಯಾಲಯದ ಎರಡನೇ ಅಧ್ಯಯನ ಕೇಂದ್ರ ಇದ್ದು ಇಲ್ಲಿ ೧೦ ವಿಭಾಗಗಳಲ್ಲಿ ಶಿಕ್ಷಣ ನೀಡಲಾಗುತ್ತಿದೆ.

### ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ (೨೦೧೦)

೨೨-೧೧-೨೦೦೮ರಲ್ಲಿ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯವು ಕರ್ನಾಟಕ ರಾಜ್ಯದ ರಾಜ್ಯಪಾಲರ ಮಂಜೂರಾತಿ ಪಡೆದು ಬಾಗಲಕೋಟೆಯಲ್ಲಿ ಅಸ್ತಿತ್ವಕ್ಕೆ ಬಂದಿತು ಹಾಗೂ ವಿಶ್ವವಿದ್ಯಾಲಯಕ್ಕೆ ವಿಶೇಷ ಅಧಿಕಾರಿಗಳನ್ನು ನೇಮಿಸಲಾಯಿತು. ನಂತರ ೦೧-೦೪-೨೦೧೦ರಲ್ಲಿ ಕುಲಪತಿಗಳ ನೇಮಕವಾಯಿತು. ಈ ವಿಶ್ವವಿದ್ಯಾಲಯದ ಪ್ರಮುಖ ಕಾರ್ಯಕ್ರಮಗಳೆಂದರೆ ತೋಟಗಾರಿಕೆ ಹಾಗೂ ಸಂಬಂಧಿಸಿದ ಎಲ್ಲಾ ವಿಜ್ಞಾನವಿಭಾಗಗಳಲ್ಲಿ ಗುಣಮಟ್ಟದ ಶಿಕ್ಷಣ ನೀಡುವುದು, ತೋಟಗಾರಿಕೆಯ ವಿವಿಧ ವಿಭಾಗಗಳಲ್ಲಿ ಹಾಗೂ ಸಂಬಂಧಿಸಿದ ವಿಜ್ಞಾನ ವಿಭಾಗಗಳಲ್ಲಿ ಮೂಲ ಸಿದ್ಧಾಂತ ಆಧಾರಿತ ಸಂದರ್ಭೋಚಿತ ಸಂಶೋಧನೆಗಳನ್ನು ಕೈಗೊಳ್ಳುವುದು ಮತ್ತು ವಿಸ್ತರಣಾ ವ್ಯವಸ್ಥೆ ಹಾಗೂ ಪ್ರಸಾರಾಂಗಗಳ ಮೂಲಕ ಕೃಷಿ ಸಮುದಾಯಗಳಿಗೆ ತಾಂತ್ರಿಕತೆ ತಲುಪಿಸುವುದಾಗಿದೆ.

ಈ ವಿಶ್ವವಿದ್ಯಾಲಯವು ಹೊಂದಿದೆ ಹಾಗೂ ರೈತ ಸಮುದಾಯದ ಬೇಡಿಕೆಗಳನ್ನು ಈಡೇರಿಸಲು ಹಗಲಿರುಳು ದುಡಿಯುತ್ತಿದೆ. ವಿಶ್ವವಿದ್ಯಾಲಯದಲ್ಲಿ ಪ್ರಸ್ತುತ ಐದು ಪ್ರಾದೇಶಿಕ ತೋಟಗಾರಿಕೆ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರಗಳು, ಒಂಭತ್ತು ಸಂಶೋಧನಾ ಕೇಂದ್ರಗಳು ಮತ್ತು ಹನ್ನೆರಡು ಅಖಿಲ ಭಾರತೀಯ ಸಮನ್ವಯ ಸಂಶೋಧನಾ ಕೇಂದ್ರಗಳನ್ನು ಹೊಂದಿದೆ. ವಿಶ್ವವಿದ್ಯಾಲಯವು ವಿವಿಧ ಸಂಶೋಧನಾ ಕೇಂದ್ರಗಳಿಗೆ ಆಯಾಪ್ರದೇಶದಲ್ಲಿ ಕೈಗೊಳ್ಳಬಹುದಾದ ಸಂಶೋಧನಾತ್ಮಕ ಕ್ಷೇತ್ರಗಳನ್ನು ಗುರುತಿಸಿ ಆಯಾ ಪ್ರದೇಶದ ಮುಖ್ಯ ಬೆಳೆಗಳ ಮೇಲೆ ಸಂಶೋಧನೆಯನ್ನು ಬಲಪಡಿಸಲು ಯೋಜನೆ ಹಮ್ಮಿಕೊಂಡಿದೆ. ಈ ವಿಶ್ವವಿದ್ಯಾಲಯವು ೧೦ ತೋಟಗಾರಿಕಾ ವಿಸ್ತರಣಾ ಘಟಕಗಳನ್ನು ಹೊಂದಿದೆ. ಅವುಗಳೆಂದರೆ ಬೀದರ್, ಬಾಗಲಕೋಟೆ, ಮುನಿರಾಬಾದ್, ಧಾರವಾಡ, ಹಿರಿಯೂರು, ಮೂಡಿಗೆರೆ, ಮೈಸೂರು, ಉಳ್ಳಾಲ, ಕೋಲಾರ ಮತ್ತು ಅರಭಾವಿ ಈ ಎಲ್ಲಾ ವಿಸ್ತರಣಾ ಶಿಕ್ಷಣ ಘಟಕಗಳು ಆಯಾ ಭಾಗದ ರೈತರ ಅನುಕೂಲಕ್ಕಾಗಿ ವಿವಿಧ ವಿಸ್ತರಣಾ ಚಟುವಟಿಕೆಗಳನ್ನು ಏರ್ಪಡಿಸಿ, ರೈತರಿಗೆ ಬೇಕಾದ ಮಾಹಿತಿಗಳನ್ನು ನಿರಂತರವಾಗಿ ಒದಗಿಸುತ್ತಿದೆ.

### ಕರ್ನಾಟಕ ಜಾನಪದ ವಿಶ್ವ ವಿದ್ಯಾಲಯ, ಹಾವೇರಿ (೨೦೧೧)

೨೦೧೧ ರಲ್ಲಿ ಹಾವೇರಿ ಜಿಲ್ಲೆಯ ಶಿಗ್ಗಾವಿಯ ಗೋಟಗೋಡಿ ಎಂಬಲ್ಲಿ ಸ್ಥಾಪನೆಯಾಗಿರುವ ಕರ್ನಾಟಕ ಜಾನಪದ ವಿಶ್ವ ವಿದ್ಯಾಲಯವು ವಿಶ್ವದಲ್ಲಿ ಹಾಗೂ ಭಾರತದಲ್ಲಿ ಜಾನಪದ ವಿಷಯದಲ್ಲಿ ಅಧ್ಯಯನ ಕ್ಕಾಗಿಯೇ ಪ್ರತ್ಯೇಕವಾಗಿ ಸ್ಥಾಪನೆಯಾಗಿರುವ ಪ್ರಥಮ ವಿಶ್ವ ವಿದ್ಯಾಲಯವೆಂದು ಹೇಳಲಾಗಿದೆ. ೧೩ ಜೂನ್ ೨೦೧೨ ರಂದು ಕರ್ನಾಟಕದ ಮುಖ್ಯ ಮಂತ್ರಿಯವರಿಂದ ಉದ್ಘಾಟನೆಯಾಗಿರುವ ಈ ವಿಶ್ವ ವಿದ್ಯಾಲಯದ ಪ್ರಥಮ ಕುಲಪತಿಯಾಗಿ ಪ್ರೊ: ಅಂಬಳಿಕೆ ಹಿರಿಯಣ್ಣ ನೇಮಕವಾದರು. ಜನಪದ ವಿಷಯದಲ್ಲಿ ಎಂಎ.,ಎಂಎಸ್ಸಿ, ಪ್ರಾಚೀನ ವಿಜ್ಞಾನ, ಸಂವಹನ, ವಿಷಯಗಳಲ್ಲಿ ಸ್ನಾತಕೋತ್ತರ ಪದವಿ, ಗ್ರಾಮೀಣ ವ್ಯಾಪಾರ ವಿಷಯದಲ್ಲಿ ಎಂ.ಬಿ.ಎ. ಅಲ್ಲದೆ ಎಂ.ಫಿಲ್, ಮತ್ತು ಪಿ.ಹೆಚ್. ಡಿ ಮಟ್ಟದ ಸಂಶೋಧನೆಗಳಿಗೆ ಅವಕಾಶ ಕಲ್ಪಿಸಲಾಗಿದೆ.

### ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾಲಯ, ಶಿವಮೊಗ್ಗ (೨೦೧೩)

ಏಪ್ರಿಲ್ ೧, ೨೦೧೩ ರಲ್ಲಿ ಶಿವಮೊಗ್ಗದಲ್ಲಿ ಸ್ಥಾಪನೆಯಾಗಿರುವ ಕರ್ನಾಟಕ ಕೃಷಿ ಮತ್ತು ತೋಟಗಾರಿಕಾ ವಿಶ್ವ ವಿದ್ಯಾಲಯವು ರಾಜ್ಯದಲ್ಲಿ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನ ವಿಷಯಗಳನ್ನು ಒಟ್ಟಿಗೆ ಸಂಯೋಜನೆಗೊಂಡ ಏಕೈಕ ವಿಶಿಷ್ಠ ವಿದ್ಯಾಲಯ ವೆನಿಸಿಕೊಂಡಿದೆ. ಬೆಂಗಳೂರಿನ ಕೃಷಿ ವಿಶ್ವ ವಿದ್ಯಾಲಯದ ಆಡಳಿತ ವ್ಯಾಪ್ತಿಯಿಂದ ಏಳು ಜಿಲ್ಲೆಗಳನ್ನು ಹೊರ ತೆಗೆದು ಈ ವಿಶ್ವ ವಿದ್ಯಾಲಯದ ಆಡಳಿತ ವ್ಯಾಪ್ತಿಗೆ ವಹಿಸಲಾಗಿದೆ. ಅಲ್ಲದೆ ಬಾಗಲಕೋಟೆಯ ತೋಟಗಾರಿಕೆ ವಿಶ್ವವಿದ್ಯಾಲಯ ವ್ಯಾಪ್ತಿಗೆ ಸೇರಿದ್ದ ತೋಟಗಾರಿಕಾ ಶಿಕ್ಷಣ ಸಂಸ್ಥೆಗಳನ್ನು ಈ ವಿಶ್ವ ವಿದ್ಯಾಲಯದ ವ್ಯಾಪ್ತಿಗೆ ತರಲಾಗಿದೆ. ಪ್ರಸ್ತುತ ಶಿವಮೊಗ್ಗ, ಚಿಕ್ಕಮಗಳೂರು, ಉಡುಪಿ, ದಕ್ಷಿಣ ಕನ್ನಡ, ಕೊಡಗು, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳು ಈ ವಿಶ್ವ ವಿದ್ಯಾವಿಶ್ವವಿದ್ಯಾಲಯದ ಆಡಳಿತ ವ್ಯಾಪ್ತಿಗೆ ಒಳಪಡುತ್ತವೆ.

## ಸ್ವಾಯತ್ತ ಸ್ಥಾನಮಾನ ಪಡೆದ ಉನ್ನತ ಶಿಕ್ಷಣ ಸಂಸ್ಥೆಗಳು

### ಭಾರತೀಯ ವಿಜ್ಞಾನ ಸಂಸ್ಥೆ(Indian Institute of Science)

ಭಾರತೀಯ ವಿಜ್ಞಾನ ಸಂಸ್ಥೆಯು ಇಡೀ ದೇಶದಲ್ಲಿಯೇ ಅತಿ ಪ್ರಮುಖವಾದ ಸಂಶೋಧನಾ ಮತ್ತು ಉನ್ನತ ಮಟ್ಟದ ಅಧ್ಯಯನ ಕೇಂದ್ರವಾಗಿದ್ದು, ಜಮ್‌ಷೇಟ್‌ಜಿ ನಸರ್ ವಾನ್ ಜೀ ಟಾಟಾ ಅವರ ದೂರದೃಷ್ಟಿಯ ಫಲವಾಗಿ ಭಾರತ ಸರ್ಕಾರದಿಂದ ಬೆಂಗಳೂರಿನಲ್ಲಿ ೧೯೧೧ ರಲ್ಲಿ ಸ್ಥಾಪಿತವಾಯಿತು. ಸರ್.ಸಿ.ವಿ. ರಾಮನ್ ಮತ್ತು ಹೆಚ್.ಎಸ್.ಬಾಬಾರಂತಹ ವಿಜ್ಞಾನಿಗಳನ್ನೊಳಗೊಂಡ ಅತೀ ಶ್ರೇಷ್ಠ ಮಟ್ಟದ ಅಧ್ಯಾಪಕ ವರ್ಗವಿತ್ತು. ಇಲ್ಲಿನ ಮುಖ್ಯ ವಿಭಾಗಗಳು, ಭೌತಿಕ ವಿಜ್ಞಾನಗಳ ವಿಭಾಗ. ಇವಲ್ಲದೆ ಅನ್ವಯಿಕ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಗ್ರಾಮೀಣ ಪ್ರದೇಶಗಳಿಗೆ ಅಳವಡಿಸಲು ಒಂದು ಕೇಂದ್ರವನ್ನು ತೆರೆಯಲಾಗಿದ್ದು, ವೃತ್ತಿ ನಿರತರಿಗೆ ಶಿಕ್ಷಣವನ್ನು

ಕೊಡುವ ಒಂದು ಕೇಂದ್ರ ಕೂಡಾ ಇಲ್ಲದೆ. ಸಂಸ್ಥೆಯಲ್ಲಿ ಬೋಧನಾ ಮತ್ತು ಸಂಶೋಧನಾ ಕಾರ್ಯಗಳು ಎರಡೂ ನಡೆಯುತ್ತವೆ. ಬೋಧನೆಯು ಬಹುಮಟ್ಟಿಗೆ ಸ್ನಾತಕೋತ್ತರ ಮಟ್ಟದಲ್ಲಿ ನಡೆಯುತ್ತಿದೆ. ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಗಳಲ್ಲಿ ಕೆಲಸ ಮಾಡುವವರಿಗೆ ಬೇಕಾದ ತರಬೇತಿ ಕೊಡಲಾಗುತ್ತಿದೆ. ದೊಡ್ಡ ಮತ್ತು ಸಣ್ಣ ಕೈಗಾರಿಕೆಗಳ ಸಂಪರ್ಕವನ್ನು ಇಟ್ಟುಕೊಂಡು ಅವುಗಳಿಗೆ ಅಗತ್ಯವಾದ ಸಲಹೆಗಳನ್ನು ನೀಡುವುದೂ ಇದರ ಒಂದು ಕಾರ್ಯಕ್ರಮವಾಗಿದೆ. ಕರೆಂಟ್ ಸೈನ್ಸ್ ಎಂಬ ಪತ್ರಿಕೆಯ ಪ್ರಕಾರ ಭಾರತೀಯ ವಿಜ್ಞಾನ ಸಂಸ್ಥೆಯು ಸಂಶೋಧನಾ ಫಲಿತಾಂಶದ ಮತ್ತು ಶ್ರೇಷ್ಠ ಗುಣಮಟ್ಟದ, ವಿದ್ವಾಂಸರಾದ ಬೋಧಕ ವರ್ಗದ ದೃಷ್ಟಿಯಿಂದ ಮೊದಲ ದರ್ಜೆಯಲ್ಲಿ ನಿಲ್ಲುವಂತಹುದು. ಭಾರತೀಯ ವಿಶ್ವವಿದ್ಯಾಲಯಗಳಲ್ಲಿ ಮತ್ತು ದಕ್ಷಿಣ ಏಷಿಯಾದ ವಿಶ್ವವಿದ್ಯಾಲಯಗಳಲ್ಲೇ ಮೊದಲ ಸ್ಥಾನ ಪಡೆಯುವಂತಹುದು. ಈ ಸಂಸ್ಥೆಯು ಸಂಶೋಧನೆಗಾಗಿ ಭಾರತದ ಇತರೆ ವಿಶ್ವವಿದ್ಯಾಲಯಗಳಿಗಿಂತ ಅತಿ ಹೆಚ್ಚು ಹಣ ವ್ಯಯಿಸುತ್ತದೆ. ಇಲ್ಲಿಗೆ ಪ್ರವೇಶವೂ ಕೂಡ ತುಂಬಾ ಸ್ಪರ್ಧಾತ್ಮಕವಾಗಿರುತ್ತದೆ.

Graduate Aptitude Test for Engineers (GATE) ಪರೀಕ್ಷೆಯಲ್ಲಿ ಮೊದಲ ಒಂದು ಪ್ರತಿಶತದಲ್ಲಿ ಬಂದವರನ್ನು ಮಾತ್ರ ಆಯ್ದುಕೊಳ್ಳಲಾಗುತ್ತದೆ. ಮೈಸೂರಿನ ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ೩೭೨ ಎಕರೆ ಭೂಮಿಯನ್ನು ಈ ಸಂಸ್ಥೆಗೆ ಉಚಿತವಾಗಿ ಕೊಟ್ಟರು. ಜೆಮ್‌ಶೆಡ್‌ಜಿ ಟಾಟಾರವರು ಅನೇಕ ಕಟ್ಟಡಗಳನ್ನು, ಭೂಮಿಕಾಣಿಗೆಳನ್ನು ಈ ಸಂಸ್ಥೆಯನ್ನು ಕಟ್ಟುವುದಕ್ಕೋಸ್ಕರ ನೀಡಿದರು. ನಂತರದಲ್ಲಿ ಕರ್ನಾಟಕ ಸರ್ಕಾರವು ಸಂಸ್ಥೆಯ ಸ್ವರ್ಣ ಮಹೋತ್ಸವ ಮತ್ತು ಪ್ಲಾಟಿನಂ ಮಹೋತ್ಸವಗಳ ಸಂದರ್ಭಗಳಲ್ಲಿ ಭೂಮಿಯನ್ನು ದಾನ ಮಾಡಿತು. ಈ ಸಂಸ್ಥೆಯು ಈಗ ೪೪೩ ಎಕರೆ ಭೂಮಿಯನ್ನು ಹೊಂದಿದೆ. ಈ ಸಂಸ್ಥೆಯ ಸಂವಿಧಾನವನ್ನು ವೈಸ್‌ರಾಯ್‌ರವರಾದ ಲಾರ್ಡ್ ಮಿಂಟೋರವರು ಅನುಮೋದಿಸಿ ಅದನ್ನು ಸ್ಥಾಪಿಸುವ ಆಜ್ಞೆಯನ್ನು ಮೇ ೨೭, ೧೯೦೯ರಲ್ಲಿ ಸಹಿ ಮಾಡಿದರು. ೧೯೧೧ರ ಪ್ರಾರಂಭದಲ್ಲಿ ಮೈಸೂರು ಮಹಾರಾಜರು ಸಂಸ್ಥೆಗೆ ಅಡಿಗಲ್ಲು ಹಾಕಿದರು. ಜುಲೈ ೨೪ರಂದು ಮೊದಲ ತಂಡದ ವಿದ್ಯಾರ್ಥಿಗಳು ನಾರ್ಮನ್ ರುಡಾಲ್ಫ್ ನೇತೃತ್ವದಲ್ಲಿ ಅನ್ವಯಿಕ ರಸಾಯನಶಾಸ್ತ್ರ ವಿಭಾಗಕ್ಕೂ ಮತ್ತು ಆಲ್‌ಫ್ರೆಡ್ ಹೆ ಅವರ ನೇತೃತ್ವದಲ್ಲಿ ವಿದ್ಯುತ್ ತಾಂತ್ರಿಕ ವಿಭಾಗಕ್ಕೂ ಸೇರ್ಪಡೆಯಾದರು. ಎರಡು ತಿಂಗಳೊಳಗೆ ಇಂಗಾಲ ಸಂಯುಕ್ತಗಳ ರಸಾಯನ ವಿಜ್ಞಾನ (Organic Chemistry) ವಿಭಾಗವು ಪ್ರಾರಂಭವಾಯಿತು. ೧೯೫೬ರಲ್ಲಿ ವಿಶ್ವವಿದ್ಯಾಲಯ ಅನುದಾನ ಆಯೋಗ ಸ್ಥಾಪನೆಯಾದ ಮೇಲೆ, ಈ ಸಂಸ್ಥೆಯು ಒಂದು ಡೀಮ್ಡ್ ಯೂನಿವರ್ಸಿಟಿ ವ್ಯಾಪ್ತಿಯೊಳಗೆ ಬಂದಿತು. ೧೯೦೯ರ ಪ್ರಾರಂಭಿಕ ದಿನಗಳಲ್ಲಿ ವಿಲಿಯಂ ರ್‍ಯಾಮಸೆರವರ ಸಹವರ್ತಿ ಮೊರಿಸ್ ಟ್ರಾವರ್ಸ್ ಎಂಬುವವರು ಸಂಸ್ಥೆಯ ಮೊದಲ ನಿರ್ದೇಶಕರಾದರು. ಈ ಸಂಸ್ಥೆಯ ಸ್ಥಾಪನೆಗೆ ದುಡಿದ ವ್ಯಕ್ತಿಯಾದ ಇವರಿಗೆ ಇದು ಬಹಳ ಸಹಜವಾಗಿ ಇವರ ಕೆಲಸ ಮುಂದುವರಿಸಿಕೊಂಡು ಹೋಗಲು ಅನುವಾಯಿತು. ಈ ಸಂಸ್ಥೆಯನ್ನು ಟಾಟಾ ಇನ್‌ಸ್ಟಿಟ್ಯೂಟ್ ಎಂದೂ ಕರೆಯಲಾಗುತ್ತದೆ. ಇದು ಇದರ ಅನನ್ಯತೆಯಿಂದಾಗಿ ಬಹು ಪ್ರಮುಖವಾದ ಸಾಧನೆಯನ್ನು ಮಾಡಿದೆ. ಇದು ಕೇವಲ ಸಂಶೋಧನೆಗೇ ಮೀಸಲಾದ ನ್ಯಾಷನಲ್ ಲ್ಯಾಬೋರೇಟರಿಯೂ ಅಲ್ಲ ಅಥವಾ ಬಹುಪ್ರಮುಖವಾಗಿ ಬೋಧನಾ ಕಾರ್ಯಕ್ರಮದಲ್ಲಿ ತೊಡಗುವ ಸಾಂಪ್ರದಾಯಿಕ ವಿಶ್ವವಿದ್ಯಾಲಯವೂ ಅಲ್ಲ. ಏನೇ ಆದರೂ, ಈ ಸಂಸ್ಥೆ ಬಹುಪ್ರಮುಖ ಮುಂಚೂಣಿ ಸಂಶೋಧನಾ ಕ್ರಿಯೆಯ ಮುಂಚೂಣಿಯಲ್ಲಿದ್ದು ಪ್ರಮುಖವಾದ ಆಧುನಿಕ ತಾಂತ್ರಿಕ ಜ್ಞಾನದ ಪರಿಶೋಧನಾ ಕಾರ್ಯ ನಿರ್ವಹಿಸುತ್ತಿದೆ.

ಈ ಸಂಸ್ಥೆಯು ಮೊದಲು ಪರಿಚಯಿಸಿದ ಶೈಕ್ಷಣಿಕ ಕಾರ್ಯಯೋಜನೆಗಳು (೧) ಎಂಜಿನಿಯರಿಂಗ್ ಸ್ನಾತಕೋತ್ತರ (೨) ವಿಜ್ಞಾನ ವಿದ್ಯಾರ್ಥಿಗಳಿಗೆ ಇತ್ತೀಚೆಗೆ ಸಂಯುಕ್ತವಾಗಿ ಪಿಎಚ್.ಡಿ. ಸಂಶೋಧನೆಯನ್ನು ಜೈವಿಕ, ರಾಸಾಯನಿಕ, ಭೌತಿಕ ಮತ್ತು ಗಣಿತಶಾಸ್ತ್ರಗಳಲ್ಲಿ ತರಲಾಯಿತು (೩) +೨ರ ಮಟ್ಟದ (ಪಿಯುಸಿ) ಪರೀಕ್ಷೆಯಲ್ಲಿ ಮೊದಲ ೨೦ ರ್‍ಯಾಂಕುಗಳನ್ನು ಪಡೆದ ಯುವ ವಿದ್ಯಾರ್ಥಿಗಳಿಗೆ ಹೊಸದಾದ ಐ.ಐ.ಎಸ್ಸಿ. ಶಿಷ್ಯವೇತನ ಕಾರ್ಯಯೋಜನೆ (೪) ಇಂಜಿನಿಯರಿಂಗ್ ಅಧ್ಯಯನದಲ್ಲಿ ಮೂರನೆ ವರ್ಷದಲ್ಲಿ ಅತಿ ಬುದ್ಧಿವಂತ ಅರ್ಹತೆ ಹೊಂದಿರುವ ವಿದ್ಯಾರ್ಥಿಗಳಿಗೆ ಮತ್ತು ಬಿ.ಟೆಕ್ ವಿದ್ಯಾರ್ಥಿಗಳಿಗೆ ಇಂಜಿನಿಯರಿಂಗ್ ಶಿಷ್ಯವೇತನ ನೀಡುವುದು. ಈ ಸಂಸ್ಥೆಯ ಆವರಣದೊಳಗೆ ४೦ ಇಲಾಖೆಗಳಿವೆ. ಆರು ಉಪಹಾರ ಗೃಹಗಳಿವೆ. ಒಂದು ವ್ಯಾಯಾಮಶಾಲೆ, ಮೂರು ಭೋಜನಶಾಲೆಗಳು, ಒಂದು ವಿವಿಧ ಭಕ್ಷ್ಯಗಳ ಕುಟುಂಬ ಉಪಹಾರಗೃಹ, ಒಂಭತ್ತು ಪುರುಷರ ಮತ್ತು ಐದು ಮಹಿಳೆಯರ ವಿದ್ಯಾರ್ಥಿನಿಲಯಗಳು, ಒಂದು ವಿಮಾನಯಾನ ದಾರಿ, ಒಂದು ಗ್ರಂಥಾಲಯ, ಎರಡು ವ್ಯಾಪಾರ ಸಂಕೀರ್ಣಗಳು, ಒಂದು ಅಂಗಮರ್ದನ ಕೇಂದ್ರ, ಒಂದು ಸೌಂದರ್ಯ ಸಾಧಕ ಕೇಂದ್ರ, ಶಿಕ್ಷಕರಿಗೆ ಮತ್ತು ಸಿಬ್ಬಂದಿಗೆ ವಸತಿ ಪ್ರದೇಶಗಳಿವೆ.

ಗ್ರಂಥಾಲಯವು ೧೯೧೧ರಲ್ಲಿ ಮೂರು ವಿಭಾಗಗಳಲ್ಲಿ ಒಂದಾಗಿ ಈ ಸಂಸ್ಥೆಯಲ್ಲಿ ಪ್ರಾರಂಭಗೊಂಡಿತು. ಇಡೀ ಭಾರತದಲ್ಲಿ ಅತಿ ಶ್ರೇಷ್ಠ ವಿಜ್ಞಾನ, ಮತ್ತು ತಾಂತ್ರಿಕ ವಿಷಯಗಳ ಗ್ರಂಥಾಲಯವೆಂಬ ಹೆಗ್ಗಳಿಕೆ ಹೊಂದಿದೆ. ಮುಖ್ಯ ಗ್ರಂಥಾಲಯವಲ್ಲದೆ ಇಲಾಖಾ ಗ್ರಂಥಾಲಯಗಳೂ ಸಹ ಇವೆ. ಗ್ರಂಥಾಲಯವು ಈಗಿರುವ ಸ್ಥಳಕ್ಕೆ ೧೯೬೫ರಲ್ಲಿ ಸ್ಥಳಾಂತರಗೊಂಡಿತು. ಇದನ್ನು ವಿಶ್ವವಿದ್ಯಾಲಯ ಧನಸಹಾಯ ಆಯೋಗದ ಅನುದಾನದಿಂದ ಸಂಸ್ಥೆಯ ಸುವರ್ಣ ಮಹೋತ್ಸವದ ನೆನಪಿಗಾಗಿ ೧೯೫೯ ರಲ್ಲಿ ಕಟ್ಟಲಾಯಿತು. ಇದಕ್ಕೆ ೧೯೯೫ರಲ್ಲಿ ಜೆ.ಆರ್.ಡಿ. ಟಾಟಾ ಗ್ರಂಥಾಲಯವೆಂದು ಪುನರ್ ನಾಮಕರಣ ಮಾಡಲಾಯಿತು. ಈ ಸಂಸ್ಥೆಯಲ್ಲಿ ೧೯೭೦ರಲ್ಲಿ ಪ್ರಾರಂಭಗೊಂಡ ಗಣಕಯಂತ್ರ ಕೇಂದ್ರವು ಮೇಲ್ದರ್ಜೆಯ ಗಣಕಯಂತ್ರ (Super computer) ಶಿಕ್ಷಣ ಮತ್ತು ಸಂಶೋಧನಾ ಕೇಂದ್ರವಾಯಿತು (೧೯೯೦). ಇದರ ಉದ್ದೇಶ ಗಣಕ ಅನುಕೂಲವನ್ನು ಕೇಂದ್ರದ ಬೋಧಕ ಮತ್ತು ವಿದ್ಯಾರ್ಥಿಗಳಿಗೆ ನೀಡುವುದಾಗಿತ್ತು. ಪ್ಲಾಟಿನಂ ಮಹೋತ್ಸವದ ನೆನಪಿಗಾಗಿ ಇದನ್ನು ಪ್ರಾರಂಭಿಸಿ ಇದರ ಖರ್ಚು ವೆಚ್ಚಗಳನ್ನು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವ ಖಾತೆ ನೋಡಿಕೊಳ್ಳುತ್ತಿದೆ. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಸಂಸ್ಥೆ ಪ್ರವೇಶ ಪಡೆಯುವುದು ಹೆಚ್ಚಿನ ಸ್ಪರ್ಧಾತ್ಮಕವಾಗಿರುತ್ತದೆ. ಸಾಧಾರಣವಾಗಿ GAT ಇಪರೀಕ್ಷೆಯಲ್ಲಿ ಉತ್ತೀರ್ಣರಾಗುವವರಲ್ಲಿ ಶೇಕಡಾ ಒಂದರಷ್ಟು ಅಭ್ಯರ್ಥಿಗಳು ಮಾತ್ರ ಎಂ.ಇ. ಮತ್ತು ಎಂ.ಟೆಕ್. ಶಿಕ್ಷಣಕ್ಕೆ ಪ್ರವೇಶ ಪಡೆಯಲು ಸಾಧ್ಯವಾಗುತ್ತದೆ. ಒಂದು ನಿರ್ದಿಷ್ಟ ಮಿತಿಯನ್ನು ಇಲಾಖೆ ಮತ್ತು ವಿದ್ಯಾರ್ಥಿಗಳ ಸಂಖ್ಯೆಯನ್ನನುಸರಿಸಿ

ನಿರ್ಧರಿಸಲಾಗುತ್ತದೆ. ಸಂಶೋಧನಾ ಕಾರ್ಯಗಳಿಗೆ ಅಂದರೆ ಪಿಎಚ್.ಡಿ. ಮತ್ತು ಎಂ.ಎಸ್ಸಿ., ಎಂಜಿನಿಯರಿಂಗ್ ಅಧ್ಯಯನಕ್ಕೆ ಅಭ್ಯರ್ಥಿಯ ಅಧ್ಯಯನಶೀಲತೆ, ಗುಣಮಟ್ಟದ ಪರೀಕ್ಷೆ ಮತ್ತು ಹಲವಾರು ಸುತ್ತು ಸಂದರ್ಶನಗಳನ್ನು ಸಂಸ್ಥೆಯ ಆವರಣದಲ್ಲಿ ನಡೆಸಿ ನಿರ್ಧರಿಸಲಾಗುತ್ತದೆ. ಈ ಸಂಸ್ಥೆಯು ನಡೆಸುವ ಪ್ರವೇಶ ಪರೀಕ್ಷೆ ಅಥವಾ ಸಂಸ್ಥೆ ಪುರಸ್ಕರಿಸುವ ಇತರೆ ಪರೀಕ್ಷೆಗಳನ್ನು ಅವಲಂಬಿಸಿ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆಯಲಾಗುತ್ತದೆ. ನಿರ್ದಿಷ್ಟ ಅಧ್ಯಯನಕ್ಕೆ ಸಂಬಂಧಿಸಿದಂತೆ ಎಂ.ಇ. ಮತ್ತು ಎಂ.ಟೆಕ್ ಪ್ರವೇಶವು ಪ್ರತಿವರ್ಷ ನಡೆಸುವ ಉಂಖಇಪರೀಕ್ಷೆಯ ಫಲಿತಾಂಶದ ಮೇಲಾಗುತ್ತದೆ. ನಿರ್ವಹಣಾ ಸ್ನಾತಕೋತ್ತರ ಅಧ್ಯಯನಕ್ಕೆ (ಎಂ.ಬಿ.ಎ.) ದೇಶದ ಎಲ್ಲರಿಗೂ ಸೇರಿದಂತೆ ೨೫ ಸ್ಥಾನಗಳು ಮಾತ್ರ ಇರುತ್ತವೆ. ಇದಕ್ಕೆ ಜಂಟಿ ನಿರ್ವಹಣಾ ಪ್ರವೇಶ ಪರೀಕ್ಷೆ (JMET) ಯನ್ನು ಐ.ಐ.ಎಸ್.ಸಿ., ಮತ್ತು ಐ.ಐ.ಟಿ. ಸಂಸ್ಥೆಗಳು ನಡೆಸುತ್ತವೆ. ಇದರ ಜೊತೆಗೆ ಗುಂಪು ಚರ್ಚೆ ಮತ್ತು ವೈಯಕ್ತಿಕ ಸಂದರ್ಶನಗಳನ್ನೂ ನಡೆಸಿ ಅಭ್ಯರ್ಥಿಗಳನ್ನು ಆರಿಸಲಾಗುತ್ತದೆ. ೨೦೦೯ರಲ್ಲಿ ಈ ಸಂಸ್ಥೆಯ ಶತಮಾನೋತ್ಸವವನ್ನು ಯಶಸ್ವಿಯಾಗಿ ಆಚರಿಸಲಾಯಿತು.

### ಭಾರತೀಯ ಭೌತಶಾಸ್ತ್ರ ವಿಜ್ಞಾನ ಮಂದಿರ – (ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಆ್ಯಸ್ಟ್ರೋಫಿಸಿಕ್ಸ್–(IIA)

ಖಗೋಳ ಹಾಗೂ ಭೌತಶಾಸ್ತ್ರ (Astronomy and Astrophysics) ಗಳಲ್ಲಿ ಸಂಶೋಧನೆ ನಡೆಸುತ್ತಿರುವ ಭಾರತೀಯ ಖಭೌತಶಾಸ್ತ್ರ ವಿಜ್ಞಾನ ಮಂದಿರವು ಸ್ವಯಂಆಡಳಿತ ಹೊಂದಿರುವ ಸಂಸ್ಥೆಯಾಗಿದೆ. ಸುಮಾರು ೫೦ ಮಂದಿ ವಿಜ್ಞಾನಿಗಳು ಹಾಗೂ ತಂತ್ರಜ್ಞರನ್ನು ಹೊಂದಿದ ಈ ಸಂಸ್ಥೆಗೆ ಭಾರತ ಸರಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗ (Department of Science and Technology) ದಿಂದ ಅನುದಾನ ದೊರಕುತ್ತಿದೆ. ಐ.ಐ.ಎ.ಗೆ ಸುಮಾರು ಇನ್ನೂರು ವರ್ಷದ ಹಿನ್ನೆಲೆಯಿದ್ದು, ಎವರ್‌ಶೆಡ್ ಪರಿಣಾಮ, ಗುರುಗ್ರಹದ ಉಪಗ್ರಹವಾದ ಗನಿವೆಂಡೆಯುದ ವಾತಾವರಣ, ಯುರೇನಸ್ ಉಪಗ್ರಹದ ಸುತ್ತ ಇರುವ ಉಂಗುರಾಕೃತಿಯ ಸುರುಳಿಗಳು, 'ಶ್ರೀನಿವಾಸ ರಾಮಾನುಜಂ' ಎಂಬ ಆಕಾಶಕಾಯ ಇತ್ಯಾದಿಗಳ ಮೇಲೆ ಸಂಶೊಧನೆ ನಡೆದಿವೆ. ಅಷ್ಟೇ ಅಲ್ಲ, ಹತ್ತಿರದ ಸೂರ್ಯಮಂಡಲದಿಂದ ಹಿಡಿದು ದೂರದ ಆಕಾಶ ಗಂಗೆ (Galaxy) ಹಾಗೂ ಕ್ಲಸ್ಟರ್ಸ್‌ಗಳನ್ನು ಇನ್ನೂ ಹೆಚ್ಚಾಗಿ ಅರಿಯುವ ಪ್ರಯತ್ನ ಸಾಗಿದೆ. ನೋವಾ (ಸ್ಫೋಟನೆಯನ್ನು ಸೂಚಿಸುವ ಚಂಚಲ ನಕ್ಷತ್ರಗಳು) ಮತ್ತು ಪುನಾರಾವೃತ್ತಿಯ ಸ್ಫೋಟಕ್ಕೆ ಒಳಗಾಗುವ 'ರೆಕರೆಂಟೆನೋವಾ' ಎಂಬ ಗುಂಪಿಗೆ ಸೇರಿದ Rsoph ಎಂಬ ನಕ್ಷತ್ರಗಳ ಬಗ್ಗೆ ಸಂಶೋಧನೆ ನಡೆದಿದೆ. ಈ ನಕ್ಷತ್ರಗಳಲ್ಲಿ ಶ್ವೇತ ಕುಬ್ಜಗಳನ್ನು ಕಂಡುಹಿಡಿದು, ನೋವಾಗಳಲ್ಲಿ ವಿಕಾಸ ಹೊಂದುತ್ತಿರುವ ನಕ್ಷತ್ರ ಸಂಗಾತಿ ಶ್ವೇತ ಕುಬ್ಜಕ್ಕೆ ವಸ್ತುವನ್ನು ಚೆಲ್ಲುತ್ತಿದೆ ಎಂಬ ಸಿದ್ಧಾಂತ ಸ್ಫುಟವಾಗಿದೆ. ಸೂಪರ್‌ನೋವಾದ (IA) ವರ್ಗದ್ದು, ಅವುಗಳ ಸಿಡಿತಕ್ಕೆ ಕಾರಣವಾಗುವ 'ಯಮಳ' ನಕ್ಷತ್ರದ ಸಂಶೋಧನೆಯೂ ಆಗಿದೆ.

ನಕ್ಷತ್ರಗಳು ಹುಟ್ಟುವ ಸ್ಥಳಗಳ ಅಭ್ಯಸಿಸುವಿಕೆ. ನಕ್ಷತ್ರಗಳ ವಿಕಸನ, ಕೃಷ್ಣರಂಧ್ರ (ಬ್ಲ್ಯಾಕ್ ಹೋಲ್), ಭೌತಶಾಸ್ತ್ರ, ವಿಶ್ವೋತ್ಪತ್ತಿಶಾಸ್ತ್ರ, ತಾತ್ವಿಕ ಭೌತಶಾಸ್ತ್ರ, ವೇಗೋತ್ಕರ್ಷರಹಿತ ಕಣಗಳ ಶಾಸ್ತ್ರ –ಇವುಗಳ ಮೇಲೆ ಬೆಳಕು ಚೆಲ್ಲುವ ಪ್ರಯತ್ನ ನಡೆಯುತ್ತಿದೆ. ಬೆಂಗಳೂರಿನ ಮುಖ್ಯ ಸಂಶೋಧನಾಲಯಕ್ಕೆ ಪೂರಕವಾಗಿ ಗೌರಿಬಿದನೂರಿನಲ್ಲಿ ಡೆಕಾಮೀಟರ್ ದೂರ ದರ್ಶಕ, ಇಂಡೋಟಿಬೆಟ್ ಬಾರ್ಡರ್‌ನ ಹನ್ಲೆಯಲ್ಲಿ ಎರಡು ಮೀಟರ್ ಚಂದ್ರ ದೂರದರ್ಶಕ, ಕೊಡೈಕೆನಾಲ್‌ನಲ್ಲಿ ಸೌರ ಸಮೀಕ್ಷಣಾ ಮಂದಿರ ಹಾಗೂ ಕವಲೂರಿನಲ್ಲಿ ವೈನುಬಾಪು ನಿರೀಕ್ಷಣಾಲಯಗಳಿವೆ. ಹನ್ಲೆಯ ದೂರದರ್ಶಕವು ಜಗತ್ತಿನಲ್ಲಿ ಅತಿ ಎತ್ತರ, ಅಂದರೆ ೧೫೦೦೦ ಅಡಿ ಎತ್ತರದಲ್ಲಿರುವ ದೂರದರ್ಶಕವಾಗಿದೆ. ಹಾಗೆಯೇ ಇಸ್ರೊ ಸಂಸ್ಥೆಯ ಜೊತೆ ಜಂಟಿ ಕಾರ್ಯಾಚರಣೆಯಾಗಿ ಬಹು ತರಂಗಾಂತರ ಖಗೋಳ ಉಪಗ್ರಹ ಆ್ಯಸ್ಟ್ರೋಸ್ಯಾಟ್ (ೂಣಡಿೞಚಿಣ) ದಲ್ಲಿ ೧ಿಅಲ್ಟ್ರಾವಯಲೆಟ್ ದರ್ಶಕವನ್ನೊಯ್ಯುವ ಪ್ರಕ್ರಿಯೆ ನಡೆದಿದೆ. ಹೊಸಕೋಟೆಯ ದಿ ಸೆಂಟರ್ ಫಾರ್ ರಿಸರ್ಚ್ ಅಂಡ್ ಎಜ್ಯುಕೇಶನ್(ಅಖಇಖಿ)ನಿಂದ ಹನ್ಲೆಯಲ್ಲಿ ಸ್ಥಾಪಿಸಲಾದ ಚಂದ್ರ ದೂರದರ್ಶಕವನ್ನು ನಿಯಂತ್ರಿಸುವ ಸೌಲಭ್ಯವೂ ಇದೆ. ಸಂಶೋಧನಾ ಚಟುವಟಿಕೆಗೆ ಪೂರಕವಾಗಿ ಪದವಿ ವಿದ್ಯಾರ್ಥಿಗಳನ್ನು ನೋಂದಾಯಿಸುವ ಮತ್ತು ಅಂತಹ ಆಯ್ದ ವಿದ್ಯಾರ್ಥಿಗಳಿಗೆ ಪಿ.ಎಚ್.ಡಿ.ಗೋಸ್ಕರ ಅಧ್ಯಯನ ಮಾಡುವ ಏರ್ಪಾಡು ಮಾಡಲಾಗಿದೆ. ಈಗಾಗಲೇ ಮೂವತ್ತು ವಿದ್ಯಾರ್ಥಿಗಳು ಪಿ.ಎಚ್.ಡಿ ಪಡೆದಿರುತ್ತಾರೆ. ಇದಕ್ಕಾಗಿ 'ಬೋರ್ಡ್ ಆಫ್ ಸ್ಟಡೀಸ್' ಇದೆ. ವಿದ್ಯಾರ್ಥಿವೇತನ, ವಸತಿಗೃಹ ಉಪಹಾರ ಗೃಹಗಳ ಸೌಲಭ್ಯ ಮತ್ತು ರಾಷ್ಟ್ರೀಯ ಹಾಗೂ ಅಂತರ ರಾಷ್ಟ್ರೀಯ ವಿಜ್ಞಾನ ಸಭೆಗಳಲ್ಲಿ ತಮ್ಮ ಪ್ರಬಂಧಗಳನ್ನು ಮಂಡಿಸಲು ಸಹಾಯ ಕಲ್ಪಿಸಲಾಗಿದೆ. ಖಾಸಗಿ ಶಿಕ್ಷಣ ಸಂಸ್ಥೆಗಳ ಮನವಿಯ ಮೇರೆಗೆ ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಇಲಾಖೆಯು ಸಂಪೂರ್ಣವಾದ ಮತ್ತು ವಿವರವಾದ ಸಮೀಕ್ಷೆ ನಡೆಸಿ ಗೌರವ ವಿಶ್ವವಿದ್ಯಾಲಯಗಳ ಸ್ಥಾಪನೆಗೆ ಮಂಜೂರಾತಿ ನೀಡಿದೆ. ಕರ್ನಾಟಕದಲ್ಲಿನ ಗೌರವವಿಶ್ವವಿದ್ಯಾಲಯಗಳ ವಿವರ ಮುಂದಿನ ಪುಟದಲ್ಲಿ ನೀಡಲಾಗಿದೆ.

### ಭಾರತೀಯ ನಿರ್ವಹಣಾ ಸಂಸ್ಥೆ, ಬೆಂಗಳೂರು(The Indian Institute of Management, [IIM], Bangalore)

ಭಾರತೀಯ ನಿರ್ವಹಣಾ ಸಂಸ್ಥೆ ೧೯೭೩ರಲ್ಲಿ ಬೆಂಗಳೂರಿನಲ್ಲಿ ಭಾರತ ಸರ್ಕಾರದಿಂದ ಸ್ಥಾಪಿಸಲ್ಪಟ್ಟಿತು. ಇಂದು ಇದು ಜಗತ್ತಿನ ಶ್ರೇಷ್ಠ ಮೂರು ಬಿಸೆನೆಸ್ ಸ್ಕೂಲ್‌ಗಳಲ್ಲಿ ಒಂದಾಗಿದೆ. ಈ ಸಂಸ್ಥೆಯು ಅತ್ಯಂತ ಶ್ರೇಷ್ಠ ಮಟ್ಟದ ಸಂಶೋಧನೆಯನ್ನು ವಿಶ್ವಮಟ್ಟದ ಮೌಲ್ಯಗಳು, ಲಕ್ಷಣಗಳು ಮತ್ತು ಪ್ರಭೇದಗಳ ಬಗ್ಗೆ ನಡೆಸುತ್ತಿದೆ. ಆರ್ಥಿಕ ಮತ್ತು ಸಾಮಾಜಿಕ ವಿಷಯಗಳ ಬಗ್ಗೆ ಇದರ ಅಭಿಪ್ರಾಯಗಳಿಗೆ ಬಹಳ ಗೌರವ ವ್ಯಕ್ತವಾಗುತ್ತಿದೆ. ಅಲ್ಲದೆ ಇದರಲ್ಲಿ ಜರುಗುವ ಗುಣಾತ್ಮಕ ಸಂಶೋಧನೆಗಳ ಮತ್ತು ಫಲಿತಾಂಶಗಳ ಬಗ್ಗೆ ಬಹಳ ಗೌರವಯುತವಾದ ಮೆಚ್ಚುಗೆ ವ್ಯಕ್ತವಾಗುತ್ತಿದೆ. ಈ ಸಂಸ್ಥೆಯು ಕೆಳಗೆ ನಮೂದಿಸಿರುವ ಅಧ್ಯಯನ ವಿಷಯಗಳನ್ನು ಬೆಂಗಳೂರಿನ ಕೇಂದ್ರದಲ್ಲಿ ಹೊಂದಿದೆ: ೧) ಸಾರ್ವಜನಿಕ ನೀತಿಯ ಕೇಂದ್ರ, ೨) ಬಂಡವಾಳ ಮಾರುಕಟ್ಟೆ ಶಿಕ್ಷಣ ಸಂಶೋಧನಾ ಕೇಂದ್ರ, ೩) ಕಾರ್ಪೋರೇಟ್ ಆಡಳಿತ ಮತ್ತು ಪೌರತ್ವ ಕೇಂದ್ರ, ೪) ದೂರ ಶಿಕ್ಷಣ ಕೇಂದ್ರ, ೫) ಪ್ರಕರಣಗಳ ಅಭಿವೃದ್ಧಿ ಮತ್ತು ಬೋಧನಾ ಸಲಕರಣೆಗಳ ಕೇಂದ್ರ, ೬) ಉದ್ಯಮಶೀಲತೆ ಸೌಲಭ್ಯ ಯೋಜನೆ ಕೇಂದ್ರ, ೭) ವಿಮಾ ಸಂಶೋಧನೆ ಮತ್ತು ಶಿಕ್ಷಣ ಕೇಂದ್ರ, ೮) ಮಾಹಿತಿ

ತಂತ್ರಜ್ಞಾನ ನಿರ್ವಹಣಾ ಕೇಂದ್ರ, ೯) ವಿತರಣಾ ಸರಪಳಿ ನಿರ್ವಹಣೆ ಕೇಂದ್ರ ಮತ್ತು ೧೦) ಎನ್.ಜಿ. ರಾಘವನ್ ಉದ್ಯಮಶೀಲತೆ ಕಲಿಕಾ ಕೇಂದ್ರ. ಒಂದು ವರ್ಷದ ಕಾರ್ಯ ನಿರ್ವಾಹಕ ಸ್ನಾತಕೋತ್ತರ ನಿರ್ವಹಣಾ ಕಾರ್ಯಕ್ರಮ ಎಂಬ ವಿಶೇಷ ಕಾರ್ಯಕ್ರಮ (ಇ–ಪಿಜಿಪಿ) ವನ್ನೂ ಸಹ ನಡೆಸಲಾಗುತ್ತದೆ. ನೂರು ಎಕರೆಗಳಷ್ಟು ವಿಸ್ತಾರವಾದ ಹಸಿರು ಮರ, ಹೂವು ಮತ್ತು ಜೀವಿಗಳಿಂದ ಕೂಡಿದ ಪ್ರದೇಶದಲ್ಲಿ ಈ ಸಂಸ್ಥೆ ಕಾರ್ಯನಿರ್ವಹಿಸುತ್ತಿದೆ.

### ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರ ವಿಜ್ಞಾನ ಸಂಸ್ಥೆ, ಬೆಂಗಳೂರು(NIMHANS )

ಮಾನಸಿಕ ಚಿಕಿತ್ಸೆಯ ಆಸ್ಪತ್ರೆ ಮತ್ತು ಅಖಿಲ ಭಾರತ ಮಾನಸಿಕ ಆರೋಗ್ಯ ಸಂಸ್ಥೆಗಳ ವಿಲೀನದೊಂದಿಗೆ ೧೯೭೪ ಡಿಸೆಂಬರ್ ೨೭ ರಂದು ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರ ವಿಜ್ಞಾನ ಸಂಸ್ಥೆ, ಬೆಂಗಳೂರು ಅಸ್ತಿತ್ವಕ್ಕೆ ಬಂದಿದೆ. ಇದೊಂದು ಸ್ವಾಯತ್ತ ಸಂಸ್ಥೆಯಾಗಿದ್ದು ಸಹಕ/ಅರ ಸಂಘಗಳ ಕಾಯ್ದೆ ಅಡಿಯಲ್ಲಿ ನೋದಾಯಿತವಾಗಿದೆ. ರಾಷ್ಟ್ರದ ವೈದ್ಯಕೀಯ ಕ್ಷೇತ್ರದಲ್ಲಿ ಸೇವೆ ಮತ್ತು ಸಂಶೋಧನೆಯನ್ನು ಮಾಡುವ ಉದ್ದೇಶವನ್ನು ಹೊಂದಿದೆ. ೧೯ ನೇ ಶತಮಾನದಲ್ಲಿ ಹುಚ್ಚು ಅಥವಾ ಬುದ್ಧಿ ಮಾಂದ್ಯತೆ ಇರುವವರನ್ನು ನೋಡಿಕೊಳ್ಳಲಾಗುತ್ತಿದ್ದ ಚಿಕಿತ್ಸಾಲಯವನ್ನು ಮೈಸೂರು ಸರ್ಕಾರವು ೧೯೩೭ ರಲ್ಲಿ ಮಾನಸಿಕ ಆಸ್ಪತ್ರೆ ಎಂದು ಮರುನಾಮಕರಣಗೊಳಿಸಿತು. ಈ ಆಸ್ಪತ್ರೆ ಹಾಗೂ ೧೯೫೪ ರಲ್ಲಿ ಭಾರತ ಸರ್ಕಾರ ಸ್ಥಾಪಿಸಿದ್ದ ಮಾನಸಿಕ ಚಿಕಿತ್ಸಾ ಸಂಸ್ಥೆಯನ್ನು ವಿಲೀನಗೊಳಿಸಿ ೧೯೭೪ ರಲ್ಲಿ ಈ ಸ್ವಾಯತ್ತ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಇದು ಬಹು ಶಾಸ್ತ್ರೀಯ ಅಧ್ಯಯನ ಮತ್ತು ಚಿಕಿತ್ಸಾ ಕೇಂದ್ರವಾಗಿದೆ. ಇಲ್ಲಿ ರೋಗಿಗಳ ಸೇವೆಯನ್ನು ಪ್ರಧಾನವಾಗಿ ಪರಿಗಣಿಸಲಾಗುತ್ತದೆ. ನವೆಂಬರ್ ೧೪, ೧೯೯೪ ರಲ್ಲಿ ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಈ ಸಂಸ್ಥೆಗೆ ವಿಶ್ವವಿದ್ಯಾಲಯದ ಮಾನ್ಯತೆಯನ್ನು ನೀಡಲಾಗಿದೆ,

### ವಿವೇಕಾನಂದ ಯೋಗ ಮಹಾ ವಿದ್ಯಾಪೀಠ – ವ್ಯೋಮ (VYOMA)

ವಿವೇಕಾನಂದ ಯೋಗ ಮಹಾ ವಿದ್ಯಾಪೀಠ (ವ್ಯೋಮ) ಉನ್ನತಮಟ್ಟದ ಶೈಕ್ಷಣಿಕ ಕಲಿಯುವಿಕೆಗೆ ಮುಡಿಪಾಗಿದೆ. ಭಾರತ ಸರ್ಕಾರದ ಮಾನವ ಸಂಪನ್ಮೂಲ ಇಲಾಖೆಯಿಂದ ಡೀಮ್ಡ್ ವಿಶ್ವವಿದ್ಯಾಲಯ ಎಂಬ ಮನ್ನಣೆ ಪಡೆದಿದೆ. ಈ ಸಂಸ್ಥೆ ಸ್ವಾಮಿ ವಿವೇಕಾನಂದರ ಆಶೋತ್ತರವಾದ ಪಾಶ್ಚತ್ಯ ಮತ್ತು ಪೌರ್ವಾತ್ಯ ಸಂಸ್ಕೃತಿಗಳ ನಡುವೆ ಸೇತುವೆಯನ್ನು ಕಟ್ಟುವ ಉದ್ದೇಶ ಹೊಂದಿದೆ. ಕಳೆದ ವರ್ಷಗಳಿಂದ ಈ ಸಂಸ್ಥೆಯು ಯೋಗ ಮತ್ತು ಆಧ್ಯಾತ್ಮಿಕ ವಿಜ್ಞಾನಗಳಲ್ಲಿ ಸಂಶೋಧನೆಯನ್ನು ನಡೆಸುತ್ತಿದೆ. ಅಲ್ಪಾವಧಿ ಕೋರ್ಸ್‌ಗಳು ಮತ್ತು ಡಿಪ್ಲೊಮಾ ಕೋರ್ಸ್‌ಗಳಿಗೆ ಕಳೆದ ೧೫ ವರ್ಷಗಳಿಂದ ತರಬೇತಿ ನೀಡಲಾಗುತ್ತಿದೆ. ಪಿಎಚ್‌ಡಿ., ಪ್ರೋಗ್ರಾಂಗೆ ಸಂಬಂಧಿಸಿದಂತೆ, ಬೆಂಗಳೂರು, ಮೈಸೂರು, ಮಂಗಳೂರು ಮತ್ತು ರಾಜೀವ್ ಗಾಂಧಿ ವಿಶ್ವವಿದ್ಯಾಲಯಗಳ ಪಿಎಚ್‌ಡಿ ಪದವಿ ಪಡೆಯಲು ಈ ಸಂಸ್ಥೆ ಮಾನ್ಯತೆ ಪಡೆದಿದೆ. ಅಮೆರಿಕಾದ ಆರ್‌ಲ್ಯಾಂಡೋ ಮತ್ತು ಫ್ಲೊರಿಡಾ ವಿಶ್ವವಿದ್ಯಾಲಯಗಳು ಇಲ್ಲಿ ವಿಸ್ತರಣಾ ಕೇಂದ್ರ ಪ್ರಾರಂಭಿಸಿವೆ. ಈ ಕೇಂದ್ರ ಅವರ ಪರವಾಗಿ ಸ್ನಾತಕೋತ್ತರ ಮತ್ತು ಡಾಕ್ಟರೇಟ್ ಪದವಿಗಳಿಗೆ ತರಬೇತಿ ನೀಡುತ್ತಿದೆ. ಈ ಸಂಸ್ಥೆಗೆ ಸೇರಿದಂತೆ ಒಂದು ಆರೋಗ್ಯ ಧಾಮ ಮತ್ತು ಅನೇಕ ಹಾಸ್ಟೆಲ್‌ಗಳು ಇವೆ. ಯೋಗ ಚಿಕಿತ್ಸೆ ಬಗ್ಗೆ ಅತ್ಯುನ್ನತ ತರಬೇತಿ ನೀಡಲಾಗುತ್ತಿದೆ. ಈಗಾಗಲೇ ೨೫೦೦ ಯೋಗಾರ್ಥಿಗಳಿಗೆ ತರಬೇತಿ ನೀಡಲಾಗಿದೆ. ೧೫೦ ಜಪಾನ್ ಅಧ್ಯಾಪಕರು ತರಬೇತಿ ಪಡೆದಿದ್ದಾರೆ. ಎಂಎಸ್., ಮತ್ತು ಪಿಎಚ್‌ಡಿ ಪ್ರೋಗ್ರಾಂಗಳಿಗೆ ಆಯ್ಕೆ ವಿಧಾನಗಳಿವೆ. ಈ ವಿಶ್ವವಿದ್ಯಾಲಯದಲ್ಲಿ ಶೈಕ್ಷಣಿಕ ಮಂಡಳಿ ಮತ್ತು ಸಿಂಡಿಕೇಟ್ ಕೂಡಾ ಇವೆ.

### ಆರ್ಥಿಕ ಮತ್ತು ಸಾಮಾಜಿಕ ಬದಲಾವಣೆಯ ಸಂಸ್ಥೆ (ಐಸೆಕ್), ಬೆಂಗಳೂರು

ಆರ್ಥಿಕ ಮತ್ತು ಸಾಮಾಜಿಕ ಬದಲಾವಣೆಯ ಸಂಸ್ಥೆ ಸಾಮಾಜಿಕ ವಿಜ್ಞಾನ ಕ್ಷೇತ್ರದಲ್ಲಿ ಬಹು ಶಾಸ್ತ್ರೀಯ ಸಂಶೋಧನಾ ಸಂಸ್ಥೆಯಾಗಿದೆ. ೧೯೭೨ ರಲ್ಲಿ ಪ್ರೊ: ವಿ.ಕೆ.ಆರ್.ವಿ.ರಾವ್ ರವರಿಂದ ಸ್ಥಾಪಿತವಾದ ಈ ಸಂಸ್ಥೆ ಇಂಡಿಯನ್ ಕೌನ್ಸಿಲ್ ಆಫ್ ಸೋಷಿಯಲ್ ಸೈನ್ಸಸ್ ರಿಸರ್ಚ್ ಹಾಗೂ ಕರ್ನಾಟಕ ಸರ್ಕಾರದಿಂದ ಅನುದಾನವನ್ನು ಪಡೆಯುತ್ತದೆ. ಸಮಾನತೆ, ಸಮತೆ ಮತ್ತು ನ್ಯಾಯವನ್ನು ಪ್ರತಿಪಾದಿಸುವುದಕ್ಕೆ ಒತ್ತು ನೀಡುವುದರ ಜೊತೆಗೆ ಸಾಮಾಜಿಕ ವಿಜ್ಞಾನ ಕ್ಷೇತ್ರದಲ್ಲಿ ಸಂಶೋಧನಾ ಕೌಶಲಗಳು ಒಂದಕ್ಕೊಂದು ಪೂರಕವಾಗುವಂತೆ ಆರ್ಥಿಕ ಮತ್ತು ರಾಜಕೀಯ ಬದಲಾವಣೆಗಳ ಕುರಿತು ಅಧ್ಯಯನ ನಡೆಸುವುದು ಸಂಸ್ಥೆಯ ಧ್ಯೇಯವಾಗಿದೆ. ಸಾಮಾಜಿಕ ವಿಜ್ಞಾನದ ವಿವಿಧ ಕ್ಷೇತ್ರಗಳಲ್ಲಿ ಪರಿಣಿತಿ ಹೊಂದಿದ ತಜ್ಞರು ಇಲ್ಲಿ ಸಂಶೋಧನೆ ಮತ್ತು ವಿಶ್ಲೇಷಣೆಯಲ್ಲಿ ತೊಡಗಿದ್ದಾರೆ. ವಿವಿಧ ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಸಂಸ್ಥೆಗಳ ಸಹಯೋಗದಿಂದ ವಿದ್ಯಾರ್ಥಿ ವೇತನಗಳ ಸಹಾಯ ಪಡೆದು ಒಂದು ಅತ್ಯುನ್ನತ ಸಂಸ್ಥೆಯಾಗಿ ಬೆಳೆಯಲು ಶ್ರಮಿಸುತ್ತಿದೆ. ನೆದರ್ ಲ್ಯಾಂಡ್ಸ್ ನ ನೋರ್ಡಿಕ್ ಸೆಂಟರ್, ವಿಶ್ವ ಬ್ಯಾಂಕ್, ಏಶಿಯನ್ ಡೆವಲಪ್ ಮೆಂಟ್ ಬ್ಯಾಂಕ್,ಯು ಎನ್.ಡಿ.ಪಿ. ಯೂರೋಪಿಯನ್ ಕಮಿಷನ್, ಮುಂತಾದ ಪ್ರತಿಷ್ಠಿತ ಸಂಸ್ಥೆಗಳ ಸಹಯೋಗವಿದೆ. ಪಿ.ಹೆಚ್. ಡಿ ಸಂಶೋಧನಾರ್ಥಿಗಳಿಗೂ ಸಂಸ್ಥೆ ಅವಕಾಶವನ್ನು ನೀಡುತ್ತಿದೆ. ಬೆಂಗಳೂರಿನ ನಾಗರಬಾವಿಯಲ್ಲಿ ಸಂಸ್ಥೆಯ ಕಚೇರಿ, ತಜ್ಞರ ವಸತಿ ಗೃಹಗಳು, ವಿದ್ಯಾರ್ಥಿಗಳಿಗಾಗಿ ಹಾಸ್ಟೆಲ್ ಮುಂತಾದ ಸಕಲ ಸೌಲಭ್ಯಗಳನ್ನು ಹೊಂದಿದೆ.

### ಗೌರವ ವಿಶ್ವವಿದ್ಯಾಲಯಗಳು (Deemed Universities)

೧. ಬಿ.ಎಲ್.ಡಿ.ಇ. ವಿಶ್ವವಿದ್ಯಾಲಯ ಬಿಜಾಪುರ, ಕರ್ನಾಟಕ ೨೯–೦೨–೨೦೦೮ ಬಿ.ಎಲ್.ಡಿ.ಇ. ವಿಶ್ವವಿದ್ಯಾಲಯ ಬಿಜಾಪುರ, ಕರ್ನಾಟಕ ೨೯–೦೨–೨೦೦೮

೨. ಅಂತರರಾಷ್ಟ್ರೀಯ ತಾಂತ್ರಿಕ ಮಾಹಿತಿ ಸಂಸ್ಥೆ ೨೬/ಸಿ, ಇನ್‌ಫೋಸಿಸ್ ಎದುರು (ಗೇಟ್–೧), ಎಲೆಕ್ಟ್ರಾನಿಕ್ ಸಿಟಿ, ಹೊಸೂರು ರಸ್ತೆ, ಬೆಂಗಳೂರು. ಕರ್ನಾಟಕ ೨೮–೦೨–೨೦೦೫

೩. ಜಗದ್ಗುರು ಶ್ರೀ ಶಿವರಾತ್ರೀಶ್ವರ ವಿಶ್ವವಿದ್ಯಾಲಯ, ಜಗದ್ಗುರು ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಸರ್ಕಲ್, ರಾಮಾನುಜ ರಸ್ತೆ, ಮೈಸೂರು–೫೭೦೦೦೪. ಕರ್ನಾಟಕ ೨೮–೦೫–೨೦೦೮

೪. ಜವಹರಲಾಲ್ ನೆಹರು ಉನ್ನತ ವೈಜ್ಞಾನಿಕ ಸಂಶೋಧನಾ ಸಂಸ್ಥೆ, ಜಕ್ಕೂರ್ ಕ್ಯಾಂಪಸ್, ಜಕ್ಕೂರ್, ಬೆಂಗಳೂರು-೫೬೦೦೬೪. ೭-೦೮-೨೦೦೨

೫. ಕೆ.ಎಲ್.ಇ., ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ, ಜೆ.ಎನ್.ಮೆಡಿಕಲ್ ಕಾಲೇಜ್ ಕ್ಯಾಂಪಸ್, ಬೆಳಗಾವಿ (ಕರ್ನಾಟಕ) ೧೩-೦೪-೨೦೦೬

೬. ಮಣಿಪಾಲ್ ಉನ್ನತ ಶಿಕ್ಷಣ ಅಕಾಡೆಮಿ, ಮಾಧವ ನಗರ, ಉಡುಪಿ ಮಣಿಪಾಲ್-೫೭೬೧೦೪, ಕರ್ನಾಟಕ ೦೧-೦೬-೧೯೯೩

೭. ನಿಟ್ಟೆ ವಿಶ್ವವಿದ್ಯಾಲಯ, ಮಂಗಳೂರು-೫೭೫೦೦೩. ಕರ್ನಾಟಕ ೦೪-೦೬-೨೦೦೮

೮. ಶ್ರೀ ದೇವರಾಜ್ ಅರಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಬಿ.ಎಚ್.ರೋಡ್, ಟಮಕ, ಕೋಲಾರ-೫೬೩೧೦೧.ಕರ್ನಾಟಕ ೨೫-೦೫-೨೦೦೭

೯. ಶ್ರೀ ಸಿದ್ಧಾರ್ಥ ಉನ್ನತ ಶಿಕ್ಷಣ ಅಕಾಡೆಮಿ, ತುಮಕೂರು ಜಿಲ್ಲೆ-೫೭೨೧೦೨.ಕರ್ನಾಟಕ, ೩೦-೦೫-೨೦೦೮

೧೦. ಸ್ವಾಮಿ ವಿವೇಕಾನಂದ ಯೋಗಾ ಅನುಸಂಧಾನ ಸಂಸ್ಥಾನ, # ೯, ಅಪ್ಪಾಜಪ್ಪ ಅಗ್ರಹಾರ, ಚಾಮರಾಜಪೇಟೆ, ಬೆಂಗಳೂರು-೧೮.೦೮-೦೫-೨೦೦೨

೧೧. ಏನೇಪೋಯಾ ವಿಶ್ವವಿದ್ಯಾಲಯ, ಮಂಗಳೂರು, ಕರ್ನಾಟಕ೨೭-೦೨-೨೦೦೮

೧೨. ಕ್ರಿಸ್ಟ್ ವಿಶ್ವವಿದ್ಯಾಲಯ, ಹೊಸೂರು ರಸ್ತೆ, ಬೆಂಗಳೂರು - ೫೬೦೦೨೯.ಕರ್ನಾಟಕ, ೨೨-೦೭-೨೦೦೮

೧೩. ಜೈನ್ ವಿಶ್ವವಿದ್ಯಾಲಯ, ವಿ.ವಿ.ಪುರಂ. ಬೆಂಗಳೂರು.

**ಖಾಸಗಿ ವಿಶ್ವವಿದ್ಯಾಲಯಗಳು:** ಕರ್ನಾಟಕ ರಾಜ್ಯ ಸರ್ಕಾರವು ೨೨ ಖಾಸಗಿ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸಲು ಅನುಮತಿ ನೀಡಿದ್ದು, ಪ್ರಸ್ತುತ ೧೧ ಖಾಸಗಿ ವಿಶ್ವವಿದ್ಯಾನಿಲಯಗಳು ಕಾರ್ಯನಿರ್ವಹಿಸುತ್ತಿವೆ.

೧) ಅಜೀಮ್ ಪ್ರೇಮ್‌ಜಿ ಯೂನಿವರ್ಸಿಟಿ, ಬೆಂಗಳೂರು, ೧೩೪, ದೊಡ್ಡಕನ್ನೆಲ್ಲಿ, ವಿಪ್ರೋ ಕಾರ್ಪೋರೇಷನ್ ಕಛೇರಿ, ಸರ್ಜಾಪುರ ರಸ್ತೆ,ಬೆಂಗಳೂರು-೫೬೦೦೩೫. ಕರ್ನಾಟಕ- ಏಪ್ರಿಲ್ ೨೦೧೦.

೨) ಅಲಯಾನ್ಸ್ ವಿಶ್ವವಿದ್ಯಾಲಯ,ಚಿಕ್ಕಹಗಡಾ,ಆನೇಕಲ್ - ಜುಲೈ ೨೦೧೦. http://sb.alliance.edu.in

೩) ಸಿ.ಎಂ ಆರ್ ವಿಶ್ವವಿದ್ಯಾಲಯ ಬೆಂಗಳೂರು - ಮಾರ್ಚ ೨೦೧೩.

೪) ದಯಾನಂದ ಸಾಗರ್ ವಿಶ್ವವಿದ್ಯಾನಿಲಯ - ಫೆಬ್ರವರಿ ೨೦೧೩.

೫) ಜೆ.ಎಸ್.ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯ ಮೈಸೂರು- ಮಾರ್ಚ ೨೦೧೩.

೬) ಕೆ.ಎಲ್.ಇ ಟೆಕ್ನಾಲಾಜಿಕಲ್ ವಿಶವವಿದ್ಯಾನಿಲಯ ಹುಬ್ಬಳ್ಳಿ - ಫೆಬ್ರವರಿ ೨೦೧೩.

೭) ಎಂ.ಎಸ್.ಆರ್ ಯೂನಿವರ್ಸಿಟಿ ಆಫ್ ಅಡ್ವಾನ್ಸ್ಡ್ ಸ್ಟಡೀಸ್ ಬೆಂಗಳೂರು - ಫೆಬ್ರವರಿ ೨೦೧೩.

೮) ಪಿ.ಇ.ಎಸ್. ವಿಶ್ವವಿದ್ಯಾನಿಲಯ, ಬೆಂಗಳೂರು - ಫೆಬ್ರವರಿ ೨೦೧೩.

೯) ಪ್ರೆಸಿಡೆಂಟ್ ವಿಶ್ವವಿದ್ಯಾನಿಲಯ ಬೆಂಗಳೂರು - ಮಾರ್ಚ ೨೦೧೩.

೧೦) ರೇವಾ ವಿಶ್ವವಿದ್ಯಾನಿಲಯ ಬೆಂಗಳೂರು - ಫೆಬ್ರವರಿ ೨೦೧೩.

೧೧) ರೈ ತಂತ್ರಜ್ಞಾನ ವಿಶ್ವವಿದ್ಯಾನಿಲಯ ಬೆಂಗಳೂರು - ಫೆಬ್ರವರಿ ೨೦೧೩.

## ಗ್ರಂಥಾಲಯಗಳು (Libraries)

ಸಾರ್ವಜನಿಕ ಗ್ರಂಥಾಲಯ ಒಂದು ಮುಕ್ತವಾದ ಸಾರ್ವಜನಿಕ ಸಂಸ್ಥೆ. "ಸಾರ್ವಜನಿಕ ಗ್ರಂಥಾಲಯ ಶ್ರೀ ಸಾಮಾನ್ಯನ ವಿಶ್ವವಿದ್ಯಾಲಯ" ಎಂದು ಹೇಳುವುದು ಅರ್ಥಪೂರ್ಣವಾಗಿದೆ. ಕರ್ನಾಟಕ ಸರ್ಕಾರ ಸಾರ್ವಜನಿಕರಲ್ಲಿ ವಿದ್ಯೆ, ಜ್ಞಾನ, ಓದಿನ ಬಗೆಗೆ ಅಭಿರುಚಿ ಮುಂತಾದವುಗಳನ್ನು ಬೆಳೆಸಲು ಉದ್ದೇಶಿಸಿ ೧೯೬೫ರಲ್ಲಿ ಕರ್ನಾಟಕ ಸಾರ್ವಜನಿಕ ಗ್ರಂಥಾಲಯ ಕಾಯಿದೆ ರೂಪಿಸಿ ಸಾರ್ವಜನಿಕ ಗ್ರಂಥಾಲಯಗಳ ಜಾಲದ ಬೆಳವಣಿಗೆಗೆ ಬುನಾದಿ ಹಾಕಿತು. ನಮ್ಮ ರಾಜ್ಯ ಇಡೀ ಭಾರತದಲ್ಲಿ ಸಾರ್ವಜನಿಕ ಗ್ರಂಥಾಲಯ ದೃಷ್ಟಿಯಿಂದ ಮುಂಚೂಣಿಯಲ್ಲಿರುವ ರಾಜ್ಯವಾಗಿದೆ. ಸಾಹಿತ್ಯಾಭಿರುಚಿ, ರಾಜಕೀಯ, ಸಾಮಾಜಿಕ ಆರ್ಥಿಕ ಪ್ರಜ್ಞೆ ಇವುಗಳನ್ನು ಸಾರ್ವಜನಿಕರಲ್ಲಿ ಅಭಿವೃದ್ಧಿಪಡಿಸುವುದು ಈ ವ್ಯವಸ್ಥೆಯ ಮುಖ್ಯ ಗುರಿಯಾಗಿದೆ. ಈ ಸಂಸ್ಥೆಯು ಆಬಾಲವೃದ್ಧರವರೆಗೆ ಎಲ್ಲರಿಗೂ ಸುಲಭ ಮನರಂಜನೆ, ಜ್ಞಾನಪ್ರಧಾನವಾಗಿರುವ ಸಾಮಾಜಿಕ ಶಿಕ್ಷಣವನ್ನು ಮುಂದುವರೆಸುವ ಮತ್ತು ಮಾಹಿತಿ ಪ್ರಸಾರ ಮಾಡುವ ಒಂದು ಜೀವಂತ ಶಕ್ತಿಯಾಗಿ ಸೇವೆ ಸಲ್ಲಿಸುತ್ತಿದೆ. ವ್ಯಕ್ತಿ ಮತ್ತು ಪುಸ್ತಕ ಜ್ಞಾನಗಳ ನಡುವಣ ಸೇತುವೆಯಾಗಿ ಸಾರ್ವಜನಿಕ ಗ್ರಂಥಾಲಯಗಳು ಕಾರ್ಯನಿರ್ವಹಿಸುತ್ತಿವೆ. ಜ್ಞಾನಾರ್ಜನೆ ಮತ್ತು ಸಮಯವನ್ನು ಸಾರ್ಥಕವಾಗಿ ಸದುಪಯೋಗಪಡಿಸಿಕೊಳ್ಳಲು ಗ್ರಂಥಾಲಯಗಳು ಉಪಯುಕ್ತವಾಗಿವೆ.

ರಾಜ್ಯದಲ್ಲಿ ಪ್ರಸ್ತುತ ೧ ರಾಜ್ಯ ಕೇಂದ್ರ ಗ್ರಂಥಾಲಯ, ೩೦ ಜಿಲ್ಲಾ ಕೇಂದ್ರ ಗ್ರಂಥಾಲಯಗಳು, ೨೬ ನಗರ ಕೇಂದ್ರ ಗ್ರಂಥಾಲಯ, ೪೯೦ ಶಾಖೆಗಳು, ೫೭೬೬ ಗ್ರಾಮ ಪಂಚಾಯತಿ ಗ್ರಂಥಾಲಯಗಳು, ೧೪ ಸಂಚಾರಿ ಗ್ರಂಥಾಲಯಗಳು ಕಾರ್ಯ ನಿರ್ವಹಿಸುತ್ತಿವೆ. ಒಟ್ಟು ಸದಸ್ಯರ ಸಂಖ್ಯೆ ಲ೩.೨೮ ಲಕ್ಷ ಇದ್ದು ಆ ಪೈಕಿ ೪೧.೧೦ ಲಕ್ಷ ಪುರುಷರು ಮತ್ತು ೪೨.೧೮ ಮಹಿಳಾ ಸದಸ್ಯರಿರುತ್ತಾರೆ. ಒಟ್ಟು ೧೬೩.೪೨ ಲಕ್ಷ ಪುಸ್ತಕಗಳ ಸಂಗ್ರಹವಿರುತ್ತದೆ.

## ಕ್ರೀಡೆಗಳು (Sports)

ಇಂದು ಕರ್ನಾಟಕವು ಭಾರತದ ಕ್ರೀಡಾ ಭೂಪಟದಲ್ಲಿ ಒಂದು ಪ್ರಮುಖ ಸ್ಥಾನವನ್ನು ಪಡೆದಿದೆ. ಇತಿಹಾಸ ಪೂರ್ವ

ದಿನಗಳಿಂದಲೂ ಕರ್ನಾಟಕದವರಿಗೆ ಕ್ರೀಡೆ ಮತ್ತು ಆಟಗಳು ಬಹು ಪ್ರಮುಖ ಮನರಂಜನೆಯ ಸಾಧನಗಳಾಗಿದ್ದವೆಂದು ಹಲವಾರು ಚಿತ್ರಗಳಿಂದ ಸಾಬೀತಾಗುತ್ತದೆ. ಇದಕ್ಕೆ ಪುರಾವೆ ಮತ್ತು ಸಾಕ್ಷಿಗಳು ಕದಂಬರ ಕಾಲದಿಂದಲೂ ಲಭ್ಯವಿದೆ. ಜೂಜು ಮತ್ತು ದಾಳಗಳು ಮನರಂಜನೆಯ ಮಾರ್ಗಗಳಾಗಿದ್ದವು. ಮಾನಸೋಲ್ಲಾಸ ಎಂಬ ೧೨ನೇ ಶತಮಾನದ ಸಂಸ್ಕೃತ ವಿಶ್ವಕೋಶವು ಆಟಗಳ ಒಂದು ದೊಡ್ಡ ಪಟ್ಟಿಯನ್ನೇ ನೀಡುತ್ತದೆ. ಮರಳು ಪ್ರದೇಶದಲ್ಲಿ, ಮರಗಳ ತೋಪಿನಲ್ಲಿ ಜೋಕಾಲಿ ಆಟ, ದೋಣಿ, ಓಟ ಸ್ಪರ್ಧೆ, ದಾಳದಾಟಗಳು, ಪ್ರಾಣಿಗಳ ಹೊಡೆದಾಟಗಳು ಇತ್ಯಾದಿ. ಸ್ಥಳೀಯವಾಗಿ ಆಡುತ್ತಿದ್ದ ಹಲವು ಹುಡುಗರ ಆಟಗಳು ಮತ್ತು ಹುಡುಗಿಯರ ಆಟಗಳು ಹೆಚ್ಚು ಜನಪ್ರಿಯವಾಗಿದ್ದವು – ಕಳ್ಳ–ಪೋಲೀಸ್, ಕೊಟ್‌ಕೋಳ, ಟೋಪಿಯಾಟ, ಬೆಕ್ಕು–ಇಲಿ, ಊಟಕ್ಕೆ ಓಟ, ಬೆಳಕು–ನೆರಳು, ಉಪ್ಪಾರಪಟ್ಟೆ, ಕಣ್ಣಮುಚ್ಚಾಲೆ, ಕುಂಟೆಬಿಲ್ಲೆ, ಗುಲ್ಟೋರಿಯಾ, ಕಬಡ್ಡಿ, ಮರಕೋತಿ, ಬುಗುರಿಯಾಟ, ಹಾವುಚೇಳು, ಚಿನ್ನಿ–ದಾಂಡು, ಕುದುರೆ ಓಟ, ಚೀಲದ ಓಟ, ಆಲೂಗಡ್ಡೆ ಓಟ, ಇತ್ಯಾದಿ. ಮನೆಯೊಳಗೆ ಆಡುವ ಗಜ್ಜುಗ, ಚದುರಂಗ, ಗಾಂಜೀಪ, ಅಳಗುಳಿ ಮಣೆ, ಸ್ವರ್ಗಾರೋಹಣ ಇತ್ಯಾದಿ. ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ಚದುರಂಗ ಆಟದ ಬಗ್ಗೆ ಒಂದು ಪುಸ್ತಕವನ್ನು ಬರೆದಿದ್ದಾರೆ.

ಇತ್ತೀಚೆಗೆ ದೈಹಿಕ ಶಿಕ್ಷಣವನ್ನು ವೈಜ್ಞಾನಿಕ ತತ್ವಗಳ ಆಧಾರದ ಮೇಲೆ ಹೇಳಿಕೊಡಲಾಗುತ್ತಿದೆ. ಯೋಗಾಸನ ಕೇಂದ್ರಗಳು, ಸೇವಾದಳ, ಸ್ಕೌಟ್ಸ್ ಮತ್ತು ಗೈಡ್ಸ್ ಮತ್ತು ಎನ್.ಸಿ.ಸಿ.ಯಂತಹ ಹಲವಾರು ಸಂಸ್ಥೆಗಳು ಕೂಡ ಮಕ್ಕಳಿಗೆ ದೈಹಿಕ ಶಿಕ್ಷಣವನ್ನು ನೀಡುತ್ತಿವೆ. ಶಿಕ್ಷಣ ಇಲಾಖೆಯು, ಯುವಜನ ಸೇವಾ ಮತ್ತು ಕ್ರೀಡಾ ನಿರ್ದೇಶನಾಲಯ, ವಿಶ್ವವಿದ್ಯಾಲಯಗಳ ದೈಹಿಕ ಶಿಕ್ಷಣ ನಿರ್ದೇಶಕರು ಮತ್ತು ಹಲವಾರು ಯುವಜನ ಸ್ವಯಂ ಸೇವಾ ಸಂಸ್ಥೆಗಳು ಎಲ್ಲವೂ ಹಲವಾರು ಕ್ರೀಡಾ ಚಟುವಟಿಕೆಗಳಲ್ಲಿ ತೊಡಗಿವೆ. ಜಿಲ್ಲಾ ಕೇಂದ್ರಗಳಲ್ಲಿರುವ ನೇತಾಜಿ ರಾಷ್ಟ್ರೀಯ ಕ್ರೀಡಾ ಸಂಸ್ಥೆ ಮತ್ತು ಜಿಲ್ಲಾ ಕೇಂದ್ರಗಳಲ್ಲಿರುವ ನೆಹರು ಯುವಕ ಕೇಂದ್ರಗಳು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಅನುದಾನ ಪಡೆದು ಕ್ರೀಡಾ ಚಟುವಟಿಕೆಗಳಿಗೆ ಒಂದು ರೀತಿಯ ಸುವ್ಯವಸ್ಥೆಯನ್ನು ಒದಗಿಸುತ್ತಿವೆ. ಕರ್ನಾಟಕದ ಸಾರ್ವಜನಿಕ ಶಿಕ್ಷಣ ಇಲಾಖೆಯು ದೈಹಿಕ ಶಿಕ್ಷಣವನ್ನು ಶಾಲೆಗಳ ಪಠ್ಯಕ್ರಮದಲ್ಲಿ ಸೇರಿಸಿದೆ. ರಾಜ್ಯ ಪುನರ್ವಿಂಗಡಣೆಯ ನಂತರ, ದೈಹಿಕ ಶಿಕ್ಷಣದ ಪಠ್ಯ ವಿಷಯ, ಶಿಕ್ಷಕರು, ವೇಳಾಪಟ್ಟಿ, ಮೊದಲಾದ ದೈಹಿಕ ಶಿಕ್ಷಣ ಕಾರ್ಯಕ್ರಮಕ್ಕೆ ಏಕ ರೀತಿಯ ನಿಯಮಾವಳಿಗಳನ್ನು ರೂಪಿಸಲಾಗಿದೆ. 'ರಾಷ್ಟ್ರೀಯ ಅರ್ಹತಾದಳ'ವು ೧೯೬೫ರಲ್ಲಿ ಅಸ್ತಿತ್ವಕ್ಕೆ ಬಂದಿತು. ಇದು ಒಂಭತ್ತರಿಂದ ಹದಿನಾರು ವರ್ಷಗಳ ವಯೋಮಿತಿಯವರಿಗೆ ಅನ್ವಯವಾಗುವಂತಿದ್ದು, ಒಂದು ಹೊಸ ಪಠ್ಯ ವಿಷಯವನ್ನು ರೂಪಿಸಲಾಯಿತು. ದೈಹಿಕ ಶಿಕ್ಷಣವು ಪಠ್ಯೇತರ ವಿಷಯವಾಯಿತು. ರಾಷ್ಟ್ರೀಯ ಅರ್ಹತಾದಳದ ಶಿಕ್ಷಕರನ್ನು ಯುವಜನ ಸೇವಾ ಇಲಾಖೆಯಲ್ಲಿ ವಿಲೀನಗೊಳಿಸಲಾಯಿತು. ದೈಹಿಕ ಶಿಕ್ಷಣವೂ ಸಹ ಪಠ್ಯಶಿಕ್ಷಣವಾಗಿ ರೂಪುಗೊಂಡಿತು. ಎನ್.ಎಫ್.ಸಿ. ತರಬೇತಿದಾರರನ್ನು ಯುವಜನ ಸೇವೆಗೆ ೧೯೬೬ರಲ್ಲಿ ಸೇರಿಸಿಕೊಳ್ಳಲಾಯಿತು. ದೈಹಿಕ ಶಿಕ್ಷಣ ಅಧೀಕ್ಷಕರ (Superintendent) ಹುದ್ದೆಯನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ಸಹಾಯಕ್ಕಾಗಿ ಸೃಜಿಸಲಾಯಿತು. ನಂತರ ದೈಹಿಕ ಶಿಕ್ಷಣ ವಿಭಾಗೀಯ ಅಧೀಕ್ಷರ ಹುದ್ದೆಯನ್ನು ಪ್ರತಿ ಕಂದಾಯ ವಿಭಾಗೀಯ ಸ್ಥಳಗಳಿಗೆ ಸೃಜಿಸಿ ಅವರನ್ನು ಜೆ.ಡಿ.ಪಿ.ಐ. ಅವರ ಕಚೇರಿಯಲ್ಲಿರಿಸಲಾಯಿತು. ವಿಶ್ವವಿದ್ಯಾಲಯ ಮಟ್ಟದಲ್ಲಿ ದೈಹಿಕ ಶಿಕ್ಷಣ ನಿರ್ದೇಶಕರು ಹಲವಾರು ಸಹಾಯಕ ನಿರ್ದೇಶಕರು ಇರುತ್ತಾರೆ.

ದೈಹಿಕ ಶಿಕ್ಷಣಕ್ಕಾಗಿಯೇ ಬೇರೆ ಒಂದು ಕಾಲೇಜನ್ನು ಸರ್ಕಾರವು ಬೆಂಗಳೂರಿನಲ್ಲಿ ೧೯೫೫ರಲ್ಲಿ ಸ್ಥಾಪಿಸಿ, ದೈಹಿಕ ಶಿಕ್ಷಣದಲ್ಲಿ ಡಿಪ್ಲೊಮಾ ಶಿಕ್ಷಣವನ್ನು ಪದವೀಧರರಿಗೆ ನೀಡಿತು. ೧೯೬೭ರಲ್ಲಿ ಮೆಟ್ರಿಕ್ಯುಲೇಷನ್ ಮಾಡಿದವರಿಗೆ ಸಿ.ಪಿ.ಎಡ್. ಶಿಕ್ಷಣವನ್ನು ನೀಡಲಾಯಿತು. ೧೯೭೨ರಲ್ಲಿ ಎಂ.ಪಿ.ಎಡ್. ಶಿಕ್ಷಣ ಪ್ರಾರಂಭವಾದಾಗ ಸಿ.ಪಿ.ಎಡ್. ಅನ್ನು ರದ್ದುಗೊಳಿಸಲಾಯಿತು. ಈ ಕಾಲೇಜನ್ನು ಬೆಂಗಳೂರು ವಿಶ್ವವಿದ್ಯಾಲಯ ೧೯೭೬ರಲ್ಲಿ ವಹಿಸಿಕೊಂಡಿತು. ಅದೇ ರೀತಿ ಮೈಸೂರು ವಿಶ್ವವಿದ್ಯಾಲಯದಡಿಯಲ್ಲಿದ್ದ ಕಾಲೇಜನ್ನು (೧೯೭೨) ಕರ್ನಾಟಕ ವಿಶ್ವವಿದ್ಯಾಲಯದಡಿಯಲ್ಲಿದ್ದ ಎರಡು ದೈಹಿಕ ಶಿಕ್ಷಣ ಕಾಲೇಜುಗಳೂ ಬಿ.ಪಿ.ಎಡ್. ಶಿಕ್ಷಣ ನೀಡಲು ಪ್ರಾರಂಭಿಸಿದವು. ಇದರ ಜೊತೆಗೆ ಅನೇಕ ಖಾಸಗಿ ಕಾಲೇಜುಗಳು ಸಿ.ಪಿ.ಎಡ್. ಶಿಕ್ಷಣವನ್ನು ರಾಜ್ಯದಲ್ಲಿ ನೀಡಲಾರಂಭಿಸಿದವು. ಇವುಗಳಲ್ಲಿ ಪ್ರಮುಖವಾದವುಗಳು: ಬೆಂಗಳೂರಿನ ವೈ.ಎಂ.ಸಿ.ಎ. ದೈಹಿಕ ಶಿಕ್ಷಣ ಕಾಲೇಜು, ಮಲ್ಲೇಹಳ್ಳಿ, ಚಿಕ್ಕಬಳ್ಳಾಪುರದ ಮುನಿಸಿಪಲ್ ದೈಹಿಕ ಶಿಕ್ಷಣ ಕಾಲೇಜು, ಹೇಮಾವತಿ ದೈಹಿಕ ಶಿಕ್ಷಣ ಕಾಲೇಜು, ಶ್ರವಣಬೆಳಗೊಳ ಮತ್ತು ಪಿ.ಇ. ಕಾಲೇಜು, ಅಂಚೀಹಳ್ಳಿ (ತುಮಕೂರು ಜಿಲ್ಲೆ) ಮತ್ತು ಬೇತಮಂಗಲ (ಕೋಲಾರ ಜಿಲ್ಲೆ) ಕ್ರೀಡೆಯ ಹಲವಾರು ಸಂಘಟನೆಗಳು ಆಟದ ಸ್ಪರ್ಧೆಗಳನ್ನು (ಟೂರ್ನಮೆಂಟ್) ರಾಷ್ಟ್ರದಾದ್ಯಂತ ವಿವಿಧ ಕ್ರೀಡೆಗಳನ್ನು ಏರ್ಪಡಿಸುವುದರ ಮೂಲಕ ಕ್ರೀಡೆಗೆ ಉತ್ತೇಜನ ನೀಡುತ್ತಿವೆ. ಅನೇಕ ಮನರಂಜನಾ ಕ್ಲಬ್ಬುಗಳು ರಾಜ್ಯದಾದ್ಯಂತ ವೃತ್ತಿನಿರತರಿಗೆ ಮನರಂಜನೆಯನ್ನು ಸಂಜೆಯ ವೇಳೆ ನೀಡುತ್ತಿವೆ. ಸಾಧಾರಣವಾಗಿ ಎಲ್ಲಾ ಕೈಗಾರಿಕೆಗಳಲ್ಲೂ ಇಂತಹ ಕ್ರೀಡಾಕೂಟಗಳಿರುತ್ತವೆ. ಸಾಂಪ್ರದಾಯಿಕ ದೇಹದಾರ್ಢ್ಯತೆಯ ಸ್ಥಳ ಅಂದರೆ ಗರಡಿ ಮನೆಯು ಎಲ್ಲಾ ಹಳ್ಳಿಗಳಲ್ಲೂ ಇರುತ್ತಿತ್ತು. ಕುಸ್ತಿ ಮತ್ತು ಮಲ್ಲಕಂಬ ತರಬೇತಿ ನೀಡಲಾಗುತ್ತಿತ್ತು. ರಾಷ್ಟ್ರೀಯ ಚಳವಳಿಯ ಕಾಲದಲ್ಲಿ ಪ್ರಮುಖ ಸ್ಥಳಗಳಾದ ಧಾರವಾಡ, ಬಳ್ಳಾರಿ, ಕೊಟ್ಟೂರು, ಬೆಂಗಳೂರು, ಬಂಟವಾಳ ಮೊದಲಾದ ಸ್ಥಳಗಳಲ್ಲಿ ವ್ಯಾಯಾಮ ಶಾಲೆಗಳನ್ನು ತೆರೆಯಲಾಯಿತು. ಡಾ॥ ಹರ್ಡೀಕರ್ ರವರ ಹಿಂದೂಸ್ಥಾನಿ ಸೇವಾದಳ ಕ್ರೀಡೆ ಮತ್ತು ದೈಹಿಕ ಅಂಗಸಾಧನೆಗಳನ್ನು ಪ್ರೋತ್ಸಾಹಿಸುವುದರಲ್ಲಿ ಪ್ರಮುಖ ಪಾತ್ರ ವಹಿಸಿತ್ತು.

ಹಿಂದಿನ ಕಾಲದಿಂದಲೂ ಕುಸ್ತಿಯು ಒಂದು ಪ್ರಮುಖ ಕ್ರೀಡೆಯಾಗಿದ್ದಿತು. ಗರಡಿ ಮನೆಯನ್ನು ಎಲ್ಲಾ ನಗರ ಮತ್ತು ದೊಡ್ಡ ದೊಡ್ಡ ಹಳ್ಳಿಗಳಲ್ಲಿ ಕಾಣಬಹುದು. ಮೈಸೂರಿನ ಅರಸರುಗಳೇ ಉತ್ತಮ ಕುಸ್ತಿಪಟುಗಳಾಗಿದ್ದರು. ಅವರು ಕುಸ್ತಿ ಸ್ಪರ್ಧೆಗಳನ್ನು ಏರ್ಪಡಿಸುತ್ತಿದ್ದರು. ದಸರಾ ವೇಳೆಯಲ್ಲಿ ಕುಸ್ತಿಗಳ ಸ್ಪರ್ಧೆ ವಿಜಯನಗರ ಮತ್ತು ಮೈಸೂರಿನಲ್ಲಿ ರಾಜರುಗಳು ಆಳುತ್ತಿದ್ದ ಕಾಲದಲ್ಲಿ ಸರ್ವೇಸಾಮಾನ್ಯವಾಗಿರುತ್ತಿತ್ತು. ಮೈಸೂರಿನಲ್ಲಿ ದಸರಾ ವೇಳೆಯಲ್ಲಿ ಇಂದಿಗೂ ಇದನ್ನು ನಾವು ಕಾಣಬಹುದು.

೧೯೮೨ರವರೆವಿಗೆ ವಿವಿಧ ಜನಪ್ರಿಯ ಆಟೋಟ ಸ್ಪರ್ಧೆಗಳಲ್ಲಿ ಮತ್ತು ಕ್ರೀಡೆಗಳಲ್ಲಿ ಮಿಂಚಿದ ರಾಜ್ಯದ ಕ್ರೀಡಾಪಟುಗಳು ಮತ್ತು ಆಟಗಾರರರಲ್ಲಿ ಕೆಲವು ಪ್ರಮುಖರ ಪಟ್ಟಿಯನ್ನು ನಾವು ಕಾಣಬಹುದು (ಆವರಣದೊಳಗೆ ಅವರು ಪ್ರತಿನಿಧಿಸಿದ ಆಟಗಳನ್ನು ಕೊಡಲಾಗಿದೆ): ಅಮ್ಜದ್‌ಖಾನ್ (ಕಾಲ್ಚೆಂಡು), ಅಲೆನ್‌ಸ್ಕೊಫೀಲ್ಡ್ (ಹಾಕಿ), ಅನಂತ್ ಕೆ.ಆರ್. (ಪರ್ವತಾರೋಹಣ), ಏಂಜಲ್ ಮೇರಿ (ಅಂಗಸಾಧನೆ), ಅನಿಲ್‌ಕುಮಾರ್ (ಬ್ಯಾಸ್ಕೆಟ್‌ಬಾಲ್), ಅನಿಶಾ ಪ್ರಸಾದ್ (ಈಜು, ಮಹಿಳೆ) ಅಂತೋಣಿ (ಕಾಲ್ಚೆಂಡು), ಅಪ್ಪಯ್ಯ (ಹಾಕಿ), ಅರವಿಂದ್ ಸಾವೂರ್ (ಬಿಲಿಯರ್ಡ್ಸ್), ಅಶ್ವತ್ಥಯ್ಯ (ವಾಲಿಬಾಲ್), ಬ್ರಿಜೇಶ್ ಪಟೇಲ್, ಕೀರ್ಮಾನಿ ಎಸ್.ಎಂ.ಹೆಚ್., ರೋಜರ್ ಬಿನ್ನಿ, ಜಿ.ಆರ್. ವಿಶ್ವನಾಥ್, ಚಂದ್ರಶೇಖರ್ ಬಿ.ಎಸ್. (ಎಲ್ಲರೂ ಕ್ರಿಕೆಟ್), ಚಿತ್ರಾ ಗಂಗಾಧರನ್ (ಫುಟ್‌ಬಾಲ್-ಮಹಿಳೆ), ದೇಶ್‌ಮುತ್ತು ಸಿ. (ಹಾಕಿ), ದೇವ್‌ಪ್ರಸಾದ್ (ಸೈಕ್ಲಿಂಗ್), ಎಲ್ವಿರೋ ಬ್ರಿಟ್ಟೊ (ಹಾಕಿ-ಮಹಿಳೆ), ಗೇಬ್ರಿಯಲ್ (ಅಥ್ಲೆಟಿಕ್ಸ್), ಗಣೇಶ್ ಎಂ.ಪಿ. (ಹಾಕಿ), ಗೋಪಾಲಪ್ಪ ಪಿ. (ಕಬಡ್ಡಿ), ಗೋವಿಂದ ಬಿ.ಪಿ. (ಹಾಕಿ), ಹರಿಶ್ಚಂದ್ರ ಹೆಜಮಾಡಿ (ದೇಹದಾರ್ಢ್ಯತೆ), ಇಂದಿರಾ ಶ್ರೀನಿವಾಸಮೂರ್ತಿ (ಬಾಲ್‌ಬ್ಯಾಡ್ಮಿಂಟನ್-ಮಹಿಳೆ), ಜಯಪ್ಪ (ಭಾರ ಎತ್ತುವ ಸ್ಪರ್ಧೆ), ಜುಗ್ಗ ಕಹಾಯ್ (ಸೈಕ್ಲಿಂಗ್), ಕಬಿಡ್ ಜಯಂತ್ (ಟೇಬಲ್ ಟೆನ್ನಿಸ್), ಕಸ್ತೂರಿ ರಂಗನ್ (ಕ್ರಿಕೆಟ್), ಕೆನ್ನೆತ್ ಪೊವೆಲ್ (ಅಥ್ಲೆಟಿಕ್ಸ್), ಕೆಂಚ್ ಆರ್. (ಸೈಕ್ಲಿಂಗ್), ಖುರ್ಷಿದ್ ಆರ್. ಇರಾನಿ (ಸೈಕ್ಲಿಂಗ್-ಮಹಿಳೆ), ಕೃಷ್ಣಗೌಡ ಎಚ್.ಎನ್. (ಕಬಡ್ಡಿ), ಕೃಷ್ಣನ್ ಕುಟ್ಟಿ (ಪರ್ವತಾರೋಹಣ), ಲಕ್ಕಪ್ಪ ಟಿ.ವಿ. (ಭಾರ ಎತ್ತುವುದು), ಲಕ್ಷ್ಮಿ ವಿ. ಕಾರಂತ್ (ಟೇಬಲ್ ಟೆನ್ನಿಸ್-ಮಹಿಳೆ), ಮ್ಯಾಕ್ ಬ್ರಿಟ್ಟೊ (ಹಾಕಿ-ಮಹಿಳೆ), ಮಂಜುನಾಥ್ ಹೆಗಡೆ (ದೇಹದಾರ್ಢ್ಯತೆ) ನಿರ್ಮಲ ಉತ್ತಯ್ಯ (ಅಥ್ಲೆಟಿಕ್ಸ್-ಮಹಿಳೆ), ಪೊನ್ನಪ್ಪ ಪಿ.ಸಿ. (ಅಥ್ಲೆಟಿಕ್ಸ್), ಪ್ರಕಾಶ್ ಪಡುಕೋಣೆ (ಷಟಲ್), ಪ್ರಸನ್ನ ಇ.ಎ.ಎಸ್. (ಕ್ರಿಕೆಟ್), ರವೀಂದ್ರನ್ ಆರ್. (ಚೆಸ್), ರವೀಂದ್ರನಾಥ್ (ಕರಾಟೆ), ರವಿಪ್ರಕಾಶ್ (ಯೋಗಾಸನ), ಶ್ವೇತಾ ದೇವಯ್ಯ (ಬ್ಯಾಸ್ಕೆಟ್ ಬಾಲ್-ಮಹಿಳೆ), ಶೈಲೇಂದ್ರ ಡಿ.ಎನ್. (ಚೆಸ್), ಶೈಲಾ ಕೆ.ಎನ್. ಮತ್ತು ಶಾಂತಾ ರಾಮ ಮೂರ್ತಿ (ಬಾಲ್‌ಬ್ಯಾಡ್ಮಿಂಟನ್-ಮಹಿಳೆ), ಶ್ರೀಧರನ್ ಆರ್. (ಚೆಸ್), ಸುಬ್ಬಣ್ಣ ಎಂ. (ಕಬಡ್ಡಿ), ವಾಸುದೇವರಾಜು (ಯೋಗಾಸನ), ಇತ್ಯಾದಿ. ಶಾಂತಾ ರಂಗಸ್ವಾಮಿ ರವರು ಬಹಳ ದಿನಗಳು ಭಾರತದ ಮಹಿಳಾ ಕ್ರಿಕೆಟ್ ತಂಡದ ಕ್ಯಾಪ್ಟನ್ ಆಗಿದ್ದರು. ಕರ್ನಾಟಕದ ಮಹಿಳಾ ಬಾಲ್‌ಬ್ಯಾಡ್ಮಿಂಟನ್ ಟೀಂ ಬಹಳ ವರ್ಷಗಳು ಚಾಂಪಿಯನ್ನರಾಗಿದ್ದರು.

ಕರ್ನಾಟಕ ಸರ್ಕಾರದ ಯುವಜನ ಸೇವೆ ಮತ್ತು ಕ್ರೀಡಾ ವಿಭಾಗವು ಇತ್ತೀಚೆಗೆ ಕ್ರೀಡೆಗಳಲ್ಲಿ ತೊಡಗಿರುವ ಪುರುಷ ಮತ್ತು ಮಹಿಳಾ ಸ್ಪರ್ಧಿಗಳಿಗೆ, ಆಟಗಾರರಿಗೆ ಅನೇಕ ಅನುಕೂಲಗಳನ್ನು ಮಾಡಿಕೊಡುತ್ತಿದೆ. ಪ್ರತಿಯೊಂದು ಜಿಲ್ಲೆಗೂ ಒಬ್ಬ ಯುವಜನ ಸೇವಾಧಿಕಾರಿಯಾಗಿದ್ದು, ಆಯಾ ಜಿಲ್ಲೆಯ ಕ್ರೀಡಾ ಚಟುವಟಿಕೆಗಳಿಗೆ ಜವಾಬ್ದಾರರಾಗಿರುತ್ತಾರೆ. ಎಲ್ಲಾ ಭಾಗಗಳ ಕ್ರೀಡಾಪಟುಗಳಿಗೆ ಕರ್ನಾಟಕದೆಲ್ಲೆಡೆ ನಾನಾ ರೀತಿಯ ಪ್ರೋತ್ಸಾಹ ಪಡೆಯುತ್ತಿದ್ದು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಭಾಗವಹಿಸುತ್ತಿದ್ದಾರೆ. ಭೂಪಾಲ್‌ನಲ್ಲಿ ೧೯೭೬ರಲ್ಲಿ ನಡೆದ ರಾಷ್ಟ್ರೀಯ ಮಹಿಳಾ ಕ್ರೀಡಾಕೂಟದಲ್ಲಿ ಈ ಕೆಳಕಂಡ ಮಹಿಳೆಯರು ಭಾಗಹಿಸಿದ್ದರು.

೧) ಅಥ್ಲೆಟಿಕ್ಸ್ - ವಿ.ಎ.ಸುಮನ (೧೦೦ಮೀ.) ಶಾಂತಿ ಕ್ಲೆವರ್ (೪೦೦ಮೀ.) ಮರಿಯಮ್ಮ (೧೫೦೦ಮೀ.), ಗೌರಮ್ಮ (೪ ಥ೧೦೦ ರಿಲೇ), ಶೀತಲ್ ಪಾಟೀಲ್ (ಲಾಂಗ್ ಜಂಪ್), ಜಿ.ಆರ್.ರೇಖ (ಹೈ ಜಂಪ್), ಬಿ.ಪದ್ಮಾವತಿ (ಡಿಸ್ಕಸ್ ತ್ರೊ), ಶರೀನ್ ಬೆಳ್ಳಿಯಪ್ಪ (ಜೇವಲಿನ್ ತ್ರೋ), ಶಾಂತಿ ಅಲಿವರ್ (೪ಥ೪೦೦ ರಿಲೇ) ಅನದ ಲೆವಿನಾ ಲೋಬೊ (೪x೪೦೦ ರಿಲೇ); ೨) ಕಬಡ್ಡಿ - ಜಮುನ ಮಾಯಮ್ಮ, ಸುಮಿತ್ರ, ಕವಿತಾ, ಜಲಜಾಕ್ಷಿ, ಎನ್.ಸಿ.ಸವಿತ, ಎಸ್. ಕೆ.ಉಮಾಚಗಿ, ಸಿ.ಆರ್.ಹಡ್‌ಪದ್ ಮತ್ತು ಎನ್.ಕವಿತ, ೩) ಬ್ಯಾಡ್ಮಿಂಟನ್ - ಶರ್ಮಿಳಾ, ದೀಪಾ ಗಣಪತಿ ಮತ್ತು ದೀಪಾ ಬೊಕಿಲ್; ೪) ವಾಲಿಬಾಲ್ - ಜಯಮಾಲ, ಫರೀದ, ಕಲ್ಪನಾ, ಚಂದ್ರಕಲಾ; ೫) ಹ್ಯಾಂಡ್‌ಬಾಲ್ - ಇಂದುಮತಿ, ವೀಣಾದೇವಿ, ಸಹನ, ರೇಣು, ರುಕ್ಮಿಣಿ, ಶೋಭ, ಕಾಂತಿ, ವನಜಾ ಕಾಳಪ್ಪ, ನೂತನ್, ಸುಜಾತ, ಇಂದಿರಾ, ಪೂರ್ಣಿಮಾ, ಅನಿತಾ, ವೀಣಾ ನಾಯ್ಡು ಅನದ ಎನ್.ಜಯಶ್ರೀ; ೬) ಸ್ವಿಮ್ಮಿಂಗ್ - ವೈಶಾಲಿ, ರೋಹಿಣಿ, ಶಾಂತಿ, ಸಾಗರಿ, ರಜನಿ, ಸೀಮಾ, ಸಂಗೀತಾ, ಶ್ರೀಕೃಪಾ, ಪ್ರಿಯದರ್ಶಿನಿ,; ೭) ಹಾಕಿ - ಪದ್ಮಿನಿ, ಅನುರಾಧ, ಪದ್ಮಾವತಿ, ತಾರನ, ಸುಜಾತ, ಪ್ರತಿಮಾ, ವರಲಕ್ಷ್ಮಿ, ರೀನಾ, ಸವಿತ, ರೇಣು, ರುಕ್ಮಿಣಿ, ಶೋಭಾ, ಕಾಂತಿ, ವನಜಾ ಕಾಳಪ್ಪ, ನೂತನ್ ಅನದ ಸುಜಾ; ೮) ಬಾಸ್ಕೆಟ್ ಬಾಲ್ - ಶಾಂತಿ, ಮೀನಾ, ಚಂದ್ರಕಲಾ, ರಾಧಿಕಾ, ಜಮುನಾ, ಸಂತ, ಸಿಲ್ವಿಯಾ, ವಿನಿತ, ಸುಮಂಗಳ, ನಾಗರೇಖ ಮತ್ತು ಗೀತಾ ಎಸ್.ಎನ್; ೯) ಜಿಮ್ನಾಸ್ಟಿಕ್ಸ್ - ಕವಿತಾ ರಂಗನಾಥ, ವಿಂಕಿತ ರಾಣ, ಸುಮರಾಣಿ, ಚೈತ್ರ ಮತ್ತು ಜಯಲಕ್ಷ್ಮಿ; ೧೦) ಖೊ-ಖೊ-ಎಸ್.ಶ್ಯಾಮಲ, ಚೇತನ, ಶಾಂತ, ಆಶಾ, ಭಾರತಿ, ರಾಜಶ್ರೀ, ಎಂ.ಆರ್.ಪಾಟೀಲ್, ಮಾಯಾ, ಚಂದ್ರಕಲಾ, ರಾಧಾ, ಪುಷ್ಪಾವತಿ

## ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ದೇಶದಲ್ಲಿ ಯುವಜನರ ಚಟುವಟಿಕೆಗಳನ್ನು ಅಭಿವೃದ್ಧಿ ಪಡಿಸಲು ಮುಂದುವರೆದ ರಾಜ್ಯಗಳಲ್ಲಿ ಕರ್ನಾಟಕ ರಾಜ್ಯವೂ ಒಂದಾಗಿದೆ. ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ಮುಖಾಂತರ ಯುವಜನತೆಗೆ ಸಂಬಂಧಿಸಿದ ಅವಶ್ಯಕತೆಗಳನ್ನು ನಗರ ಮತ್ತು ಗ್ರಾಮಾಂತರ ಪ್ರದೇಶದ ಯುವಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಬೆಳವಣಿಗೆ, ಕ್ರೀಡೆ ಮತ್ತು ಆಟಗಳಲ್ಲಿ ತರಬೇತಿ, ಸ್ವಯಂ ಉದ್ಯೋಗ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಳ್ಳುವುದರಲ್ಲಿ ತರಬೇತಿ ಮುಂತಾದ ಯೋಜನೆಗಳಲ್ಲಿ ಯುವಕರು ಭಾಗವಹಿಸುವಂತೆ ಪ್ರೋತ್ಸಾಹಿಸುವುದರ ಜೊತೆಗೆ ಸರ್ಕಾರವು ಹಮ್ಮಿಕೊಂಡಿರುವ ಕಾರ್ಯಕ್ರಮಗಳನ್ನು ಸಕ್ರಿಯವಾಗಿ ಕಾರ್ಯರೂಪಕ್ಕೆ ತರುತ್ತಿದೆ. ಇಲಾಖೆಯಲ್ಲದೇ ಸ್ವಯಂ ಸೇವಾ ಸಂಸ್ಥೆಗಳು ಹಾಗೂ ಕ್ರೀಡಾ ಸಂಸ್ಥೆಗಳೂ ಸಹ ಯುವಜನರ ಅಭಿವೃದ್ಧಿಗಾಗಿ ಶ್ರಮಿಸುತ್ತಿವೆ. ಯುವಜನ ಮತ್ತು ಕ್ರೀಡಾ ಚಟುವಟಿಕೆಗಳಿಗೆ ಆರ್ಥಿಕ ಅನುದಾನ, ಯುವಜನರ ಸಾಧನೆ ಮತ್ತು ತಮ್ಮ ಶ್ರೇಯೋಭಿವೃದ್ಧಿಗಾಗಿ ಹಮ್ಮಿಕೊಳ್ಳುವ ಕಾರ್ಯಕ್ರಮಗಳಿಗೆ ಇಲಾಖೆಯು ಗಮನಾರ್ಹ ಕೊಡುಗೆಯನ್ನು ನೀಡುತ್ತಿದೆ. ಜೊತೆಗೆ ರಾಜ್ಯದಲ್ಲಿ ಯುವಜನ ಹಾಗೂ ಕ್ರೀಡಾ ಮೂಲಭೂತ ಸೌಲಭ್ಯಕ್ಕಾಗಿ ಅನುದಾನ ನೀಡಲಾಗುತ್ತಿದೆ. ಇಲಾಖೆಯು ಯುವಜನರ ಏಳಿಗೆಗಾಗಿ ಸೂಕ್ತ ಯೋಜನೆಗಳನ್ನು ಹಮ್ಮಿಕೊಳ್ಳುವುದರ ಜೊತೆಗೆ ಮಾರ್ಗದರ್ಶನ

ಹಾಗೂ ಹಣಕಾಸಿನ ಸಹಾಯವನ್ನು ನೀಡಲು ರಾಜ್ಯವಲಯ ಮತ್ತು ಜಿಲ್ಲಾ ವಲಯದಲ್ಲಿ ಅವಕಾಶ ಒದಗಿಸಲಾಗಿದೆ.

ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆಯನ್ನು ೧೯೬೯ ರಲ್ಲಿ ಯುವಜನ ಸೇವಾ ನಿರ್ದೇಶನಾಲಯವನ್ನಾಗಿ ಯುವ ಜನರ ಕ್ರಿಯಾಶೀಲತೆಯನ್ನು ರಾಷ್ಟ್ರ ಅಭಿವೃದ್ಧಿ ಚಟುವಟಿಕೆಗಳಲ್ಲಿ ತೊಡಗಿಸಲು ಸ್ಥಾಪಿಸಲಾಯಿತು. ಇಲಾಖೆಯನ್ನು ವಿಭಾಗ ಮಟ್ಟದ ಮತ್ತು ಜಿಲ್ಲಾ ಮಟ್ಟದಲ್ಲಿ ಕಛೇರಿಗಳನ್ನು ತೆರೆಯುವ ಮೂಲಕ ೧೯೭೫ರಲ್ಲಿ ಮತ್ತು ತಾಲೂಕು ಅಧಿಕಾರಿಗಳನ್ನು ೧೯೭೭ ರಲ್ಲಿ ನೇಮಿಸುವುದರ ಮೂಲಕ ಪುನರ್ ರಚಿಸಲಾಯಿತು. ಕರ್ನಾಟಕ ರಾಜ್ಯಸ್ಪೋರ್ಟ್ಸ್ ಕೌನ್ಸಿಲ್‌ನ್ನು೧೯೮೦ ರಲ್ಲಿ ಇಲಾಖೆಯಲ್ಲಿ ವಿಲೀನಗೊಳಿಸಿ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ಎಂದು ಮರುನಾಮಕರಣ ಮಾಡಲಾಯಿತು. ಕರ್ನಾಟಕ ರಾಜ್ಯ ಯುವನೀತಿಯನ್ನು ೨೦೧೩ರಲ್ಲಿ ಕರ್ನಾಟಕ ಸರ್ಕಾರವು ಅಂಗೀಕರಿಸಿದ ಹಿನ್ನೆಲೆಯಲ್ಲಿ ಯುವನೀತಿಯ ಶಿಫಾರಸ್ಸಿನಂತೆ ಇಲಾಖೆಯನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಎಂದು ಮರುನಾಮಕರಣ ಮಾಡಲಾಗಿದೆ. ನಿರ್ದೇಶಕರು/ಆಯುಕ್ತರು ಇಲಾಖೆಯ ಮುಖ್ಯಸ್ಥರಾಗಿದ್ದು, ಕರ್ನಾಟಕ ಕ್ರೀಡಾಪ್ರಾಧಿಕಾರದ ಪದನಿಮಿತ್ತ ಮಹಾನಿರ್ದೇಶಕರು, ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿಯ ಸದಸ್ಯ ಕಾರ್ಯದರ್ಶಿಹಾಗೂ ಕ್ರಿಡಾಂಗಣ ವ್ಯವಸ್ಥಾಪಕ ಸಮಿತಿಯ ಕಾರ್ಯದರ್ಶಿಗಳು ಆಗಿರುತ್ತಾರೆ. **ಇಲಾಖೆಯ ದೃಷ್ಟಿಕೋನ:** ನಮ್ಮಸಮಾಜ, ಕರ್ನಾಟಕ, ಭಾರತ ಮತ್ತು ವಿಶ್ವದ ಸರ್ವಾಗೀಣ ಅಭಿವೃದ್ಧಿಗೆ ಪೂರಕವಾಗುವಂತೆ ಯುವ ಜನರನ್ನು ಪ್ರೇರೇಪಿಸಲು ಅನುವು ಮಾಡಲು ಅವರನ್ನು ತಲುಪಿ, ತೊಡಗಿಸಿಕೊಂಡು ಸಬಲೀಕರಣಗೊಳಸುವುದು. **ಇಲಾಖೆಯ ಕಾರ್ಯಬದ್ಧತೆ:** ಕರ್ನಾಟಕದ ಯುವಜನರಿಗಾಗಿ ಉತ್ತಮ, ಉಜ್ವಲ, ನ್ಯಾಯಯುತ, ಶೋಭಾಯಮಾನವಾದ ನಾಳೆಗಳನ್ನು ಸೃಷ್ಟಿಸುವುದು.

**ಯುವ ತರಬೇತಿ:** ಯುವ ಜನರಿಗಾಗಿ ಜೀವನದ ವಿವಿಧ ಆಯಾಮಗಳಲ್ಲಿ ಯಶಸ್ವಿಯಾಗಲು ತರಬೇತಿ ಶಿಬಿರಗಳನ್ನು ನಡೆಸಲಾಗುವುದು. **ಯುವ ಚೇತನ** : ವ್ಯಕ್ತಿತ್ವ ವಿಕಸನ, ಜೀವನ ಕೌಶಲ್ಯ, ನಾಯಕತ್ವ ಗುಣಗಳಬಗ್ಗೆ ಅರಿವುಮೂಡಿಸುವ ತರಬೇತಿ ಕಾರ್ಯಕ್ರಮ. **ಯುವ ಪ್ರೇರಣ:** ಸ್ವ ಉದ್ಯೋಗದಲ್ಲಿ ತೊಡಗಿಸಿಕೊಳ್ಳಲು ಪ್ರೇರಣೆ ಮತ್ತು ಮಾರ್ಗದರ್ಶನ ನೀಡುವ ತರಬೇತಿ ಕಾರ್ಯಕ್ರಮ. **ಯುವ ಸಂವಹನ:** ಯುವಜನತೆಗೆ ಇತರರೊಂದಿಗೆ ವ್ಯವಹರಿಸಲು ಮತ್ತು ಭಾವನೆಗಳ ಅಭಿವ್ಯಕ್ತಿಗೆ ಹಾಗೂ ಯಶಸ್ವಿ ನಾಯಕತ್ವಕ್ಕಾಗಿ ಸಂವಹನ ಬಹುಮುಖ್ಯ ಮಾಧ್ಯಮವಾಗಿದ್ದು, ಅದಕ್ಕಾಗಿ ಅಗತ್ಯವಿರುವ ಕೌಶಲ್ಯಗಳ ಬಗ್ಗೆ ತರಬೇತಿ ಶಿಬಿರ. ಈ ತರಬೇತಿಗಳನ್ನು ಆಯಾ ರಂಗಗಳಲ್ಲಿ ಅನುಭವ ಪಡೆದಿರುವ ಸಂಪನ್ಮೂಲ ವ್ಯಕ್ತಿಗಳಿಂದ ವೈಜ್ಞಾನಿಕ ಕ್ರಮದಲ್ಲಿ ನಡೆಸಲಾಗುವುದು. ೧೬ ರಿಂದ ೩೦ ವರ್ಷಗಳ ವಯೋಮಿತಿಯಲ್ಲಿನ ಎಲ್ಲಾ ಸ್ತರಗಳ ಯುವಜನರು (ಯುವಕ/ ಯುವತಿ) ಈ ಕಾರ್ಯಕ್ರಮದ ಪ್ರಯೋಜನ ಪಡೆದು ಕೊಳ್ಳಬಹುದು. ಯುವತಿಯರಿಗೆ ಮತ್ತು ಯುವಕರಿಗೆ ಪ್ರತ್ಯೇಕವಾಗಿ ೭ ರಿಂದ೧೦ ದಿನಗಳ ಅವಧಿಯ ತರಬೇತಿ ಕಾರ್ಯಕ್ರಮಗಳನ್ನು ರೂಪಿಸಲಾಗಿರುತ್ತದೆ. ಉಚಿತ ವಸತಿ ಮತ್ತು ಊಟದವ್ಯವಸ್ಥೆ ಜೊತೆಗೆ ತರಬೇತಿ ಬಂದು ಹೋಗುವ ಸಾಮಾನ್ಯಬಸ್ ದರವನ್ನು ಪ್ರಯಾಣ ಭತ್ಯೆಯಾಗಿ ನೀಡಲಾಗುವುದು. ತರಬೇತಿ ಸ್ಥಳ: ಯುವಜನ ತರಬೇತಿ ಕೇಂದ್ರ, ಕುಂಬಳಗೋಡು, ಕೆಂಗೇರಿ, ಬೆಂಗಳೂರು ಮತ್ತು ಜಯಪ್ರಕಾಶ ನಾರಾಯಣ ರಾಷ್ಟ್ರೀಯ ಯುವ ತರಬೇತಿ ಕೇಂದ್ರ, ವಿದ್ಯಾನಗರ, ಬೆಂಗಳೂರು. ಯುವಜನರಿಗೆ ಇಂದಿನ ಕಾಲಮಾನಕ್ಕೆ ತಕ್ಕಂತಹ ಆಧುನಿಕ ತಂತ್ರಜ್ಞಾನಗಳಲ್ಲಿ ಮತ್ತು ಕೌಶಲ್ಯಗಳಲ್ಲಿಪರಿಣತಿ ಪಡೆಯಲು ವಿಷಯ ತಜ್ಞರಿಂದ ತರಬೇತಿ ಶಿಬಿರಗಳನ್ನು ಬೆಂಗಳೂರಿನ ರಾಜ್ಯ ಯುವ ಕೇಂದ್ರದಲ್ಲಿ ನಡೆಸಲಾಗುತ್ತದೆ. ಛಾಯಾಚಿತ್ರಣ ತರಬೇತಿ, ವೀಡಿಯೋ ಚಿತ್ರಣ ತರಬೇತಿ, ಬ್ಯೂಟೀಷಿಯನ್ ತರಬೇತಿ, ಅಭಿನಯ ತರಬೇತಿ, ನಿರೂಪಣೆ ಮತ್ತು ವಾರ್ತಾವಾಚಕರ ತರಬೇತಿ, ಕರಕುಶಲ ತರಬೇತಿ ಶಿಬಿರಗಳನ್ನು ಆಯೋಜಿಸಲಾಗುತ್ತದೆ. ತರಬೇತಿಯ ಅವಧಿಯಲ್ಲಿ ಉಚಿತ ಊಟ ಮತ್ತುವಸತಿ ಸೌಲಭ್ಯವನ್ನು ನೀಡಲಾಗುತ್ತದೆ. ೧೬ ರಿಂದ ೩೦ ವರ್ಷದ ಯುವಕ/ಯುವತಿಯರಿಗೆ ಈ ಕಾರ್ಯಕ್ರಮದ ಪ್ರಯೋಜನ ಪಡೆಯಬಹುದಾಗಿದ್ದು, ತರಬೇತಿ ಪಡೆದವರಿಗೆ ಪ್ರಮಾಣ ಪತ್ರಗಳನ್ನು ನೀಡಲಾಗುವುದು. ಅಳಿವಿನ ಅಂಚಿನಲ್ಲಿರುವ ಜಾನಪದ ನೃತ್ಯ ರೂಪಕ ಮತ್ತು ಶಾಸ್ತ್ರೀಯ ನೃತ್ಯ ರೂಪಕ ಸ್ಪರ್ಧೆಗಳನ್ನು ಆಯೋಜಿಸಿ ಬಹುಮಾನ ವಿಜೇತರಿಗೆ ನಗದು ಬಹುಮಾನ ಮತ್ತು ಪ್ರಮಾಣ ಪತ್ರಗಳನ್ನು ನೀಡಲಾಗುವುದು.

**ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿ:** ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿಯನ್ನು ಕರ್ನಾಟಕ ಸರ್ಕಾರವು ೧೯೮೯ರಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಅಧೀನದಲ್ಲಿ ಸ್ಥಾಪಿಸಲಾಗಿದೆ. ರಾಜ್ಯಾದ್ಯಂತ ಸಾಹಸ ಚಟುವಟಿಕೆಗಳನ್ನು ನಡೆಸಲು ಇಲಾಖೆಯಿಂದ ಅನುದಾನ ನೀಡಲಾಗುತ್ತದೆ. ಯುವ ಜನರಿಗೆ ಸಾಹಸ ಕ್ರೀಡೆಗಳಲ್ಲಿ ಭಾಗವಹಿಸಲು ಅವಕಾಶ ಒದಗಿಸುವ ಮೂಲಕ ಅವರಲ್ಲಿ ಸಾಹಸ ಪ್ರಿಯತೆ ಬೆಳೆಸುವುದು ಮತ್ತು ಅವರ ಆತ್ಮವಿಶ್ವಾಸವನ್ನು ಹೆಚ್ಚಿಸುವುದು ಅಕಾಡೆಮಿಯ ಮುಖ್ಯ ಧ್ಯೇಯೋದ್ದೇಶವಾಗಿದೆ. ಜನರಲ್ ತಿಮ್ಮಯ ರಾಷ್ಟೀಯ ಸಾಹಸ ಅಕಾಡೆಮಿಯ ವತಿಯಿಂದ ೨೦೧೮-೧೫ನೇ ಸಾಲಿನಲ್ಲಿ ಸಾಹಸ ಕ್ರೀಡಾ ಕಾರ್ಯಕ್ರಮಗಳಾದ ಭೂ ಸಾಹಸ, ಜಲ ಸಾಹಸ, ಹಾಗೂ ವಾಯು ಸಾಹಸ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿರುತ್ತದೆ. ಭೂ ಸಾಹಸದಲ್ಲಿ ಶಿಲಾರೋಹಣ (ರಾಕ್ ಕ್ಲೈಂಬಿಂಗ್) ತರಬೇತಿ - ಓರಿಯೇಂಟೇಷನ್, ಬೇಸಿಕ್ ಹಾಗೂ ಅಡ್ವಾನ್ಸ್ ತರಬೇತಿ ಶಿಬಿರಗಳನ್ನು, ಮತ್ತು ಕೃತಕಗೋಡೆ ಹತ್ತುವ ತರಬೇತಿ ಹಾಗೂ ಸ್ಪರ್ಧೆಗಳು, ವಾರಾಂತ್ಯ ಶಿಬಿರಗಳು, ಟ್ರೆಕ್ಕಿಂಗ್, ರ್ಯಾಪ್ಲಿಂಗ್, ಪ್ಯಾರಾಸೈಲಿಂಗ್, ಕಯಾಕಿಂಗ್, ವಿಂಡ್ ಸರ್ಫಿಂಗ್, ಜೆಟ್ಸ್ಕಿ, ಮೋಟಾರ್ ಬೋಟ್ ಮತ್ತು ಪ್ರಕೃತಿ ಅಧ್ಯಯನ ಶಿಬಿರಗಳನ್ನು ಏರ್ಪಡಿಸಲಾಗಿರುತ್ತದೆ.

**ಯುವ ಶಕ್ತಿ ಕೇಂದ್ರ:** ಯುವಶಕ್ತಿ ಕೇಂದ್ರದ ಯೋಜನೆಯ ಮಾರ್ಗಸೂಚಿಗಳು: ೧. ಪ್ರಸ್ತಾವನೆ: ಮಾಹಿತಿ ತಂತ್ರಜ್ಞಾನ ಮತ್ತು ಸೇವಾವಲಯದಲ್ಲಿ ಉಂಟಾದ ಅಭಿವೃದ್ಧಿಯ ಪ್ರಭಾವದಿಂದಾಗಿ ಕರ್ನಾಟಕದ ಆರ್ಥಿಕ ಪ್ರಗತಿ ಉನ್ನತ ಮಟ್ಟಕ್ಕೇರಿದ್ದು ಯುವ ಕನ್ನಡಿಗರ ವೃತ್ತಿ ರಂಗದಲ್ಲಿ ಸಾಗರೋಪಾದಿಯಲ್ಲಿ ಬದಲಾವಣೆಗಳು ಆಗಿದೆ ಶೈಕ್ಷಣಿಕರಂಗವು ಸಹ ಸ್ಪರ್ಧಾತ್ಮಕವಾಗಿದ್ದು, ಯುವ ವಿದ್ಯಾರ್ಥಿ/ ವಿದ್ಯಾರ್ಥಿನಿಲಯರ ಪರಿಕ್ಷೇಯಲ್ಲಿ ಗಳಿಸುವ ಅಂಕಗಳಿಗೆ ಹೆಚ್ಚು ಮಹತ್ವ ನೀಡುತ್ತಿದ್ದು ಪತ್ಯೇತರ ಚಟುವಟಿಕೆಗಳಲ್ಲಿ ಪ್ರಮುಖವಾಗಿ

ಮನೋ–ದೈಹಿಕ ಆರೋಗ್ಯಕ್ಕೆ ಪೂರಕವಾದ ಕ್ರೀಡೆಯಲ್ಲಿ ಪಾಲ್ಗೊಳ್ಳುವಿಕೆ ಕ್ಷೀಣಿಸುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ವೃತ್ತಿ/ಶಿಕ್ಷಣ ಆಧಾರಿತ ಆರೋಗ್ಯ ದುಷ್ಪರಿಣಾಮಗಳಾದ ಬೊಜ್ಜು, ಒತ್ತಡ ಸಂಬಂಧಿ ಸಮಸ್ಯೆಗಳು, ಮಧುಮೇಹ ಮತ್ತು ಹೃದ್ರೋಗ ಸಮಸ್ಯೆಗಳಲ್ಲಿ ಕೂಡ ಹೆಚ್ಚಳವಾಗಿದೆ. ಬಹಳಷ್ಟು ವೃತ್ತಿಗಳಲ್ಲಿ ದೈಹಿಕ ವ್ಯಾಯಾಮ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಫಿಟ್ನೆಸ್ ಕೇಂದ್ರಗಳು ಇಲ್ಲದಿರುವುದರಿಂದ ಈ ಸಮಸ್ಯೆ ಗಂಭೀರವಾಗುತ್ತಿದೆ. ಈ ಹಿಂದೆ ಪ್ರತಿ ನಗರ/ಗ್ರಾಮದಲ್ಲಿ ಒಂದಕ್ಕಿತ ಹೆಚ್ಚು ಗರಡಿ ಮನೆಗಳಿದ್ದು, ಅಲ್ಲಿ ಮಕ್ಕಳು, ಯುವ ಜನರು ಮತ್ತು ವಯಸ್ಕರು ದೈಹಿಕ ವ್ಯಾಯಾಮ ಚಟುವಟಿಕೆಗಳಲ್ಲಿ ನಿರತರಾಗುವುದು ಜೀವನ ಶೈಲಿಯಾಗಿತ್ತು. ಆರ್ಥಿಕ ಬೆಳೆವಣಿಗೆಯಿಂದಾಗಿ ಮಹಿಳೆಯರೂ ಸಹ ವಿವಿಧ ವೃತ್ತಿಗಳಲ್ಲಿ ಭಾಗಿಯಾಗಿ ಸಮರ್ಥವಾಗಿ ಕಾರ್ಯನಿರ್ವಹಿಸುತ್ತಿದ್ದು, ಕೌಟುಂಬಿಕ ಆದಾಯ ಗಳಿಕೆಯಲ್ಲಿ ಬೆಂಬಲ ನೀಡುವುದರ ಜೊತೆಗೆ ವ್ಯಾಪಾರ ಕ್ಷೇತ್ರ, ಔದ್ಯಮಿಕ ಕ್ಷೇತ್ರಗಳಲ್ಲೂ ಸಹ ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸುತ್ತಿದ್ದಾರೆ. ಈ ಹಿನ್ನಲೆಯಲ್ಲಿ ಯುವ ವಿದ್ಯಾರ್ಥಿನಿ / ಮಹಿಳೆಯರಲ್ಲೂ ಸಹ ದೈಹಿಕ ಆರೋಗ್ಯದ ಬಗ್ಗೆ ಅರಿವುಮೂಡಿಸಿ ಪ್ರಾರಂಭದಿಂದಲೇ ದೈಹಿಕ ಸಾಮರ್ಥ್ಯವನ್ನು ಬೆಳೆಸಿ ಸಶಕ್ತರನ್ನಾಗಿಸಲು ತರಬೇತಿ ಅವಕಾಶ ಕಲ್ಪಿಸುವುದು ಅವಶ್ಯಕವಾಗಿದೆ. ಈ ಹಿನ್ನೆಲೆಯಲ್ಲಿ ೨೦೧೪–೧೫ನೇ ಸಾಲಿನಿಂದ 'ಯುವಶಕ್ತಿ ಕೇಂದ್ರ' ಯೋಜನೆಯನ್ನು ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ.

**ನಮ್ಮೂರ ಶಾಲೆಗೆ ನಮ್ಮ ಯುವಜನರು: ನಮ್ಮೂರಶಾಲೆಗೆನಮ್ಮ ಯುವಜನರು ಪರಿಕಲ್ಪನೆಯ ಸೂಚನೆ:** ಶೇ. ೬೩ರಷ್ಟು ಯುವ ಜನರು ಗ್ರಾಮೀಣ ಪ್ರದೇಶಗಳಲ್ಲಿ ನೆಲೆಸಿದ್ದಾರೆ: ಶೇ.೨೪ರಷ್ಟು ಯುವ ಜನರು ಅನಕ್ಷರಸ್ಥರು: ಇದರಲ್ಲಿ ಶೇ. ೬೫ರಷ್ಟು ಜನರು ಯುವ ಮಹಿಳೆಯರಯ ಶೇ ೫೪.೩ರಷ್ಟು ಯುವಜನರು ಎಸ್.ಎಸ್.ಎಲ್.ಸಿ. ನಂತರದ ಔಪಚಾರಿಕ ಶಿಕ್ಷಣವಿಲ್ಲದವರು ಕರ್ನಾಟಕದಲ್ಲಿ ಒಟ್ಟು ಉನ್ನತ ಶಿಕ್ಷಣಕ್ಕೆ ಪ್ರವೇಶ ಪಡೆಯುವ ಯುವಜನರ ಅನುಪಾತ (ಗ್ರಾಸ್ ಎನ್ರೋಲ್ಮೆಂಟ್ ರೇಷಿಯೋ) ಕೇವಲ ಶೇ. ೧೩ರಷ್ಟಿದೆ. ತಾಲ್ಲೂಕನ್ನು ಘಟಕವನ್ನಾಗಿಸಿಕೊಂಡು, ಉತ್ತಮ ರೀತಿಯಲ್ಲಿ ತಮ್ಮ ಪ್ರತಿಭೆ, ದೂರದೃಷ್ಟಿ, ಸೇವಾನಿಷ್ಠೆ ಮತ್ತು ಜನಸಾಮಾನ್ಯರ ಸಬಲೀಕರಣಕ್ಕಾಗಿ ಅದರಲ್ಲೂ ಶಾಲೆಯ ಅಭಿವೃದ್ಧಿ ಬಗ್ಗೆ ವಿಶೇಷ ಸಾಧನೆ ತೋರುವ ಮತ್ತು ಈ ನಿಟ್ಟಿನಲ್ಲಿ ಅಪಾರವಾಗಿ ಶ್ರಮಿಸುವ ಯುವಜನರನ್ನು ಪ್ರೋತ್ಸಾಹಿಸಲಾಗುವುದು. ಯುವಜನರು ತಮ್ಮ ಶಿಕ್ಷಣವನ್ನು ಮುಂದುವರೆಸುವ ಮತ್ತು ಅದನ್ನೇ ಸೃಜನಶೀಲ ರೀತಿಯಲ್ಲಿ ಮಾಡುವ ಅವಶ್ಯಕತೆ ತುಂಬಾ ಇದೆ ಎಂಬುದನ್ನು ಈ ಮೇಲಿನ ಅಂಕಿ–ಅಂಶಗಳು ಸೂಚಿಸುತ್ತವೆ, ಈ ಹಿನ್ನೆಲೆಯಲ್ಲಿ 'ನಮ್ಮೂರ ಶಾಲೆಗೆ ನಮ್ಮ ಯುವಜನರು' ಎಂಬ ಯೋಜನೆಯನ್ನು ರೂಪಿಸಲಾಗಿದೆ.

**ಯುವ ಸ್ಪಂದನ :** ಯುವ ಜನರ ಅಭಿವೃದ್ಧಿ ಮತ್ತು ಸಬಲೀಕರಣದೊಂದಿಗೆ ಆಪ್ತಸಮಾಲೋಚನೆಯಂತಹ ಬೆಂಬಲ ಸೇವೆಗಳು: ಭಾರತೀಯ ಯುವ ಜನರ ಜನಸಂಖ್ಯೆಯು ಶೇ ೩೦ ರಷ್ಟಿದ್ದು ಕರ್ನಾಟಕ ರಾಜ್ಯದ ಯುವಜನರ ಜನಸಂಖ್ಯೆ (೨೦೧೧ ರಸಮೀಕ್ಷೆಯ) ಯು ೧.೮೬ ಕೋಟಿ (ಒಟ್ಟು ಜನಸಂಖ್ಯೆ ಶೇ ೩೪.೬ ರಷ್ಟು೧೫–೩೦ ರವಯಸ್ಸಿನವರು). ಮಾನವ ಅಭಿವೃದ್ಧಿ ವರದಿ ೨೦೧೨ರ ಪ್ರಕಾರ ಪ್ರಸ್ತುತ ಈಗಿನ ಯುವ ಜನರ ಜನಸಂಖ್ಯೆಯನ್ನು ಗಮನಿಸಲಾಗಿ ಮುಂದೆ ೨೦೫೦ ರಷ್ಟರಲ್ಲಿ ವಯಸ್ಸಾದವರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಯುವ ಜನರಿರುತ್ತಾರೆಂದು ಹೇಳಿದರೆ ತಪ್ಪಾಗಲಾರದು. ಇಂದಿನ ಯುವ ಜನರ ಹಾಗೂ ಮುಂದೆ ಹುಟ್ಟಲಿರುವ ಯುವ ಪೀಳಿಗೆಯ ಅಭಿವೃದ್ಧಿಯನ್ನು ಆಧಾರವಾಗಿಟ್ಟು ಕೊಂಡು ಈ ಯೋಜನೆಯು ಯುವಜನರನ್ನು ಬಲ ಪಡಿಸಲು ಹಾಗೂ ಯುವ ಜನರ ವಿಷಯಗಳಿಗೆ ಸಂಬಂಧಿಸಿದಂತೆ ಪೂರಕಸೇವೆಗಳನ್ನು ಒದಗಿಸಿ ದಾರಿ ದೀಪವಾಗಲಿದೆ.

ಇಂದಿನ ಪರಿಸ್ಥಿತಿಯಲ್ಲಿ ಯುವ ಜನರು ಸಾಮಾಜಿಕ, ಮನೋಸಾಮಾಜಿಕ, ವರ್ತನೆಯ, ಮಾನಸಿಕ ಆರೋಗ್ಯಕ್ಕೆ ಸಂಬಂಧಿಸಿದಂತೆ ಸಾಕಷ್ಟು ಸವಾಲುಗಳನ್ನು ಎದುರಿಸ ಬೇಕಾಗುತ್ತಿದೆ. ಸಮಾಜದಲ್ಲಿ ಗೌರವಯುತವಾದ ಜೀವನವನ್ನು ನಡೆಸಲು ಪ್ರಮುಖವಾಗಿ ಸಾಮಾಜಿಕ ಸಂಸ್ಥೆಗಳಾದ ಕುಟುಂಬಸಂಬಂಧಿಗಳು, ಗೆಳೆಯರು, ಶಿಕ್ಷಕರು, ಉದ್ಯೋಗಸ್ಥರು ಮುಂತಾದವರೊಂದಿಗೆ ಸಾಮಾಜಿಕ ಸವಾಲುಗಳನ್ನು ಎದುರಿಸ ಬೇಕಾದಲ್ಲಿ ದೈಹಿಕ ಆಕಾರದ ಗ್ರಹಿಕ ಹಾಗೂ ಪರಸ್ಪರ ಸಾಮಾಜಿಕ ಸಂಬಂಧಗಳು ಮತ್ತು ಸಾಮಾಜಿಕ ಸಂಸ್ಥೆಗಳು ವ್ಯಾಪಕವಾಗುತ್ತವೆ. ಮಾನಸಿಕಮತ್ತು ಮನೋಸಾಮಾಜಿಕ ಸವಾಲುಗಳನ್ನುಸರಿಯಾಗಿ ನಿರ್ವಹಿಸದಿದ್ದಲ್ಲಿ ಅದು ಆತಂಕ, ಖಿನ್ನತೆಯಂತಹ ಹಾಗೂ ಸಂಬಂಧಾತ್ಮಕ ಸಮಸ್ಯೆಗಳಿಗೆ ಕಾರಣವಾಗಿ ಇಂತಹ ಮಾನಸಿಕ ಒತ್ತಡಗಳನ್ನು ನಿಭಾಯಿಸಲು ಯುವಜನರು ಮಾದಕ ವ್ಯಸನಿಗಳಂತಹ ಸಾಮಾಜಿಕ ಒತ್ತಡಗಳನ್ನು ನಿಭಾಯಿಸಲು ಯುವಜನರು ಮಾದಕ ವ್ಯಸನಿಯಂತಹ ಸಾಮಾಜಿಕ ಸಮಸ್ಯೆಗಳಿಗೆ ಬಲಿಯಾಗುವುದೆ, ದೈಹಿಕ ಮತ್ತು ಲೈಂಗಿಕಹಿಂಸೆಯ ಕೃತ್ಯಗಳಂತಹ ಚಟುವಟಿಕೆಗಳಲ್ಲಿ ತೊಡಗುವವರು ಒಟ್ಟಾರೆ ಯುವ ಜನರ ಶಿಕ್ಷಣ ಅಥವಾ ವೃತ್ತಿ, ವ್ಯಕ್ತಿತ್ವ ಅಭಿವೃದ್ಧಿ ಹಾಗೂ ಮಾನಸಿಕ ಸ್ಥಿತಿಯ ಮೇಲೆ ತುಂಬಾ ಪರಿಣಾಮಬೀರುತ್ತದೆ.

ಇಂದಿನ ಭಾರತಿಯ ಯುವ ಜನರು ಬದಲಾಗುತ್ತಿರುವ ಜಾಗತೀಕರಣ ಹಾಗೂ ಸಂವಹನದಂತಹ ಸಮೂಹ ಮಾಧ್ಯಮಗಳಿಂದ ಭಾರತೀಯ ಸಂಸ್ಕೃತಿಯ ದೃಷ್ಟಿಕೋನವು ನಿಧಾನವಾಗಿ ಪರಿವರ್ತನೆಗೊಳ್ಳುತ್ತಿದೆ. ಇವೆಲ್ಲವು ಯುವಜನರ ಗೃಹಿಕೆ ಹಾಗೂ ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ಮತ್ತು ಜೀವನದ ಮೇಲೆ ಪರಿಣಾಮವನ್ನು ಹೊಂದಿವೆ. ಈ ಸಂಸ್ಕೃತಿಯ ಪರಿವರ್ತನೆಯು ಸವಾಲಾಗಿದ್ದು ಕುಟುಂಬದೊಂದಿಗೆ ಯುವ ಜನರನ್ನು ಸಂಘರ್ಷಕ್ಕಿಡುಮಾಡುತ್ತಿವೆ. ಸಂಸ್ಕೃತಿಯ ಪರಿವರ್ತನೆಯ ಪರಿಣಾಮ ಕುಟುಂಬ ಹಾಗೂ ಯುವ ಜನರಲ್ಲಿಯೂ ಸಂಬಂಧದಲ್ಲಿಯ ತ್ವರಿತಗತಿಯ ಬದಲಾವಣೆಯೊಂದಿಗೆ ಭಾರತೀಯ ಜನರ ಆರ್ಥಿಕಸ್ಥಿತಿಯನ್ನು ಬದಲಾಯಿಸಿ ಬೇಕಾದರೆ ಯುವ ಜನರನ್ನು ಸೂಕ್ಷ್ಮವಾಗಿ ಸಜ್ಜುಗೊಳಿಸಬೇಕಾಗಿದೆ. ಕುಟುಂಬ ಹಾಗೂ ಯುವ ಜನರ ಮಧ್ಯ ಬೆಳವಣಿಗೆ ಅಡ್ಡಿಯನ್ನುಂಟು ಮಾಡುವ ಹಾಗೂ ಯುವ ಜನರ ಅವಶ್ಯಕತೆಗಳನ್ನರಿತು ಅದಕ್ಕಾಗಿ ಪೋಷಕರು ತಮ್ಮ ಬಾಲ್ಯಾವಸ್ಥೆಯ ಜೀವನ, ಅನುಭವ, ಸಾಮಾಜಿಕ ಸಂಸ್ಕೃತಿಗಳ ಬಗ್ಗೆ ತಿಳಿಸಿ ಯುವ ಜನರನ್ನು ಪ್ರಭಾವಿತಗೊಳಿಸ ಬೇಕಾಗಿದೆ. ಕೆಲವು ಕುಟುಂಬಗಳು ಇಂತಹ ಸವಾಲುಗಳನ್ನು ಚೆನ್ನಾಗಿ ನಿಭಾಯಿಸುತ್ತವೆ ಆದರೆ ಕುಟುಂಬಗಳು ಯುವಜನರ ಇಂತಹ ಪರಿಸ್ಥಿತಿಗಳಲ್ಲಿ ಮತ್ತು ಸಂಘರ್ಷಗಳಲ್ಲಿ ಭಿನ್ನಾಭಿಪ್ರಾಯ ನಿರ್ವಹಿಸಲು ಸವಾಲೆನಿಸಬಹುದು ಸಾಮಾನ್ಯವಾಗಿ ಯುವ ಜನರ

ಮತ್ತು ಅವರ ಕುಟುಂಬದ ನಡುವಿನ ಸಂಬಂಧದ ಸಮಸ್ಯೆಗಳಿಗೆ ಕಾರಣವಾಗುತ್ತದೆ. ಇಂತಹದೀರ್ಘ ಸಂಘರ್ಷಗಳಿಂದ ಯುವ ಜನರು ಸಮಾಜ ವಿರೋಧಿಯಾಗುವ ಸಾಧ್ಯತೆಯಿದೆ. ಯುವ ಜನರ ಭಾವನೆಗಳನ್ನು ಮತ್ತು ಆಲೋಚನೆಗಳನ್ನು ಅರ್ಥ ಮಾಡಿಕೊಂಡಾಗ ಸಂದಿಗ್ದ ಪರಿಸ್ಥಿತಿಗೆ ಪ್ರತಿಕ್ರಿಯಿಸಲು ಸುಲಭವಾಗುವುದು.

ಭಾರತ ಹಾಗೂ ವಿಶ್ವದ ವಿವಿಧ ಭಾಗಗಳಲ್ಲಿ ಬೆಂಬಲ ಸೇವೆಗಳನ್ನು ಸ್ಥಾಪಿಸುವಂತಹ ಪ್ರಯತ್ನಗಳು ನಡೆದಿವೆ. ಆದಾಗ್ಯೂ ಇತ್ತೀಚೆಗೆ ವೈದ್ಯಕೀಯ ಕ್ಷೇತ್ರಕ್ಕೆ ಸೀಮಿತವಾಗಿಡದ ಬದಲಾಗಿ ಸಾಮಾಜಿಕ, ಮಾನಸಿಕ, ವರ್ತನೆಮತ್ತು ಆರೋಗ್ಯಕ್ಕೆ ಕೇಂದ್ರೀಕರಿಸುವುದಲ್ಲದೆ ಅಸ್ವಸ್ಥತೆಯನ್ನು ತಡೆಗಟ್ಟುವಲ್ಲಿ ಕೇಂದ್ರೀಕರಿಸುವುದಾಗಿದೆ. ಸಾರ್ವಜನಿಕ ಆರೋಗ್ಯಕ್ಕೆ ಕೇಂದ್ರಿಕರಿಸದೆ ಯುವ ಜನರ ಮಾರ್ಗ ದರ್ಶನ ಕೇಂದ್ರಗಳಂತಹ ಬೆಂಬಲಸೇವೆಗಳ ಅಭಿವೃದ್ಧಿಗೆ ಪ್ರಮುಖವಾಗಿ ಪರಿಗಣಿಸಲಾಗುತ್ತದೆ. ಯುವ ಜನರನ್ನು ಕೇಂದ್ರಿತವಾಗಿಟ್ಟು ಕೊಂಡು ಯುವಜನರ ಸಾಮಾಜಿಕ, ಮಾನಸಿಕ, ವರ್ತನೆ ಮತ್ತು ಆರೋಗ್ಯ ಅಭಿವೃದ್ಧಿಗಾಗಿ ಬೆಂಬಲಸೇವೆಗಳನ್ನು ಉತ್ತೇಜಿಸುವುದರೊಂದಿಗೆ ಕುಟುಂಬಗಳ ಸುರಕ್ಷಿತ ಅಭಿವೃದ್ಧಿಗೆ ಪ್ರೋತ್ಸಾಹಿಸುವುದಾಗಿದೆ.

ಈ ಬೆಂಬಲ ಸೇವೆಗಳಿಂದ ಯುವ ಜನರು ಎದುರುಸುತ್ತಿರುವ ಪ್ರಮುಖ ಸಮಸ್ಯೆಗಳಲ್ಲಿ ಆತ್ಮಹತ್ಯೆಯಾಗಿದ್ದು, ಏಕಾಗ್ರತೆಯಂತಹ ಸಣ್ಣ ಸಮಸ್ಯೆಗಳನ್ನು ಸುಲಭವಾಗಿ ಕೈಗೆತ್ತಿಕೊಳ್ಳಬಹುದು. ಬೆಂಬಲ ಸೇವೆಗಳಿಂದ ಯುವ ಜನರ ಮಾನಸಿಕ ಆರೋಗ್ಯದ ಬದಲಿಗೆ ಹದಿಹರೆಯದ ಸಮಸ್ಯೆಗಳ ಅಧ್ಯಯನ ಒಳಗೊಂಡಂತೆ ಎಲ್ಲಾ ಸಮಸ್ಯೆಗಳಿಗೆ ಪರಿಣಾಮಕಾರಿಯಾಗಿ ಸ್ಪಂದಿಸಿ ಅವರ ಯಶಸ್ಸು ಏಳಿಗೆಗಾಗಿ ಸೌಲಭ್ಯಗಳನ್ನು ಒದಗಿಸಿ ಯುವಜನರನ್ನು ಸ್ವಾವಲಂಬಿಯಾಗಿ ಮಾಡುವುದು. ಯುವ ಜನರಿಗೆ ಬೆಂಬಲ ಸೇವೆಗಳನ್ನು ನೀಡಿ ಅವರಲ್ಲಿರುವ ಸ್ವಸಾಮರ್ಥ್ಯವನ್ನು ಪ್ರೋತ್ಸಾಹಿಸಿ ತಮ್ಮನ್ನು ಮತ್ತು ತಮ್ಮ ಸುತ್ತಮುತ್ತಲಿರುವ ಯುವ ಜನರಿಗೆ ಸಹಾಯ ನೀಡುವುದು. ಯುವ ಜನರು ಸಮಸ್ಯೆಗಳ ಒತ್ತಡದಿಂದ ಹೊರಬಂದು, ವಿಶಾಲ ಮನೋಭಾವನೆ ಉಳ್ಳವರಾಗಿ ಸಂದಿಗ್ಧ ಪರಿಸ್ಥಿತಿಗೆ ವೃತ್ತಿ ನೆರವು ನೀಡುವುದು. ಇಂದು ಯುವ ಜನರು ಸಂದಿಗ್ಧ ಪರಿಸ್ಥಿಯಲ್ಲಿ ಬಳಲುವುದು ಗಮನಾರ್ಹ ಸಮಸ್ಯೆಯಾಗಿದ್ದು, ಅವರ ವ್ಯಕ್ತಿತ್ವ ಅಭಿವೃದ್ಧಿ, ವೃತ್ತಿಮಾರ್ಗ ದರ್ಶನ ನೀಡಲು ಸಹಾಯಕವಾಗುವ ದೃಷ್ಟಿಕೋನ ವನ್ನಿಟ್ಟುಕೊಂಡು ಮನೋವಿಜ್ಞಾನ ತಜ್ಞರಿಂದ ಕೌಶಲ್ಯ ಚಟುವಟಿಕೆಗಳನ್ನು ಅಭಿವೃದ್ಧಿ ಮಾಡಲಾಗುತ್ತಿದೆ.

**ಯುವಜನ ಮೇಳ ಮತ್ತು ಯುವಜನೋತ್ಸವ:** ಯುವ ಜನರಲ್ಲಿ ಸಾಂಸ್ಕೃತಿಕ ಪ್ರತಿಭೆಯನ್ನು ಗುರುತಿಸಿ, ಪ್ರೋತ್ಸಾಹಿಸಲು ಪ್ರತಿ ವರ್ಷ ಜಿಲ್ಲಾಮತ್ತು ರಾಜ್ಯಮಟ್ಟದಲ್ಲಿ ಯುವ ಉತ್ಸವಗಳನ್ನು ನಡೆಸಲಾಗುತ್ತಿದೆ. ಇದರಲ್ಲಿ ಯುವಜನರಿಗಾಗಿ ಶಾಸ್ತ್ರೀಯಸಂಗೀತ (ಕರ್ನಾಟಕ ಮತ್ತು ಹಿಂದುಸ್ತಾನಿ) ಶಾಸ್ತ್ರೀಯ ನೃತ್ಯ, ಶಾಸ್ತ್ರೀಯ ಲಘುವಾದ್ಯ, ಲಘುವಾದ್ಯ, ಜಾನಪದ ಗೀತೆ, ಜಾನಪದ ನೃತ್ಯ, ಏಕಾಂಕ ನಾಟಕ ಹಾಗೂ ಚರ್ಚಾ ಸ್ಪರ್ಧೆಗಳನ್ನು ಏರ್ಪಡಿಸಲಾಗುವುದು. ಸ್ವಾಮಿ ವಿವೇಕಾನಂದರ ಜನ್ಮದಿನೋತ್ಸವ ಅಂಗವಾಗಿ ಕೇಂದ್ರ ಸರ್ಕಾರವು ಪ್ರತಿ ವರ್ಷ ಜನವರಿ ಮಾಹೆಯಲ್ಲಿ ರಾಷ್ಟ್ರಮಟ್ಟದ ಯುವಜನೋತ್ಸವವನ್ನು ಆಯೋಜಿಸುತ್ತದೆ. ಈ ಕಾರ್ಯಕ್ರಮದಲ್ಲಿ ದೇಶದ ಎಲ್ಲಾ ರಾಜ್ಯಗಳ ಪ್ರತಿಭಾನ್ವಿತ ಯುವ ಜನರು ೧೮ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸುತ್ತಾರೆ. ಈ ರಾಷ್ಟ್ರಮಟ್ಟದ ಯುವಜನೋತ್ಸವದಲ್ಲಿ ಭಾಗವಹಿಸಲು ಕರ್ನಾಟಕ ರಾಜ್ಯದಿಂದ ಯುವ ತಂಡವನ್ನು ಜಿಲ್ಲಾಮಟ್ಟ ಮತ್ತು ರಾಜ್ಯಮಟ್ಟದ ಯುವಜನೋತ್ಸವಗಳಲ್ಲಿ ಸ್ಪರ್ಧೆಗಳನ್ನು ಆಯೋಜಿಸಿ ಆಯ್ಕೆಮಾಡಿ ನಿಯೋಜಿಸಲಾಗುವುದು.

ಭಾರತದ ಘನತೆವೆತ್ತ ಮಾಜಿ ರಾಷ್ಟ್ರಪತಿಗಳಾದ ಶ್ರೀ.ಎ.ಪಿ.ಜೆ. ಅಬ್ದುಲ್ ಕಲಾಂ ಇವರ ಕನಸಿನ ಭಾರತ ಸಂದೇಶವನ್ನು ರಾಜ್ಯದ ಪ್ರತಿ ಗ್ರಾಮಕ್ಕೂ ತಲುಪಿಸುವ ಉದ್ದೇಶದಿಂದ ಮತ್ತು ಯುವ ಜನರನ್ನು ಹೆಚ್ಚು ಕ್ರಿಯಾಶೀಲರನ್ನಾಗಿಸುವ ದೃಷ್ಟಿಯಿಂದ ಪ್ರತಿ ಜಿಲ್ಲೆಯಲ್ಲಿಯೂ ಯುವಜನ ಸಮ್ಮೇಳನಗಳು, ಕಾರ್ಯಾಗಾರಗಳು ಮತ್ತು ಯುವ ತರಬೇತಿ ಶಿಬಿರಗಳನ್ನು ನಡೆಸಲು ತಾಲ್ಲೂಕು, ಜಿಲ್ಲಾಮತ್ತು ರಾಜ್ಯಮಟ್ಟದಲ್ಲಿ ನಡೆಸಲು ಉದ್ದೇಶಿಸಲಾಗಿದೆ.ಯುವ ಜನರನ್ನು ಹೆಚ್ಚು ಕ್ರಿಯಾಶೀಲರನ್ನಾಗಿಸುವ ದೃಷ್ಟಿಯಿಂದ ಪ್ರತಿ ಜಿಲ್ಲೆಯಲ್ಲಿಯೂ ಯುವಜನ ಸಮ್ಮೇಳನಗಳು, ಕಾರ್ಯಾಗಾರಗಳು, ಯುವ ತರಬೇತಿ ಶಿಬಿರಗಳನ್ನು ಹಾಗೂ ಜಿಲ್ಲಾ ಯುವ ಪ್ರಶಸ್ತಿಗಳನ್ನು ಜಿಲ್ಲಾಮಟ್ಟದಲ್ಲಿ ಮತ್ತು ರಾಜ್ಯಮಟ್ಟದಲ್ಲಿ ೧೫ ರಿಂದ ೩೫ ವರ್ಷದೊಳಗಿನ ಪ್ರತಿಭಾನ್ವಿತ ಯುವ ಜನರಿಗಾಗಿ ಸಮ್ಮೇಳನ, ಕಾರ್ಯಾಗಾರ, ಹಾಗೂ ತರಬೇತಿ ಶಿಬಿರಗಳನ್ನು ನಡೆಸಲಾಗುವುದು.

**ರಾಜ್ಯ ಯುವ ಪ್ರಶಸ್ತಿಗಳು:ಸಮಾಜದವಿವಿಧ ಕ್ಷೇತ್ರಗಳಾದಸಮಾಜ ಸೇವೆ:** ರಾಷ್ಟ್ರೀಯಭಾವೈಕ್ಯತೆ: ಕ್ರೀಡೆ: ಸಾಕ್ಷರತೆ: ಆರೋಗ್ಯ: ತರಬೇತಿ: ಪರಿಸರ: ಶ್ರಮದಾನಶಿಬಿರ: ಸಾಂಸ್ಕೃತಿಕ: ಇತರೆ ಕಾರ್ಯಕ್ರಮಗಳಲ್ಲಿ ಅತ್ಯುತ್ತಮಸೇವೆಸಲ್ಲಿಸಿದ ಯುವಕ/ ಯುವತಿಯರನ್ನುಮತ್ತು ಯುವಕ/ಯುವತಿ ಸಂಘಗಳನ್ನು ಗುರುತಿಸಿ ಅವರಪ್ರತಿಭೆಯನ್ನುಪ್ರೋತ್ಸಾಹಿಸಲು ರಾಜ್ಯಮಟ್ಟದಲ್ಲಿ೧೦ ವೈಯಕ್ತಿಕಪ್ರಶಸ್ತಿಗಳಿಗೆ ತಲಾ ರೂ.೧೦,೦೦೦/-ಗಳಂತೆಹಾಗೂ೨ ಸಾಂಘಿಕಪ್ರಶಸ್ತಿಗಳಿಗೆ ತಲಾ ರೂ.೨೫,೦೦೦/-ಗಳಂತೆನೀಡಿ ಗೌರವಿಸಲಾಗುವುದು.

**ಹೊರಾಂಗಣ ಕ್ರೀಡಾಂಗಣಗಳು:** ತಾಲೂಕು, ಜಿಲ್ಲಾ ಕ್ರೀಡಾಂಗಣ, ಈಜುಕೊಳ, ಒಳಾಂಗಣ ಕ್ರೀಡಾಂಗಣ ಗ್ರಾಮೀಣ ಗರಡಿ ಮನೆ, ಸಿಂಥೆಟಿಕ್ ಟ್ರ್ಯಾಕ್, ಹಾಕಿ ಟರ್ಫ್, ವಿವಿಧ ಕ್ರೀಡಾಂಗಣಗಳು, ಕ್ರೀಡಾಶಾಲೆ ಕಟ್ಟಡನಿರ್ಮಾಣ ಮುಂತಾ ದಮೂಲಭೂತಸೌಲಭ್ಯಗಳನ್ನುಸ್ಥಳೀಯ ಅವಶ್ಯಕತೆಮತ್ತು ಆದ್ಯತೆಗನುಗುಣವಾಗಿ ನಿರ್ಮಾಣ ಮಾಡಲಾಗುತ್ತಿದೆ. ಕ್ರೀಡಾಂಗಣಗಳಲ್ಲಿನೀರು, ಶೌಚಾಲಯಮುಂತಾದಮೂಲಭೂತ ಸೌಲಭ್ಯಗಳನ್ನುನಿರ್ಮಿಸಿ ಕ್ರೀಡಾಪಟುಗಳಿಗೆ ಕ್ರೀಡಾಸಕ್ತರಿಗೆಮತ್ತು ಕ್ರೀಡಾಕೂಟಗಳಸಂಘಟನೆಗೆ ಕ್ರೀಡಾಸಂಘಗಳುಸದ್ಬಳಕೆಮಾಡಿಕೊ ಳ್ಳಲು ಅನುವುಮಾಡಿಕೊಡಲಾಗಿದೆ.

**ಶ್ರೀ ಕಂಠೀರವ ಹೊರಾಂಗಣ ಕ್ರೀಡಾ ಸಂಕೀರ್ಣ:** ಬೆಂಗಳೂರಿನ ಹೃದಯಭಾಗದಲ್ಲಿರುವಶ್ರೀ ಕಂಠೀರವ ಕ್ರೀಡಾಸಂಕೀರ್ಣದಲ್ಲಿಹವಾನಿಯಂತ್ರಿತ ಒಳಾಂಗಣ ಕ್ರೀಡಾಂಗಣ, ವಿಶ್ವ ದರ್ಜೆಯಹೊರಾಂಗಣ ಕ್ರೀಡಾಂಗಣ ಇದ್ದು, ವಿವಿಧ ಕ್ರೀಡಾಸಂಸ್ಥೆಗಳಿಗೆ ಕ್ರೀಡಾ ಚಟುವಟಿಕೆಗಳನ್ನುನಡೆಸಲು

ಅವಕಾಶನೀಡಲಾಗುವುದು. ೪೦೦ ಮೀಸಿಂಥೆಟಿಕ್ ಅಥ್ಲೆಟಿಕ್ ಟ್ರ್ಯಾಕ್ನಲ್ಲಿ ಅಥ್ಲೆಟಿಕ್ ಕ್ರೀಡೆಗಳನ್ನುನಡೆಸಲು ಅವಕಾಶವಿದೆ. ವಾಲಿಬಾಲ್, ಬ್ಯಾಸ್ಕೆಟ್‌ಬಾಲ್, ಪುಟ್‌ಬಾಲ್, ಆರ್ಚರಿ, ಸ್ಕೇಟಿಂಗ್ ರಿಂಕ್, ಬ್ಯಾಡ್ಮಿಂಟನ್ ಕೋರ್ಟ್, ಮುಂತಾಧ ಕ್ರೀಡಾ ಅಂಕಣಗಳದ್ದು, ಉತ್ತಮ ತರಬೇತುದಾರರಿಂದ ತರಬೇತಿ ನೀಡಲಾಗುವುದು. ಕ್ರೀಡಾಸಕ್ತರುಹಾಗೂವಿವಿಧ ಕ್ರೀಡಾಸಂಸ್ಥೆಗಳು ಕ್ರೀಡಾಸಂಕೀರ್ಣದಲ್ಲಿಲಭ್ಯವಿರುವಸೌಲಭ್ಯಗಳನ್ನುಪಡೆದುಕೊಳ್ಳಬ ಹುದು.

**ಒಳಾಂಗಣ ಕ್ರೀಡಾಂಗಣಗಳು:** ತಾಲೂಕು, ಜಿಲ್ಲಾ ಕ್ರೀಡಾಂಗಣ, ಈಜುಕೊಳ, ಒಳಾಂಗಣ ಕ್ರೀಡಾಂಗಣ ಗ್ರಾಮೀಣ ಗರಡಿ ಮನೆ, ಸಿಂಥೆಟಿಕ್ ಟ್ರ್ಯಾಕ್, ಹಾಕಿ ಟರ್ಫ್, ವಿವಿಧ ಕ್ರೀಡಾಂಗಣಗಳು, ಕ್ರೀಡಾಶಾಲೆ ಕಟ್ಟಡನಿರ್ಮಾಣ ಮುಂತಾದಮೂಲಭೂತಸೌಲಭ್ಯಗಳ ನ್ನುಸ್ಥಳೀಯ ಅವಶ್ಯಕತೆಮತ್ತು ಆಧ್ಯತೆಗನುಗುಣವಾಗಿ ನಿರ್ಮಾಣ ಮಾಡಲಾಗುತ್ತಿದೆ. ಕ್ರೀಡಾಂಗಣಗಳಲ್ಲಿನೀರು, ಶೌಚಾಲಯಮುಂ ತಾದಮೂಲಭೂತಸೌಲಭ್ಯಗಳನ್ನುನಿರ್ಮಿಸಿ ಕ್ರೀಡಾಪಟುಗಳಿಗೆ ಕ್ರೀಡಾಸಕ್ತರಿಗೆಮತ್ತು ಕ್ರೀಡಾಕೂಟಗಳಸಂಘಟನೆಗೆ ಕ್ರೀಡಾಸಂ ಘಗಳುಸದ್ಬಳಕೆಮಾಡಿಕೊಳ್ಳಲು ಅನುವುಮಾಡಿಕೊಡಲಾಗಿದೆ. ಒಳಾಂಗಣ ಕ್ರೀಡಾಂಗಣಗಳು ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆಸೇರಿದ ಕೋರಮಂಗಲ ಒಳಾಂಗಣ ಕ್ರೀಡಾಂಗಣವನ್ನುವಿವಿಧ ಒಳಾಂಗಣ ಕ್ರೀಡಾ ಚಟುವಟಿಕೆಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು, ವಸ್ತುಪ್ರದರ್ಶನಗಳು, ಇನ್ನಿತರೆ ಕಾರ್ಯಕ್ರಮಗಳಿಗೆಬಳಸಿಕೊಳ್ಳಲಾಗುತ್ತಿದೆ.

**ಕ್ರೀಡಾ ವಸತಿ ಮತ್ತು ಶಾಲೆ:** ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಹುದುಗಿರುವ ಕ್ರೀಡಾ ಪ್ರತಿಭೆಗಳನ್ನು ಗುರುತಿಸಿ, ಪೋಷಿಸುವ ಮತ್ತು ವಿಕಸನಗೊಳಿಸುವ ಉದ್ದೇಶದಿಂದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ಕೊಡಗು ಜಿಲ್ಲೆಯ, ಸೋಮವಾರಪೇಟೆ ತಾಲ್ಲೂಕು, ಕೂಡಿಗೆಯಲ್ಲಿ ೧೯೮೨-೮೩ನೇ ಸಾಲಿನಿಂದ ೮, ೯ ಮತ್ತು ೧೦ನೇ ತರಗತಿಗಳನ್ನು ಹೊಂದಿರುವ ಇಂಗ್ಲಿಷ್ ಮತ್ತು ಕನ್ನಡ ಮಾಧ್ಯಮದ ಪೂರ್ಣಪ್ರಮಾಣದ ಕ್ರೀಡಾವಸತಿ ಶಾಲೆಯನ್ನು ಪ್ರಾರಂಭಿಸಲಾಗಿರುತ್ತದೆ. ಇದೇ ರೀತಿ ಬೆಂಗಳೂರುನಗರ ಜಿಲ್ಲೆಯವಿದ್ಯಾನಗರ ಇಲ್ಲಿ೧೯೯೪-೯೫ ಸಾಲಿನಲ್ಲಿ೮ನೇ ತರಗತಿಯಿಂದ ೧೦ನೇ ತರಗತಿಯವರೆಗೆ ಕ್ರೀಡಾವಸತಿ ಶಾಲೆಯನ್ನು ಪ್ರಾರಂಭಿಸಲು ಅನುಮತಿ ನೀಡಲಾಗಿರುತ್ತದೆ. ನಂತರದಲ್ಲಿ ಜಿಲ್ಲಾ ಕೇಂದ್ರಗಳಾದ, ಬೆಂಗಳೂರು, ಮೈಸೂರು, ಬೆಳಗಾವಿ, ವಿಜಯಪುರ ಮತ್ತು ದಾವಣಗೆರೆಗಳಲ್ಲಿ ಕ್ರೀಡಾವಸತಿ ನಿಲಯಗಳನ್ನು ಪ್ರಾರಂಭಿಸಲಾಯಿತು. ಈ ಕ್ರೀಡಾ ಶಾಲೆಗಳಲ್ಲಿ ಅಥ್ಲೆಟಿಕ್ಸ್, ಹಾಕಿ, ಬ್ಯಾಸ್ಕೆಟ್ಬಾಲ್, ಫುಟ್ಬಾಲ್ ಹಾಗೂ ವಾಲಿಬಾಲ್ ಕ್ರೀಡೆಗಳಲ್ಲಿ ತರಬೇತಿಯನ್ನು ಹಾಗೂ ಕ್ರೀಡಾ ನಿಲಯಗಳಲ್ಲಿ, ಅಥ್ಲೆಟಿಕ್ಸ್, ಹಾಕಿ, ಬ್ಯಾಸ್ಕೆಟ್ಬಾಲ್, ಫುಟ್ಬಾಲ್, ವಾಲಿಬಾಲ್, ಕುಸ್ತಿ, ಜುಡೋಹಾಗೂಸೈಕ್ಲಿಂಗ್ ಕ್ರೀಡೆಗಳಲ್ಲಿ ತರಬೇತಿಯನ್ನು ನೀಡಲಾಗುತ್ತಿದೆ. ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ರಾಜ್ಯದಲ್ಲಿ ಈ ಕೆಳಕಂಡಂತೆ ರಾಜ್ಯದ೨೩ ಜಿಲ್ಲೆಗಳಲ್ಲಿ೫ನೇ ತರಗತಿಯಿಂದ ೭ನೇ ತರಗತಿಯವರೆಗೆ ಜಿಲ್ಲಾ ಕ್ರೀಡಾ ಶಾಲೆಗಳನ್ನು ಪ್ರಾರಂಭಿಸಲಾಗಿದೆ.

**ಜಿಲ್ಲಾ ಕ್ರೀಡಾಶಾಲೆಗಳು:** ರಾಮನಗರ, ತುಮಕೂರು, ಕೋಲಾರ, ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ, ಮೈಸೂರು, ಮಂಡ್ಯ, ಚಿಕ್ಕಮಗಳೂರು, ಚಾಮರಾಜನಗರ, ಹಾಸನ, ಉಡುಪಿ. ಮಂಗಳೂರು, ಬೆಳಗಾವಿ, ಉತ್ತರ ಕನ್ನಡ, ವಿಜಯಪುರ, ಗದಗ, ಹಾವೇರಿ, ಧಾರವಾಡ, ಕೊಪ್ಪಳ,ಬೀದರ್, ರಾಯಚೂರುಮತ್ತುಬಾಗಲಕೋಟೆ.ಕ್ರೀಡೆಗಳು: ಅಥ್ಲೆಟಿಕ್ಸ್, ಬ್ಯಾಸ್ಕೆಟ್ಬಾಲ್, ಸೈಕ್ಲಿಂಗ್, ಜಿಮ್ನಾಸ್ಟಿಕ್ಸ್, ಫುಟ್ಬಾಲ್, ಹಾಕಿ, ಜುಡೋ, ವಾಲಿಬಾಲ್, ಕುಸ್ತಿ. ಪ್ರವೇಶ: ಆಯಾವರ್ಷದ ಜೂನ್೧ನೇ ತಾರೀಖಿಗೆ೧೧ ವರ್ಷದವಯೋಮಿತಿಯಲ್ಲಿರುವಬಾಲಕಬಾಲಕಿ ಯರಿಗೆ ಇಲಾಖಾಮಾನದಂಡದಪ್ರಕಾರ ಆಯ್ಕೆಮಾಡಿ ೫ನೇ ತ ರಗತಿಗೆಪ್ರವೇಶನೀಡಲಾಗುವುದು. ೫ನೇ ತರಗತಿಯಿಂದ೭ನೇ ತರಗತಿಯವರೆಗೆ ಜಿಲ್ಲಾ ಕ್ರೀಡಾಶಾಲೆಗಳನ್ನುನಡೆಸಲಾಗುತ್ತಿದೆ.

**ಕ್ರೀಡಾ ವಸತಿ ಪ್ರೌಢಶಾಲೆ, ಕೂಡಿಗೆ :** ಬಾಲಕಬಾಲಕಿಯರಿಗೆ ಅಥ್ಲೆಟಿಕ್ಸ್, ಜಿಮ್ನಾಸ್ಟಿಕ್ಸ್, ಹಾಕಿ. ವಿದ್ಯಾನಗರ : ಬಾಲಕ ಬಾಲಕಿಯರಿಗೆ ಅಥ್ಲೆಟಿಕ್ಸ್, ಬ್ಯಾಸ್ಕೆಟ್ಬಾಲ್,ಫುಟ್ಬಾಲ್, ವಾಲಿಬಾಲ್,ಪ್ರವೇಶ : ಬಾಲಕಬಾಲಕಿಯರವಿಭಾಗದಲ್ಲಿ ಕ್ರೀಡಾವಸತಿ ಪ್ರೌಢಶಾಲೆ/ ನಿಲಯಗಳಿಗೆಪ್ರವೇಶಪಡೆಯಲು ಆಯಾವರ್ಷದ ಜೂನ್೧ ರಂದು೧೪ ವರ್ಷದೊಳಗಿರಬೇಕು. ಇಲಾಖಾಮಾನದಂಡದಪ್ರಕಾರ ಆಯ್ಕೆಮಾಡಿ ೮ನೇ ತರಗತಿ ಗೆಮಾತ್ರಪ್ರವೇಶನೀಡಲಾಗುವುದು. ಕ್ರೀಡಾ ವಸತಿ ನಿಲಯ: ಬೆಂಗಳೂರು, ಮೈಸೂರು, ದಾವಣಗೆರೆ, ಬೆಳಗಾವಿ, ವಿಜಯಪುರ :ಬಾಲಕಬಾಲಕಿಯರಿಗೆ, ಹಾಗೂಪುರುಷರುಮತ್ತುಮಹಿಳೆಯರಿಗೆ ಅಥ್ಲೆಟಿಕ್ಸ್, ಬ್ಯಾಸ್ಕೆಟ್ಬಾಲ್, ಸೈಕ್ಲಿಂಗ್ ಫುಟ್ಬಾಲ್, ಹಾಕಿ, ಜುಡೋ, ವಾಲಿಬಾಲ್, ಕುಸ್ತಿ. ಪುರುಷರ ಮತ್ತು ಮಹಿಳೆಯರ ವಿಭಾಗದಲ್ಲಿ ಕ್ರೀಡಾ ವಸತಿ ನಿಲಯಗಳಿಗೆ ಪ್ರವೇಶ ಪಡೆಯಲು ಆಯಾ ವರ್ಷದ ಜೂನ್ ೧ ರಂದು ೧೮ ವರ್ಷದೊಳಗಿರಬೇಕು. ಇಲಾಖಾ ಮಾನದಂಡದ ಪ್ರಕಾರ ಆಯ್ಕೆ ಮಾಡಿ ಮೊದಲನೇ ಪಿ.ಯು.ಸಿ.ಗೆ ಮಾತ್ರ ಪ್ರವೇಶ ನೀಡಲಾಗುವುದು.

**ಸೌಲಭ್ಯಗಳು:** ಸದರಿ ಕ್ರೀಡಾಶಾಲೆ/ನಿಲಯಗಳಲ್ಲಿ ತರಬೇತಿ ಪಡೆಯುತ್ತಿರುವ ಕ್ರೀಡಾಪಟುಗಳಿಗೆವೈಜ್ಞಾನಿಕ ಕ್ರೀಡಾ ತರಬೇತಿ. ನೀಡಲಾಗುತ್ತಿದೆ. ಈ ಕ್ರೀಡಾಪಟುಗಳ ಕ್ರೀಡಾ ತರಬೇತಿಗೆಸಂಬಂಧಿಸಿದಂತೆ ಎಲ್ಲಾವೆಚ್ಚಗಳನ್ನು (ಸಮವಸ್ತ್ರ ಕ್ರೀಡೋಪಕರಣಗಳು, ಕ್ರೀಡಾಗಂಟು, ವೈದ್ಯಕೀಯವೆಚ್ಚ, ಊಟ ಮತ್ತುವಸತಿ, ಪ್ರಯಾಣ ವೆಚ್ಚ, ಪಂದ್ಯಾವಳಿಗಳಲ್ಲಿ ಭಾಗವಹಿಸುವಿಕೆ, ಇತ್ಯಾದಿ)ಗಳನ್ನು ಇಲಾಖೆಯಿಂದ ಭರಿಸಲಾಗುತ್ತಿದೆ. ಕ್ರೀಡಾಶಾಲೆ/ನಿಲಯದ ಕ್ರೀಡಾಪಟುಗಳು ರಾಷ್ಟ್ರಮತ್ತು ಅಂತಾರಾಷ್ಟ್ರ ಮಟ್ಟದ ಕ್ರೀಡಾ ಪಂದ್ಯಾವಳಿಗಳಲ್ಲಿ ಭಾಗವಹಿಸಿ ಪದಕ ಪಡೆದವರಿಗೆ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ. ಹಾಗೂ ಕ್ರೀಡಾಪಟುಗಳ ವೈದ್ಯಕೀಯ ವೆಚ್ಚ, ವೈದ್ಯರ, ಶಿಕ್ಷಕರ ಗೌರವಧನ, ರಾತ್ರಿ ಕಾವಲುಗಾರರ, ಹೇರ್ ಕಟಿಂಗ್ ಮಾಡುವವರ, ಬಟ್ಟೆ ಸ್ವಚ್ಚತೆ ಮಾಡುವವರ, ಹಾಗೂ ದೈನಂದಿನ ಇನ್ನಿತರೆ ವೆಚ್ಚಗಳನ್ನು ಇಲಾಖೆಯ ಅನುದಾನದಲ್ಲಿ ವೆಚ್ಚಭರಿಸಲಾಗುತ್ತಿದೆ. ೨೦೧೪-೧೫ನೇ ಸಾಲಿನಿಂದ ರಾಮನಗರ, ಕೋಲಾರ, ಮಂಗಳೂರು, ಹಾಸನ, ರಾಯಚೂರು, ಮಂಡ್ಯ ಮತ್ತು ಮೈಸೂರು ಜಿಲ್ಲಾ ಕ್ರೀಡಾ ಶಾಲೆಗಳನ್ನು ೫ನೇ ತರಗತಿಯಿಂದ ೧೦ನೇ ತರಗತಿಯವರೆಗೆ ಹಾಗೂ ವಿದ್ಯಾನಗರಮತ್ತು ಕೂಡಿಗೆ ಕ್ರೀಡಾ ಶಾಲೆಗಳನ್ನು ೮ನೇ ತರಗತಿಯಿಂದ ದ್ವಿತೀಯಪಿ.ಯು.ಸಿ.ವರೆಗೆ ಮೇಲ್ದರ್ಜೆಗೇರಿಸಲು ಸರ್ಕಾರದಿಂದ ಅನುಮತಿ ದೊರಕಿದೆ.

**ಗ್ರಾಮೀಣ ಕ್ರೀಡೆ :** ಗ್ರಾಮೀಣ ಕ್ರೀಡಾ ಪ್ರತಿಭೆಗಳನ್ನು ಬೆಳಕಿಗೆ ತರಲು, ತಾಲೂಕು, ಜಿಲ್ಲಾಮತ್ತು ರಾಜ್ಯಮಟ್ಟಗಳಲ್ಲಿ ಗ್ರಾಮೀಣ ಕ್ರೀಡೆಗಳಿಗೆ ಪ್ರೋತ್ಸಾಹ ನೀಡಲು ಕ್ರೀಡಾ ಕೂಟಗಳನ್ನು ಆಯೋಜಿಸಲಾಗುತ್ತಿದೆ. ರಾಜ್ಯಮಟ್ಟದಲ್ಲಿ ಉತ್ತಮ ಸಾಧನೆ ತೋರಿದ ಕ್ರೀಡಾಪಟುಗಳನ್ನು ರಾಷ್ಟ್ರಮಟ್ಟದ ಗ್ರಾಮೀಣ ಕ್ರೀಡಾ ಕೂಟಕ್ಕೆ ನಿಯೋಜಿಸಲಾಗುವುದು.

**ದಸರಾ ಕ್ರೀಡಾ:** ೨೦೧೪-೧೫ನೇ ಸಾಲಿನ ದಸರಾ ಕ್ರೀಡಾಕೂಟ ಸ್ಪರ್ಧೆಗಳನ್ನು ಪುರುಷ ಹಾಗೂ ಮಹಿಳೆಯರಿಗಾಗಿ ತಾಲ್ಲೂಕು, ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ಏರ್ಪಡಿಸಲು ನಿರ್ಧರಿಸಲಾಗಿದೆ. ವಿಭಾಗ ಮಟ್ಟದ ದಸರಾ ಕ್ರೀಡಾಕೂಟಗಳಿಗೆ ಕರ್ನಾಟಕ ಕ್ರೀಡಾ ಪ್ರಾಧಿಕಾರದ ವತಿಯಿಂದ ರೂ.೧,೫೦,೦೦೦/-ಗಳನ್ನು ಬಿಡುಗಡೆ ಮಾಡಲಾಗುವುದು. ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟದ ಸ್ಪರ್ಧೆಗಳನ್ನು ಸುವ್ಯವಸ್ಥಿತ ರೀತಿಯಲ್ಲಿ ಏರ್ಪಡಿಸಲು ಜಿಲ್ಲೆಯ ಜಿಲ್ಲಾಧಿಕಾರಿಗಳನ್ನು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯಿತಿ ಇವರ ಅವಗಾಹನೆಗಾಗಿ ತಂದು ಅವರ ಸಲಹೆಗಳನ್ನು ಪಡೆದು ಸಮಿತಿಗಳನ್ನು ರಚಿಸಿಕೊಂಡು ಸ್ಪರ್ಧೆಗಳನ್ನು ಏರ್ಪಡಿಸತಕ್ಕದ್ದು, ಇದೇ ರೀತಿಯಲ್ಲಿ ವಿಭಾಗ ಮಟ್ಟದ ದಸರಾ ಕ್ರೀಡಾಕೂಟದ ಸ್ಪರ್ಧೆಗಳನ್ನು ಏರ್ಪಡಿಸುವಾಗ ಸಂಬಂಧಪಟ್ಟ ವಿಭಾಗದ ಕೇಂದ್ರ ಸ್ಥಾನದಲ್ಲಿ ಏರ್ಪಡಿಸಲಾಗುವುದು ಸಂಬಂಧಪಟ್ಟ ವಿಭಾಗದ ಕೇಂದ್ರ ಸ್ಥಾನದ ಜಿಲ್ಲಾಧಿಕಾರಿಗಳ ಗಮನಕ್ಕೆ ತಂದು ಅವರ ಮಾರ್ಗದರ್ಶನ,ಸಲಹೆಗಳನ್ನು ಪಡೆದುಕೊಂಡು ಅವಶ್ಯಕತೆ ಇದ್ದಲ್ಲಿ ಸಮಿತಿ ರಚಿಸಿಕೊಂಡು ವಿಭಾಗ ಮಟ್ಟದ ಕ್ರಿಡಾಕೂಟದ ಸ್ಪರ್ಧೆಗಳನ್ನು ಸುವ್ಯವಸ್ಥಿತ ರೀತಿಯಲ್ಲಿ ಏರ್ಪಡಿಸತಕ್ಕದ್ದು. ಸ್ಪರ್ಧೆಗಳ ವಿವರ ಪುರುಷರಿಗೆ:- ಅಥ್ಲೆಟಿಕ್ಸ್, ಜಿಮ್ನಾಸ್ಟಿಕ್, ಈಜು, ವಾಲಿಬಾಲ್, ಕಬ್ಬಡಿ, ಖೋ-ಖೋ, ಬ್ಯಾಡ್ಮಿಂಟನ್, ಬ್ಯಾಸ್ಕೆಟ್ ಬಾಲ್, ಹ್ಯಾಂಡ್ ಬಾಲ್, ಟೇಬಲ್ ಟೆನ್ನಿಸ್, ಟೆನ್ನಿಸ್, ಫುಟ್ ಬಾಲ್, ಬಾಲ್ ಬ್ಯಾಡ್ಮಿಂಟನ್, ಹಾಕಿ. ಅಥ್ಲೆಟಿಕ್ ಸ್ಪರ್ದೆಗಳು:- ೧೦೦ ಮೀ,೨೦೦ಮೀ, ೪೦೦ ಮೀ, ೮೦೦ ಮೀ ೧೫೦೦ ಮೀ, ೫೦೦೦ ಮೀ ಓಟ, ಉದ್ದ ಜಿಗಿತ, ಎತ್ತರ ಜಿಗಿತ, ಗುಂಡು ಎಸೆತ, ಟ್ರಿಪಲ್ ಜಂಪ್, ಜಾವಲಿನ್ ಥ್ರೋ, ಡಿಸ್ಕಸ್ ಥ್ರೋ, ೧೧೦ ಮೀ ಹರ್ಡಲ್ಸ್,೪x೧೦೦ ಮೀ ರಿಲೇ,೪x೪೦೦ ಮೀ ರಿಲೇ. ಮಹಿಳೆಯರಿಗೆ:- ಅಥ್ಲೆಟಿಕ್ಸ್, ಜಿಮ್ನಾಸ್ಟಿಕ್, ಈಜು, ವಾಲಿಬಾಲ್, ಕಬ್ಬಡಿ, ಖೋ-ಖೋ ,ಹಾಕಿ, ಬ್ಯಾಸ್ಕೆಟ್ ಬಾಲ್, ಬ್ಯಾಡ್ಮಿಂಟನ್, ಹ್ಯಾಂಡ್ ಬಾಲ್, ಟೇಬಲ್ ಟೆನ್ನಿಸ್, ಟೆನ್ನಿಸ್, ಬಾಲ್ ಬ್ಯಾಡ್ಮಿಂಟನ್,. ಅಥ್ಲೆಟಿಕ್ ಸ್ಪರ್ದೆಗಳು:- ೧೦೦ ಮೀ,೨೦೦ಮೀ, ೪೦೦ ಮೀ, ೮೦೦ ಮೀ ೧೫೦೦ ಮೀ, ೩೦೦೦ ಮೀ ಓಟ, ಉದ್ದ ಜಿಗಿತ, ಎತ್ತರ ಜಿಗಿತ, ಗುಂಡು ಎಸೆತ, ಟ್ರಿಪಲ್ ಜಂಪ್, ಜಾವಲಿನ್ ಥ್ರೋ, ಡಿಸ್ಕಸ್ ಥ್ರೋ, ೧೦೦ ಮೀ ಹರ್ಡಲ್ಸ್,೪x೧೦೦ ಮೀ ರಿಲೇ,೪x೪೦೦ ಮೀ ರಿಲೇ. ಈಜು ಪುರುಷರಿಗೆ ಮತ್ತು ಮಹಿಳೆಯರಿಗೆ೧೦೦,೨೦೦,೪೦೦ ಮೀ-ಫ್ರೀ ಸ್ಟೈಲ್, ೨) ೧೦೦,೨೦೦-ಬ್ಯಾಕ್ ಸ್ಟ್ರೋಕ್, ೩) ೧೦೦,೨೦೦ ಮೀ-ಬ್ರೆಸ್ಟ್, ೪)೧೦೦ ಮೀ-ಬಟರ್ ಪ್ಲೈ, ೫) ೨೦೦ ಮೀ- ಇಂಡುವಿಯಲ್ ಮಿಡ್ಲೆ, ೬) ೪X೧೦೦ ಮೀ-ಫ್ರೀ ಸ್ಟೈಲ್ ರಿಲೇ.ಬ್ಯಾಸ್ಕೆಟ್‌ಬಾಲ್‌ಹಾಗೂ ಟೇಬಲ್ ಟೆನ್ನಿಸ್‌ಸ್ಪರ್ಧೆಗಳನ್ನು(ಪುರುಷರಿಗೆಮತ್ತುಮಹಿಳೆಯರಿಗೆ) ಜಿಲ್ಲಾಮಟ್ಟದಿಂದ ಏರ್ಪಡಿಸುವುದು.ಈಜು, ಹ್ಯಾಂಡ್‌ಬಾಲ್, ಜಿಮ್ನಾಸ್ಟಿಕ್ಸ್,ಟೆನ್ನಿಸ್‌ಹಾಗೂಶಟಲ್‌ಬ್ಯಾಡ್ಮಿಂಟನ್ ಈ ಕ್ರೀಡೆಗಳಲ್ಲಿಸ್ಪರ್ಧಿಗಳನ್ನು ಆಯ್ಕೆಮಾಡಿ ವಿಭಾಗಮಟ್ಟದಸ್ಪರ್ಧೆಗಳಿಗೆ ಕಳುಹಿಸಿಕೊಡತಕ್ಕದ್ದು.

**ವಿಭಾಗ ಮಟ್ಟದಿಂದ ರಾಜ್ಯಮಟ್ಟದಲ್ಲಿ ಭಾಗವಹಿಸುವ ಸ್ಪರ್ಧಿಗಳ ವಿವರ:** ವಿಭಾಗೀಯ ಮಟ್ಟದಿಂದ ರಾಜ್ಯಮಟ್ಟದಲ್ಲಿ ಭಾಗವಹಿಸುವ ಸ್ಪರ್ಧಿಗಳ ವಿವರಗಳನ್ನು ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಮೈಸೂರುವಿಭಾಗ, ಇವರು ಅವರ ಪತ್ರದಲ್ಲಿ ತಿಳಿಸುವರು. ವಿಭಾಗದಿಂದ ವಿಜೇತರನ್ನು ರಾಜ್ಯಮಟ್ಟದ ದಸಾರ ಕ್ರೀಡಾಕೂಟದ ಸ್ಪರ್ಧೆಗಳಿಗೆ ಕಳುಹಿಸಿಕೊಡುವ ಜವಾಬ್ದಾರಿ ಸಂಬಂಧಪಟ್ಟ (ಗುಲಬರ್ಗಾ, ಬೆಳಗಾವಿ, ಮೈಸೂರು, ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆ) ಸಹಾಯಕ ನಿರ್ದೇಶಕರುಗಳದ್ದಾಗಿರುತ್ತದೆ. ವಿಭಾಗಮಟ್ಟದ ದಸರಾ ಕ್ರೀಡಾಕೂಟದಲ್ಲಿ ವೈಯಕ್ತಿಕ ಸ್ಪರ್ಧೆಗಳಲ್ಲಿ ಪ್ರಥಮ ಹಾಗೂ ದ್ವಿತೀಯಸ್ಥಾನ ಗಳಿಸಿದವರನ್ನು ಮತ್ತು ಗುಂಪು ಸ್ಪರ್ಧೆಗಳಲ್ಲಿ (ರಿಲೇಸಹಿತ) ಒಂದು ತಂಡವನ್ನು ಮಾತ್ರ ರಾಜ್ಯಮಟ್ಟದ ಸ್ಪರ್ಧೆಗಳಿಗೆ ಕಳುಹಿಸಿಕೊಡತಕ್ಕದ್ದು. ವಿವಿಧ ಮಟ್ಟದ ದಸರಾ ಕ್ರೀಡಾಕೂಟದ ಸ್ಪರ್ಧೆಗಳಲ್ಲಿ ಭಾಗವಹಿಸಲು ಕರ್ನಾಟಕ ರಾಜ್ಯದಲ್ಲಿ ವಾಹಿಸುವ ಕ್ರೀಡಾಪಟುಗಳು ಮಾತ್ರ ಅರ್ಹರಿರುತ್ತಾರೆ.ಕ್ರೀಡಾಕೂಟದಲ್ಲಿ ರಕ್ಷಣಾಪಡೆ, ಅರೆರಕ್ಷಣಾಪಡೆ ಸೇರಿದ ಕ್ರೀಡಾಪಟುಗಳು ಭಾಗವಹಿಸಲು ಅರ್ಹರಲ್ಲ. ಒಬ್ಬ ಕ್ರೀಡಾಪಟು ಅಥವಾ ತಂಡ ಯಾವುದೇ ಜಿಲ್ಲೆಯಲ್ಲಿ ಒಂದುಬಾರಿ ತಾಲ್ಲೂಕು ಅಥವಾ ಜಿಲ್ಲಾಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸಿದ ನಂತರ ಬೇರೆ ಯಾವುದೇ ಜಿಲ್ಲೆಯ ದಸರಾ ಕ್ರೀಡಾಕೂಟದಲ್ಲಿ ಭಾಗವಹಿಸಲು ಅವಕಾಶವಿಲ್ಲ. ಅಂತಹ ಪ್ರಕರಣವೇನಾದರೂ ದಾಖಲಾದಲ್ಲಿ ಅಥವಾ ಗಮನಕ್ಕೆ ಬಂದಲ್ಲಿ ತೀವ್ರ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದು.

ವಿಭಾಗ ಮಟ್ಟದ ವಿಜೇತರಿಗೆ ಹಿಂದಿನ ವರ್ಷದಲ್ಲಿ ಇರುವಂತೆ ಗುರುತಿನ ಚೀಟಿಯನ್ನು ಈ ಸಾಲಿನಲ್ಲಿ ನೀಡಬೇಕಾಗಿದ್ದು ಆ ಗುರುತಿನ ಚೀಟಿಗಳನ್ನು ಸಂಬಂಧಪಟ್ಟ ವಿಭಾಗಮಟ್ಟದ ಕ್ರಿಡಾಕೂಟವನ್ನು ಸಂಘಟಿಸುವ ವಿಭಾಗದ ಸಹಾಯಕ ನಿರ್ದೇಶಕರುಗಳು ಅವುಗಳನ್ನು ಕ್ರಮ ಸಂಖ್ಯೆಯನ್ನು ಅಳವಡಿಸಿ ಮುದ್ರಿಸುವ ಜವಾಬ್ದಾರಿಯಾಗಿದ್ದು, ಅಲ್ಲಿಂದಲೇ ವಿತರಿಸಲು ತಿಳಿಸಲಾಗಿದೆ. ಗುರುತಿನ ಚೀಟಿಗೆ ಕ್ರಮಸಂಖ್ಯೆಯೊಂದಿಗೆ ಪ್ರತಿ ಸ್ಪರ್ಧಿಯಿಂದ ೨ ಭಾವ ಚಿತ್ರಗಳನ್ನು ಪಡೆದು ಅಂಟಿಸಿ ವಿವರಗಳನ್ನು ತುಂಬಿ ವಿಭಾಗ ಮಟ್ಟದ ಫಲಿತಾಂಶವನ್ನು ಲಗ್ಗತಿಸಿರುವ ನಮೂನೆಯಲ್ಲಿ ಸಂಬಂಧಪಟ್ಟ (ಗುಲಬರ್ಗಾ, ಬೆಳಗಾವಿ, ಮೈಸೂರು, ಬೆಂಗಳೂರು ನಗರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆ) ಸಹಾಯಕ ನಿರ್ದೇಶಕರುಗಳು ದೃಢಿಕರಿಸಿ ಜಂಟಿ ನಿರ್ದೇಶಕರು (ಕ್ರೀಡೆ) ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ ಕೇಂದ್ರ ಕಛೇರಿ ಬೆಂಗಳೂರು ಇಲ್ಲಿಗೆಫಲಿತಾಂಶಪಟ್ಟಿಯನ್ನು ಮಾತ್ರ ಹಾಗೂ ಸಹಾಯಕನಿರ್ದೇಶಕರು, ಮೈಸೂರು ಜಿಲ್ಲೆ, ಮೈಸೂರು ಇವರಿಗೆ ಗುರುತಿನ ಚೀಟಿಯೋದಿಗೆದ್ವಿಪತ್ರಗಳಲ್ಲಿಸೆಪ್ಟೆಂಬರ್‌ಮಾಹೆಯ ಒಳಗಾಗಿ ಕಳುಹಿಸಿಕೊಡುವುದು.

ವಿಭಾಗಮಟ್ಟದಿಂದ ರಾಜ್ಯಮಟ್ಟದ ದಸರಾ ಕ್ರೀಡಾಕೂಟಕ್ಕೆ ಕ್ರೀಡಾಪಟುಗಳನ್ನು ಕಳುಹಿಸಿ ಕೊಡುವ ವಿವರ ಕೆಳಕಂಡಂತಿದೆ. ಮೈಸೂರು ವಿಭಾಗ; ಬೆಂಗಳೂರು ನಗರ ವಿಭಾಗ (ಬೆಂಗಳೂರುನಗರ ಜಿಲ್ಲೆಮಾತ್ರ); ಬೆಳಗಾವಿ ವಿಭಾಗ; ಬೆಂಗಳೂರು ಗ್ರಾಮಾಂತರವಿಭಾಗ

; ಕಲಬುರಗಿ ವಿಭಾಗ. ವೈಯಕ್ತಿಕ ಸ್ಪರ್ಧೆಗಳಲ್ಲಿ ಪ್ರಥಮ ಹಾಗೂ ದ್ವಿತೀಯ ಸ್ಥಾನ ಪಡೆದ ಕ್ರೀಡಾಪಟುಗಳನ್ನು ಮಾತ್ರ ಆಯ್ಕೆ ಮಾಡುವುದ. (ಅಥ್ಲೆಟಿಕ್ಸ್, ಜಿಮ್ನಾಸ್ಟಿಕ್, ಈಜು, ಟೇಬಲ್ ಟೆನ್ನಿಸ್ (ಸಿಂಗಲ್ಸ್), ಟೆನ್ನಿಸ್ (ಸಿಂಗಲ್ಸ್), ಬ್ಯಾಂಡ್ಮಿಂಟನ್ (ಸಿಂಗಲ್ಸ್).

**ಶೈಕ್ಷಣಿಕ ಶುಲ್ಕ ಮರುಪಾವತಿ:** ರಾಷ್ಟ್ರೀಯ ಮತ್ತು ಅಂತಾ ರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸಿದ ಕ್ರೀಡಾಪಟುಗಳಿಗೆ ಶೈಕ್ಷಣಿಕ ಶುಲ್ಕ ಮರುಪಾವತಿ ಮಾಡುವ ಯೋಜನೆ ೨೦೧೩–೧೪ನೇ ಸಾಲಿನ ನೂತನ ಯೋಜನೆಯಾಗಿದ್ದು, ಪ್ರತಿ ವರ್ಷ ಜುಲೈ ಮಾಹಿಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗುವುದು. ಪ್ರಥಮ ಪಿ.ಯು.ಸಿ. ಯಿಂದ (ಈಜು ಮತು ಜಿಮ್ನಾಸ್ಟಿಕ್ಸ್ ಕ್ರೀಡೆಯಲ್ಲಿ ೫ನೇ ತರಗತಿಯಿಂದ) ಸ್ನಾತಕೋತ್ತರ ಪದವಿಯವರೆಗೆ ವ್ಯಾಸಂಗ ಮಾಡುತ್ತಿರುವ ಕ್ರೀಡಾ ವಿದ್ಯಾರ್ಥೀಗಳಳು ಈ ಯೋಜನೆಯ ಪ್ರಯೋಜನವನ್ನು ಪಡೆಯ ಬಹುದಾಗಿದೆ. ಯೋಜನೆಯ ಮಾರ್ಗಸೂಚಿಗಳು: ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿ ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಕ್ರೀಡೆಗಳಲ್ಲಿ ಭಾಗವಹಿಸಿ ವಿಜೇತರಾದ ಕ್ರೀಡಾಪಟುಗಳಿಗೆ ಶೈಕ್ಷಣಿಕಶುಲ್ಕವನ್ನು ಇಲಾಖೆಯಿಂದ ಮರುಪಾವತಿ ಮಾಡುವ ಮೂಲಕ ಪ್ರತಿಭಾವಂತ ಕ್ರೀಡಾಪಟುಗಳಿಗೆ ಪ್ರೋತ್ಸಾಹ ನೀಡುವುದು ಈ ಯೋಜನೆಯಮುಖ್ಯ ಉದ್ದೇಶವಾಗಿದೆ.ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಕ್ರೀಡೆಗಳಲ್ಲಿ ವಿಜೇತರಾದ ಕ್ರೀಡಾಪಟುಗಳ ಅಧಿಕೃತ ಶುಲ್ಕಗಳನ್ನು (ಸರ್ಕಾರದಿಂದ ನಿಗಧೀಪಡಿಸಿದ ಪ್ರವೇಶ ಶುಲ್ಕ, ಭೋಧನಾ ಶುಲ್ಕ) ಮಾತ್ರ ಮರು ಪಾವತಿ ಮಾಡಲಾಗುವುದು. ಇದರಲ್ಲಿ ಕಟ್ಟಡಶುಲ್ಕ, ಡೋನೇಷನ್, ಇನ್ನಿತರೆ ಶುಲ್ಕಗಳನ್ನು ಪಾವತಿಸಲು ಅವಕಾಶವಿರುವುದಿಲ್ಲ.

ಆಯಾ ವರ್ಷದ ಶೈಕ್ಷಣಿಕ ಶೂಲ್ಕ ಮರುಪಾವತಿಯನ್ನು ಹಿಂದಿನ ಶೈಕ್ಷಣಿಕ ವರ್ಷದ ಸಾಧನೆಯನ್ನು ಪರಿಗಣಿಸಿ ನೀಡಲಾಗುವುದು. (ಪ್ರತಿ ವರ್ಷ ಸಾಧನೆ ಮಾಡಿದಲ್ಲಿ ಮಾತ್ರ ಈ ಸೌಲಭ್ಯವನ್ನು ಮುಂದುವರಿಸಲಾಗುವುದು). ಈ ಯೋಜನೆಯ ಪ್ರಯೋಜನವನ್ನು ಪಡೆಯಲು ಪ್ರಥಮ ಪಿ.ಯು.ಸಿಯಿಂದ ಸ್ನಾತಕೋತ್ತರ ಪದವಿ (ವೃತ್ತಿಪರ ಕೋರ್ಸ್‌ಗಳನ್ನೊಳಗೊಂಡಂತೆ) ವ್ಯಾಸಂಗ ಮಾಡುತ್ತಿರುವ ಕೇಂದ್ರ ರಾಜ್ಯ ಸರ್ಕಾರಿ ಮತ್ತು ಅನುದಾನಿತ ಶಾಲಾ ಕಾಲೇಜುಗಳ ಕ್ರೀಡಾ ವಿದ್ಯಾರ್ಥಿಗಳು ಅರ್ಹರಾಗಿರುತ್ತಾರೆ, (ಜಿಮ್ನಾಸ್ಟಿಕ್ ಮತ್ತು ಈಜು ಕ್ರೀಡಾಪಟುಗಳಿಗೆ ೫ನೇ ತರಗತಿಯಿಂದ ಸ್ನಾತಕ್ಕೋತ್ತರ ಪದವಿವರೆಗೆ ವ್ಯಾಸಂಗ ಮಾಡುತ್ತಿರುವ ಕ್ರೀಡಾ ಪಟುಗಳು ಅರ್ಹರಿರುತ್ತಾರೆ). ಶೈಕ್ಷಣಿಕ ವರ್ಷದ ಪ್ರವೇಶ ಶುಲ್ಕ, ಭೋದನಾ ಶುಲ್ಕಪಾವತಿಸಿದ ರಶೀದಿಗಳೊಂದಿಗೆ ಶಾಲಾ ಮುಖ್ಯೋಪಾಧ್ಯಾಯರು/ ಕಾಲೇಜು ಪ್ರಾಂಶುಪಾಲರ ಮೂಲಕ ದೃಢೀಕರಿಸಿ ಸಂಬಂಧಪಟ್ಟ ಜಿಲ್ಲೆಯ ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಶೀಫಾರಿಸ್ಸಿನೊಂದಿಗೆ ಸಲ್ಲಿಸತಕ್ಕದ್ದು. ರಾಷ್ಟ್ರಮಟ್ಟದ ಕ್ರೀಡೆಗಳಲ್ಲಿ ಭಾಗವಹಿಸಿ ಚಿನ್ನ, ಬೆಳ್ಳಿಮತ್ತು ಕಂಚಿನಪದಕ ವಿಜೇತರಾದ ಕ್ರೀಡಾಪಟುಗಳು ಮಾತ್ರ ಈ ಸೌಲಭ್ಯ ಪಡೆಯಲು ಅರ್ಹರಿರುತಾರೆ. ಅಂತಾರಾಷ್ಟ್ರೀಯ ಮಟ್ಟದ ಕ್ರೀಡೆಗಳಲ್ಲಿ ಭಾಗವಹಿಸುವಿಕೆ, ಚಿನ್ನ, ಬೆಳ್ಳಿಮತ್ತು ಕಂಚಿನ ಪದಕ ವಿಜೇತರ ಸಾಧನೆಯನ್ನು ಪರಿಗಣಿಸಲಾಗುವುದು.

ವಿಕಲಚೇತನ ಕ್ರೀಡಾ ಪಟುಗಳಿಗೂ ಇದೇ ಮಾನದಂಡ ಅನ್ವಯಿಸುತ್ತದೆ. ವಿಕಲಚೇತನ ಕ್ರೀಡಾಪಟುಗಳು ಕಡ್ಡಾಯವಾಗಿ ಸರ್ಕಾರದ ವೈದ್ಯ ರಿಂದ ವೈದ್ಯಕೀಯ ಪ್ರಮಾಣ ಪತ್ರಗಳನ್ನು ಲಗತ್ತಿಸ ತಕ್ಕದ್ದು. ಕರ್ನಾಟಕದ ನಿವಾಸಿಗಳಲ್ಲದ ಹಾಗೂ ರಾಜ್ಯವನ್ನು ಪ್ರತಿನಿಧಿಸದೇ ಇರುವ ಕ್ರೀಡಾಪಟುಗಳು, ರಾಜ್ಯದಲ್ಲಿ ವ್ಯಾಸಂಗ ಮಾಡುತ್ತಿಲ್ಲದ ಕ್ರೀಡಾ ವಿದ್ಯಾರ್ಥಿಗಳು ಶೈಕ್ಷಣಿಕ ಶುಲ್ಕ ಮರುಪಾವತಿ ಯೋಜನೆಗೆ ಅರ್ಹರಾಗಿರುವುದಿಲ್ಲ. ಕ್ರೀಡಾ ಸಾಧನೆಗಳು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಮಾನ್ಯತೆ ಪಡೆದ ಕ್ರೀಡಾಸಂಸ್ಥೆಗಳು/ ಫೆಡರೇಷನ್‌ಗಳು ಆಯೋಜಿಸಿರುವ ಕ್ರೀಡಾ ಕೂಟದಲಿ ಭಾಗವಹಿಸಿರುವ ಬಗ್ಗೆ ದಾಖಲಾಗಿರಬೇಕು. ಅಂತಾರಾಷ್ಟ್ರೀಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಆಯೋಜಿಸುವ ಆಹ್ವಾನ ಕ್ರೀಡಾಕೂಟಗಳಲ್ಲಿ ಭಾಗವಹಿಸಿರುವ ಕ್ರೀಡಾಪಟುಗಳು ಈ ಯೋಜನೆಯ ಪ್ರಯೋಜನ ಪಡೆಯಲು ಅರ್ಹರಾಗಿರುವುದಿಲ್ಲ.

ಅಂತರಾಷ್ಟ್ರೀಯ ಕ್ರೀಡಾಕೂಟಕ್ಕೆ ಯಾವ ಕ್ರೀಡಾ ಸಂಸ್ಥೆಯ ಮೂಲಕ ರಾಜ್ಯವನ್ನು ಪ್ರತಿನಿಧಿಸಿರುತ್ತಾರೆ ಎಂಬುದರ ಬಗ್ಗೆ ಭಾರತ ಸರ್ಕಾರದ ಮಾನ್ಯತೆ ಪಡೆದ ಸಂಬಂಧಪಟ್ಟ ಕ್ರೀಡೆಯ ರಾಷ್ಟ್ರೀಯ ಫೆಡರೇಷನ್ / ಭಾರತೀಯ ಕ್ರೀಡಾಪ್ರಾಧಿಕಾರ ಇವರಿಂದ ಪ್ರಮಾಣೀಕರಿಸಿದ ಮೂಲ ಪ್ರಮಾಣ ಪತ್ರಗಳನ್ನು ಪರಿಗಣಿಸಿ ಶೈಕ್ಷಣಿಕ ಶುಲ್ಕ ಮರುಪಾವತಿ ಪಡೆಯಲು ದೃಢೀಕರಣ ಪತ್ರದೊಂದಿಗೆ ಅರ್ಜಿಯ ಜೊತೆಗೆ ಒದಗಿಸಬೇಕು.ಯಾವುದೇ ಅಂತಾರಾಷ್ಟ್ರೀಯ ಮಟ್ಟದಲ್ಲಿ ಆಯೋಜಿಸುವ ಕ್ರೀಡಾ ಸ್ಪರ್ಧೆಯಲ್ಲಿನೇರ ಪ್ರವೇಶ ಪಡೆದಂತಹ ಕ್ರಿಡಾಪಟುಗಳಿಗೆ ಶೈಕ್ಷಣಿಕ ಶುಲ್ಕ ಮರುಪಾವತಿ ಸೌಲಭ್ಯ ಪಡೆಯಲು ಅವಕಾಶವಿರುವುದಿಲ್ಲ. ಭಾರತ ಸರ್ಕಾರದ ಯುವ ಜನಸೇವಾ ಮತ್ತು ಕ್ರೀಡಾ ಸಚಿವಾಲಯ ದಿಂದ ಅಧಿಕೃತ ಕ್ರೀಡಾ ಸಂಸ್ಥೆಗಳಿಂದ, ಸಂಘಟಿಸಲಾದ ಕ್ರೀಡೆಗಳಲ್ಲಿ ಭಾಗವಹಿಸಿ ಪದಕ ವಿಜೇತರಾದ ಕರ್ನಾಟಕ ರಾಜ್ಯದ ಕ್ರೀಡಾಪಟುಗಳು ಈ ಯೋಜನೆಗೆ ಅರ್ಹರಿರುತ್ತಾರೆ.

**ಈ ಕೆಳಕಂಡ ಕ್ರೀಡೆಗಳಲ್ಲಿ ಭಾಗವಹಿಸಿ ಸಾಧನೆ ಮಾಡಿದ ಕ್ರೀಡಾಪಟುಗಳಿಗೆ ಈ ಯೋಜನೆಯನ್ನು ಜಾರಿಗೊಳಿಸಿ ಅನುಷ್ಠಾನ ಗೊಳಿಸಬಹುದು.** ಒಲಂಪಿಕ್ ಗೇಮ್ಸ್, ವರ್ಲ್ಡ್ ಚಾಂಪಿಯನ್‌ಷಿಪ್, ಏಷಿಯನ್ ಚಾಂಪಿಯನ್‌ಷಿಪ್, ಏಷಿಯನ್ ಗೇಮ್ಸ್, ಕಾಮನ್‌ವೆಲ್ತ್ ಗೇಮ್ಸ್, ಕಾಮನ್‌ವೆಲ್ತ್ ಚಾಂಪಿಯನ್‌ಷಿಪ್, ಆಫ್ರೋ–ಏಷಿಯನ್ ಗೇಮ್ಸ್, ಎಸ್.ಎ.ಎಫ್. ಗೇಮ್ಸ್, ಇಂಟರ್‌ನ್ಯಾಷನಲ್‌ಮೀಟ್ಸ್, ನ್ಯಾಷನಲ್ ಗೇಮ್ಸ್, ನ್ಯಾಷನಲ್ ಚಾಂಪಿಯನ್‌ಷಿಪ್, ಆಲ್ ಇಂಡಿಯಾ ಇಂಟರ್ ಜೋನಲ್‌ಮೀಟ್ಸ್, ಎಸ್.ಜಿ.ಎಫ್.ಐ, ಆಲ್ ಇಂಡಿಯಾ ಇಂಟರ್ ಯೂನಿವರ್ಸಿಟಿ ಮೀಟ್ಸ್, ಆಲ್ ಇಂಡಿಯಾ ಫ್ರೀ ಯೂನಿವರ್ಸಿಟಿ ಮೀಟ್ಸ್, ಭಾರತಸರ್ಕಾರದ ಅಂಗೀಕೃತ ಕ್ರೀಡಾಫೆಡರೇಷನ್‌ನಿಂದ ಸಂಘಟಿಸಲಾದ ರಾಷ್ಟ್ರೀಯ ಮಟ್ಟದ ಕ್ರೀಡಾಕೂಟ/ಶಾಲಾ ಮಟ್ಟದ ಚಾಂಪಿಯನ್‌ಷಿಪ್ / ಪಂಚಾಯತ್ ರಾಜ್ಯ ಯುವ ಕ್ರೀಡಾ ಔರ್ ಖೇಲ್ ಅಭಿಯಾನ್ ಕ್ರೀಡಾಕೂಟಗಳು; ಭಾರತ ಕ್ರೀಡಾ ಪ್ರಾಧೀಕಾರದಿಂದ ಯೋಜಿಸಲಾದ ಅಖಿಲಭಾರತ ಗ್ರಾಮೀಣ ಕ್ರೀಡಾಕೂಟ. ; ಭಾರತ ಕ್ರೀಡಾಪ್ರಾಧೀಕಾರದಿಂದ ಆಯೋಜಿಸಲಾದ ಅಖಿಲಭಾರತಮಹಿಳಾ ಕ್ರೀಡಾಕೂಟ.; ಪ್ಯಾರಾ ಒಲಂಪಿಕ್; ಪ್ಯಾರಾ ಏಷಿಯನ್ ಗೇಮ್ಸ್; ಖಫಖ/ ವಿಕಲಚೇತನರ/ ಕುಬ್ಬರ ವರ್ಲ್ಡ್ ಕಪ್; ಅಂಗವಿಕಲರವರ್ಲ್ಡ್ ಗೇಮ್ಸ್; ನ್ಯಾಷನಲ್ ಗೇಮ್ಸ್‌ಫಾರ್ ಡಿಸೇಬಲ್ಡ್; ಅಂತರಾಷ್ಟ್ರೀಯ / ರಾಷ್ಟ್ರೀಯ ಅಂಗವಿಕಲರ ಚಾಂಪಿಯನ್‌ಷಿಪ್ಸ್.

**ನಗದು ಪುರಸ್ಕಾರ:** ಸರ್ಕಾರದ ಆದೇಶಸಂ: ಯುಸೇಇ/೨೭೮/ ಯುಸೇಕ್ರೀ/ ೨೦೧೩ ದಿನಾಂಕ: ೩೦.೧೧.೨೦೧೩ ಮತ್ತು ಸರ್ಕಾರದ ಆದೇಶಸಂ: ಯುಸೇಇ/೪೫೦/ಯುಸೇಕ್ರೀ/೨೦೧೪ ದಿನಾಂಕ: ೧೫.೧೦.೨೦೧೪ ನಗದು ಪುರಸ್ಕಾರ ರಾಷ್ಟ್ರೀಯ ಮಟ್ಟದಲ್ಲಿ ರಾಜ್ಯವನ್ನು ಪ್ರತಿನಿಧಿಸಿ ಪದಕ ಪಡೆದ ಕರ್ನಾಟಕದ ಕ್ರೀಡಾಪಟುಗಳು ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರತವನ್ನು ಪ್ರತಿನಿಧಿಸಿ ವಿವಿಧ ಕ್ರೀಡೆಗಳಲ್ಲಿ ಭಾಗವಹಿಸಿ ರಾಷ್ಟ್ರಕ್ಕೆ ಕೀರ್ತಿತಂದ ಕರ್ನಾಟಕದ ಕ್ರೀಡಾಪಟುಗಳಿಗೆ ರಾಜ್ಯಸರ್ಕಾರದವತಿಯಿಂದ ನಗದು ಪ್ರೋತ್ಸಾಹ ಧನವನ್ನು ನೀಡಿ ಗೌರವಿಸುವ ಸಲುವಾಗಿ ಏಕ ರೀತಿಯ ಪುರಸ್ಕಾರ ನೀಡುವ ಮಾದರಿಯಲ್ಲಿಯೇ ಈ ನಗದು ಬಹುಮಾನವನ್ನು ಮಾರ್ಗಸೂಚಿಗಳನ್ವಯ ನಿಗಧಿಪಡಿಸಲಾಗಿದೆ.

**ಯುವ ಕ್ರೀಡಾ ಸಂಜೀವಿನಿ ವಿಮಾ ಯೋಜನೆ:** ರಾಜ್ಯದಲ್ಲಿ ಕ್ರೀಡೆ ಹಾಗೂ ಕ್ರೀಡಾಪಟುಗಳನ್ನು ಉತ್ತೇಜಿಸಿ ಪ್ರೋತ್ಸಾಹಿಸುವ ಸಲುವಾಗಿ ಕರ್ನಾಟಕ ಸರ್ಕಾರವು ಕ್ರೀಡಾಪಟುಗಳ ಅಪಘಾತ, ಆರೋಗ್ಯ ಭದ್ರತೆ ಹಾಗೂ ಸುರಕ್ಷತೆಗಾಗಿ ವಿಶೇಷವಾದ ಅಲ್ಲದೆ ಅತಿ ವಿನೂತನ "ಯುವ ಕ್ರೀಡಾ ಸಂಜೀವಿನಿ ವಿಮಾ ಯೋಜನೆ"ಯನ್ನು ಪ್ರಾರಂಭಿಸಿದೆ. ಕರ್ನಾಟಕವನ್ನು ಅಂತರ್‌ರಾಜ್ಯ, ಅಂತರ್‌ರಾಷ್ಟ್ರ ಹಾಗೂ ರಾಷ್ಟ್ರಮಟ್ಟದಲ್ಲಿ ಪ್ರತಿನಿಧಿಸಿ ಭಾಗವಹಿಸುವ ಎಲ್ಲಾ ಕ್ರೀಡಾಪಟುಗಳಿಗಾಗಿ ಯುವ ಕ್ರೀಡಾಸಂಜೀವಿನಿ ವಿಮಾ ಯೋಜನೆಯನ್ನು ಜಾರಿಗೆ ತರಲಾಗಿದೆ. ಮಾಜಿ ಕ್ರೀಡಾಪಟುಗಳಿಗೆ ಕುಸ್ತಿಮಾಸಾಶನ: ಕಷ್ಟದ ಪರಿಸ್ಥಿಯಲ್ಲಿರುವ ಕುಸ್ತಿ/ಕ್ರೀಡಾಪಟುಗಳಿಗೆ ಮಾಸಾಶನ ನೀಡುವ ಯೋಜನೆಯನ್ನು ಜಿಲ್ಲಾ ಪಂಚಾಯತ್ ವಲಯದಡಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ಅನುಷ್ಠಾನಗೊಳಿಸುತ್ತಿದೆ. ಸದರಿ ಯೋಜನೆಯಡಿ ಪ್ರಸ್ತುತ ರಾಜ್ಯಮಟ್ಟದ ಕ್ರೀಡಾಪಟುಗಳಿಗೆ ರೂ೭೫೦/- ರಾಷ್ಟ್ರಮಟ್ಟದ ಕ್ರೀಡಾಪಟುಗಳಿಗೆ ರೂ೧,೦೦೦/- ಮತ್ತು ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾಪಟುಗಳಿಗೆ ರೂ೧೫೦೦/-ಗಳ ಮಾಸಾಶನವನ್ನು ನೀಡಲಾಗುತ್ತಿದೆ.

**ರಾಷ್ಟ್ರೀಯ ಸೇವಾ ಯೋಜನೆ:** ರಾಷ್ಟ್ರೀಯ ಸೇವಾ ಯೋಜನಾ ಕೋಶವು ಪ್ರಧಾನ ಕಾರ್ಯದರ್ಶಿಗಳು, ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇದರ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಪ್ರತಿ ವಿಶ್ವವಿದ್ಯಾನಿಲಯಗಳು ಮತ್ತು ನಿರ್ದೇಶನಾಲಯಗಳಲ್ಲಿ ರಾಷ್ಟ್ರೀಯ ಸೇವಾ ಯೋಜನಾ ಚಟುವಟಿಕೆಗಳನ್ನು ಅಳವಡಿಸುವಲ್ಲಿ ಒಬ್ಬರು ಕಾರ್ಯಕ್ರಮ ಸಂಯೋಜನಾಧಿಕಾರಿಗಳು ಜವಾಬ್ದಾರಿಯನ್ನು ವಹಿಸಿಕೊಂಡಿರುತ್ತಾರೆ. ರಾಜ್ಯದಲ್ಲಿ ೩,೦೦೦ ಕಾರ್ಯಕ್ರಮ ಅಧಿಕಾರಿಗಳು ರಾಷ್ಟ್ರೀಯ ಸೇವಾ ಯೋಜನಾ ಚಟುವಟಿಕೆಗಳನ್ನು ಪೂರ್ಣ ಪ್ರಮಾಣದಲ್ಲಿ ನಡೆಸುವಲ್ಲಿ ನಿರತರಾಗಿರುತ್ತಾರೆ. ಈ ಯೋಜನೆಯಲ್ಲಿ ಒಟ್ಟು ೨,೭೦,೧೦೦ ಸ್ವಯಂ ಸೇವಕರು ದೈನಂದಿನ ಚಟುವಟಿಕೆಗಳಲ್ಲಿ ಹಾಗೂ ೧,೩೫,೦೫೦ ಸ್ವಯಂ ಸೇವಕರು ವಿಶೇಷ ಶಿಬಿರಗಳಲ್ಲಿ ತೊಡಗಿಸಿಕೊಂಡಿದ್ದು, ರಾಜ್ಯದ ೨೮ ವಿಶ್ವವಿದ್ಯಾನಿಲಯಗಳು ಹಾಗೂ ನಾಲ್ಕು ನಿರ್ದೇಶನಾಲಯಗಳನ್ನು ಒಳಗೊಂಡಿದೆ. ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರವು ೭:೫ ಅನುಪಾತದ ಅನುದಾನದಲ್ಲಿ ಹಣವನ್ನು ಬಿಡುಗಡೆ ಮಾಡುತ್ತಿದೆ. ಹಲವಾರು ರೀತಿಯ ಪ್ರತಿಷ್ಠಿತ ಬಹುಮಾನಗಳನ್ನು ಉತ್ತೇಜನಪೂರಕವಾಗಿ ಸ್ತ್ರೀ ಪುರುಷ ಕ್ರೀಡಾಪಟುಗಳಿಗೆ ನೀಡುತ್ತಾ ಬಂದಿದೆ. ಸ್ವಯಂ ಹಣ ಹೂಡಿಕೆಯಲ್ಲಿ ೪೦,೦೦೦ ಸ್ವಯಂ ಸೇವಕರುಗಳನ್ನು ನೋಂದಾಯಿಸಲಾಗಿದೆ.

**ಕರ್ನಾಟಕದಿಂದ ಅರ್ಜುನ ಪ್ರಶಸ್ತಿ ಪಡೆದವರು:** ಕೆನೆತ್ ಎಲ್.ಪೊವೆಲ್ (ಅಥ್ಲೆಟಿಕ್ಸ್ ೧೯೬೫), ಎಲ್‌ವೆರಾ ಬ್ರಿಟೊ (ಲೇಡಿಸ್ ಹಾಕಿ ೧೯೬೫), ವಿ.ಜಿ.ಪೀಟರ್ (ಹಾಕಿ ೧೯೬೬), ಉಷಾ ಸುಂದರರಾಜ್ (ಟೇಬಲ್ ಟೆನ್ನಿಸ್ ೧೯೬೬), ಇ.ಎ.ಎಸ್. ಪ್ರಸನ್ನ (ಕ್ರಿಕೆಟ್ ೧೯೬೮), ಶೋಭಾ ಮೂರ್ತಿ (ಬ್ಯಾಡ್ಮಿಂಟನ್ ೧೯೭೧), ಪ್ರಕಾಶ್ ಪಡುಕೋಣೆ (ಬ್ಯಾಡ್ಮಿಂಟನ್ ೧೯೭೨), ಜಯಮ್ಮ ಶ್ರೀನಿವಾಸನ್ (ಬಾಲ್ ಬ್ಯಾಡ್ಮಿಂಟನ್ ೧೯೭೨), ಬಿ.ಎಸ್.ಚಂದ್ರಶೇಖರ್ (ಕ್ರಿಕೆಟ್ ೧೯೭೨), ಎಂ.ಪಿ.ಗಣೇಶ್ (ಹಾಕಿ ೧೯೭೩), ಬಿ.ಪಿ.ಗೋವಿಂದ (ಹಾಕಿ ೧೯೭೫), ಶಾಂತ ರಂಗಸ್ವಾಮಿ (ಲೇಡಿಸ್ ಕ್ರಿಕೆಟ್ ೧೯೭೫), ಜಿ.ಆರ್.ವಿಶ್ವನಾಥ (ಕ್ರಿಕೆಟ್ ೧೯೭೭-೭೮), ಏಂಜೆಲ್ ಮೇರಿ ಜೋಸೆಫ್ (ಅಥ್ಲೆಟಿಕ್ಸ್ ೧೯೭೮-೭೯), ಸಿ.ಸಿ.ಮಾಚಯ್ಯ (ಬಾಕ್ಸಿಂಗ್ ೧೯೭೮-೭೯), ಅರವಿಂದ್ ಸಾವೂರ್ (ಸ್ನೂಕರ್ ೧೯೭೮-೭೯) ಎಸ್. ಎಂ.ಹೆಚ್.ಕಿರ್ಮಾನಿ(ಕ್ರಿಕೆಟ್ ೧೯೮೦-೮೧), ಎಸ್.ಪ್ರಕಾಶ್ (ಖೊಖೊ ೧೯೮೩-೮೪), ವಂದನಾ ರಾವ್ (ಅಥ್ಲೆಟಿಕ್ಸ್ ೧೯೮೭), ಡಿ.ವಿ.ಪ್ರಸಾದ್ (ಚೆಸ್ ೧೯೮೭), ಅಶ್ವಿನಿನಾಚಪ್ಪ (ಅಥ್ಲೆಟಿಕ್ಸ್ ೧೯೮೮), ಕಲ್ಲೇಗೌಡ (ಅಥ್ಲೆಟಿಕ್ ಹ್ಯಾಂಡಿಕ್ಯಾಪ್ಡ್ ೧೯೯೭), ಅನಿಲ್ ಕುಂಬ್ಳೆ (ಕ್ರಿಕೆಟ್ ೧೯೯೫), ಎ.ಬಿ.ಸುಬ್ಬಯ್ಯ (ಹಾಕಿ ೧೯೯೭), ಮಾಲತಿ ಹೊಳ್ಳ (ಅಥ್ಲೆಟಿಕ್ಸ್ ೧೯೯೭), ರಾಹುಲ್ ದ್ರಾವಿಡ್ (ಕ್ರಿಕೆಟ್ ೧೯೯೮), ಮಹಾದೇವ್ ಎಂ. (ಅಥ್ಲೆಟಿಕ್ಸ್ ೧೯೯೮), ಆಶಿಶ್ ಬಲ್ಲಾಳ್ (ಹಾಕಿ ೧೯೯೯), ಎಸ್.ಡಿ.ಈಶನ್ (ಅಥ್ಲೆಟಿಕ್ಸ್ ೧೯೯೯), ಶೋಭಾ ನಾರಾಯಣ (ಖೊಖೊ ೧೯೯೯), ಸತೀಶ್ ರೈ (ವೆಯಿಟ್‌ಲಿಫ್ಟಿಂಗ್ ೧೯೯೯), ರಂಜಿನಿ ರಾಮಾನುಜಮ್ (ಬ್ಯಾಡ್ಮಿಂಟನ್ ಹ್ಯಾಂಡಿಕ್ಯಾಪ್ಡ್ ೧೯೯೯), ವೆಂಕಟರಮಣಪ್ಪ (ಅಥ್ಲೆಟಿಕ್ಸ್ ಹ್ಯಾಂಡಿಕ್ಯಾಪ್ಡ್ ೨೦೦೦), ನಿಶಾ ಮಿಲ್ಲೆಟ್ (ಸ್ವಿಮ್ಮಿಂಗ್ ೨೦೦೦), ಸಿ.ಹೊನ್ನಪ್ಪ (ಕಬಡ್ಡಿ ೨೦೦೧), ಅಭಿಜಿತ್ (ಸ್ವಿಮ್ಮಿಂಗ್ ೨೦೦೧), ಜಾವಗಲ್ ಶ್ರೀನಾಥ್ (ಕ್ರಿಕೆಟ್), ರೀತ್ ಅಬ್ರಹಾಂ (ಅಥ್ಲೆಟಿಕ್ಸ್ ೨೦೦೦), ಜಿ.ಮನೋಹರನ್ (ಬಾಕ್ಸಿಂಗ್ ೨೦೦೦), ಅಮಲ್‌ದಾಸ್ (ಬಾಕ್ಸಿಂಗ್ ೨೦೦೦), ವೆಂಕಟೇಶ್ ಪ್ರಸಾದ್ (ಕ್ರಿಕೆಟ್ ೨೦೦೦), ಬಿ.ಸಿ.ರಮೇಶ್ (ಕಬಡ್ಡಿ ೨೦೦೧), ಶಂಕರ್ ಅಯ್ಯರ್ (ಹ್ಯಾಂಡಿಕ್ಯಾಪ್ಡ್ ೨೦೦೧), ಟಿ. ರಮೇಶ್ (ಅಥ್ಲೆಟಿಕ್ಸ್ ೨೦೦೨), ಯಶೋಧರ (ಮೃತರಾಗಿರುತ್ತಾರೆ) (ಪವರ್ ಲಿಫ್ಟಿಂಗ್ ೧೯೯೨), ಪಂಕಜ್ ಅಡ್ವಾಣಿ (ಸ್ನೂಕರ್ ಬಿಲಿಯಾರ್ಡ್ಸ್ ೨೦೦೩), ಜೆ.ಜೆ.ಶೋಭಾ (ಅಥ್ಲೆಟಿಕ್ಸ್ ೨೦೦೪), ಹೆಲೆನ್ ಮೇರಿ (ಹಾಕಿ ೨೦೦೪).

**ಕರ್ನಾಟಕದಿಂದ ೧೯೯೪ರಲ್ಲಿ ಏಕಲವ್ಯ ಪ್ರಶಸ್ತಿ ಪಡೆದ ಮಹಿಳೆ ಮತ್ತು ಪುರುಷರು:** ಅಥ್ಲೆಟಿಕ್ಸ್: ಅರ್ಜುನ್ ದೇವಯ್ಯ ಮತ್ತು ಸಿಲ್ವಿಯ ಪೈ ವಿ.ಧ್ರುವ ಮತ್ತು ಪಿ.ಆಶಾ(ಬಾಲ್ ಬ್ಯಾಡ್ಮಿಂಟನ್), ರಾಜಕುಮಾರನ್ ಮತ್ತು ರೇಖಾ ಮಲ್ಲಿಕ್ (ಬ್ಯಾಸ್ಕೆಟ್ ಬಾಲ್), ಮಂಜುನಾಥ (ಬಾಡಿ ಬ್ಯುಲ್ಡಿಂಗ್), ಬಿ.ವಿ.ಶ್ರೀನಿವಾಸ ಮೂರ್ತಿ (ಬಿಲಿಯರ್ಡ್ಸ್ ಮತ್ತು ಸ್ನೂಕರ್), ಅನಿಲ್ ಕುಂಬ್ಳೆ (ಕ್ರಿಕೆಟ್), ಕೆ.ಎಸ್.ಉತ್ತಯ್ಯ (ಹಾಕಿ), ಮಿರ್ಜಾ ನಜೀಬ್ ಆಗಾ ಮತ್ತು ಎಂ.ಎನ್.ತ್ರಿವೇಣಿ (ಜೂಡೊ), ಚನ್ನಬಸವಯ್ಯ ಮತ್ತು

ಟಿ.ಹೆಚ್.ವೀಣಾ (ಖೊಖೊ), ಬಿ.ಗೋಪಾಲ್ (ಕಬಡ್ಡಿ), ಪಿ.ಶ್ರೀನಾಥ್ ಮತ್ತು ಆರತಿ ಪೊನ್ನಪ್ಪ (ಲಾನ್ ಟೆನ್ನಿಸ್), ಸತೀಶ್ ಕುಮಾರ್ (ಪವರ್ ಲಿಫ್ಟಿಂಗ್), ಜೆ.ಅಭಿಜಿತ್ ಮತ್ತು ಸಜಿನಿಶೆಟ್ಟಿ (ಸ್ವಿಮ್ಮಿಂಗ್), ಜಿ.ಕೆ.ವಿಶ್ವನಾಥ ಮತ್ತು ಎಸ್.ಪೂರ್ಣರಾವ್ (ಟೇಬಲ್ ಟೆನ್ನಿಸ್), ಶ್ಯಾಮಲ ಶೆಟ್ಟಿ(ವೆಯಿಟ್ ಲಿಫ್ಟಿಂಗ್), ಅಮಿತ್ ರಾವ್ ಚೌಧರಿ ಮತ್ತು ಟಿ.ಪದ್ಮಜ (ವಾಲಿಬಾಲ್) ಮತ್ತು ಮಹಿಳಾ ಕ್ರಿಕೆಟ್, ವಿ.ಕಲ್ಪನಾ ಶ್ಯಾಮಲ ಶೆಟ್ಟಿ (ಮಹಿಳಾ ವೆಯಿಟ್ ಲಿಫ್ಟಿಂಗ್)

**೧೯೯೪ರಲ್ಲಿ ಹಿರೋಶಿಮಾದಲ್ಲಿ ನಡೆದ ೧೨ನೇ ಏಷ್ಯಾ ಕ್ರೀಡೆಗಳಲ್ಲಿ ಭಾಗವಹಿಸಿದವರು:** ಮುನಿವೆಂಕಟಪ್ಪ (ಕಬಡ್ಡಿ, ಚಿನ್ನ), ಸಿಲ್ವಿಯ ಪೈ ( ೪x೪೦೦ ರಿಲೇ ಚಿನ್ನ), ವರ್ಷ ಶ್ಯಾಮರಾಂ ಪಡ್ಕಿ (ವೆಯಿಟ್ ಲಿಫ್ಟಿಂಗ್), ಸಬು ವರ್ಕಿ (ಹಾಕಿ), ರವಿ ನಾಯಕರ್ (ಹಾಕಿ), ಸುಮಿತ ಥಾಕೂರ್ (ಜುಡೊ), ಸತೀಶ್ ರೈ (ವೆಯಿಟ್ ಲಿಫ್ಟಿಂಗ್), ಇ.ಬಿ.ಶೈಲಾ (ಸ್ಪ್ರಿಂಟರ್) ಮತ್ತು ಎನ್. ಲಕ್ಷ್ಮಿ (ವೆಯಿಟ್ ಲಿಫ್ಟಿಂಗ್).

**ಕರ್ನಾಟಕದಿಂದ ೧೯೯೫ರಲ್ಲಿ ವಿವಿಧ ಕ್ರೀಡೆಗಳಲ್ಲಿ ಏಕಲವ್ಯ ಪ್ರಶಸ್ತಿ ಪಡೆದವರು:** ಬಿ.ಕೆ.ವೆಂಕಟೇಶ್ ಪ್ರಸಾದ್ ಮತ್ತು ಕೆ.ಎಸ್.ಪ್ರಮೀಳ ಭಟ್, ಸಿ.ಕೆ.ಹರೀಶ್, ಎಚ್.ಜಿ.ಅಪ್ಸರ, ಮಹದೇವ್ ಮತ್ತು ಕೆ.ಮಾಲತಿಹೊಳ್ಳ ಪುಟ್ಟರಾಜು (ಬಾಲ್ ಬ್ಯಾಡ್ಮಿಂಟನ್), ವಿನೋದ ಚಿನ್ನಪ್ಪ ಮತ್ತು ಕೆ.ಎಂ.ನೀಲಮ್ಮ (ಹಾಕಿ), ಟಿ.ಭಾಸ್ಕರ್ (ಬಾಡಿ ಬಿಲ್ಡಿಂಗ್), ಶೈಲೇಶ್ (ಜಿಮ್ನಾಸ್ಟಿಕ್ಸ್), ಕೆ.ವಿ.ಶ್ರೀಧರ್ ಗೌಡ ಮತ್ತು ಕುಮಾರಿ (ವೆಯಿಟ್‌ಲಿಫ್ಟಿಂಗ್), ಬೋನ ಥಾಮಸ್ ಜಾನ್ (ಟೇಬಲ್ ಟೆನ್ನಿಸ್), ವಿ.ಆರತಿ (ಲಾನ್ ಟೆನ್ನಿಸ್), ಟಿ.ಎಸ್.ಸಿದ್ಧಲಿಂಗ ಮತ್ತು ಎನ್.ಶೋಭ (ಖೊಖೊ), ಖಲೀಲ್ ಉರ್ ರೆಹಮಾನ್ (ಚೆಸ್), ಹಕಿಮುದ್ಧೀನ್ ಮತ್ತು ಅಭಿನಯ ಶೆಟ್ಟಿ (ಸ್ವಿಮ್ಮಿಂಗ್), ಅಗನೆಲ್ ಸಿದ್ಧಿ (ಜುಡೊ), ಎ.ಸತೀಶ್ ಕುಮಾರ್ (ಟಾಯ್ಕವೊಂಡೊ), ಎಂ.ಆರ್.ಪಾಟೀಲ್ (ರೆಸ್ಲಲಿಂಗ್), ಕೆ.ಶ್ರೀಕಾಂತ ರಾವ್ ಮತ್ತು ಕವಿತಾ ಪೂವಯ್ಯ (ರೋಲರ್ ಸ್ಕೇಟಿಂಗ್), ಟಿ.ಬಿ.ರವೀಂದ್ರ (ವಾಲಿಬಾಲ್) ಮತ್ತು ಎಸ್.ಅಮಲ್ ರಾಜ್ (ಹ್ಯಾಂಡ್‌ಬಾಲ್).

**ಕರ್ನಾಟಕದಿಂದ ೨೦೦೨ರಲ್ಲಿ ಏಕಲವ್ಯ ಪ್ರಶಸ್ತಿ ಪಡೆದವರು:** ಶ್ರೀಮತಿ ಜೈಸಿ ಥಾಮಸ್ (ಅಥ್ಲೆಟಿಕ್ಸ್), ಶ್ರೀ ಎನ್.ಶಿವಪ್ರಕಾಶ್ (ಬ್ಯಾಡ್ಮಿಂಟನ್), ಕು. ಎಂ.ಎಫ್.ಸವಿತ (ಬ್ಯಾಸ್ಕೆಟ್‌ಬಾಲ್), ಶ್ರೀ ದೊಡ್ಡನರಸಯ್ಯ ಗಣೇಶ್ (ಕ್ರಿಕೆಟ್), ಕು.ಸವಿತ ಆನೇಪ್ಪನವರ್ (ಸೈಕ್ಲಿಂಗ್) ಶ್ರೀ ಪಿ.ಲಕ್ಷ್ಮೀಕಾಂತ (ಫೆನ್ಸಿಂಗ್), ಕು.ಬಿ.ಹೆಚ್.ಸುಮರಾಣಿ (ಜಿಮ್ನಾಸ್ಟಿಕ್ಸ್), ಶ್ರೀ ಭರತ್‌ಕುಮಾರ್ ಚೇತ್ರಿ (ಹಾಕಿ), ಶ್ರೀ ಹೆಚ್.ಕೆ.ಶ್ರೀನಿವಾಸಮೂರ್ತಿ (ಕಬಡ್ಡಿ), ಶ್ರೀ ರಮೇಶ (ಖೊಖೊ), ಶ್ರೀ ಪಿ.ಕುಮಾರಸ್ವಾಮಿ (ಫಿಸಿಕಲೀ ಹ್ಯಾಂಡಿಕ್ಯಾಪ್ಡ್), ಕು.ಅರ್ಚನಾ ಭೂಷಣ್ (ಸ್ವಿಮ್ಮಿಂಗ್), ಕು.ಜಿ.ಮಾಲಿನಿ (ಟಕ್ವಾಂಡೋ), ಶ್ರೀ ಜಿ.ನಾಗರಾಜ್ (ರೆಸ್‌ಲಿಂಗ್), ಶ್ರೀ ಮಹೇಶ್ ಭೂಪತಿ (ಲಾನ್ ಟೆನ್ನಿಸ್)

**ಕರ್ನಾಟಕದಿಂದ ೨೦೦೩ರಲ್ಲಿ ಏಕಲವ್ಯ ಪ್ರಶಸ್ತಿ ಪಡೆದವರು:** ಶ್ರೀ ಕ್ಲಿಫೋರ್ಡ್ ಜೋಸೆಫ್ ಜೋಶುಅ (ಅಥ್ಲೆಟಿಕ್ಸ್), ಶ್ರೀ ಬಿ.ಅರವಿಂದ್ ಭಟ್ – ಬ್ಯಾಡ್ಮಿಂಟನ್, ಶ್ರೀ ಸುನೀಲ್ ಭಂಡಾಚಾರ್ಯಾ ಜೋಶಿ (ಕ್ರಿಕೆಟ್), ಕು.ಗಂಗು ಜಿ.ಬಿರಾದಾರ್ (ಸೈಕ್ಲಿಂಗ್), ಕು.ಸಿ.ರುಮಿಣಿ (ಫೆನ್ಸಿಂಗ್), ಶ್ರೀ ಸಂದೀಪ್ ಮೈಕೆಲ್ (ಹಾಕಿ), ಶ್ರೀಮತಿ ಐ. ಹೆಲೆನ್ ಮೇರಿ (ಹಾಕಿ), ಶ್ರೀ ವಿಷಕಂಠ (ಕಬಡ್ಡಿ), ಶ್ರೀ ಕೆ.ಎನ್.ವಿನೋದ್ (ಖೊಖೊ), ಶ್ರೀ ಟಿ.ಸೀತಾರಾಮ್ (ಫಿಸಿಕಲಿ ಹ್ಯಾಂಡಿಕ್ಯಾಪ್ಡ್), ಶ್ರೀ ರೇಹನ್ ಪೊಂಚ (ಸ್ವಿಮ್ಮಿಂಗ್), ಶ್ರೀಜಿ.ರವಿಶಂಕರ್ (ಟೇಬಲ್ ಟೆನ್ನಿಸ್), ಕು.ಸಿ.ರವಿಶಂಕರ್ (ಟಕ್ವಾಂಡೋ),ಕು.ಸ್ನೇಹ ಶ್ಯಾಂಪುರ (ಟ್ರೈತ್ಲಾನ್), ಕು.ಶೈಲಾ ಎಸ್. ಥಾಮಸ್ (ವಾಲಿಬಾಲ್), ಶ್ರೀ ಬಸವರಾಜ್ ಎನ್.ಮುರಗೋಡ್ (ಬ್ಯಾಸ್ಕೆಟ್‌ಬಾಲ್)

**ಕರ್ನಾಟಕದಿಂದ ೨೦೦೪ರಲ್ಲಿ ಏಕಲವ್ಯ ಪ್ರಶಸ್ತಿ ಪಡೆದವರು:** ಶ್ರೀ ವಿಲಾಸ್ ನೀಲ್‌ಗುಂದ್ (ಅಥ್ಲೆಟಿಕ್ಸ್), ಶ್ರೀ ಅನುಪ್ ಶ್ರೀಧರ್ (ಬ್ಯಾಡ್ಮಿಂಟನ್), ಕು.ಸೋನಮ್ ದೀಪಕೌ (ಬ್ಯಾಸ್ಕೆಟ್‌ಬಾಲ್), ಶ್ರೀ ಚಂದ್ರಶೇಖರ್ (ಬಾಲ್ ಬ್ಯಾಡ್ಮಿಂಟನ್), ಶ್ರೀ ಶ್ರೀರಾಮ್ ಸರ್ಜಾ (ಚೆಸ್), ಶ್ರೀ ಸಿದ್ಧಲಿಂಗಪ್ಪ (ಈಕ್ವೇಸ್ಟರಿಯನ್), ಕು.ಲೇರೆನ್‌ಮಿಮ್ (ವೆಯಿಟ್‌ಲಿಫ್ಟಿಂಗ್), ಶ್ರೀ ಎನ್.ಎಸ್.ಮಂಜು (ಫುಟ್‌ಬಾಲ್), ಕು. ಬಿ.ಎಸ್.ಅರ್ಚನಾ (ವಾಲ್ ಕ್ಲೈಂಬಿಂಗ್), ಕು.ಎಸ್. ಎಸ್.ನಿಲನ್ (ಹಾಕಿ), ಶ್ರೀ ಹೆಚ್.ಬೋನಿಫೇಸ್‌ಪ್ರಭು (ಫಿಸಿಕಲಿ ಹ್ಯಾಂಡಿಕ್ಯಾಪ್ಡ್), ಕು.ರೇಷ್ಮಾ ಮಿಲೆಟ್ (ಸ್ವಿಮ್ಮಿಂಗ್), ಕು.ಅಂಬಿಕಾ ಅಯ್ಯಂಗಾರ್ (ಸ್ವಿಮ್ಮಿಂಗ್), ಶ್ರೀ ಪಂಕಜ್ ಅಡ್ವಾನಿ (ಬಿಲಿಯರ್ಡ್ಸ್ ಮತ್ತು ಸ್ನೂಕರ್), ಕು. ಮಮತ ಮಾಬೆನ್ (ಮಹಿಳಾ ಕ್ರಿಕೆಟ್), ಕು.ಎನ್.ಗೀತಾ (ಪವರ್ ಲಿಫ್ಟಿಂಗ್).

**ಕರ್ನಾಟಕದಿಂದ ೨೦೦೪ರಲ್ಲಿ ದ್ರೋಣಾಚಾರ್ಯ ಪ್ರಶಸ್ತಿ ಪಡೆದವರು:** ಅರವಿಂದ್ ಸಾವೂರ್ (ಬಿಲಿಯರ್ಡ್ಸ್)

**ಕರ್ನಾಟಕದಿಂದ ೨೦೦೫ರಲ್ಲಿ ಏಕಲವ್ಯ ಪ್ರಶಸ್ತಿ ಪಡೆದವರು:** ಶ್ರೀ ಪರಮೇಶ್ವರ (ಅಥ್ಲೆಟಿಕ್ಸ್), ಶ್ರೀ ಸಂಜಯ್ ರಾಜ್ (ಬ್ಯಾಸ್ಕೆಟ್ ಬಾಲ್), ಶ್ರೀ ಸುಜಿತ್ ಬಿಜ್ಜಹಳ್ಳಿ ಸೊಮಸುನೆರ್ (ಕ್ರಿಕೆಟ್), ಶ್ರೀ ಶಶಿಧರ್ ಸಿಂಗ್ ಬಿ. (ಫೆನ್ಸಿಂಗ್), ಶ್ರೀ ಎಸ್.ವೆಂಕಟೇಶ್ (ಫುಟ್‌ಬಾಲ್), ಶ್ರೀ ವಿ.ಎಸ್.ವಿನಯ (ಹಾಕಿ), ಶ್ರೀಮತಿ ತೇಜಸ್ವಿನಿ ಬಾಯ್ (ಕಬಡ್ಡಿ), ಶ್ರೀ ತುಳಸಿದಾಸ್ ಆರ್ (ಖೊಖೊ), ಶ್ರೀಮತಿ ಯು ಸುಧಾ ಪ್ರಭು(ಪವರ್ ಲಿಫ್ಟಿಂಗ್), ಶ್ರೀ ಅನಿಕೇತ್ ಎ. ಡಿಸೋಜಾ –(ಸ್ವಿಮ್ಮಿಂಗ್), ಶ್ರೀಮತಿ ಪೂಜಾ ಆರ್.ಆಳ್ವ (ಸ್ವಿಮ್ಮಿಂಗ್), ಶ್ರೀ ಮೊಹಮ್ಮದ್ ಇಮ್ರಾನ್ (ಟ್ವಿಕಾಂಡೊ), ಶ್ರೀ ರೋಹನ್ ಮಚಂದ ಬೊಪಣ್ಣ (ಲಾನ್ ಟೆನ್ನಿಸ್), ಶ್ರೀ ಕೆ.ವೈ.ವೆಂಕಟೇಶ್ (ಫಿಸಿಕಲಿ ಛಾಲೆಂಜ್ಡ್), ಶ್ರೀ ಎಂ.ಎನ್.ವಿಕ್ರಂ (ವಾಲಿಬಾಲ್), ಶ್ರೀ ಆರ್.ಪ್ರಸಾದ್ರ ಕುಮಾರ್ (ಬಾಡಿ ಬಿಲ್ಡಿಂಗ್),

**ಕರ್ನಾಟಕದಿಂದ ೨೦೦೬ರಲ್ಲಿ ಏಕಲವ್ಯ ಪ್ರಶಸ್ತಿ ಪಡೆದವರು:** ಶ್ರೀ ನಾಗರಾಜ್ (ಅಥ್ಲೆಟಿಕ್ಸ್), ಶ್ರೀ ರೋಹನ್ ಸಿ.ಕ್ಯಾಟಿಲಿನೊ (ಬ್ಯಾಡ್ಮಿಂಟನ್), ಶ್ರೀಮತಿ ಚಿತ್ರ ಮಾಗಿಮೈರಾಜ್ (ಬಿಲಿಯರ್ಡ್ಸ್), ಶ್ರೀಮತಿ ನೀಲಮ್ಮ ಎಂ. ಮಲ್ಲಿಗ್‌ವಾಡ್ (ಸೈಕ್ಲಿಂಗ್), ಶ್ರೀಮತಿ ಹರ್ಷಿಕಾ ಬಸಪ್ಪ (ಇಕ್ವೇಸ್ಟರಿಯನ್), ಶ್ರೀ ಸುಮೀತ್ ಸಾಯಿನಾಥ್ ನಾಯ್ಡು (ಫೆನ್ಸಿಂಗ್), ಶ್ರೀ ಇಗ್ನ್ಯಾಸ್ ಟಿರ್ಕೆ (ಹಾಕಿ), ಶ್ರೀ ಹೆಚ್. ಎಸ್.ಪಿಳ್ಳಪ್ಪ (ಕಬಡ್ಡಿ), ಶ್ರೀ ಈರಣ್ಣ ಆರ್. (ಖೊಖೊ), ಬಿ.ಜೆ. ಮೇಘನಾ (ನೆಟ್‌ಬಾಲ್), ಶ್ರೀ ಆನಂದ್ ಸಿ.ಕೆ.ಶಶಿಧರ್ (ರೈಫಲ್ ಶೂಟಿಂಗ್), ಶ್ರೀಮತಿ ತೇಜಸ್ವಿನಿ ವಿ. (ಸ್ವಿಮ್ಮಿಂಗ್), ಅಶೋಕ ಎಸ್. ಎಸ್. (ವಾಲಿಬಾಲ್), ಸುರ್‌ಜಿತ್ ಸಿಂಗ್ (ಫಿಸಿಕಲಿ ಛಾಲೆಂಜ್ಡ್),

ಸಂದೀಪ್ ಜಿ.ಮೈದಾನ್ (ವೆಯಿಟ್‌ಲಿಫ್ಟಿಂಗ್), ಸುದರ್ಶನ್ ಬಿ. (ಬಾಲ್ ಬ್ಯಾಡ್ಮಿಂಟನ್).

**೨೦೦೯ರಸಾಲಿಗೆ ಸಂಬಂಧಿಸಿದಂತೆ ವಿವಿಧ ಕ್ರೀಡಾ ಕ್ಷೇತ್ರಗಳಲ್ಲಿನ ಸಾಧನೆಗಾಗಿ ಪ್ರತಿಷ್ಠಿತ ಏಕಲವ್ಯ ಪ್ರಶಸ್ತಿಯನ್ನು ಪಡೆದಿರುವ ಕ್ರೀಡಾ ಪಟುಗಳ ವಿವರ ಈ ಕೆಳಗಿನಂತಿದೆ:** ಕೌಶಲ್ ರವಿಕುಮಾರ್ (ಬಾಸ್ಕೆಟ್‌ಬಾಲ್), ತೇಜ್‌ಕುಮಾರ್ (ಚೆಸ್),ಸವಿತ ಎನ್. ಗೌಡರ್ (ಸೈಕ್ಲಿಂಗ್), ಅರುಣ್ ಮರಿಬಾಶೆಟ್ಟಿ (ಈಕ್ವೆಸ್ಟೇರಿಯನ್), ಬಿಂದು.ಎನ್ (ಫೆನ್ಸಿಂಗ್), ರಘುನಾಥ. ವಿ.ಆರ್ (ಹಾಕಿ), ಎಲ್. ಜಯಂತಿ (ಕಬಡ್ಡಿ),ಶ್ರೀನಿವಾಸ ಎಂ. (ಖೊ–ಖೊ), ಶೋಭಾ (ಪವರ್ ಲಿಫ್ಟಿಂಗ್), ಆರೋನ್ ಡಿಸೋಜ (ಈಜು), ಮಾಧವಿ ಗಿರಿ (ಈಜು), ಸೋಮನಾಥ ಎಸ್.ಗಿರಿಗೌಡ (ವಾಲಿಬಾಲ್), ಸ್ಮಿತಾ ಬಿ.ಪಾಟೀಲ್ (ಕುಸ್ತಿ),ಲೈಸ್‌ರಾಮ್ ಗ್ಯಾನ್ ಲಕ್ಷ್ಮೀದೇವಿ (ಭಾರ ಎತ್ತುವುದು), ರಾಘವೇಂದ್ರ ತನ್ನಾಕರ್ ಆನ್ವೇಕರ್ (ಈಜು)

**೨೦೦೯ರಲ್ಲಿ ಕ್ರೀಡಾಕ್ಷೇತ್ರದ ಜೀವಮಾನ ಸಾಧನೆಗಾಗಿ ಪ್ರಶಸ್ತಿ ಪಡೆದಿರುವವರು:**ಐರಾಮ್ ದೇಬಾನ್ ಸಿಂಗ್ ಸದರಿಯವರು ರಷ್ಯಾ, ಏಷಿಯನ್, ಫೆನ್ಸ್ ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸಿದ್ದು, ೧೯೯೬ ರಲ್ಲಿ ಬೆಂಗಳೂರು ಅಂತರರಾಷ್ಟ್ರೀಯ ಒಲಂಪಿಕ್ ಕಮಿಟಿಯ ಅಧ್ಯಕ್ಷತೆ ೨೦೦೩ರಲ್ಲಿ ಪಾರ್ಟಿಹಾಲ್ ಅಂತರರಾಷ್ಟ್ರೀಯ ಒಲಂಪಿಕ್ ಕಮಿಟಿ ಟೆಕ್ನಿಕಲ್ ಕೋರ್ಸ್ ಫಾರ್ ಕೋಚಸ್‌ನ ಅಧ್ಯಕ್ಷತೆ ವಹಿಸಿರುತ್ತಾರೆ. ೧೯೫೫ರಿಂದ ೨೦೦೯ರವರೆಗೆ ರಾಷ್ಟ್ರೀಯಮಟ್ಟದಲ್ಲಿ ೭೪ ಚಿನ್ನ, ೧೦೦ ಬೆಳ್ಳಿ, ೧೮೪ ಕಂಚಿನ ಪದಕಗಳು ಸೇರಿ ಒಟ್ಟು ೩೫೮ ಪದಕಗಳನ್ನು ಮತ್ತು ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಎರಡು ಕಂಚಿನ ಪದಕಗಳನ್ನು ಪಡೆದಿರುತ್ತಾರೆ. ಹಲವಾರು ರಾಷ್ಟ್ರ ಮತ್ತು ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಪದಕಗಳನ್ನು ಪಡೆದ ಪ್ರತಿಭಾವಂತ ಫೆನ್ಸಿಂಗ್ ಕ್ರೀಡಾಪಟುಗಳಿಗೆ ತರಬೇತಿ, ಮಾರ್ಗದರ್ಶನ ನೀಡುತ್ತಾ ಕ್ರೀಡಾರಂಗದಲ್ಲಿ ಅನವರತ ಸೇವೆ ಸಲ್ಲಿಸಿದ್ದಾರೆ. ಕ್ರೀಡಾಕ್ಷೇತ್ರಗಳಲ್ಲಿ ಇವರು ಸಲ್ಲಿಸಿರುವ ಅಪ್ರತಿಮ ಜೀವನಪರ್ಯಂತ ಸಾಧನೆಗಾಗಿ ಇವರಿಗೆ ೨೦೦೯ರ ಜೀವಮಾನಸಾಧನೆ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

**ತ್ರಿವೇಣಿ.ಎಂ.ಎನ್.**:– ತ್ರಿವೇಣಿಯವರ ಹೆಸರು ಜೂಡೋ ಕ್ರೀಡೆಯಲ್ಲಿ ಚಿರಪರಿಚಿತ. ಸದರಿಯವರು ಅಸಂಖ್ಯಾತ ಕ್ರೀಡಾ ಪ್ರತಿಭೆಗಳಿಗೆ ಕ್ರೀಡಾ ತರಬೇತಿ ನೀಡಿ ಅಂತರ್‌ರಾಷ್ಟ್ರೀಯ ಮಟ್ಟದ ಕ್ರೀಡೆಗಳಲ್ಲಿ ಪದಕಗಳನ್ನು ಪಡೆಯಲು ಕಾರಣಕರ್ತರಾಗಿದ್ದಾರೆ. ಇವರಿಂದ ತರಬೇತಿ ಪಡೆದ ಇಬ್ಬರು ಕ್ರೀಡಾಪಟುಗಳು ಬೀಜಿಂಗ್ ಒಲಂಪಿಕ್ಸ್‌ಗೆ ಆಯ್ಕೆಯಾಗಿದ್ದುದು ಇವರ ಹೆಗ್ಗಳಿಕೆಯಾಗಿದೆಯಲ್ಲದೆ ಇವರ ಶಿಷ್ಯ ಪರಂಪರೆ ರಾಷ್ಟ್ರೀಯಮಟ್ಟದಲ್ಲಿ ಆರು ಪದಕಗಳನ್ನು ಪಡೆದಿದ್ದು, ಎಂಟು ಮಂದಿ ಅಂತರ್ ರಾಷ್ಟ್ರೀಯ ಪಂದ್ಯಾವಳಿಗಳಿಗೆ ಆಯ್ಕೆಯಾಗಿದ್ದಾರೆ. ರಾಷ್ಟ್ರೀಯಮಟ್ಟದಲ್ಲಿ ೧೪೨ ಪದಕಗಳನ್ನು ಮತ್ತು ರಾಜ್ಯಮಟ್ಟದಲ್ಲಿ ೨೬೩ ಪದಕಗಳನ್ನು ಪಡೆದು ಗಣನೀಯ ಸಾಧನೆ ಮಾಡಿದ್ದಾರೆ. ಜನ್ಮತ: ಕ್ರೀಡಾಪಟುವಾದ ಇವರು ವಿಶ್ವಚಾಂಪಿಯನ್‌ಶಿಪ್ ಸೇರಿದಂತೆ ಹಲವಾರು ಅಂತರ್ ರಾಷ್ಟ್ರೀಯ ಮಟ್ಟದ ಕ್ರೀಡಾಕೂಟಗಳಲ್ಲಿ ಭಾಗವಹಿಸಿ ರಜತ ಪದಕ ಗಳಿಸಿದ್ದಾರೆ. ಎಂಟು ಚಿನ್ನ, ಮೂರು ರಜತ, ಆರು ಕಂಚಿನ ಪದಕಗಳನ್ನು ರಾಷ್ಟ್ರಮಟ್ಟದಲ್ಲಿ, ೧೬ ಪದಕಗಳನ್ನು ರಾಜ್ಯಮಟ್ಟದ ಪಂದ್ಯಾವಳಿಗಳಲ್ಲಿ ಪಡೆದಿದ್ದು, ಪ್ರಸ್ತುತ ಬೆಳಗಾವಿ ಕ್ರೀಡಾ ನಿಲಯದಲ್ಲಿ ತರಬೇತುದಾರರಾಗಿ ಅನುಪಮ ಸೇವೆ ಸಲ್ಲಿಸಿರುವ ಇವರ ಜೀವನಪರ್ಯಂತ ಸಾಧನೆಗಾಗಿ ಇವರಿಗೆ ೨೦೦೯ರ ಜೀವಮಾನಸಾಧನೆ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

**೨೦೦೯–೧೦ನೇ ಸಾಲಿನ ಕರ್ನಾಟಕದ ಕ್ರೀಡಾ ಸಾಧಕರ ವಿವರ:** ೧)ಎ.ಅರೋನ್ ಡಿ' ಸೋಜ – ಈಜು, ೨) ಅರ್ಜುನ ಜೆ.ಪಿ.– ಈಜು, ೩) ಗಗನ್ ಎ.ಪಿ.– ಈಜು, ೪) ರೋಹಿತ್ ಆರ್.ಹೆಚ್. – ಈಜು, ೫) ಶುಭಾ ಸಿ. – ಈಜು, ೬) ಸ್ನೇಹಾ ಟಿ. – ಈಜು, ೭) ರೇಹಾನ್ ಪೂಂಚಾ – ಈಜು, ೮) ಅರ್ಹತಾ ಮಾಗಾವಿ – ಈಜು, ೯) ಪ್ರತಿಮಾ ಕೊಲ್ಲಾಲಿ – ಈಜು, ೧೦) ಆಕಾಶ್ ರೋಹಿತ್ .ಜಿ– ಈಜು, ೧೧) ಅದಿತ್ಯಾ ರೋಶನ್ ಜಿ. – ಈಜು, ೧೨) ಪೂಜಾ ಆರ್. ಆಳ್ವಾ – ಈಜು, ೧೩) ಆಶ್ವಿನ್ ಮೆನನ್ – ಈಜು, ೧೪) ಶಾನುನ್ ಡಿ"ಸೋಜಾ – ಈಜು, ೧೫) ಪ್ರಜ್ವಲ್ ಕೆ.ಎಸ್.– ಈಜು, ೧೬) ಸುಶಾಕಾ ಪ್ರತಾಪ್ – ಈಜು, ೧೭) ನವ್ಯ ಜಿ.ಶೆಣೈ – ಈಜು, ೧೮) ಮಾಧವಿ ಗಿರಿ – ಈಜು, ೧೯) ವಿಘ್ನೇಶ್ ಎನ್. – ಈಜು, ೨೦) ಸರಸ್ವತಿ ಹೊಳ್ಳ – ಈಜು, ೨೧) ರೇಣು ಆರ್. ಓ.– ಈಜು, ೨೨) ವರ್ಶಿನಿ ಗುಬ್ಬಿ– ಈಜು, ೨೩) ಶೃತಿ ಎಂ.ಎಸ್.– ಈಜು, ೨೪) ಉತ್ತರ ಜಿ. ಕೊಠಾರಿ – ಈಜು, ೨೫) ಶ್ವೇತಾ ಎಸ್ – ಈಜು, ೨೬) ಪೃಥ್ವಿ ಕೆ.ಎಸ್. – ಈಜು, ೨೭) ಎಂ.ಮಹೇಶ್ವರಯ್ಯ –ಪವರ್ ಲಿಫ್ಟಿಂಗ್, ೨೮) ಮಂಜು ಬಿ. – ವೇಟ್ ಲಿಫ್ಟಿಂಗ್ ಮತ್ತು ಪವರ್ ಲಿಫ್ಟಿಂಗ್, ೨೯) ವಿರೂಪಾಕ್ಷಪ್ಪ – ಪವರ್ ಲಿಫ್ಟಿಂಗ್, ೩೦) ಚಂದ್ರ ನಾಯ್ಕ –ಪವರ್ ಲಿಫ್ಟಿಂಗ್, ೩೧) ಪ್ರಕಾಶ್ ಕಾರಂತ್ ಕೆ. –ಪವರ್ ಲಿಫ್ಟಿಂಗ್, ೩೨) ಹರೀಶ್ ಕುಮಾರ್ – ಪವರ್ ಲಿಫ್ಟಿಂಗ್, ೩೩) ದಿನಕರ್ – ಪವರ್ ಲಿಫ್ಟಿಂಗ್, ೩೪) ಮೋಹನ್ ರಾಜ್ ಎಂ. –ಪವರ್ ಲಿಫ್ಟಿಂಗ್, ೩೫) ಸಚ್ಚೀಂದ್ರ –ಪವರ್ ಲಿಫ್ಟಿಂಗ್, ೩೬) ನಯನ ಶ್ರೀಯಾನ್ –ಪವರ್ ಲಿಫ್ಟಿಂಗ್, ೩೭) ಹೇಮಚಂದ್ರ–ಪವರ್ ಲಿಫ್ಟಿಂಗ್, ೩೮) ಸತೀಶ್ ಕುಮಾರ್ – ಪವರ್ ಲಿಫ್ಟಿಂಗ್, ೩೯) ಲಕ್ಷ್ಮಣ್ ಯು – ಪವರ್ ಲಿಫ್ಟಿಂಗ್, ೪೦) ಶೋಭಾ –ಪವರ್ ಲಿಫ್ಟಿಂಗ್, ೪೧) ರವಿಕುಮರ್ ಟಿ.ಡಿ. – ವಾಲಿಬಾಲ್, ೪೨) ಕೃತಿಕಾ ಎಲ್. – ಬಾಸ್ಕೆಟ್ ಬಾಲ್, ೪೩) ನವನೀತಾ –ಬಾಸ್ಕೆಟ್ ಬಾಲ್, ೪೪) ಸಾಗರಿಕಾ – ಬಾಸ್ಕೆಟ್ ಬಾಲ್, ೪೫) ಸಂಜಯ್ ರಾಜ್ – ಬಾಸ್ಕೆಟ್ ಬಾಲ್, ೪೬) ದುರ್ಗಾ ರಾವ್ – ಬಾಕ್ಸಿಂಗ್, ೪೭) ಕೆ.ಕುತುಜಾ–ಜೂಡೋ, ೪೮) ಕೆ.ದೇವಿಶ್ರೀ – ಜೂಡೋ, ೪೯) ಕುತುಜಾ ಎ. ಮುಲ್ತಾನಿ – ಜೂಡೋ, ೫೦) ರೋಹಿಣಿ ಬಿ. ಪಾಟೀಲ್ – ಜೂಡೋ, ೫೧) ದೇವರಾಜು ಎಂ.–ಖೊ–ಖೊ, ೫೨) ಪ್ರದೀಪ್ ಕೆ.ಸಿ – ಖೊ–ಖೊ, ೫೩) ಕೆ.ಹೆಚ್.ವಿನಯ್‌ಕುಮಾರ್–ಖೊ–ಖೊ, ೫೪) ಯೋಗೇಶ್ ಬಿ.– ಖೊ–ಖೊ, ೫೫) ಅಶೋಕ್ ಕುಮಾರ್ ಎಸ್.ಬಿ – ಖೊ–ಖೊ, ೫೬) ಅನಿತ್ ಕೆ.ಆರ್.– ಖೊ–ಖೊ, ೫೭) ಪ್ರಿಯಾದರ್ಶನ್ ಹೆಚ್.ಎಲ್ – ಖೊ–ಖೊ, ೫೮) ವಿಕಾಸ್ ವೈ.ಹೆಗ್ಗಡೆ – ಖೊ–ಖೊ, ೫೯) ತಿಮ್ಮರಾಜು ಟಿ. – ಖೊ–ಖೊ, ೬೦) ವಿನೋದ್ ಕೆ.ಎನ್. – ಖೊ–ಖೊ, ೬೧) ಶ್ರೀನಿವಾಸ ಎಂ. – ಖೊ–ಖೊ, ೬೨) ಸಂತೋಷ್ ಸಿ.ಆರ್. – ಖೊ–ಖೊ, ೬೩) ಆರೋನ್ ಡಿಸೋಜಾ ಅಗ್ನೇಲ್ – ಈಜು, ೬೪) ರೋಹಿತ್ ಆರ್. ಹವಲ್ದಾರ್ – ಈಜು, ೬೫) ಅರ್ಹತಾ ಮಾಗಾವಿ – ಈಜು, ೬೬) ಶುಭಾ ಸಿ. – ಈಜು, ೬೭) ಸ್ನೇಹಾ ಟಿ. – ಈಜು, ೬೮) ಸುಶಾಕಾ ಪ್ರತಾಪ್ – ಈಜು, ೬೯) ಕ್ಷಿಪಾ ಮಹಾಜನ್ – ಈಜು,

೨೦) ಕರಿಷ್ಮಾ ಎಂ.ಮೋಹಿತೆ – ಈಜು, ೨೧) ಕೆ.ಸಿ.ಚಂದನ – ಈಜು, ೨೨) ಆರವಿಂದ್ ಭಟ್ –ಬ್ಯಾಡ್ಮಿಂಟನ್, ೨೩) ಕಾಶಿನಾಥ್ – ಅಥ್ಲೆಟಿಕ್ಸ್, ೨೪) ವಿ. ತೇಜಸ್ವಿನಿ – ಖೊ–ಖೊ, ೨೫) ಶೋಭಾ –ಪವರ್ ಲಿಫ್ಟಿಂಗ್, ೨೬) ಪ್ರೀತಿ ಎಲ್. ರಾವ್ – ಅಥ್ಲೆಟಿಕ್ಸ್.

**೨೦೧೦ನೇ ಸಾಲಿಗೆ ಸಂಬಂಧಿಸಿದಂತೆ ವಿವಿಧ ಕ್ರೀಡಾ ಕ್ಷೇತ್ರಗಳಲ್ಲಿನ ಸಾಧನೆಗಾಗಿ ಪ್ರತಿಷ್ಠಿತ ಏಕಲವ್ಯ ಪ್ರಶಸ್ತಿಯನ್ನು ಪಡೆದಿರುವ ಕ್ರೀಡಾ ಪಟುಗಳ ವಿವರ ಈ ಕೆಳಗಿನಂತಿದೆ:** ಹೆಚ್. ಎಂ.ಜ್ಯೋತಿ (ಅಥ್ಲೆಟಿಕ್ಸ್), ವೈನಿ ಅಂಟೋನಿಯೊ ಡಿ' ಕುನ್ನಾ (ಚೆಸ್), ರಾಬಿನ್ ಉತ್ತಪ್ಪ (ಕ್ರಿಕೆಟ್), ಅಮೂಲ್ಯ ಕಮಲ್ (ಫುಟ್‌ಬಾಲ್), ಎಸ್.ಜೀವ ಕುಮಾರ್ (ಕಬಡ್ಡಿ), ಸಂತೋಷ್ ಸಿ.ಆರ್ (ಖೊ–ಖೊ), ಪೂಜಾಶ್ರೀ ವೆಂಕಟೇಶ್ (ಲಾನ್ ಟೆನ್ನಿಸ್), ನೇತ್ರಾವತಿ ವಿ (ಪವರ್ ಲಿಫ್ಟಿಂಗ್), ಶರಣ್ಯ ಮಹೇಶ್ (ರೋಲರ್ ಸ್ಕೇಟಿಂಗ್), ಶುಭಾ ಚಿತ್ತರಂಜನ್ (ಈಜು), ಟಿ.ಡಿ.ರವಿಕುಮಾರ್ (ವಾಲಿಬಾಲ್), ಸಿ.ಪಿ.ಆರ್.ಸುಧೀರ್ ಕುಮಾರ್ (ಭಾರ ಎತ್ತುವ ಸ್ಪರ್ಧೆ)

**ಕ್ರೀಡಾ ಕ್ಷೇತ್ರದ ಜೀವಮಾನ ಸಾಧನೆಗಾಗಿ ೨೦೧೦ರಲ್ಲಿ ಪ್ರಶಸ್ತಿ ಪಡೆದಿರುವವರು**

**೧. ಶ್ರೀ ಪಿ.ಎಸ್.ವಿಶ್ವನಾಥ್:** ಇವರ ಕ್ರೀಡಾ ಕ್ಷೇತ್ರ (ಕ್ರಿಕೆಟ್, ಅಥ್ಲೆಟಿಕ್ಸ್, ಖೋ ಖೋ, ಕಬಡಿ, ವಾಲಿಬಾಲ್,) ಸದರಿ ಯವರು ರಣಜಿ ಚಾಂಪಿಯನ್ ಷಿಪ್ ಪಂದ್ಯಾವಳಿಗಳಲ್ಲಿ ಮೈಸೂರು ರಾಜ್ಯವನ್ನು ೧೦ ವರ್ಷಗಳ ಕಾಲ (೧೯೪೮–೫೮) ಪ್ರತಿನಿಧಿಸಿದ್ದರು. ಪಾಕಿಸ್ತಾನದ ವಿರುದ್ಧ ಭಾರತದ ಸಂಯೋಜಿತ ವಿಶ್ವವಿದ್ಯಾನಿಲಯಗಳ ತಂಡದಲ್ಲಿ ಭಾರತವನ್ನು ಪ್ರತಿನಿಧಿಸಿದ್ದರು (೧೯೫೮). ಹಾಗೂ ಕಾಮನ್ ವೆಲ್ತ್ ಗೇಮ್ (೧೯೫೦–೫೧)ಗಳಲ್ಲೂ ಭಾಗವಹಿಸಿದ್ದರು. ಇವರು ತಮ್ಮ ಕ್ರೀಡಾ ಚೈತನ್ಯವನ್ನು, ತಾನು ಹೊಂದಿದ್ದ ಪ್ರತಿಭೆಯನ್ನು ರಾಷ್ಟ್ರ ಮತ್ತು ಅಂತರ್‌ರಾಷ್ಟ್ರೀಯ ನೆಲೆಯ ಹಲವಾರು ಚಾಂಪಿಯನ್‌ಷಿಪ್‌ಗಳಿಗಾಗಿ ಕ್ರೀಡಾ ಪಟುಗಳನ್ನು ತರಬೇತುಗೊಳಿಸಲು ಸಾರ್ಥಕವಾಗಿ ಬಳಸಿಕೊಂಡಿದ್ದಾರೆ. ಇವರ ಜೀವಿತಾವಧಿಯ ಕ್ರೀಡಾ ಸಾಧನೆಗಾಗಿ ಇವರು ೨೦೧೦ರ ಕ್ರೀಡಾ ಕ್ಷೇತ್ರದ ಜೀವಮಾನ ಸಾಧನೆ ಪ್ರಶಸ್ತಿಗೆ ಭಾಜನರಾಗಿದ್ದಾರೆ.

**೨.ಎಂ.ಎಸ್.ಮಾದೇಗೌಡ :** ಇವರೊಬ್ಬರು ಸಾಧಕ ವಾಲಿಬಾಲ್ ಆಟಗಾರರು. ೧೯೭೪ರ ೨೫ನೇ ರಾಷ್ಟ್ರೀಯ ಕ್ರೀಡಾ ಕೂಟದಲ್ಲಿ ಹಾಗೂ ೧೯೮೦ರಲ್ಲಿ ಜರುಗಿದ ೨೯ನೇ ಹಿರಿಯ ರಾಷ್ಟ್ರೀಯ ಚಾಂಪಿಯನ್ ಷಿಪ್ ಪಂದ್ಯಾವಳಿಯಲ್ಲಿ ಭಾಗವಹಿಸಿದ್ದು ಇವರೊಬ್ಬ ಯಶಸ್ವೀತರಬೇತುದಾರರಾಗಿದ್ದಾರೆ. ರಾಷ್ಟ್ರೀಯ ಹಾಗೂ ಅಂತರ್‌ರಾಷ್ಟ್ರೀಯ ಮಟ್ಟದ ಹಲವಾರು ಪಂದ್ಯಾವಳಿಗಳಲ್ಲಿ ಬಹುಮಾನಗಳನ್ನು ಪಡೆಯಲು ತಂಡದ ತರಬೇತುದಾರರಾಗಿ ಕರ್ತವ್ಯ ನಿರ್ವಹಿಸಿದ್ದು, ಇವರ ಜೀವಿತಾವಧಿಯ ಕ್ರೀಡಾ ಸಾಧನೆಗಾಗಿ ಇವರು ೨೦೧೦ರ ಕ್ರೀಡಾ ಕ್ಷೇತ್ರದ ಜೀವಮಾನ ಸಾಧನೆ ಪ್ರಶಸ್ತಿಗೆ ಭಾಜನರಾಗಿದ್ದಾರೆ.

೨೦೧೨ರ ಮಾರ್ಚ್‌ನಲ್ಲಿ ಭಾರತದ ಮಹಿಳಾ ಕಬಡ್ಡಿ ತಂಡ ವಿಶ್ವಕಪ್‌ನಲ್ಲಿ ಭಾಗವಹಿಸಿದ್ದ ೧೬ ತಂಡಗಳನ್ನು ಹಿಮ್ಮೆಟ್ಟಿಸಿ ಫೈನಲ್ ಪಂದ್ಯದಲ್ಲಿ ಎದುರಾಳಿಯಾಗಿದ್ದ ಇರಾನ್ ತಂಡವನ್ನು ಪರಾಭವಗೊಳಿಸಿ (೨೫–೧೯ ಪಾಯಿಂಟ್‌ಗಳಿಂದ) ಕರ್ನಾಟಕದ ಮಮತಾ ಪೂಜಾರಿ ಇವರ ನಾಯಕತ್ವದಲ್ಲಿ ವಿಶ್ವಕಪ್‌ನಲ್ಲಿ ಜಯಗಳಿಸಿದೆ.ಭಾರತ ತಂಡದ ಗೆಲುವಿನ ರೂವಾರಿ, ತಂಡದ ನಾಯಕಿ, ಕರ್ನಾಟಕದ ಮಮತಾ ಪೂಜಾರಿ ಇವರ ಸಾಧನೆಯನ್ನು ಮುಕ್ತಕಂಠದಿಂದ ಶ್ಲಾಘಿಸಿರುವ ಕರ್ನಾಟಕ ಸರ್ಕಾರ ಇವರಿಗೆ ಐದು ಲಕ್ಷ ರೂ.ಗಳ ಬಹುಮಾನವನ್ನು ಘೋಷಿಸಿದೆ.

**೨೦೧೩ ನೇ ಸಾಲಿನಲ್ಲಿ ಏಕಲವ್ಯ ಪ್ರಶಸ್ತಿ ಪಡೆದವರು** :ಅರ್ಶಾದ್. ಎಂ (ಬೆಂಗಳೂರು– ಅಥ್ಲೆಟಿಕ್ಸ್), ಡಿ. ಗುರುಪ್ರಸಾದ್, (ಷಟ್ಲ್ ಬ್ಯಾಡ್ ಮಿಂಟನ್ – ಬೆಂಗಳೂರು), ನವನೀತ ಪಿ.ಯು. (ಬಾಸ್ಕೆಟ್ ಬಾಲ್–ಕೊಡಗು), ಶೋಧನ್ ಕುಮಾರ್ ರೈ (ಬಾಡಿ ಬಿಲ್ಡಿಂಗ್– ಬೆಂಗಳೂರು), ಯಶಸ್ ಡಿ. (ೆಸ್ –ಬೆಂಗಳೂರು), ಲೋಕೇಶ್ ಎನ್. (ಸೈಕ್ಲಿಂಗ್– ಕೆ.ಆರ್. ನಗರ), ವಿಶಾಲ್ ಕುಮಾರ್ ಆರ್. ಫುಟ್ ಬಾಲ್–ಬೆಂಗಳೂರು), ಸೋಮಣ್ಣ ಕೆ. ಎಂ. (ಹಾಕಿ– ಬೆಂಗಳೂರು), ನಿಕ್ಷೇಪ್ ಬಿ.ಆರ್. (ಲಾನ್ ಟೆನ್ನಿಸ್–ಬೆಂಗಳೂರು), ಆನಂದ್ ಕುಮಾರ್ ಬಿ. (ಬ್ಯಾಡ್ಮಿಂಟನ್–ಬೆಂಗಳೂರು), ಅಕ್ಷತಾ ಪೂಜಾರ್ತಿ (ಪವರ್ ಲಿಫ್ಟಿಂಗ್– ಉಡುಪಿ), ಪ್ರಕಾಶ ಪಿ.ಎನ್. (ರೈಫಲ್ ಶೂಟಿಂಗ್– ಬೆಂಗಳೂರು), ಅಶ್ವಿನ್ ಮೆನನ್ (ಸ್ವಿಮ್ಮಿಂಗ್–ಬೆಂಗಳೂರು), ಸನೋಜ್ ವಿ.ಆರ್. (ವಾಲಿ ಬಾಲ್– ಬೆಂಗಳೂರು), ಪ್ರೇಮ ಹುಚ್ಚಣ್ಣವರ್ (ರೆಸ್ಲಿಂಗ್–ಗದಗ),

**೨೦೧೩ ನೇ ಸಾಲಿನಲ್ಲಿ ಕರ್ನಾಟಕ ಕ್ರೀಡಾ ರತ್ನ ಪ್ರಶಸ್ತಿ ಪಡೆದವರು:** ಸಂತೋಷ್ ನಾಯ್ಕ್ (ಅತ್ಯ–ಪತ್ಯ– ಗದಗ), ಶೃತಿ ಎ.ಆರ್. (ಬಾಲ್ ಬ್ಯಾಡ್ಮಿಂಟನ್– ಬೆಳಗಾವಿ), ಕುಮಾರ ಜಗದೀಶ (ಗುಂಡು ಎತ್ತುವುದು– ಬೆಳಗಾವಿ), ವಿಜಯಕುಮಾರ್ ಕೆ.ಹೆಚ್. (ಖೋ ಖೊ– ಬೆಂಗಳೂರು), ಮಾರುತಿ ವೈ. ಬಾರಕೇರ (ಮಲ್ಲಕಂಭ–ಬಾಗಲಕೋಟೆ), ಈಶ್ವರ ದಳವಾಯಿ (ಜಂಗಿ ಕುಸ್ತಿ–ಬೆಳಗಾವಿ), ಮಹಮದ್ ಅಕ್ವಿಬ್ (ಥ್ರೋ ಬಾಲ್– ಚಿಕ್ಕಬಳ್ಳಾಪುರ), ಪಾಲಿಮರ್ ದೇವೇಂದ್ರ ಕೋಟ್ಯಾನ್ (ಕಂಬಳ–ವಿಶೇಷ ಪಂದ್ಯ, ಉಡುಪಿ), ಗೋಪಾಲ್ ಖಾರ್ವಿ (ಸ್ವಿಮ್ಮಿಂಗ್ –ವಿಶೇಷ ಪಂದ್ಯ–ಉಡುಪಿ), ನಾಗೇಂದ್ರ ಸ್ವಾಮಿ ಎಸ್.ಸಿ. (ಸ್ವಿಮ್ಮಿಂಗ್ ಪೋಲ್–ವಿಶೇಷ ಪಂದ್ಯ– ತುಮಕೂರು)

**೨೦೧೩ ನೇ ಸಾಲಿನ ಜೀವಮಾನದ ಸಾಧನೆ ಪ್ರಶಸ್ತಿ ಪಡೆದವರು:** ಗಣಪತಿ ಮನೋಹರನ್ (ಬಾಕ್ಸಿಂಗ್– ಬೆಂಗಳೂರು), ಮೊಹಮ್ಮದ್ ದಾದಾ ಪೀರ್ (ಫುಟ್ ಬಾಲ್– ಬೆಂಗಳೂರು), ಸುಮಿತ್ರ ಕುಮಾರ್ ಎಂ. (ಾಡಿ ಬಿಲ್ಡಿಂಗ್– ಮಂಗಳೂರು), ಮಣಿ (ಕಬಡ್ಡಿ– ಬೆಂಗಳೂರು)

**ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ**

**ಸ್ಕೌಟ್ಸ್ ಮತ್ತು ಗೈಡ್ಸ್ ಚಳವಳಿಯ ಹಿನ್ನೆಲೆ:** ೧೯೦೭ರಲ್ಲಿ ಇಂಗ್ಲೆಂಡಿನಲ್ಲಿ ರಾಬರ್ಟ್ ಸ್ಟೀಫನ್‌ಸನ್ ಬೇಡನ್ ಪೊವೆಲ್ ಸ್ಕೌಟ್ ಚಳುವಳಿಯನ್ನು ಸ್ಥಾಪಿಸಿದರು. ಈಗ ವಿಶ್ವದ ೨೧೬ ರಾಷ್ಟ್ರಗಳಲ್ಲಿ ೨೮ ದಶಲಕ್ಷಕ್ಕೂ ಹೆಚ್ಚು ಜನ ಸ್ಕೌಟ್–ಗೈಡ್ ಚಳವಳಿಯ ವಾಹಿನಿಗೆ ಸೇರಿದ್ದಾರೆ. ಇಲ್ಲ ಕಿರಿಯರೂ, ಹಿರಿಯರೂ, ಬಾಲಕರು, ಬಾಲಕಿಯರು ಇದ್ದಾರೆ. ೧೯೧೦ರಲ್ಲಿ ಗೈಡಿಂಗ್ ಪ್ರಾರಂಭವಾಯಿತು. ೧೯೧೬ರಲ್ಲಿ ಕಬ್/ಬುಲ್‌ಬುಲ್ ವಿಭಾಗ ಪ್ರಾರಂಭವಾಯಿತು. ೧೯೧೮ರಲ್ಲಿ ರೋವರ್/ರೇಂಜರ್ ವಿಭಾಗ ಪ್ರಾರಂಭವಾಯಿತು.

**ಭಾರತದಲ್ಲಿ ಸ್ಕೌಟಿಂಗ್/ಗೈಡಿಂಗ್:** ೧೯೦೯ರಲ್ಲಿ ಕರ್ನಾಟಕದ ಬಿಷಪ್‌ಕಾಟನ್ ಶಾಲೆಯಲ್ಲಿ ಮೊದಲ ಬಾರಿಗೆ ಸ್ಕೌಟಿಂಗ್/ಗೈಡಿಂಗ್ ಶಾಖೆ ಪ್ರಾರಂಭವಾಯಿತು. ಇದರ ಸ್ಥಾಪಕರಾದ ಕ್ಯಾಪ್ಟನ್ ಟಿ.ಹೆಚ್. ಬೇಕರ್ ಓರ್ವ ನಿವೃತ್ತ ನೌಕಾಧಿಕಾರಿ. ಈ ದಳಗಳಲ್ಲಿ ಯೂರೋಪಿಯನ್ ಹಾಗೂ ಆಂಗ್ಲೊ ಇಂಡಿಯನ್ ಹುಡುಗಿಯರಿಗೆ ಮಾತ್ರ ಅವಕಾಶವಿತ್ತು.ತಂದನಂತರ ನ್ಯಾಷನಲ್ ಸ್ಕೌಟ್ಸ್ ಅಸೋಸಿಯೇಷನ್, ಬಾಲಕಿಯರಿಗಾಗಿ ಗೈಡ್ ಅಸೋಸಿಯೇಷನ್, ಹಿಂದೂಸ್ಥಾನ್ ಸ್ಕೌಟ್ ಅಸೋಸಿಯೇಷನ್, ಗರ್ಲ್‌ಗೈಡ್ ಅಸೋಸಿಯೇಷನ್, ಇಂಡಿಯನ್ ಬಾಯ್ ಸ್ಕೌಟ್ಸ್ ಅಸೋಸಿಯೇಷನ್ ಪ್ರಾರಂಭವಾಯಿತು. ೧೫.೦೮.೧೯೫೧ರಲ್ಲಿ ಎಲ್ಲಾ ಸಂಸ್ಥೆಗಳು ಒಂದಾಗಿ ಭಾರತ್ ಸ್ಕೌಟ್ಸ್ ಮತ್ತುಗೈಡ್ಸ್ ಎಂಬ ಹೆಸರಿನಲ್ಲಿ ದೇಶದ ಎಲ್ಲಾ ಕಡೆ ವಿಸ್ತಾರಗೊಂಡಿತು.

**ಸ್ಕೌಟಿಂಗ್/ಗೈಡಿಂಗ್‌ನ ಮೂಲತತ್ವಗಳು : ವಿವರಣೆ :** ಇದು ಯುವಜನತೆಗಾಗಿ ಇರುವ ಕಾರ್ಯಕ್ರಮ, ಸ್ವಯಂ ಪ್ರೇರಿತವಾಗಿ ಭಾಗವಹಿಸಲು ಅವಕಾಶ ಇದೆ. ರಾಜಕೀಯ ಸಂಬಂಧವಿಲ್ಲದ್ದು. ಶಿಕ್ಷಣಕ್ಕೆ ಪೂರಕವಾದುದು. ಇದಕ್ಕೆ ಅಂತರ ರಾಷ್ಟ್ರೀಯ ಮಾನ್ಯತೆ ಇದೆ. **ಉದ್ದೇಶ:** ಮಕ್ಕಳಲ್ಲಿ ಮತ್ತು ಯುವಕ ಯುವತಿಯರಲ್ಲಿ ಶಾರೀರಿಕ, ಮಾನಸಿಕ, ಸಾಮಾಜಿಕ, ಭಾವನಾತ್ಮಕ ಮತ್ತು ಪಾರಮಾರ್ಥಿಕ ಚೈತನ್ಯಗಳನ್ನು ಅಭಿವೃದ್ಧಿ ಪಡಿಸುವುದು ಹಾಗೂ ಯುವಜನತೆಯನ್ನು ಜವಾಬ್ದಾರಿಯುತ ಪ್ರಜೆಗಳನ್ನಾಗಿ ತಯಾರು ಮಾಡುವುದು. **ತತ್ವಗಳು** : ದೇವರಿಗೆ ಕರ್ತವ್ಯ, ದೇಶಕ್ಕೆ ಕರ್ತವ್ಯ, ಇತರರಿಗೆ ಕರ್ತವ್ಯ, ಸ್ವ ಕರ್ತವ್ಯ; ವಿಧಾನ : ಪ್ರತಿಜ್ಞೆ ಮತ್ತು ನಿಯಮ – ಮಾಡಿ ಕಲಿ – ಪ್ರಗತಿಪರ – ಶಿಕ್ಷಣ– ಸಾಹಸಮಯ– ಉತ್ತೇಜಕ ಚಟುವಟಿಕೆಗಳು

### ಸ್ಕೌಟಿಂಗ್/ಗೈಡಿಂಗನ ವಿವಿಧ ವಿಭಾಗಗಳು, ಪದನಾಮ ಮತ್ತು ಧ್ಯೇಯ

| ವಯೋ ಗುಂಪು | ವಿಭಾಗ | ಪದನಾಮ | ಧ್ಯೇಯ |
|---|---|---|---|
| ೩ ರಿಂದ ೫ ವರ್ಷ | ಬಾಲಕ-ಬಾಲಕಿಯರು | ಬನ್ನಿಗಳು (ಮೊಲದ ಮರಿಗಳು | ಸದಾ ನಗುತ್ತಿರು |
| ೫ ರಿಂದ ೧೦ ವರ್ಷ | ಬಾಲಕ-ಬಾಲಕಿಯರು | ಕಬ್ಸ್ ಮತ್ತು ಬುಲ್‌ಬುಲ್ಸ್‌ಗಳು | ಕೈಲಾದಷ್ಟು ಸಾಧಿಸು |
| ೧೦ ರಿಂದ ೧೭ ವರ್ಷ | ಬಾಲಕ-ಬಾಲಕಿಯರು | ಸ್ಕೌಟ್ಸ್ ಮತ್ತು ಗೈಡ್ಸ್ | ಸದಾ ಸಿದ್ಧನಾಗಿರು |
| ೧೭ ರಿಂದ ೨೫ ವರ್ಷ | ಬಾಲಕ-ಬಾಲಕಿಯರು | ರೋವರ್ಸ್ ಮತ್ತು ರೇಂಜರ್ಸ್ | ಸೇವೆ |

### ಬಾಲಕ-ಬಾಲಕಿಯರ ಶಿಕ್ಷಣದ ಕ್ರಮಾನುಗತಿ ಪ್ರಗತಿ

೧. **ಕಬ್ಸ್** : ಪ್ರವೇಶ > ಪ್ರಥಮ ಚರಣ > ದ್ವಿತೀಯ ಚರಣ >ತೃತೀಯ ಚರಣ > ಚತುರ್ಥ ಚರಣ > ಬಂಗಾರದ ಬಾಣ ೨. ಬುಲ್‌ಬುಲ್ಸ್: ಪ್ರವೇಶ> ಕೋಮಲ ಪಂಕ್ > ಸುವರ್ಣ ಪಂಕ್ > ರಜತ್ ಪಂಕ್ >ಹೀರಕ್ ಪಂಕ್ > ಬಂಗಾರದ ಬಾಣ

೩. **ಸ್ಕೌಟ್ಸ್/ಗೈಡ್ಸ್** : ಪ್ರವೇಶ > ಪ್ರಥಮ ಸೋಪಾನ> ದ್ವಿತೀಯ ಸೋಪಾನ > ತೃತೀಯ ಸೋಪಾನ > ರಾಜ್ಯ ಪುರಸ್ಕಾರ > ರಾಷ್ಟ್ರಪತಿ ಪುರಸ್ಕಾರ

೪. **ರೋವರ್ಸ್/ರೇಂಜರ್ಸ್** : ಪ್ರವೇಶ > ಪ್ರವೀಣ್ > ನಿಪುಣ (ರಾಜ್ಯ ಪುರಸ್ಕಾರ) > ರಾಷ್ಟ್ರಪತಿ ರೋವರ್ಸ್/ರೇಂಜರ್ಸ್

೫. **ವಯಸ್ಕ ನಾಯಕರಿಗೆ ಪ್ರಗತಿಪರ ಶಿಕ್ಷಣ:** ಮೂಲ ತರಬೇತಿ > ಮುಂದುವರೆದ ತರಬೇತಿ > ಹಿಮಾಲಯ ವುಡ್ ಬ್ಯಾಡ್ಜ್ ತರಬೇತಿ > ಸಹಾಯಕ ನಾಯಕ ತರಬೇತುದಾರರ ಪೂರ್ವ ತರಬೇತಿ > ಸಹಾಯಕ ನಾಯಕ ತರಬೇತುದಾರರ ತರಬೇತಿ > ನಾಯಕರ ತರಬೇತಿದಾರರ ತರಬೇತಿ.

### ಸ್ಕೌಟ್ಸ್/ಗೈಡ್ಸ್‌ಗಳು ತೊಡಗುವ ಚಟುವಟಿಕೆಗಳು

ಸ್ವಚ್ಛತಾ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು. ತಮ್ಮ ಪರಿಸರದಲ್ಲಿ ಆರೋಗ್ಯ ಜಾಗೃತಿಯನ್ನು ಮೂಡಿಸುವುದು. ಸಾಕ್ಷರತೆಯ ಪ್ರಾಮುಖ್ಯತೆ ಅರಿತು ಅನಕ್ಷರತೆಯ ನಿರ್ಮೂಲನೆಗೆ ಸಹಕರಿಸುವುದು. ಪರಿಸರ ಪ್ರಜ್ಞೆ ಹೊಂದಿರುವುದು, ಸಸಿ ನೆಡುವುದು ಹಾಗೂ ಪರಿಸರ ಸಂರಕ್ಷಣೆಗೆ ಶ್ರಮಿಸುವುದು.ಏಡ್ಸ್, ಕ್ಯಾನ್ಸರ್, ಮುಂತಾದ ಮಾರಕ ರೋಗಗಳ ನಿವಾರಣೆ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು, ಕುಷ್ಟ ರೋಗ ನಿವಾರಣೆ, ಕುಡಿಯುವ ನೀರಿನ ಸಂರಕ್ಷಣೆ, ಕುಟುಂಬ ಜೀವನ ಶಿಕ್ಷಣ, ಸಮುದಾಯ ಸೇವೆ, ನೇತ್ರ ಶಸ್ತ್ರಚಿಕಿತ್ಸೆ ಶಿಬಿರ, ರಕ್ತದಾನ ಇತ್ಯಾದಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು ಹಾಗೂ ಸಹಾಯ ಹಸ್ತ ನೀಡುವುದು.

**ಕರ್ನಾಟಕದಕಲ್ಲಿ ಸ್ಕೌಟಿಂಗ್/ಗೈಡಿಂಗ್:**೧೯೧೭ರಲ್ಲಿ ಅಂದಿನ ಮೈಸೂರು ಸಂಸ್ಥಾನದಲ್ಲಿಕಾಲದಲ್ಲಿ ದಿ ಬಾಯ್ಸ್ ಸ್ಕೌಟ್ಸ್ ಆಫ್ ಮೈಸೂರು ಎಂಬ ಸಂಸ್ಥೆ ರಾಜಾಶ್ರಯದಲ್ಲಿ ಪ್ರಾರಂಭವಾಯಿತು. ೧೯೨೭ರಲ್ಲಿ ದಿ ಗರ್ಲ್ ಗೈಡ್ಸ್ ಆಫ್ ಮೈಸೂರು ಪ್ರಾರಂಭವಾಯಿತು. ಅಂದಿನ ಯುವರಾಜರಾದ ಶ್ರೀ ಜಯಚಾಮರಾಜ ಒಡೆಯರ್ ರವರು ಮುಖ್ಯಕಬ್ ಆಗಿದ್ದರು. ೧೯೫೧ರಲ್ಲಿ ಎರಡೂ ಸಂಸ್ಥೆಗಳು ಒಂದುಗೂಡಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಆಯಿತು. ಈ ಸಂಸ್ಥೆಗೆ ಪದನಿಮಿತ್ತ ಗೌರವ ಪದಾಧಿಕಾರಿಗಳಾಗಿ ರಾಜ್ಯದ ಘನತೆವೆತ್ತ ರಾಜ್ಯಪಾಲರು ಪೋಷಕರಾಗಿಯೂ, ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿಯವರು ಅಧ್ಯಕ್ಷರಾಗಿಯೂ ನಿಯುಕ್ತಿಗೊಳ್ಳುವುದು ರೂಢಿಗತವಾಗಿ ನಡೆದುಕೊಂಡು ಬಂದಿರುವ ಸಂಪ್ರದಾಯ. ರಾಜ್ಯ ಮುಖ್ಯ ಆಯುಕ್ತರು ಸಂಸ್ಥೆಯ ದಿನ ನಿತ್ಯದ ಆಡಳಿತವನ್ನು ನೋಡಿಕೊಳ್ಳುತ್ತಾರೆ. ಇವರನ್ನು ಸಂಸ್ಥೆಯ ಸರ್ವ ಸದಸ್ಯರ

ಸಭೆಯಲ್ಲಿ ಚುನಾವಣೆ ಮೂಲಕ ಆಯ್ಕೆ ಮಾಡಲಾಗುತ್ತದೆ. ಇವರ ಅಧಿಕಾರಾವಧಿ ಮೂರು ವರ್ಷಗಳಾಗಿರುತ್ತದೆ. ಪ್ರಸ್ತುತ ಮಾಜಿ ಸಚಿವರಾದ ಶ್ರೀ ಪಿ.ಜಿ. ಆರ್. ಸಿಂಧ್ಯರವರು ರಾಜ್ಯ ಮುಖ್ಯ ಆಯುಕ್ತರಾಗಿರುತ್ತಾರೆ.

೧. ಕರ್ನಾಟಕದಲ್ಲಿ ೩೩ ಸ್ಕೌಟ್ಸ್ ಮತ್ತು ಗೈಡ್ಸ್ ಶೈಕ್ಷಣಿಕ ಜಿಲ್ಲೆಗಳು, ೨೧೬ ಸ್ಥಳೀಯ ಸಂಸ್ಥೆಗಳಿವೆ.

೨. ಧಾರವಾಡ, ವಿಜಯಪುರ, ಕೊಪ್ಪಳ, ದಕ್ಷಿಣಕನ್ನಡ, ರಾಯಚೂರು, ದಾವಣಗೆರೆ, ಬೆಳಗಾವಿ, ಕೋಲಾರ, ತುಮಕೂರು, ಮೈಸೂರು, ಮಂಡ್ಯ, ಚಿತ್ರದುರ್ಗ, ಜಿಲ್ಲಾ ಸಂಸ್ಥೆಗಳು, ಭವ್ಯ ಕಟ್ಟಡಗಳನ್ನು ಹಾಗೂ ಕೆಲವಾರು ಜಿಲ್ಲೆಗಳ ಶಿಬಿರ ಕೇಂದ್ರಗಳನ್ನು ಹೊಂದಿವೆ.

೩. ರಾಜ್ಯದಲ್ಲಿ ಸ್ಕೌಟ್ ವಿಭಾಗದಲ್ಲಿ ೧೦೫ ಹಾಗೂ ಗೈಡ್ ವಿಭಾಗದಲ್ಲಿ ೫೬ ತರಬೇತಿದಾರರಿದ್ದಾರೆ ಒಟ್ಟು ೧೫೦೦ ಹಿಮಾಲಯ ವೃಕ್ಷಮಣಿದಾರಕರು, ೧೫೦೦೦ ಸ್ಕೌಟರ್ಸ್/ಗೈಡರ್ಸ್‌ಗಳು ಇದ್ದಾರೆ. ೨೦೧೫-೧೬ನೇ ಸಾಲಿಗೆ ೪,೦೦,೦೦೦ ಸ್ಕೌಟ್ಸ್/ಗೈಡ್ಸ್‌ಗಳು ದಾಖಲಾತಿಯಾಗಿರುತ್ತಾರೆ.

೪. ಸಕಾರದಿಂದಯೋಜನೆ/ಯೋಜನೇತರ ಅನುದಾನ ಸುಮಾರು ರೂ.೩.೫ ಕೋಟಿಗಳನ್ನು ಶಿಕ್ಷಣ ಇಲಾಖೆ ಮೂಲಕ ನೀಡುತ್ತಿದ್ದಾರೆ. ಸುಮಾರು ೨೦ ಖಾಯಂ ಸಿಬ್ಬಂದಿ ವರ್ಗದವರು ೩೫ ಸಿಬ್ಬಂದಿ ವರ್ಗದವರು ಗೌರವಧನದ ಆಧಾರದ ಮೇಲೆ ರಾಜ್ಯ ಸಂಸ್ಥೆ ಹಾಗೂ ಜಿಲ್ಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

೫. ಕಬ್ಸ್/ಬುಲ್‌ಬುಲ್ಸ್/ಸ್ಕೌಟ್ಸ್/ಗೈಡ್ಸ್/ರೋವರ್ಸ್/ರೇಂಜರ್ಸ್‌ಗಳಿಗಾಗಿ ಪ್ರತಿ ವರ್ಷವೂ ಸರ್ಕಾರದ ಅನುದಾನದಿಂದ ಉಚಿತ ಊಟ, ವಸತಿ, ಪ್ರಯಾಣ ಭತ್ಯೆ ನೀಡಿ, ಪೆಟ್ರೋಲ್ ನಾಯಕರ ತರಬೇತಿ ಶಿಬಿರ, ಪದಕ ತರಬೇತಿ ಶಿಬಿರ, ಚಾರಣ ಶಿಬಿರ, ಪ್ರಕೃತಿಅಧ್ಯಯನ ಶಿಬಿರ, ವಿಕೋಪ ನಿಯಂತ್ರಣ ಶಿಬಿರ, ರಾಜ್ಯಪುರಸ್ಕಾರ ಪರೀಕ್ಷ ಶಿಬಿರ, ರಾಷ್ಟ್ರಪತಿ ಪರೀಕ್ಷಾ ಶಿಬಿರ, ಯೋಗ ಶಿಬಿರ, ಮುಂತಾದ ಅನೇಕ ಶಿಬಿರಗಳನ್ನು ಆಯೋಜಿಸಲಾಗುತ್ತದೆ. ಜೊತೆಗೆ, ಸ್ಥಳೀಯ ಮೇಳ, ಜಿಲ್ಲಾ ರ್‍ಯಾಲಿ, ವರ್ಷಕ್ಕೊಮ್ಮೆ ನಡೆಯುವ ಕಬ್ ಮತ್ತು ಬುಲ್‌ಬುಲ್ ಉತ್ಸವ, ೩ ವರ್ಷಗಳಿಕ್ಕೊಮ್ಮೆ ರಾಜ್ಯ ಜಾಂಬೂರೇಟ್, ೪ ವರ್ಷಗಳಿಗೊಮ್ಮೆ ರಾಷ್ಟ್ರೀಯ ಜಾಂಬೂರಿ, ಪ್ರತಿ ವರ್ಷ ನಡೆಯುವ ಅಂತರರಾಷ್ಟ್ರೀಯ ಜಾಂಬೂರಿಗಳಲ್ಲಿ ಸ್ಕೌಟ್ಸ್/ಗೈಡ್ಸ್/ರೋವರ್ಸ್/ರೇಂಜರ್ಸ್/ಸ್ಕೌಟರ್ಸ್/ ಗೈಡರ್ಸ್ ಭಾಗವಹಿಸುತ್ತಿದ್ದಾರೆ

೬. ವಯಸ್ಕ ನಾಯಕ/ನಾಯಕಿರಿಗಾಗಿ ಸರ್ಕಾರದ ಅನುದಾನದಿಂದ ಉಚಿತ ಊಟ, ವಸತಿ, ಪ್ರಯಾಣ ವೆಚ್ಚ ನೀಡಿ ಮೂಲ ತರಬೇತಿ, ಮುಂದುವರೆದ ತರಬೇತಿ, ಹಿಮಾಲಯ ವುಡ್‌ಬ್ಯಾಡ್ಜ್ ತರಬೇತಿ, ವಿಶೇಷ ತರಬೇತಿಗಳು, ಇಂದಾಬ, ವೃಕ್ಷಮಣಿಧಾರಕರ ಸಮಾವೇಶ, ತರಬೇತಿಧಾರರ ಸಮಾವೇಶಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.ರಾಜ್ಯ ಸಂಸ್ಥೆಯು ಅನುದಾನ ಸಹಿತ ಸಂಸ್ಥೆಯಾಗಿರುತ್ತದೆ.

**ಕರ್ನಾಟಕ ರಾಜ್ಯದಲ್ಲಿರುವ ಸ್ಕೌಟ್ ಮತ್ತು ಗೈಡ್‌ತರಬೇತಿ ಶಿಬಿರ ಕೇಂದ್ರಗಳು:**

೧) ಡಾ॥ ಆನಿಬೆಸೆಂಟ್ ಸ್ಕೌಟ್ ಮತ್ತು ಗೈಡ್‌ತರಬೇತಿ ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ;

೨) ಕೊಂಡಜ್ಜಿ ಬಸಪ್ಪ ಸ್ಕೌಟ್ ಮತ್ತುಗೈಡ್‌ತರಬೇತಿ ಶಿಬಿರ ಕೇಂದ್ರ, ಕೊಂಡಜ್ಜಿ, ದಾವಣಗೆರೆ ಜಿಲ್ಲೆ;

೩) ಶಾಂತಿಗೃಹ ಸ್ಕೌಟ್/ಗೈಡ್‌ತರಬೇತಿ ಶಿಬಿರ ಕೇಂದ್ರ, ಶಾಂತಿಗೃಹ, ಅರಮನೆರಸ್ತೆ, ಬೆಂಗಳೂರು;

(ಮಾಹಿತಿ: ಚಿನ್ನಸ್ವಾಮಿರೆಡ್ಡಿ, ರಾಜ್ಯ ಕಾರ್ಯದರ್ಶಿ).



ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

* * * * *